ಹುಬ್ಬಳ್ಳಿ
ಸೋಮವಾರ, 6 ಏಪ್ರಿಲ್ 2026
ಸಂಪುಟ 16, ಸಂಚಿಕೆ 12, ಪುಟಗಳು 12
■ಹುಬ್ಬಳ್ಳಿ ■ಬೆಂಗಳೂರು ■ಮಂಗಳೂರು ■ಶಿವಮೊಗ್ಗ ₹5
RNI No.KARKAN/2011/64413
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಎಐ ಸಂಶೋಧಕರಿಗೆ ಆನೆ ಬಲ| ೦೩ | ಇರಾನ್‌ನಲ್ಲಿ ಸಿಲುಕಿದ್ದ ಮೀನುಗಾರರು ಸ್ವದೇಶಕ್ಕೆ| ೦೭ | ಸಮಸ್ತರ ಕಲ್ಯಾಣ ಬಿಜೆಪಿ ನೀತಿ |೦೭

ಶುಭ ದಿನ

ಕಲಿಯುಗಾಬ್ಧ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಕೃಷ್ಣ ಪಕ್ಷ, ತಿಥಿ: ಚೌತಿ, ನಕ್ಷತ್ರ: ಅನುರಾಧೆ

ದಿನದ ಮಾತು

ಮನುಷ್ಯನಿಗೆ ಕಷ್ಟಗಳೂ ಬರಬೇಕು. ಯಶಸ್ಸನ್ನು ಆನಂದಿಸಲು ಅದು ಅವಶ್ಯ.

▲ಅಬ್ದುಲ್ ಕಲಾಂ

ಪವಾಡ ಪುರುಷನಾದ ಸಾಮಾನ್ಯ ಸೈನಿಕ

ನೇರ ನೋಟ

• ದು.ಗು.ಲಕ್ಷ್ಮಣ

• ಪುಟ ೬

ಕಿರುಸುದ್ದಿ

ಕೊಡಗಿನಲ್ಲಿ ಕಾಣೆಯಾಗಿದ್ದ ಕೇರಳ ಟೆಕ್ಕಿ ಶರಣ್ಯ ಪತ್ತೆ

• **ಬೆಂಗಳೂರು:** ಕೊಡಗು ಜಿಲ್ಲೆಯ ತಡಿಯಾಂಡಮೋಲ್ ಶಿಖರಕ್ಕೆ ಕೇರಳದಿಂದ ಚಾರಣಕ್ಕಾಗಿ ಬಂದು ಏ.2ರಂದು ನಾಪತ್ತೆಯಾಗಿದ್ದ ಸಾಫ್ಟ್‌ವೇರ್ ಉದ್ಯೋಗಿ ಜಿ.ಎಸ್. ಶರಣ್ಯ ಪತ್ತೆಯಾಗಿದ್ದಾರೆ ಮತ್ತು ಆರೋಗ್ಯವಾಗಿದ್ದಾರೆ ಎಂದು ಅರಣ್ಯ ಸಚಿವ ಈಶ್ವರ ಬಿ. ಖಂಡ್ರೆ ತಿಳಿಸಿದ್ದಾರೆ.

• ಪುಟ ೩

ಬಂಗಾಳದಲ್ಲಿ ಅವ್ಯವಸ್ಥೆ: 4 ಪೊಲೀಸರ ಅಮಾನತು

• ಪುಟ ೭

ದೇಶದಲ್ಲಿ 6.6 ಲಕ್ಷ ಸಣ್ಣ ಸಿಲಿಂಡರ್‌ಗಳ ಮಾರಾಟ

• ಪುಟ ೭

ಬಿಜೆಪಿ ಕಚೇರಿ ಬಳಿ ಸ್ಫೋಟ: ಇಬ್ಬರು ಆರೋಪಿಗಳ ಸೆರೆ

• ಪುಟ ೭

ಹೆಚ್ಚಿದ ಸಾಮಾಜಿಕ ಜಾಲತಾಣ ಬಳಕೆ

• ಪುಟ ೩

ಗೂಂಡಾ ಸರ್ಕಾರ : ಆರ್. ಅಶೋಕ ಟೀಕೆ

• ಪುಟ ೩

ಮಹದಾಯಿ ಮುಗಿಯದ ಕಥೆ: ದಶಕಗಳ ಹೋರಾಟಕ್ಕೆ ಸಿಕ್ಕಿಲ್ಲ ಮುಕ್ತಿ

• ಪುಟ ೪

ಗೌರವ ಡಾಕ್ಟರೇಟ್ ನಿರಾಕರಿಸಿದ ಬೊಮ್ಮಾಯಿ

• ಪುಟ ೩

ಕೈ ಸೋಲು ನಿಶ್ಚಿತ: ಬಿಎಸ್‌ವೈ

• ಪುಟ ೩

ಕೇರಳದಲ್ಲಿ ಎನ್‌ಡಿಎಗೆ ಅವಕಾಶ ಕೊಡಿ: ಶಾ

• ಪುಟ ೭

650 ಕೋಟಿ ರೂ. ಅಕ್ರಮ ನಗದು, ಮಾದಕವಸ್ತು ವಶ

• ಪುಟ ೭

ಸಿ-130 ವಿಮಾನ ಹೊಡೆದ ಇರಾನ್ | ಸಂಘರ್ಷದ ತೀವ್ರತೆ ಹೆಚ್ಚಳ

ಅಮೆರಿಕಕ್ಕೆ ಭಾರೀ ಹಿನ್ನಡೆ

• **ವಾಷಿಂಗ್ಟನ್/ಟೆಹ್ರಾನ್:** ಇರಾನ್ ಮತ್ತು ಅಮೆರಿಕ ನಡುವಿನ ಉದ್ವಿಗ್ನತೆ ದಿನೇದಿನೇ ತೀವ್ರಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ಇತ್ತೀಚಿನ ಬೆಳವಣಿಗೆಗಳು ಜಾಗತಿಕ ಮಟ್ಟದಲ್ಲಿ ಆತಂಕ ಮೂಡಿಸಿವೆ. ಇರಾನ್ ವಿರುದ್ಧ ನಡೆಯುತ್ತಿರುವ ಯುದ್ಧದಲ್ಲಿ ಅಮೆರಿಕ ಮತ್ತೊಂದು ಪ್ರಮುಖ ಹಿನ್ನಡೆಯನ್ನು ಅನುಭವಿಸಿದೆ ಎಂದು ಕೆಲವು ಮಾಧ್ಯಮಗಳು ವರದಿ ಮಾಡಿವೆ. ಅತ್ಯಾಧುನಿಕ ಯುದ್ಧ ವಿಮಾನಗಳ ಬಳಕೆಯ ನಡುವೆಯೇ ಈ ಘಟನೆಗಳು ಸಂಭವಿಸಿರುವುದು ಗಮನಾರ್ಹವಾಗಿದೆ.

ಇತ್ತೀಚೆಗೆ ಪತನಗೊಂಡ ಅಮೆರಿಕದ ಎಫ್-15ಇ ಯುದ್ಧ ವಿಮಾನದ ಘಟನೆಗೆ ಸಂಬಂಧಿಸಿದಂತೆ, ಅದರ ಪೈಲಟ್ ರಕ್ಷಣೆಯ ಬಗ್ಗೆ ಅಮೆರಿಕದ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮಾಹಿತಿ ನೀಡಿರುವುದು ಗಮನ ಸೆಳೆದಿದೆ. ಅವರ ಪ್ರಕಾರ, ಪತನಗೊಂಡ ವಿಮಾನದ ಪೈಲಟ್‌ಗಾಗಿ ಅಮೆರಿಕ ಸೇನೆ ವಿಶೇಷ ರಕ್ಷಣಾ ಕಾರ್ಯಾಚರಣೆ ಕೈಗೊಂಡಿದ್ದು, ಕೊನೆಗೆ ಪೈಲಟ್‌ನ್ನು ಸುರಕ್ಷಿತವಾಗಿ ರಕ್ಷಿಸಲಾಗಿದೆ. ಈ ಕಾರ್ಯಾಚರಣೆಯಲ್ಲಿ 12ಕ್ಕೂ ಹೆಚ್ಚು ಯುದ್ಧ ವಿಮಾನಗಳನ್ನು ಬಳಸಲಾಗಿದೆ ಎಂದು ಹೇಳಲಾಗಿದೆ. ಪ್ರಸ್ತುತ ಪೈಲಟ್ ಸುರಕ್ಷಿತವಾಗಿದ್ದು, ತನ್ನ ಪಡೆಗಳೊಂದಿಗೆ ಇದ್ದಾರೆ ಎಂಬ ಮಾಹಿತಿ ಲಭ್ಯವಾಗಿದೆ.



ಮತ್ತೊಂದು ವಿಮಾನ ನಾಶ: ಈ ನಡುವೆಯೇ, ಅಮೆರಿಕದ ಮತ್ತೊಂದು ವಿಮಾನವನ್ನು ಹೊಡೆದುರುಳಿಸಿದ್ದಾಗಿ ಇರಾನ್ ಘೋಷಿಸಿದೆ.

➡ಪುಟ ೪



ಹಾರ್ಮುಜ್ ತೆರೆಯಲು ವಿಳಂಬ ಮಾಡಿದರೆ ದಾಳಿ

ಈ ಬೆಳವಣಿಗೆಗಳ ನಡುವೆ, ಅಮೆರಿಕ ಮತ್ತು ಇರಾನ್ ನಡುವಿನ ರಾಜಕೀಯ ಮತ್ತು ಸೈನಿಕ ತೀವ್ರತೆ ಮತ್ತಷ್ಟು ಹೆಚ್ಚಾಗಿದೆ. ವಿಶೇಷವಾಗಿ ಹಾರ್ಮುಜ್ ಜಲಸಂಧಿ ವಿಷಯವು ಮತ್ತೆ ಚರ್ಚೆಗೆ ಬಂದಿದ್ದು, ಈ ಜಲಸಂಧಿಯನ್ನು ತೆರೆಯಲು ಇರಾನ್ ವಿಳಂಬ ಮಾಡಿದರೆ ಕಠಿಣ ಕ್ರಮ ಕೈಗೊಳ್ಳುವುದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಎಚ್ಚರಿಕೆ ನೀಡಿದ್ದಾರೆ. ಸಾಮಾಜಿಕ ಮಾಧ್ಯಮದ ಮೂಲಕ ತಮ್ಮ ಅಭಿಪ್ರಾಯವನ್ನು ಹಂಚಿಕೊಂಡಿರುವ ಟ್ರಂಪ್, ಬೆದರಿಕೆಯಷ್ಟೇ ಅಲ್ಲ, ಅವರು ಬಳಸಿದ ಭಾಷೆಯೂ ಹೆಚ್ಚು ಗಮನ ಸೆಳೆದಿದೆ. ಏಕೆಂದರೆ ಅವರು ಇರಾನ್‌ಗೆ ಅವಮಾನಿಸುವ ಪದಗಳನ್ನು ಬಳಸುತ್ತಾ ಹಾರ್ಮುಜ್ ಜಲಸಂಧಿ ಮರು ತೆರೆಯುವಂತೆ ಒತ್ತಾಯಿಸಿದ್ದಾರೆ. ಇದೇ ವೇಳೆ ಇರಾನ್ ವಿರುದ್ಧ ಗಂಭೀರ ಕ್ರಮಗಳನ್ನು ಕೈಗೊಳ್ಳುವ ಸೂಚನೆ ನೀಡಿದ್ದಾರೆ. ವಿದ್ಯುತ್ ಸ್ಥಾವರಗಳು ಮತ್ತು ಸೇತುವೆಗಳು ಮೊದಲಾದ ಪ್ರಮುಖ ಮೂಲಸೌಕರ್ಯಗಳನ್ನು ನಾಶಪಡಿಸುವ ಬಗ್ಗೆ ಅವರು ಉಲ್ಲೇಖಿಸಿರುವುದು ಪರಿಸ್ಥಿತಿಯ ಗಂಭೀರತೆ ತೋರಿಸುತ್ತದೆ.



36 ಗಂಟೆ ಪರ್ವತದಲ್ಲಿ ಅವಿತಿದ್ದ ಪೈಲಟ್!



ಅಮೆರಿಕದ ಎಫ್-15ಇ ಯುದ್ಧ ವಿಮಾನವನ್ನು ಇರಾನ್ ಸೇನೆ ಕಳೆದ ಶುಕ್ರವಾರ ಹೊಡೆದುರುಳಿಸಿದ್ದು, ಇರಾನ್ ನೊಳಗೆ ವಿಶೇಷ ಕಾರ್ಯಾಚರಣೆ ನಡೆಸಿ ನಾಪತ್ತೆಯಾಗಿದ್ದ ಪೈಲಟ್ ರಕ್ಷಿಸಿರುವುದಾಗಿ ಅಮೆರಿಕ ಘೋಷಿಸಿದೆ. ಅಂದಹಾಗೆ ಈ ರಕ್ಷಣಾ ಕಾರ್ಯಕ್ಕೆ ಅಮೆರಿಕ ನೂರಾರು ಸೈನಿಕರು, ಯುದ್ಧ ವಿಮಾನ, ಹೆಲಿಕಾಪ್ಟರ್‌ಗಳನ್ನು ಬಳಕೆ ಮಾಡಿದೆ. ನಾಪತ್ತೆಯಾಗಿದ್ದ ಪೈಲಟ್ ಪರ್ವತ ಪ್ರದೇಶದಲ್ಲಿ 36 ಗಂಟೆಗಳ ಕಾಲ ಸಿಲುಕಿಕೊಂಡಿದ್ದರು.

• ವಿವರ ಪುಟ ೭

ಇರಾನ್ ಹಿಂಜರಿಯದ ಧೋರಣೆ



ಇರಾನ್ ತನ್ನ ನಿಲುವಿನಲ್ಲಿ ಯಾವುದೇ ಬದಲಾವಣೆ ತೋರಿಸದೆ, ಮಧ್ಯಪ್ರಾಚ್ಯದ ಕೆಲ ಅರಬ್ ದೇಶಗಳ ಮೇಲೆ ದಾಳಿಗಳನ್ನು ಮುಂದುವರಿಸುತ್ತಿದೆ. ಇದರಿಂದ ಪ್ರದೇಶದಲ್ಲಿ ಭದ್ರತಾ ಪರಿಸ್ಥಿತಿ ಮತ್ತಷ್ಟು ಗಂಭೀರವಾಗುತ್ತಿದೆ. ಈ ನಡುವೆ, ಇರಾನ್ ಸೈನ್ಯವು ಅಮೆರಿಕದ ಎಚ್ಚರಿಕೆಗಳಿಗೆ ಪ್ರತಿಯಾಗಿ ತೀವ್ರ ಪ್ರತಿಕ್ರಿಯೆ ನೀಡಿದೆ. ನಮ್ಮ ಮೂಲಸೌಕರ್ಯ ಹಾನಿಗೊಳಿಸಿದರೆ ಪರಿಣಾಮಗಳು ಭೀಕರವಾಗಿರುತ್ತವೆ ಎಂದು ಇರಾನ್‌ನ ಉನ್ನತ ಸೈನಿಕ ಅಧಿಕಾರಿಗಳು ತಿಳಿಸಿದ್ದಾರೆ.

ಆರೋಪಿ ಮುಫೀಜ್ ಮಿಯಾನವರ ಸೆರೆ

ಹುಬ್ಬಳ್ಳೀಲಿ ಮತ್ತೊಂದು ಲವ್ ಜಿಹಾದ್ ಪ್ರಕರಣ

ಪ್ರೀತಿಯ ನಾಟಕವಾಡಿ ಲೈಂಗಿಕ ದೌರ್ಜನ್ಯ, ಜೀವ ಬೆದರಿಕೆ



• **ಹುಬ್ಬಳ್ಳಿ:** ಜಿಮ್‌ನಲ್ಲಿ ಲವ್ ಜಿಹಾದ್‌ಗೆ ಯತ್ನಿಸಿದ್ದಾರೆಂಬ ಆರೋಪದ ಮಾದರಿಯಲ್ಲೇ ಮತ್ತೊಂದು ಪ್ರಕರಣ ಬೆಳಕಿಗೆ ಬಂದಿದೆ.

ಮತ್ತೋರ್ವ ಮುಸ್ಲಿಂ ಯುವಕ ಹಿಂದು ಯುವತಿಯೊಬ್ಬಳ ಮೇಲೆ ಲೈಂಗಿಕ ದೌರ್ಜನ್ಯ ಎಸಗಿ ಬೆದರಿಕೆ ಹಾಕಿದ ದೂರೊಂದು ಭಾನುವಾರ ಕೇಶ್ವಾಪುರ ಪೊಲೀಸ್ ಠಾಣೆಯಲ್ಲಿ ದಾಖಲಾಗಿದೆ. ಕೇಶ್ವಾಪುರ ಪೊಲೀಸರು ಆರೋಪಿಯನ್ನು ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಾರೆ.

ಇಲ್ಲಿಯ ಕಮರಿಪೇಟ ನಿವಾಸಿ ಮುಫೀಜ್ ಮಿಯಾನವರ(23) ಬಂಧಿತ ಆರೋಪಿ. ಆರೋಪಿ ಮುಫೀಜ್ ಕಳೆದ ಐದು ವರ್ಷದ ಹಿಂದೆ ಕಾರ್ಯಕ್ರಮವೊಂದರಲ್ಲಿ ಯುವತಿಗೆ ಪರಿಚಯವಾಗಿದ್ದಾನೆ. ನಂತರ ಅವಳೊಂದಿಗೆ ಸಲುಗೆ ಬೆಳೆಸಿ ಅವಳೊಂದಿಗೆ ಸುತ್ತಾಡಿದ್ದಾನೆ. ಒಮ್ಮೆ ಅವಳನ್ನು ಗದಗ ರಸ್ತೆ ಮೇಲ್ಸೇತುವೆ ಹತ್ತಿರ ಕರೆದುಕೊಂಡು ಹೋಗಿ ಲೈಂಗಿಕ ದೌರ್ಜನ್ಯ ಎಸಗಿದ್ದಲ್ಲದೆ ಹಲವು ಫೋಟೋ ಹಾಗೂ ವಿಡಿಯೋಗಳನ್ನು ಮೊಬೈಲ್‌ನಲ್ಲಿ ಸೆರೆಹಿಡಿದಿದ್ದಾನೆ. ಅವುಗಳನ್ನು ಇಟ್ಟುಕೊಂಡು ಬೆದರಿಕೆ ಹಾಕಿ 2025 ನವೆಂಬರ್‌ನಲ್ಲಿ ಮನೆಗೆ ಕರೆದು ಮತ್ತೆ ಲೈಂಗಿಕ ದೌರ್ಜನ್ಯವೆಸಗಿದ್ದಾನೆ. ಈ ವಿಚಾರ ಯಾರ ಬಳಿಯಾದರೂ ಹೇಳಿದರೆ ನಿಮ್ಮ ಪಾಲಕರನ್ನು ಜೀವಸಹಿತ ಬಿಡಲ್ಲ ಎಂದು ಬೆದರಿಕೆ ಹಾಕಿದ್ದಾನೆ ಎಂದು ದೂರಿನಲ್ಲಿ ಯುವತಿ ತಿಳಿಸಿದ್ದಾಳೆ.

ಹೈದರಾಬಾದ್‌ನಲ್ಲೂ ಲವ್ ಜಿಹಾದ್

• **ಹೈದರಾಬಾದ್:** ಪತಿ ನವಾಜ್ (ನವದುರ್ಗ ಎಂದು ತನ್ನನ್ನು ಪರಿಚಯಿಸಿಕೊಂಡಿದ್ದ) ತಾನು ಹಿಂದು ಧರ್ಮಕ್ಕೆ ಮತಾಂತರವಾಗಿದ್ದೇನೆ ಎಂದು ನಂಬಿಸಿ, ನಂತರ ಮದುವೆಯಾದ ಬಳಿಕ ಬಲವಂತವಾಗಿ ಇಸ್ಲಾಂಗೆ ಮತಾಂತರ ಮಾಡಿದ್ದಾನೆ ಎಂದು ತನ್ನ ಪತಿ ಹಾಗೂ ಅವರ ಕುಟುಂಬದವರ ವಿರುದ್ಧ ಮಹಿಳೆಯೊಬ್ಬರು ಗಂಭೀರ ಆರೋಪಗಳನ್ನು ಮಾಡಿದ್ದಾರೆ. ಮಹಿಳೆಯ ಹೇಳಿಕೆಯ ಪ್ರಕಾರ, 2021ರ ಮೇನಲ್ಲಿ ಅಂಗಡಿ ಬಾಡಿಗೆ ವಿಚಾರವಾಗಿ ನವಾಜ್ ಅವರನ್ನು ಭೇಟಿಯಾದಳು. ಆತ ತನ್ನ ಹೆಸರನ್ನು ನವದುರ್ಗ ಎಂದು ಹೇಳಿ ನಂಬಿಕೆ ಗಳಿಸಿದ್ದ. ನಂತರ ಮದುವೆಯ ಹೆಸರಿನಲ್ಲಿ ಆಕೆಯನ್ನು ಮೋಸಗೊಳಿಸಿದ್ದಾನೆ. ಮೇ 24ರಂದು ಕುಟುಂಬವನ್ನು ಪರಿಚಯಿಸುವ ನೆಪದಲ್ಲಿ ರೆಸಾರ್ಟ್‌ಗೆ ಕರೆದೊಯ್ದು, ಆಹಾರ ಅಥವಾ ಪಾನೀಯದಲ್ಲಿ ಮದ್ದು ಬೆರೆಸಿ ಪ್ರಜ್ಞಾಹೀನಳಾದ ಆಕೆಯ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿದ್ದಾನೆ ಎಂದು ಆರೋಪಿಸಲಾಗಿದೆ.

➡ಪುಟ ೪

ಗುರುತು ಮುಚ್ಚಿಟ್ಟು ಪ್ರೇಮದ ಹೆಸರಲ್ಲಿ ಮೋಸ

• **ಭೋಪಾಲ್:** ಮಧ್ಯ ಪ್ರದೇಶದ ಗ್ವಾಲಿಯರ್ ನಗರದಲ್ಲಿ ಪ್ರೇಮ ಸಂಬಂಧದ ಹೆಸರಿನಲ್ಲಿ ಮೋಸದ ಗಂಭೀರ ಪ್ರಕರಣ ಬೆಳಕಿಗೆ ಬಂದಿದೆ. ಆರೋಪಿಯು ತನ್ನ ನಿಜವಾದ ಗುರುತನ್ನು ಮರೆಮಾಚಿ ಯುವತಿಯನ್ನು ಪ್ರೀತಿಯ ಜಾಲಕ್ಕೆ ಸೆಳೆದಿದ್ದಾನೆ ಎಂಬ ಆರೋಪ ಕೇಳಿಬಂದಿದೆ.

➡ಪುಟ ೪

ಟಿಎಂಸಿ ಸರ್ಕಾರದ ವಿರುದ್ಧ ಪ್ರಧಾನಿ ಮೋದಿ ವಾಗ್ದಾಳಿ

ಪ.ಬಂಗಾಳದಲ್ಲಿ ಜಂಗಲ್‌ರಾಜ್

• **ಕೋಲ್ಕತ್ತಾ:** ಪಶ್ಚಿಮ ಬಂಗಾಳದಲ್ಲಿ ಅರಾಜಕತೆ ಮೇರೆ ಮೀರಿದೆಯೆಂಬ ಬಿಜೆಪಿ ಆರೋಪವು, ಮಾಲ್ಡಾದಲ್ಲಿ ನ್ಯಾಯಾಂಗ ಅಧಿಕಾರಿಗಳನ್ನು ಘೇರಾವ್ ಮಾಡಿ ಒತ್ತೆಸೆರೆಯಲ್ಲಿಟ್ಟ ಘಟನೆಯಿಂದ ಸ್ಪಷ್ಟ ಸಾಬೀತಾಗಿದೆ. ಟಿಎಂಸಿ ಸರಕಾರ ರಾಜ್ಯದಲ್ಲಿ ಮಹಾ ಜಂಗಲ್‌ರಾಜ್ ನಡೆಸುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಟಿಎಂಸಿ ಸರಕಾರವನ್ನು ತೀಕ್ಷ್ಣವಾಗಿ ತರಾಟೆಗೆತ್ತಿಕೊಂಡಿದ್ದಾರೆ.



2026ರ ವಿಧಾನಸಭಾ ಚುನಾವಣೆ ಆಳುವ ಟಿಎಂಸಿ ಹರಡಿರುವ ಭಯ ಮತ್ತು ಬಿಜೆಪಿಯ ಭರೋಸಾ (ಭರವಸೆ) ನಡುವಣ ಹಣಾಹಣಿಯಾಗಿದೆ ಎಂದು ವಿಶ್ಲೇಷಿಸಿದರು.

ಎಂತಹ ಸರಕಾರವಿದು?: ಮಾಲ್ಡಾದಲ್ಲಿ ಕೆಲ ದಿನಗಳ ಹಿಂದೆ ನ್ಯಾಯಾಂಗ ಅಧಿಕಾರಿಗಳನ್ನು ಒತ್ತೆಯಲ್ಲಿಟ್ಟ ಅಮಾನವೀಯ ಘಟನೆಗೆ ಇಡೀ ದೇಶ ಸಾಕ್ಷಿಯಾಗಿದೆ. ನ್ಯಾಯಾಧೀಶರುಗಳು, ಸಾಂವಿಧಾನಿಕ ನಿಯಮಾವಳಿಗೇ ಸುರಕ್ಷೆ ನೀಡಲಾಗದ ಎಂತಹ ಸರಕಾರವಿದು?

➡ಪುಟ ೪



ಪ್ರತಿ ಅನ್ಯಾಯ ಕೃತ್ಯಗಳ ವಿಚಾರಣೆ

ಮತದಾನ ದಿನ ಟಿಎಂಸಿ ಗೂಂಡಾಗಳು ಎಷ್ಟೇ ಸಂಖ್ಯೆಯಲ್ಲಿ ನಿಮ್ಮನ್ನು ಭಯಪಡಿಸಲು ಯತ್ನಿಸಿದರೂ ಹೆದರದಿರಿ, ನೀವು ಕಾನೂನಲ್ಲಿ ವಿಶ್ವಾಸವಿಡಿ. ತನಗೆ ಚುನಾವಣಾ ಆಯೋಗದಲ್ಲಿ ಪೂರ್ಣ ಭರವಸೆಯಿದೆ. ಹಾಗಾಗಿ ಮುಕ್ತ, ನ್ಯಾಯೋಚಿತ ಮತ್ತು ಭಯಮುಕ್ತವಾಗಿ ಮತದಾನ ನಡೆಯುವುದೆಂಬ ವಿಶ್ವಾಸವಿದೆ.

➡ಪುಟ ೪

ಜಗಜೀವನರಾಂ ಜಯಂತಿ ಕಾರ್ಯಕ್ರಮದಲ್ಲಿ ಮಹದೇವಪ್ಪ

ದೇಶದ ಪ್ರಗತಿಗೆ ಬಾಬೂಜಿ ಕೊಡುಗೆ

• **ಬೆಂಗಳೂರು:** ಡಾ. ಬಾಬು ಜಗಜೀವನರಾಂ ಅವರು 1946ರಲ್ಲಿ ಸಚಿವರಾಗಿ 1980ರವರೆಗೆ ಉಪಪ್ರಧಾನಿ ಆಗುವವರೆಗೆ ದೇಶದ ಎಲ್ಲಾ ಪ್ರಮುಖ ಇಲಾಖೆಯ ಹುದ್ದೆಗಳನ್ನು ಅಲಂಕರಿಸಿದ ಅವರು ಜನಪರ ನಿಲುವು, ತುಳಿತಕ್ಕೆ ಒಳಗಾದ ಜನರ ಮೇಲೆತ್ತುವ ಕಾಳಜಿಯುಳ್ಳವರಾಗಿದ್ದರು. ಅವರು ಭಾರತ ಇತಿಹಾಸದಲ್ಲಿ ಸುದೀರ್ಘ ಅವಧಿವರೆಗೆ ಸಚಿವರಾಗಿ ಕೆಲಸ ಮಾಡಿದರು ಎಂದು ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ. ಮಹದೇವಪ್ಪ ಸ್ಮರಿಸಿದರು.

ವಿಧಾನಸೌಧದ ಭವ್ಯ ಮೆಟ್ಟಿಲುಗಳ ಮೇಲೆ ಭಾನುವಾರ ನಡೆದ ಡಾ. ಬಾಬು ಜಗಜೀವನರಾಂ ಅವರ ಜನ್ಮ ದಿನಾಚರಣೆಯಲ್ಲಿ ಮಾತನಾಡಿದ ಅವರು, ದೇಶದ ಸಂವಿಧಾನಿಕ ಹುದ್ದೆಗಳನ್ನು ಅತ್ಯಂತ ಯಶಸ್ವಿಯಾಗಿ ನಿರ್ವಹಿಸುವಂತ ಶಕ್ತಿ ಸಾಮರ್ಥ್ಯ ಡಾ. ಬಾಬು ಜಗಜೀವನರಾಮ್ ಅವರಲ್ಲಿತ್ತು. ಅದಕ್ಕೆ ಅವರು ಕೈಗೊಂಡ ಅನೇಕ ತೀರ್ಮಾನಗಳಿಂದ ದೇಶದಲ್ಲಿ ಬದಲಾವಣೆ, ಸುಧಾರಣೆ ದಾಖಲಿಸಿದ್ದಾರೆ ಎಂದರು.

➡ಪುಟ ೪



ಪ್ರತಿಮೆಗೆ ಮಾಲಾರ್ಪಣೆ

ಚುನಾವಣೆ ಪ್ರಚಾರದಿಂದ ಆಗಮಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಿಧಾನಸೌಧದ ಆವರಣದಲ್ಲಿರುವ ಡಾ. ಬಾಬು ಜಗಜೀವನ ರಾಂ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಿ ನಮಿಸಿದರು.

ಕೇಂದ್ರದ ಜತೆ ಸಹಕಾರವಿರಲಿ

• **ಬಾಗಲಕೋಟೆ:** ರಾಜ್ಯದ ನೀರಾವರಿ ಯೋಜನೆ ಹಾಗೂ ಕೃಷ್ಣಾ ಮೇಲ್ದಂಡೆ ಯೋಜನೆಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಕೇಂದ್ರದ ಜತೆಗೆ ಸಹಕಾರದ ಭಾವನೆ ಹೊಂದಬೇಕು. ನಿತ್ಯ ಸಂಘರ್ಷಕ್ಕೆ ಇಳಿದು ಮಾತನಾಡಿದರೆ ಯಾವ ಕೆಲಸವೂ ಆಗುವುದಿಲ್ಲ. ಪಕ್ಕದ ಆಂಧ್ರಪ್ರದೇಶದ ಸರ್ಕಾರವನ್ನು ನೋಡಿ ರಾಜ್ಯ ಸರ್ಕಾರ ಕಲಿಯಬೇಕು ಎಂದು ಮಾಜಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ಹೇಳಿದರು.



ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ ಪರ ಪ್ರಚಾರಕ್ಕೆ ಆಗಮಿಸಿದ ಸಂದರ್ಭದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಕೇಂದ್ರ ಸರ್ಕಾರದ ನೀರಾವರಿ ಮಂತ್ರಿ, ಪ್ರಧಾನಿ ಮೋದಿಯವರನ್ನು ಭೇಟಿಯಾಗಿ ರಾಜ್ಯದ ಮುಖ್ಯಮಂತ್ರಿಗಳು, ಸಂಬಂಧಿಸಿದ ಮಂತ್ರಿಗಳು ಮಾತನಾಡಿ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬೇಕು. ಕೇವಲ ಸುಳ್ಳು ಹೇಳುವುದನ್ನು ಬಿಡಬೇಕು ಎಂದರು.

➡ಪುಟ ೪

ದಕ್ಷಿಣ ರಾಜ್ಯಗಳು ಲೋಕಸಭೆ ಕ್ಷೇತ್ರ ಕಳೆದುಕೊಳ್ಳಲ್ಲ

• **ತಿರುವನಂತಪುರ:** ಕರ್ನಾಟಕ ಸೇರಿದಂತೆ ದಕ್ಷಿಣ ಭಾರತದ ರಾಜ್ಯಗಳು ಲೋಕಸಭೆ ಕ್ಷೇತ್ರಗಳನ್ನು ಕಳೆದುಕೊಳ್ಳುವುದಿಲ್ಲ ಎಂದು ಪ್ರಧಾನಿ ನರೇಂದ್ರ ಮೋದಿಯವರು ಭರವಸೆ ನೀಡಿದ್ದಾರೆ.



ಇಲ್ಲಿ ಶನಿವಾರ ನಡೆದ ಚುನಾವಣಾ ರ್‍ಯಾಲಿಯಲ್ಲಿ ಮಾತನಾಡಿದ ಅವರು, ಜನಸಂಖ್ಯೆ ನಿಯಂತ್ರಣದಲ್ಲಿ ಸಾಧನೆ ಮಾಡಿದ ರಾಜ್ಯಗಳ ಲೋಕಸಭಾ ಕ್ಷೇತ್ರಗಳನ್ನು ಕಡಿತಗೊಳಿಸಲಾಗುವುದಿಲ್ಲ ಎಂದು ಸ್ಪಷ್ಟಪಡಿಸಿದರು.

➡ಪುಟ ೪

ಕಿರುಸುದ್ದಿ

ಕಿಡಿಗೇಡಿಗಳಿಂದ ಕಂಬಗಳ ಹಾನಿ

◆ **ಗೋಕರ್ಣ:** ಇಲ್ಲಿನ ಮುಖ್ಯ ಕಡಲತೀರದಲ್ಲಿದ್ದ ಜೀವರಕ್ಷಕ ಸಿಬ್ಬಂದಿಗಳು ಕಾವಲು ಕುಳಿತುಕೊಳ್ಳುವ ಸ್ಟೀಲ್ ಸ್ಟ್ಯಾಂಡ್ ಮತ್ತು ಆರಕ್ಕೂ ಹೆಚ್ಚು ಕಂಬಗಳನ್ನ ಕಿಡಿಗೇಡಿಗಳು ಹಾನಿಗೊಳಿಸಿದ್ದಾರೆ. ಜೀವರಕ್ಷಕ ಸಿಬ್ಬಂದಿ ಎತ್ತರದಲ್ಲಿ ಕುಳಿತುಕೊಂಡು ಸಮುದ್ರಕ್ಕಿಳಿಯುವ ಪ್ರವಾಸಿಗರ ಮೇಲೆ ನಿಗಾ ಇಡುತ್ತಿದ್ದರು. ಬಿಸಿಲಿನ ತಾಪ ತಡೆಯಲು ಕಂಬಕ್ಕೆ ಶೆಡ್‌ನೆಟ್ ಕಟ್ಟಿಕೊಳ್ಳುತ್ತಿದ್ದರು. ಇವೆಲ್ಲವನ್ನ ಕಿಡಿಗೇಡಿಗಳು ರಾತ್ರಿ ಸಮಯದಲ್ಲಿ ಕಿತ್ತು ಬಿಸಾಡಿದ್ದು, ಅರ್ಧ ಪರಿಕರ ಸಮುದ್ರಕ್ಕೆ ಎಸೆದಿದ್ದಾರೆ.



ಕಿಕ್ ಬಾಕ್ಸಿಂಗ್ ಸ್ಪರ್ಧೆ: ಮಹಿಳಾ ಪಟುಗಳ ಸಾಧನೆ



◆ **ಭಟ್ಕಳ:** ಚೆನ್ನೈನಲ್ಲಿ ನಡೆದ ಖೇಲೋ ಇಂಡಿಯಾ ಅಸ್ಮಿತಾ ಕಿಕ್ ಬಾಕ್ಸಿಂಗ್ ರಾಷ್ಟ್ರಮಟ್ಟದ ಸ್ಪರ್ಧೆಯಲ್ಲಿ ತಾಲೂಕಿನ ನಾಗಶ್ರೀ ಮಾರ್ಷಲ್ ಆರ್ಟ್ಸ್ ನ ಮಹಿಳಾ ಪಟುಗಳು ಉತ್ತಮ ಸಾಧನೆ ಮಾಡಿದ್ದಾರೆ. ಲಿಖಿತಾ ಶಂಕರ ನಾಯ್ಕ ಜೂನಿಯರ್ ವಿಭಾಗದ -45ಕೆಜಿ ಪಾಯಿಂಟ್ ಫೈಟ್ ನಲ್ಲಿ ಕಂಚಿನ ಪದಕ, ಆಖೀಲಾ ಚಂದ್ರಕಾಂತ್ ನಾಯಕಸೀನಿಯರ್ ವಿಭಾಗದ -45 ಕೆಜಿ ಪಾಯಿಂಟ್ ಫೈಟ್ ನಲ್ಲಿ ಒಂಬತ್ತನೇಯ ಸ್ಥಾನ, ಸಮೀಕ್ಷಾ ಮಾಸ್ತಿ ಗೊಂಡ ಸಬ್ ಜೂನಿಯರ್ ವಿಭಗಳ -37ಕೆಜಿ ಲೈಟ್ ಕಾಂಟ್ಯಾಕ್ಟ್ ನಲ್ಲಿ ಐದನೇಯ ಸ್ಥಾನ ,ಮನಾಲಿ ರಾಜು ನಾಯ್ಕ ಜೂನಿಯರ್ ವಿಭಗಳ -42ಕೆಜಿ ಲೈಟ್ ಕಾಂಟ್ಯಾಕ್ಟ್ ನಲ್ಲಿ ಐದನೇಯ ಸ್ಥಾನ ಪಡೆದುಕೊಂಡಿದ್ದಾರೆ. ನಾಗಶ್ರೀ ನಾಯ್ಕ ಈ ಸ್ಪರ್ಧೆಯಲ್ಲಿ ರೆಫರಿಯಾಗಿ ಕಾರ್ಯನಿರ್ವಹಿಸಿದರು. ಉತ್ತಮ ಸಾಧನೆ ಮಾಡಿದ ಕ್ರೀಡಾಪಟುಗಳನ್ನು ಉತ್ತರ ಕನ್ನಡ ಜಿಲ್ಲಾ ಕಿಕ್ ಬಾಕ್ಸಿಂಗ್ ಸ್ಪೋರ್ಟ್ಸ್ ಅಸೋಸಿಯೇಷನ್‌ನ ಅಧ್ಯಕ್ಷ ಈಶ್ವರ ನಾಯ್ಕ, ತರಬೇತುರಾದ ನಾಗಶ್ರೀ ನಾಯ್ಕ, ಕಾನೂನು ಸಲಹೆಗಾರರಾದ ಮನೋಜ್ ನಾಯ್ಕ ಮತ್ತು ಉಮೇಶ್ ಮೊಗೇರ್ ಅಭಿನಂದಿಸಿದ್ದಾರೆ.

ಕ್ರಿಕೆಟ್ ತಂಡಕ್ಕೆ ಋತ್ವಿಕ್ ಎಸ್.ಆಯ್ಕೆ

◆ **ಹೊನ್ನಾವರ:** ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ ನಡೆಸಿರುವ 16 ವರ್ಷ ವಯೋಮಿತಿಯ ವಿಭಾಗದಲ್ಲಿ ಅದ್ವೈತ ಸ್ಪೋರ್ಟ್ಸ್ ಕ್ಲಬ್ ಸಂಸ್ಥೆಯಲ್ಲಿ ತರಬೇತಿ ಪಡೆದ ಕ್ರೀಡಾಪಟು ಋತ್ವಿಕ್ ಎಸ್. ಮೇಸ್ತ ಉಕ ಜಿಲ್ಲೆಯ ಕ್ರಿಕೆಟ್ ತಂಡಕ್ಕೆ ಆಯ್ಕೆಯಾಗಿದ್ದಾರೆ. ಋತ್ವಿಕ್ ಅವರು ಬಾಲ್ಯದಿಂದಲೂ ಕ್ರಿಕೆಟ್‌ನಲ್ಲಿ ಅಪಾರ ಆಸಕ್ತಿ ಹೊಂದಿದ್ದು, ಅದ್ವೈತ ಸ್ಪೋರ್ಟ್ಸ್ ಕ್ಲಬ್‌ನಲ್ಲಿ ತರಬೇತಿ ಪಡೆಯುತ್ತಿದ್ದರು. ಇತನ ಕ್ರೀಡಾ ಕೌಶಲ್ಯ ಗಮನಿಸಿದ ಆಯ್ಕೆಗಾರರು, ಜಿಲ್ಲಾ ತಂಡದಲ್ಲಿ ಆಡಲು ಇವರಿಗೆ ಅವಕಾಶ ನೀಡಿದ್ದಾರೆ. ಈ ಆಯ್ಕೆಯು ಕೇವಲ ಕ್ರೀಡಾಪಟುವಿನ ವೈಯಕ್ತಿಕ ಸಾಧನೆಯಷ್ಟೇ ಅಲ್ಲದೆ, ಹೊನ್ನಾವರ ತಾಲೂಕಿನ ಕ್ರೀಡಾ ಪರಂಪರೆಗೆ ಸಂದ ಗೌರವವಾಗಿದೆ. ಸಂಸ್ಥೆಯ ಅಧ್ಯಕ್ಷ ರಾಘವೇಂದ್ರ ಮೇಸ್ತ ಅಭಿನಂಧಿಸಿದ್ದಾರೆ.



ನಿಧನ ಸುದ್ದಿ

ಅರ್ಜುನ ಮಿರಾಶಿ

◆ **ದಾಂಡೇಲಿ:** ಸತ್ಪುರುಷ ದಾಂಡೇಲಪ್ಪಾ ದೇವಸ್ಥಾನದ ಅರ್ಚಕರು ಹಾಗೂ ದಾಂಡೇಲಪ್ಪಾ ವಿವಿದೊದ್ದೇಶಗಳ ಪ್ರಾಥಮಿಕ ಗ್ರಾಮೀಣ ಕೃಷಿ ಸಹಕಾರ ಸಂಘದ ಮಾಜಿ ಅಧ್ಯಕ್ಷರು ಮತ್ತು ಹಾಲಿ ನಿರ್ದೇಶಕರಾದ ಅರ್ಜುನ ದೇವಪ್ಪ ಮಿರಾಶಿಯವರು (51) ನಿಧನರಾದರು. ಸರಳ, ಸಜ್ಜನಿಕೆಯ ಹಾಗೂ ಪರೋಪಕಾರಿ ಮತ್ತು ಸ್ನೇಹಪರ ವ್ಯಕ್ತಿತ್ವದ ಅರ್ಜುನ ದೇವಪ್ಪ ಮಿರಾಶಿಯವರು ತಾಯಿ, ಓರ್ವ ಸಹೋದರ, ಇಬ್ಬರು ಸಹೋದರಿಯರು, ಪತ್ನಿ, ಪುತ್ರ, ಪುತ್ರಿ ಸೇರಿದಂತೆ ಅಪಾರ ಸಂಖ್ಯೆಯಲ್ಲಿ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ನಿಧನಕ್ಕೆ ತಾಲೂಕಿನ ಗಣ್ಯರು ಸಂತಾಪವನ್ನು ಸೂಚಿಸಿದ್ದಾರೆ.





ಗೋಕರ್ಣ: ಬಿಜ್ಜೂರು ಹಾಲಕ್ಕಿ ಒಕ್ಕಲಿಗ ಸಮಾಜದವರ ಹಬ್ಬದ ನಾಲ್ಕನೇ ದಿನದ ಪ್ರಸ್ತುತ ಆಗುಹೋಗುಗಳ ರೂಪಕದ ಮೂಲಕ ಪ್ರದರ್ಶಿಸುವ ಹಗಣ ಶನಿವಾರ ರಾತ್ರಿ ರಥ ಬೀದಿಯಲ್ಲಿ ನಡೆಯಿತು. ಗೊರಿಲ್ಲಾ ಹಿಡಿಯುತ್ತಿರುವು ದೃಶ್ಯ ಕಂಡು ಬಂದಿತ್ತು.

ಮಳೆ ನೀರು ನಿಲ್ಲದಂತೆ ಕ್ರಮ ವಹಿಸಲು ಒತ್ತಾಯ

◆ **ಭಟ್ಕಳ:** ಪಟ್ಟಣದ ಸಾಗರ ರಸ್ತೆ ಮತ್ತು ಮುಖ್ಯ ವೃತ್ತದಲ್ಲಿ ಮಳೆಗಾಲದಲ್ಲಿ ಮಳೆ ನೀರು ತುಂಬಿ ತೊಂದರೆ ಆಗುತ್ತಿದ್ದು, ಸಮಸ್ಯೆ ಬಗೆಹರಿಸಬೇಕು ಎಂದು ಅಂಗಡಿಕಾರರು ಮತ್ತು ಸಾರ್ವಜನಿಕರು ನಗರಸಭೆ ಆಯುಕ್ತ ಬಾಬಾ ಸಾಹೇಬ ಮಾನೆ ಅವರಿಗೆ ಮನವಿ ಸಲ್ಲಿಸಿದರು.ಪಟ್ಟಣದ ಸಾಗರ ರಸ್ತೆ ಮತ್ತು ಮುಖ್ಯವೃತ್ತದಲ್ಲಿ ಭಾರೀ ಮಳೆ ಬಂದ ಸಂದರ್ಭದಲ್ಲಿ ಮಳೆ ನೀರು ನಿಂತು ಕೃತಕ ನೆರೆ ಉಂಟಾಗುತ್ತದೆ. ಇದರಿಂದ ಅಂಗಡಿಗಳಿಗೂ ನೀರು ನುಗ್ಗಲಿದೆ. ಈ ಪ್ರದೇಶದಲ್ಲಿ ಶಾಲಾ ಮಕ್ಕಳು, ಸಾರ್ವಜನಿಕರು ಹೆಚ್ಚು ಓಡಾಡುತ್ತಿದ್ದು ಅವರಿಗೂ ತೊಂದರೆ ಆಗಿದೆ. ಮಳೆ ನೀರು ನಿಂತ ಸಂದರ್ಭದಲ್ಲಿ ವಾಹನ ಓಡಾಟಕ್ಕೂ ತೊಂದರೆಯಾಗುತ್ತಿದೆ. ಪ್ರಸ್ತುತ ರಸ್ತೆಯ ಒಂದು ಬದಿಯಲ್ಲಿ ಮಾತ್ರ ಅಡ್ಡ ಚರಂಡಿ ನಿರ್ಮಾಣ ಮಾಡಿದ್ದು, ಇನ್ನೊಂದು ಬದಿಯಲ್ಲಿ ಕಾಮಗಾರಿ ಮಾಡಿಲ್ಲ. ಮಳೆಗಾಲದ ಪೂರ್ವದಲ್ಲಿ ಇನ್ನೊಂದು ಬದಿಯಲ್ಲೂ ಚರಂಡಿ ನಿರ್ಮಾಣ ಮಾಡಿ ಮಳೆ ನೀರು ಸರಾಗವಾಗಿ ಹೋಗುವಂತೆ ಮಾಡಬೇಕು. ಮುಖ್ಯವೃತ್ತ ಮತ್ತು ಸಾಗರ ರಸ್ತೆಯಲ್ಲಿ ಮಳೆಗಾಲದಲ್ಲಿ ಮಳೆ ನೀರು ನಿಲ್ಲದಂತೆ ಕ್ರಮ ವಹಿಸಬೇಕು ಎಂದು ಆಗ್ರಹಿಸಲಾಗಿದೆ. ಈ ಸಂದರ್ಭದಲ್ಲಿ ಕುಮಾರ ನಾಯ್ಕ, ವಿಶ್ವನಾಥ ಮಹಾಲೆ, ಮಾದೇವ ಮೊಗೇರ, ಮೊಹ್ದೀನ್, ತಿಮ್ಮಪ್ಪ ನಾಯ್ಕ, ಅಖಿಲ ನಾಯ್ಕ, ಶಂಕರ ನಾಯ್ಕ, ಗಜಾನನ ನಾಯ್ಕ ಇದ್ದರು.



ಗೋಕರ್ಣ: ಬಿಜ್ಜೂರು ಹಾಲಕ್ಕಿ ಒಕ್ಕಲಿಗ ಸಮಾಜದವರ ಸುಗ್ಗಿ ಹಬ್ಬದ ನಾಲ್ಕನೇ ದಿನದ ಪ್ರಸ್ತುತ ಆಗುಹೋಗುಗಳ ರೂಪಕದ ಮೂಲಕ ಪ್ರದರ್ಶಿಸುವ ಹಗಣ ಶನಿವಾರ ರಾತ್ರಿ ರಥ ಬೀದಿಯಲ್ಲಿ ಹಾಲಕ್ಕಿ ಒಕ್ಕಲಿಗರು ಸಾಂಪ್ರದಾಯಿಕ ಪದ್ಧತಿಯಲ್ಲಿ ಬೆಳೆಯುವ ತರಕಾರಿ ಆರೋಗ್ಯಕ್ಕೆ ಒಳ್ಳೆಯದು ಎಂಬದನ್ನ ಬಿತ್ತರಿಸುತ್ತಿರುವ ದೃಶ್ಯ.

ಕೃಷಿಭೂಮಿ, ಜನವಸತಿ ಪ್ರದೇಶಗಳಿಗೆ ನೀರು ತುಂಬುವ ಭೀತಿ

ರಾಷ್ಟ್ರೀಯ ಹೆದ್ದಾರಿ ಕಾಮಗಾರಿ ಅಪೂರ್ಣ

▸ ನಾಗರಾಜ ಶೆಟ್ಟಿ

ದಿಗಂತ ವಿಶೇಷ

◆ **ಅಂಕೋಲಾ:** ಚತುಷ್ಪಥ ರಾಷ್ಟ್ರೀಯ ಹೆದ್ದಾರಿ ಅರೆಬರೆ ಕಾಮಗಾರಿಯ ಅವಾಂತರ ತಾಲೂಕಿನಲ್ಲಿ ಮುಂದುವರಿದಿದ್ದು, ಹಾರವಾಡದ ಒಕ್ಕಲಕೇರಿಯ ಜನರ ಹಲವು ವರ್ಷಗಳ ಸಮಸ್ಯೆಗೆ ಇದುವರೆಗೆ ಪರಿಹಾರ ದೊರಕದ ಕಾರಣ ಮುಂಬರುವ ಮಳೆಗಾಲದಲ್ಲಿ ಕೃಷಿಭೂಮಿ, ಜನವಸತಿ ಪ್ರದೇಶಗಳಿಗೆ ನೀರು ತುಂಬುವ ಭೀತಿ ಎದುರಾಗಿದೆ.

ಹಾರವಾಡ ಒಕ್ಕಲಕೇರಿ ಬಳಿ ಚತುಷ್ಪಥ ಕಾಮಗಾರಿ ನಡೆಸಿರುವ ಗುತ್ತಿಗೆ ಕಂಪನಿ ಸಮರ್ಪಕ ಕಾಮಗಾರಿ ಕೈಗೊಳ್ಳದೇ ಪ್ರತಿ ವರ್ಷ ಮಳೆಗಾಲ ಮುಗಿಯುತ್ತಿದ್ದಂತೆ ಒಂದೆರಡು ದಿನ ಕೆಲಸ ಮಾಡಿದಂತೆ ಮಾಡಿ ಬೇರೆ ಕಡೆ ಹೋಗುತ್ತಿದ್ದು, ಅಪೂರ್ಣ ಕಾಮಗಾರಿಯಿಂದ ಹಳ್ಳದ ನೀರು ಹರಿದು ಹೋಗಲು ಸರಿಯಾದ ವ್ಯವಸ್ಥೆ ಇಲ್ಲದೇ ನೀರು ಕೃಷಿ ಭೂಮಿ ಮತ್ತು ಗ್ರಾಮಸ್ಥರ ಮನೆಗಳಿಗೆ ಪ್ರವೇಶಿಸಿ ಪ್ರತಿ ವರ್ಷ ಹಾನಿ ಸಂಭವಿಸುತ್ತಿದೆ.

ಇಲ್ಲಿನ ಕರಿದೇವರ ದೇವಾಲಯಕ್ಕೆ ಹೋಗುವ ರಸ್ತೆಯನ್ನು ಮುಚ್ಚಿ ತಾತ್ಕಾಲಿಕ ಮಣ್ಣಿನ ರಸ್ತೆಯನ್ನು ನಿರ್ಮಾಣ ಮಾಡಲಾಗಿದ್ದು ಜನರು ಓಡಾಡುವ ರಸ್ತೆಯನ್ನು ಕಚ್ಚಾ ಮಣ್ಣಿನ ರಸ್ತೆಯಾಗಿ ಮಾಡಿರುವುದರಿಂದ ರಸ್ತೆ ನೀರಿನಲ್ಲಿ ಕೊಚ್ಚಿ ಹೋಗುತ್ತಿದ್ದು, ಜಾತ್ರೆಯ ಸಂದರ್ಭದಲ್ಲಿ ನಡೆಯುವ ದೇವರ ಪಲ್ಲಕಿ ಮೆರವಣಿಗೆ ಸಾಕಷ್ಟು ಸಮಸ್ಯೆ ಎದುರಾಗಿದ್ದಲ್ಲದೇ ಈ ಕಚ್ಚಾ ರಸ್ತೆಯಿಂದ ಗ್ರಾಮಸ್ಥರು ಸಮಸ್ಯೆ ಎದುರಿಸುತ್ತಿದ್ದಾರೆ.

ಸರ್ವಿಸ್ ರಸ್ತೆಯನ್ನು ಡಾಂಬರೀಕರಣ ಮಾಡಿ ಸರಿಪಡಿಸದ ಹೊರತು ಮುಖ್ಯ ರಸ್ತೆಯ ಕಾಮಗಾರಿಗೆ ಅವಕಾಶ ನೀಡುವುದಿಲ್ಲ ಎಂದು ಸ್ಥಳೀಯರು ಸಂಬಂಧಿಸಿದ ಅಧಿಕಾರಿಗಳ ಗಮನಕ್ಕೆ ತಂದಾಗ ಕಾಮಗಾರಿಯನ್ನೇ ಕೈಬಿಟ್ಟು ಹೋಗಿರುವುದಾಗಿ ಗ್ರಾಮಸ್ಥರು ತಮ್ಮ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಸ್ಥಳೀಯ ಶಾಲೆ ಸಮೀಪ ಹಳ್ಳ ಹರಿಯುವಲ್ಲಿ ಮಣ್ಣು ಹಾಕಲಾಗಿದ್ದು ಮಳೆಗಾಲದಲ್ಲಿ ಶಾಲೆ ಮತ್ತು ಮನೆಗಳಿಗೆ ನೀರು ನುಗ್ಗಿ ಅನಾಹುತ ಸಂಭವಿಸುವ ಸಾಧ್ಯತೆ ಇದೆ ಎಂದು ಗ್ರಾಮಸ್ಥರು ಆತಂಕ ವ್ಯಕ್ತಪಡಿಸುತ್ತಿದ್ದಾರೆ.

ಮಳೆಗಾಲ ಸಮೀಪಿಸುತ್ತಿದ್ದು ಹಳ್ಳಕ್ಕೆ ಬಾಕ್ಸ್ ಸಂಕ ನಿರ್ಮಾಣ ಮಾಡಿ ನೀರು ಸರಿಯಾಗಿ ಹರಿದು ಹೋಗುವಂತೆ ಕ್ರಮ ಕೈಗೊಳ್ಳುವ ಅಗತ್ಯತೆ ಇದ್ದು ಸಂಬಂಧಿಸಿದ ಅಧಿಕಾರಿಗಳು ಈ ಕುರಿತಂತೆ ಗುತ್ತಿಗೆ ಕಂಪನಿ ಐಆರ್‌ಬಿ ಯೊಂದಿಗೆ ಚರ್ಚಿಸಿ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಗ್ರಾಮಸ್ಥರು ಆಗ್ರಹಿಸಿದ್ದಾರೆ.



ಚತುಷ್ಪಥ ರಾಷ್ಟ್ರೀಯ ಹೆದ್ದಾರಿಯ ಅಪೂರ್ಣ ಕಾಮಗಾರಿಯಿಂದ ಹಾರವಾಡ ಒಕ್ಕಲಿಗರಕೇರಿಯ ಮೇಲಿನಕೇರಿ ಜನರು ಹಲವು ವರ್ಷಗಳಿಂದ ಸಮಸ್ಯೆ ಎದುರಿಸುತ್ತಿದ್ದು ಇದೀಗ ಹಳ್ಳದ ನೀರು ಸರಿಯಾಗಿ ಹರಿದು ಹೋಗದಂತೆ ತಡೆ ಆಗಿರುವುದು ಅನಾಹುತಕ್ಕೆ ಅವಕಾಶ ನೀಡಿದಂತಾಗಿದೆ ಸಂಬಂಧಿಸಿದವರು ಕೂಡಲೇ ಈ ಕುರಿತು ಗಮನ ಹರಿಸಲಿ.

■ ರಾಮಚಂದ್ರ,,ಗ್ರಾಮಸ್ಥ ಹಾರವಾಡ



ಡಾ. ಬಾಬು ಜಗಜೀವನರಾಂ ಸಂದೇಶ ಪಾಲಿಸಿ

◆ **ಕಾರವಾರ:** ಅಸ್ಪೃಶ್ಯತೆಯನ್ನು ತೊಡೆದು ಹಾಕಿ ಸಮಾಜದಲ್ಲಿ ಸಮಾನತೆ ತರುವ ಉದ್ದೇಶದಿಂದ ಡಾ.ಬಾಬು ಜಗಜೀವನರಾಮ್ ಅವರು ಜಾರಿಗೆ ತಂದ ಹಲವು ಕಾರ್ಯಕ್ರಮಗಳಲ್ಲಿನ ಸಮಾನತೆಯ ಸಂದೇಶವನ್ನು ಪ್ರತಿಯೊಬ್ಬರೂ ಅನುಸರಿಸಬೇಕು ಎಂದು ಜಿಪಂ ಮುಖ್ಯ ಕಾರ್ಯನಿರ್ವಹಣಾಧಿಕಾರಿಡಾ.ದಿಲೀಷ್ ಶಶಿ ಹೇಳಿದರು.

ಅವರು ಭಾನುವಾರ ಜಿಲ್ಲಾಡಳಿತ, ಜಿಪಂ, ಸಮಾಜ ಕಲ್ಯಾಣ ಇಲಾಖೆ, ಕನ್ನಡ ಸಂಸ್ಕೃತಿ ಇಲಾಖೆ ಹಾಗೂ ನಗರಸಭೆ ಕಾರವಾರ ಇವರಸಂಯುಕ್ತ ಆಶ್ರಯದಲ್ಲಿ, ಜಿಲ್ಲಾಧಿಕಾರಿ ಕಚೇರಿ ಸಭಾ ಭವನದಲ್ಲಿ ನಡೆದ ಡಾ.ಬಾಬು ಜಗಜೀವನರಾಮ್ ಅವರ 119 ನೇ ಜನ್ಮದಿನಾಚರಣೆ ಉದ್ಘಾಟಿಸಿ ಮಾತನಾಡಿದರು.

ದೇಶದ ಸ್ವಾತಂತ್ರ್ಯ ಪೂರ್ವದಲ್ಲಿ ಬಾಲ್ಯದಲ್ಲಿಯೇ ಅಸ್ಪೃಶ್ಯತೆಯನ್ನು ಅನುಭವಿಸಿ, ಅದರ ವಿರುದ್ಧ ಹೋರಾಟ ಆರಂಭಿಸಿ, ಶಿಕ್ಷಣದ ಮೂಲಕ ದೇಶದ ಉನ್ನತ ಹುದ್ದೆಗಳನ್ನೂ ಅಲಂಕರಿಸಿದ ಡಾ.ಬಾಬು ಜಗಜೀವನರಾಂ ಅವರ, ಸಮಾನತೆಯ ಹರಿಕಾರರಾಗಿ, ದೇಶದ ಎಲ್ಲಾ ವರ್ಗದ ಹಾಗೂ ಸಮುದಾಯಗಳಿಗೆ ಸಮಾನ ಅವಕಾಶಗಳನ್ನು ನೀಡುವ ಕಾಯ್ದೆಗಳನ್ನು ಜಾರಿಗೆ ತರುವ ಮೂಲಕ ಸಮಾನತೆಯ ಸಂದೇಶವನ್ನು ಸಾರಿದ್ದಾರೆ. ಎಂದರು. ಜಿಪಂ ಉಪ ಕಾರ್ಯದರ್ಶಿ ಅಲ್ಲಾ ಭಕಷ್ ಮಾತನಾಡಿದರು. ನಿವೃತ್ತ ಪ್ರಾ. ಜಿಲ್ಲಾ ಪ. ಜಾತಿ, ಪ.ವರ್ಗಗಳ ನೌಕರರ ಒಕ್ಕೂಟದ ಅಧ್ಯಕ್ಷ ಜಿ.ಡಿ.ಮನೋಜ್, ಡಾ.ಬಾಬು ಜಗಜೀವನರಾಂ ಕುರಿತು ಉಪನ್ಯಾಸ ನೀಡಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ದೀಪನ್ ಎಂ.ಎನ್, ಅಪರ ಜಿಲ್ಲಾಧಿಕಾರಿ ಸಾಜಿದ್ ಮುಲ್ಲಾ, ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ ವೈ.ಕೆ.ಉಮೇಶ್, ದಲಿತ ಸಂಘಟನೆಗಳು ಮುಖಂಡರಾದ ದೀಪಕ್ ಕುಡಾಳಕರ, ನಾಗರಾಜ ತಳವಾರ, ಜಿಲ್ಲೆಯ ಪ.ಜಾತಿ ಪಂಗಡ ಸಂಘಟನೆಗಳ ಸದಸ್ಯರು, ಜಿಲ್ಲಾಮತ್ತುತಾಲೂಕುಮಟ್ಟದ ಅಧಿಕಾರಿಗಳು, ಸಾರ್ವಜನಿಕರು ಮತ್ತಿತರರು ಇದ್ದರು.ಸಮಾಜ ಕಲ್ಯಾಣ ಇಲಾಖೆಯ ನಳಿನಿ ಪಟಗಾರ್ ಸ್ವಾಗತಿಸಿದರು. ಪತ್ರಾಂಕಿತ ವ್ಯವಸ್ಥಾಪಕ ನಾಗರಾಜ ನಾಯಕ ವಂದಿಸಿದರು.

ಪ್ರಸ್ತುತ ಸಮಾಜದಲ್ಲಿನ ಎಲ್ಲಾ ವರ್ಗದ ವ್ಯಕ್ತಿಗಳು ಕೂಡ ತಮ್ಮ ಕಾರ್ಯವ್ಯಾಪ್ತಿಯಲ್ಲಿ ಪ್ರತಿಯೊಬ್ಬರಿಗೂ ಸಮಾನ ಅವಕಾಶಗಳು ದೊರೆಯುವಂತೆ ಮತ್ತು ಹಿಂದುಳಿದವರನ್ನು ಮುಂದೆ ತರುವ ಕಾರ್ಯ ಮಾಡಬೇಕು.

■ ಡಾ.ದಿಲೀಷ್ ಶಶಿ,ಜಿಪಂ ಮುಖ್ಯ ಕಾರ್ಯನಿರ್ವಹಣಾಧಿಕಾರಿ



ಯಕ್ಷಗಾನ ಕ್ಷೇತ್ರಕ್ಕೆ ಹವ್ಯಕರ ಕೊಡುಗೆ ಅಪಾರ

◆ **ಶಿರಸಿ:** ಬ್ರಾಹ್ಮಣ ಸಮಾಜವು ತನ್ನ ಸ್ವಾಭಿಮಾನವನ್ನು ಕಾಪಾಡಿಕೊಂಡು, ಎಲ್ಲಾ ಸಮಾಜಗಳೊಂದಿಗೆ ಧರ್ಮ ಸಹಿಷ್ಣುತೆಯಿಂದ ಬೆರೆತುಬದುಕುತ್ತಿರುವುದುಅದರವೈಶಿಷ್ಟ್ಯಎಂದು ಅಖಿಲ ಹವ್ಯಕ ಮಹಾಸಭೆಯ ಉಪಾಧ್ಯಕ್ಷ ಹಾಗೂ ಸಹಕಾರಿ ರತ್ನ ಪ್ರಶಸ್ತಿ ಪುರಸ್ಕೃತ ಆರ್. ಎಂ. ಹೆಗಡೆ ಬಾಳೇಸರ ಹೇಳಿದರು.

ಭಾನುವಾರನಗರದಲಯನ್ಸ್‌ಸಭಾಂಗಣದಲ್ಲಿ ಹವ್ಯಕ ಮಹಾಸಭೆ ಆಯೋಜಿಸಿದ್ದ 'ಪ್ರತಿಬಿಂಬ' ಉದ್ಘಾಟನೆಯ ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಹವ್ಯಕ ಸಮಾಜವು ತನ್ನ ಸಾಂಸ್ಕೃತಿಕ ವೈಶಿಷ್ಟ್ಯವನ್ನು ಉಳಿಸಿಕೊಂಡೇ ಇತರ ಸಮಾಜಗಳೊಂದಿಗೆ ಹೊಂದಾಣಿಕೆಯಿಂದ ಬದುಕುತ್ತಿದೆ ಎಂದು ಅವರು ಹೇಳಿದರು.

ಕೃಷಿ, ವೈದಿಕ, ಕಲೆ ಹಾಗೂ ಯಕ್ಷಗಾನ ಕ್ಷೇತ್ರಗಳಿಗೆ ಹವ್ಯಕರ ಕೊಡುಗೆ ಮಹತ್ವದ್ದಾಗಿದ್ದು, ಈ ಪರಂಪರೆಯನ್ನು ಮುಂದಿನ ಪೀಳಿಗೆಗೆ ಹಸ್ತಾಂತರಿಸುವ ಜವಾಬ್ದಾರಿ ಎಲ್ಲರ ಮೇಲಿದೆ. ಶಿರಸಿಯಲ್ಲಿ ಹವ್ಯಕ ಭವನ ನಿರ್ಮಾಣವು ಅಗತ್ಯವಾಗಿದ್ದು, ಈ ದಿಸೆಯಲ್ಲಿ ಕ್ರಮ ಕೈಗೊಳ್ಳಬೇಕು ಎಂದರು.

ಕಾರ್ಯಕ್ರಮವನ್ನು ಉದ್ಘಾಟಿಸಿದ ಸಮಾಜ ಸೇವಕ, ಲೇಖಕ ವೈಶಾಲಿ ವಿ.ಪಿ. ಹೆಗಡೆ ಅವರು, ಹವ್ಯಕರ ಸಂಖ್ಯೆ ಅಂದಾಜು ಐದು ಲಕ್ಷದಷ್ಟಿದ್ದರೂ ಪ್ರಪಂಚದಾದ್ಯಂತ ಹರಡಿಕೊಂಡಿದ್ದಾರೆ. ಎಲ್ಲ ಕ್ಷೇತ್ರದಲ್ಲೂ ಇದ್ದಾರೆ ಎಂದರು. ಲಯನ್ಸ ಅಧ್ಯಕ್ಷ ಪ್ರಭಾಕರ ಹೆಗಡೆ, ಲಯನ್ಸಭವನಮುಕ್ತವಾಗಿದ್ದು, ಶಾಲಾ ಶೈಕ್ಷಣಿಕ ಚಟುವಟಿಕೆಗಳಿಗೆ ತೊಂದರೆ ಆಗದಿದ್ದ ದಿನಗಳಲ್ಲಿ ನೀಡಲಾಗುತ್ತದೆ. ಎಲ್ಲ ಸಮಾಜದವರಿಗೂ ನೀಡಲಾಗಿದೆ ಎಂದರು.

ಮಹಾಸಭೆಯ ಕಾರ್ಯದರ್ಶಿ ಪ್ರಶಾಂತ ಭಟ್ಟ ಮಲವಳ್ಳಿ, ನಿರ್ದೇಶಕರಾದ ಶಶಾಂಕ ಹೆಗಡೆ ಶೀಗೇಹಳ್ಳಿ, ಶ್ರೀಕಾಂತ ಭಟ್ಟ ಜಿ.ಎಂ.ಭಟ್ಟ ಕಾಜಿನಮನೆ, ದೀಪಕ್ ಗೋಳಿಕೈ, ವಿ.ಎಂ. ಹೆಗಡೆ ಹಲಗೇರಿ ಇತರರು ಇದ್ದರು.

ಶಿಕ್ಷಕರಾದ ಡಿ.ಪಿ. ಹೆಗಡೆ ಹಾಗೂ ಗೀತಾಂಜಲಿ ಭಟ್ಟ ನಿರ್ವಹಿಸಿದರು. ಪ್ರಾಚಾರ್ಯ ಶಶಾಂಕ ಹೆಗಡೆ ವಂದಿಸಿದರು.

ವಿವಿಧ ವಯೋಮಿತಿಗಳವರಿಗೆ ಸ್ಪರ್ಧೆಗಳು ಆಯೋಜಿಸಲಾಯಿತು. ಚಿಕ್ಕ ಮಕ್ಕಳಿಗೆ ಶ್ಲೋಕ ಪಠಣ, ಛದ್ಮವೇಷ ಹಾಗೂ ಬಣ್ಣ ತುಂಬುವ ಸ್ಪರ್ಧೆಗಳು ನಡೆದರೆ, ವಿದ್ಯಾರ್ಥಿಗಳಿಗೆ ಭಗವದ್ಗೀತೆ ಪಾಠ, ಚಿತ್ರಕಲೆ, ಏಕಪಾತ್ರಾಭಿನಯ, ಯೋಗಾಸನ ಸೇರಿದಂತೆ ವಿವಿಧ ಸ್ಪರ್ಧೆಗಳು ಜರುಗಿದವು. ಹಿರಿಯ ವಿಭಾಗದಲ್ಲಿ ರಸಪ್ರಶ್ನೆ, ಆಶುಭಾಷಣ, ದೇಶಭಕ್ತಿಗೀತೆ, ಚರ್ಚಾಸ್ಪರ್ಧೆಗಳು ಹಾಗೂ ಸಂಪ್ರದಾಯ ಮತ್ತು ಜಾನಪದ ಗೀತೆ, ರಂಗೋಲಿ, ಹವಿರುಚಿ ಸ್ಪರ್ಧೆಗಳು ನಡೆಯಿತು. ಕರಕುಶಲ ವಸ್ತುಗಳೂ ಗಮನ ಸೆಳೆದುವು.



15ನೇ ಹಣಕಾಸು ಯೋಜನೆಯ ಹಣ ಬಿಡುಗಡೆಗೆ ಒಕ್ಕೂಟ ಆಗ್ರಹ

◆ **ಶಿರಸಿ:** 15ನೇ ಹಣಕಾಸು ಯೋಜನೆಯಲ್ಲಿ ಹಣ ಬಿಡುಗಡೆ ಆಗದೇ ಮಾರ್ಚ್ ಅಂತ್ಯ ಕಳೆದಿದೆ. ಸರ್ಕಾರಗಳ ನಿರ್ಲಕ್ಷ್ಯದಿಂದ ಆದ ಲೋಪವನ್ನು ಅವರೇ ಸರಿಪಡಿಸಿ, ತಕ್ಷಣವೇ ಹಣ ಬಿಡುಗಡೆಗೆ ಕ್ರಮ ಕೈಗೊಳ್ಳಬೇಕು ಎಂದು ಚುನಾಯಿತ ಗ್ರಾಮ ಪ್ರತಿನಿಧಿಗಳ ಒಕ್ಕೂಟ ಆಗ್ರಹಿಸಿ ಮೆರವಣಿಗೆ ನಡೆಸಿ ತಾಲೂಕು ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಹಾಗೂ ಉಪವಿಭಾಗಾಧಿಕಾರಿಗಳಿಗೆ ಮನವಿ ಸಲ್ಲಿಸಿತು.

ಶಿರಸಿ ತಾಲೂಕಿನ 32 ಗ್ರಾಮ ಪಂಚಾಯಿತಿ ಮಾಜಿ ಸದಸ್ಯರು, ಊರಿನ ಪ್ರಮುಖರು, ಹಿತಚಿಂತಕರು ಇಲ್ಲಿಯ ರಾಘವೇಂದ್ರ ಮಠದ ಆವರಣದಲ್ಲಿ ಬೃಹತ್ ಸಭೆ ನಡೆಸಿ ಮಾತನಾಡಿ, ಜನತೆಗೆ ನಾವು ಉತ್ತರ ಹೇಳುವುದು ಕಷ್ಟವಾಗುತ್ತಿದೆ. ಭರವಸೆ ನೀಡಿದ ನಮ್ಮನ್ನೇ ಜನ ಕೇಳುತ್ತಿದ್ದು, ಮುಜುಗರದ ಸ್ಥಿತಿ ಅನುಭವಿಸುತ್ತಿದ್ದೇವೆ ಎಂದರು.

ಒಕ್ಕೂಟದ ಶಿರಸಿ ಪಶ್ಚಿಮ ಭಾಗದ ಅಧ್ಯಕ್ಷ ನವೀನ ಶೆಟ್ಟಿ ಮಾತನಾಡಿ, ಕಳೆದ ಎರಡು ತಿಂಗಳ ಹಿಂದೆ ನಮ್ಮ ಅಧಿಕಾರದ ಅವಧಿ ಮುಗಿದಿದೆ. ಆದರೆ ನಮ್ಮ ಜವಾಬ್ದಾರಿ ಮುಗಿದಿಲ್ಲ. ಹಳ್ಳಿಗಳ ಅಭಿವೃದ್ಧಿ ಕಾರ್ಯಗಳಿಗೆ 15ನೇ ಹಣಕಾಸಿನ ಅನುದಾನವೇ ಜೀವಾಳ. ಪ್ರತಿ ಹಳ್ಳಿ, ಓಣಿಗಳಲ್ಲಿಯ ಸಣ್ಣಪುಟ್ಟ ಕೆಲಸಗಳನ್ನೂ ಒಳಗೊಂಡಂತೆ 2025-26ರ ಸಾಲಿನಲ್ಲಿ ಪ್ರತಿ ಗ್ರಾಮ ಪಂಚಾಯಿತಿಗಳಲ್ಲಿ ಕ್ರಿಯಾ ಯೋಜನೆ ಮಾಡಿ ಅನುದಾನಕ್ಕಾಗಿ ಕಾದು ಕುಳಿತಿದ್ದೇವೆ. ಸಣ್ಣ ಪುಟ್ಟ ಕಾಮಗಾರಿ ಸೇರಿದಂತೆ ದೊಡ್ಡ ಯೋಜನೆಗಳನ್ನೂ ಹಾಕಿ ಜನರಿಗೆ ಭರವಸೆ ನೀಡಿದ್ದೇವೆ. ಕ್ರಿಯಾ ಯೋಜನೆ ಎಲ್ಲವೂ ಅನುಮೋದನೆಯಾಗಿದ್ದರೂ ಅನುದಾನ ಮಾತ್ರ ಬರಲಿಲ್ಲ. ಈಗಲಾದರೂ ಕೇಂದ್ರ ಸರ್ಕಾರಕ್ಕೆ ಅಗತ್ಯ ದಾಖಲೆ ಸಲ್ಲಿಸಿ ಕರ್ನಾಟಕದ 5958 ಗ್ರಾಮ ಪಂಚಾಯಿತಿಗಳಿಗೆ ಬರಬೇಕಾದ ಸುಮಾರು 2186 ಕೋಟಿ ಅನುದಾನ ಬಿಡುಗಡೆ ಮಾಡಿಸಲಿ. ರಾಜ್ಯ ಸರ್ಕಾರ ಸೂಕ್ತ ದಾಖಲೆಗಳನ್ನು ಕೇಂದ್ರಕ್ಕೆ ಸಲ್ಲಿಸಲಿ ಎಂದರು.ಒಕ್ಕೂಟದ ಜಿಲ್ಲಾ ಸಂಚಾಲಕ ಎಂ. ಕೆ. ಭಟ್ ಮಾತನಾಡಿ, ಹೆಚ್ಚಿನ ಅನುದಾನಕ್ಕೆ ಆಗ್ರಹಿಸಿ ಹಲವು ಸುತ್ತಿನ ಹೋರಾಟ ನಡೆಸಿದರೂ ಸಹ ಗ್ರಾಪಂ ನೀಡಲಾಗುವ ಅನುದಾನ ಏರಿಸಿಲ್ಲ. ನಿರ್ವಹಣಾ ಅನುದಾನವಾದ ಎಸ್ಕ್ರೋ ಮೊತ್ತವನ್ನು ಅಭಿವೃದ್ಧಿಗೆ ಬಳಸಿಕೊಳ್ಳಲು ಅವಕಾಶ ಕೇಳಿದರೆ ಅಧಿಕಾರಿಗಳು ಇಲ್ಲ ಸಲ್ಲದ ಮಾಹಿತಿ ನಮ್ಮಿಂದ ಕೇಳುತ್ತಿದ್ದಾರೆ. ಅಧಿಕಾರಿಗಳು ನೀಡುವ ಸೌಲಭ್ಯವನ್ನು ನಾವು ಜನತೆಗೆ ನೀಡಬೇಕು ಹೊರತೂ ಜನತೆಗೆ ನಾವು ಕೇಳುವ ಸೌಲಭ್ಯವನ್ನು ಅಧಿಕಾರಿಗಳು ಒದಗಿಸುತ್ತಿಲ್ಲ. ಜಿಲ್ಲೆಯ ಕುಗ್ರಾಮಗಳ ಅಭಿವೃದ್ಧಿ, ರಸ್ತೆಗೆ ಹೆಚ್ಚಿನ ಅನುದಾನ ಬೇಕಾದರೂ ಜನಸಂಖ್ಯೆ ಕಡಿಮೆ ಎಂಬ ಕಾರಣಕ್ಕೆ ಕಡಿಮೆ ಅನುದಾನ ಜಾಸ್ತಿ ಬರುತ್ತಿಲ್ಲ. ಈ ವರ್ಷ 15ನೇ ಹಣಕಾಸು ಅನುದಾನವೇ ಬರದಂತಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು. ನಾರಾಯಣ ಹೆಗಡೆ,ಮಂಜುನಾಥ ಪೂಜಾರಿ, ವನಜಾಕ್ಷಿ ಗೌಡ, ಪ್ರವೀಣ ಹೆಗಡೆ, ಶಿವಾನಂದ ಕಳವೆ ಇತರರಿದ್ದರು.



ಸುಗ್ಗಿ ಹಬ್ಬ: ಬಹುಮಾನ ವಿತರಣೆ

◆ **ಗೋಕರ್ಣ:** ಬಿಜ್ಜೂರು ಹಾಲಕ್ಕಿ ಒಕ್ಕಲಿಗ ಸಮಾಜದವರ ಸುಗ್ಗಿ ಹಬ್ಬದ ನಾಲ್ಕನೇ ದಿನದ ಪ್ರಸ್ತುತ ಆಗುಹೋಗುಗಳ ರೂಪಕದ ಮೂಲಕ ಪ್ರದರ್ಶಿಸುವ ಹಗಣ ಶನಿವಾರ ರಾತ್ರಿ ರಥ ಬೀದಿಯಲ್ಲಿ ನಡೆಯಿತು. ಪ್ರವಾಸಿ ತಾಣದಲ್ಲಿನ ಅಂಗಡಿ ಮುಂಗಟ್ಟುಗಳು ರಸ್ತೆ ಚರಂಡಿ ಆಕ್ರಮಿಸಿದನ್ನು ತೆರವುಗೊಳಿಸದೆ ನಿರ್ಲಕ್ಷ ತೋರುತ್ತಿರುವ ಗ್ರಾಪಂ, ಹಾಗೂ ಅಭಿವೃದ್ಧಿ ಕಾಮಗಾರಿಗಳಿಗೆ ಕಮಿಷನ್ ಪಡೆಯುವುದು, ಮತ್ತಿತರ ಸೌಲಭ್ಯಗಳನ್ನು ನೀಡಲು ವಿಫಲ ಬಿಂಬಿಸುವ ದೃಶ್ಯ ಪ್ರವಾಸಿ ತಾಣದ ನೈಜ ಸ್ಥಿತಿಗತಿಯನ್ನು ಅನಾವರಣ ಮಾಡಿತ್ತು. ಬೃಹತ್ ಗಾತ್ರದ ಗೊರಿಲ್ಲಾವನ್ನು ಸೆರೆ ಹಿಡಿದು ಮೃಗಾಲಯಕ್ಕೆ ತೆಗೆದುಕೊಂಡು ಹೋಗುವ ದೃಶ್ಯ ಎಲ್ಲರ ಗಮನ ಸೆಳೆಯಿತು. ಉತ್ತಮ ರೂಪಕಕ್ಕೆ ಸಾಮಾಜಿಕ ಕಾರ್ಯಕರ್ತ ಸಂತೋಷ್ ಅಡಿ ಬಹುಮಾನ ನೀಡಿದ್ದು, ಹನುಮಂತ ಗೌಡ ತಂಡದ ಗದ್ದೆಗಳನ್ನು ಮಾರಾಟ ಮಾಡಿ ರೆಸಾರ್ಟ್ ಮತ್ತಿತರ ಕಟ್ಟಡ ನಿರ್ಮಾಣ ಮಾಡಿ , ಮುಂದಿನ ದಿನದಲ್ಲಿ ಭತ್ತದ ಬೆಳೆ ಕಡಿಮೆಯಾಗುತ್ತ ಊಟದ ಅಕ್ಕಿಗೆ ಕೊರತೆ ಉಂಟಾಗುವ ಕುರಿತ ರೂಪಕಕ್ಕೆ ಮೊದಲ ಬಹುಮಾನ,ಗ್ರಾಪಂ ಕರ್ತವ್ಯವನ್ನು ಜಾಗೃತಗೊಳಿಸುವ ದೃಶ್ಯ ರೂಪಕ ಮಾಡಿದ ಹನುಮಂತ ಗೌಡ ತಂಡಕ್ಕೆ ದ್ವಿತೀಯ, ರತ್ನಾಕರ ಗೌಡ ತಂಡದವರು ನಿರೂಪಿಸಿದ ಬೃಹತ್ ಗೊರಿಲ್ಲಾದ ಸೆರೆ ಹಿಡಿಯುವ ದೃಶ್ಯದ ರೂಪಕ್ಕೆ ತೃತೀಯ ಬಹುಮಾನ ನೀಡಲಾಯಿತು. ಮಹಾಬಲೇಶ್ವರ ಮಂದಿರದ ಮೇಲುಸ್ತುವಾರಿ ಸಮಿತಿ ಸದಸ್ಯ ಸುಬ್ರಹ್ಮಣ್ಯ ಅಡಿ, ಹೆಸ್ಕಾಂ ಮಾರ್ಗದಾಳು ವೆಂಕಟೇಶ್ ಗೌಡ, ಇಲ್ಲಿನ ಪ್ರಾಥಮಿಕ ಆರೋಗ್ಯ ಕೇಂದ್ರದ ಆಡಳಿತ ವೈದ್ಯಾಧಿಕಾರಿ ಡಾ. ಜಗದೀಶ್ ನಾಯ್ಕ, ಪಿಎಸ್‌ಐ. ಅನಿಲ್, ಉದ್ಯಮಿ ವಾಸುದೇವ್ ಕಾಮತ್ ಬಹುಮಾನ ವಿತರಿಸಿದರು.



ಅವ್ಯವಹಾರದ ಆರೋಪ ಸತ್ಯಕ್ಕೆ ದೂರ: ಬಲೆಗಾರ

◆ **ಅಂಕೋಲಾ:** ಕೇಣಿ ವಾಣಿಜ್ಯ ಬಂದರು ವಿರೋಧಿ ಹೋರಾಟ ಸಮಿತಿಯವರು ಉದ್ಯಮಿಗಳಿಂದ, ಸಂಘ ಸಂಸ್ಥೆಗಳಿಂದ ಹಣ ಸಂಗ್ರಹಿಸಿದ್ದು ಖರ್ಚು ವೆಚ್ಚದ ಲೆಕ್ಕ ನೀಡುತ್ತಿಲ್ಲ ಎಂದು ಕಣಗೀಲ್ ಮೀನುಗಾರರ ಸಹಕಾರಿ ಸಂಘದ ಅಧ್ಯಕ್ಷ ರಾಜು ಹರಿಕಂತ್ರ ಮಾಡಿರುವ ಆರೋಪ ಸತ್ಯಕ್ಕೆ ದೂರವಾಗಿದೆ ಎಂದು ಕೇಣಿ ವಾಣಿಜ್ಯ ಬಂದರು ವಿರೋಧಿ ಹೋರಾಟ ಸಮಿತಿಯ ಪ್ರಮುಖ ಸಂಜೀವ ಬಲೆಗಾರ ಹೇಳಿದರು.

ಪಟ್ಟಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಉಕ ಜಿಲ್ಲಾ ಮೀನು ಮಾರಾಟ ಫೆಡರೇಶನ್ ಚುನಾವಣೆಯಲ್ಲಿ ಸೋಲು ಅನುಭವಿಸಿರುವ ಹತಾಶೆಯಿಂದ ಕೇಣಿ ವಾಣಿಜ್ಯ ಬಂದರು ವಿರೋಧಿ ಹೋರಾಟಗಾರರ ಮೇಲೆ ಸುಳ್ಳು ಆರೋಪ ಮಾಡುವ ಮೂಲಕ ಸಂಘಟನೆಯ ದಿಕ್ಕು ತಪ್ಪಿಸಿ ಹೋರಾಟಗಾರರಲ್ಲಿ ಗೊಂದಲ ಮೂಡಿಸುವ ಪ್ರಯತ್ನ ರಾಜು ಹರಿಕಂತ್ರ ಮಾಡುತ್ತಿದ್ದಾರೆ ಎಂದರು.

ಉದ್ಯಮಿಗಳು, ಸಂಘ ಸಂಸ್ಥೆಗಳು, ಮೀನುಗಾರರ ಸಂಘಟನೆಗಳಿಂದ ಲಕ್ಷಾಂತರ ರೂ. ಹಣ ಸಂಗ್ರಹ ಮಾಡಲಾಗಿದೆ ಎಂದು ಆಪಾದಿಸಿರುವ ರಾಜು ಹರಿಕಂತ್ರ ಅವರು ಅದನ್ನು ಸಾಬೀತುಪಡಿಸಿ ತೋರಿಸಲಿ ಎಂದು ಸವಾಲು ಹಾಕಿದರು.

ಮೀನು ಮಾರಾಟ ಫೆಡರೇಶನ್ ಚುನಾವಣೆಯಲ್ಲಿ ಕೇಣಿ ಮತ್ತಿತರ ಮೀನುಗಾರಿಕೆ ಸಹಕಾರಿ ಸಂಘಗಳು ರಾಜು ಹರಿಕಂತ್ರ ಅವರಿಗೆ ಬೆಂಬಲ ನೀಡಿಲ್ಲ ರಾಜು ಹರಿಕಂತ್ರ ಅವರ ಹಣದ ಆಮಿಷ ತಿರಸ್ಕರಿಸಿದ ಮಹಿಳಾ ಸಹಕಾರಿ ಸಂಘದವರು ಚುನಾವಣೆಯಲ್ಲಿ ಬೆಂಬಲ ನೀಡಿದಿರುವ ಕಾರಣ ಸೋತ ರಾಜು ಹರಿಕಂತ್ರ ಕೇಣಿ ಹೋರಾಟಗಾರರ ಮೇಲೆ ಸುಳ್ಳು ಆಪಾದನೆ ಮಾಡುತ್ತಿದ್ದಾರೆ ಎಂದ ಅವರು ವಾಣಿಜ್ಯ ಬಂದರು ವಿರೋಧಿ ಹೋರಾಟ ಸಮಿತಿಯಲ್ಲಿ ಸಾಮೂಹಿಕ ನಾಯಕತ್ವವಿದ್ದು ಬಡ ಮೀನುಗಾರರು ಹೋರಾಟದ ಉದ್ದೇಶಕ್ಕೆ ಸ್ವಯಂ ಪ್ರೇರಣೆಯಿಂದ ತಮ್ಮ ಬೆವರಿನ ಹಣ ಸಂಗ್ರಹಿಸಿದ್ದು ಅದರ ಸಂಪೂರ್ಣ ಲೆಕ್ಕಾಚಾರ ಒದಗಿಸಲು ಸದಾ ಸಿದ್ಧ ಅದನ್ನು ಹೊರತುಪಡಿಸಿ ಯಾರಿಂದಲೂ ನಗದು ಹಣ ಪಡೆಯಲಿಲ್ಲ ನಾವುಸಾರ್ವಜನಿಕರ ಎದುರು ಬರಲು ಸಿದ್ಧವಿದ್ದು ರಾಜು ಹರಿಕಂತ್ರ ಅವರು ಸಹ ತಾವು ಮಾಡಿರುವ ಆರೋಪಗಳನ್ನು ಸಾಬೀತುಪಡಿಸಿ ಮುಖಾಮುಖಿ ಚರ್ಚೆಗೆ ಬರಲಿ ಎಂದರು.

ರಾಷ್ಟ್ರೀಯ ಮೀನುಗಾರರ ಸಂಘಟನೆ ಯಿಂದ ಆಯೋಜಿಸಲಾಗಿದ್ದ ಅಧ್ಯಯನ ಪ್ರವಾಸದ ಸಂಪೂರ್ಣ ಖರ್ಚು ವೆಚ್ಚವನ್ನು ಸಂಘಟಕರೇ ವಹಿಸಿಕೊಂಡಿದ್ದು ಯಾರೂ ವಿಮಾನದಲ್ಲಿ ಪ್ರಯಾಣ ಮಾಡಿಲ್ಲ

ರೈಲ್ವೆ ಸಾಮಾನ್ಯ ದರ್ಜೆಯ ಪ್ರಯಾಣ ನಡೆಸಿದ್ದು ಹೋರಾಟಕ್ಕೆ ಸಂಬಂಧಿಸಿದವರೇ ಅಧ್ಯಯನ ಪ್ರವಾಸ ಕೈಗೊಂಡಿದ್ದಾರೆ ಎಂದು ತಿಳಿಸಿದರು. ಮೀನುಗಾರ ಪ್ರಮುಖ ವೆಂಕಟೇಶ ದುರ್ಗೇಕರ ಮಾತನಾಡಿ, ಕೇಣಿಯ ಹೋರಾಟಗಾರರು ಯಾವ ಉದ್ದಿಮೆದಾರರಿಂದ, ಸಂಘಟನೆಗಳಿಂದ ಹಣ ಪಡೆದಿದ್ದಾರೆ ಎನ್ನುವುದನ್ನು ರಾಜು ಹರಿಕಂತ್ರ ಸಾಕ್ಷಿ ಸಮೇತ ತಿಳಿಸಲಿ,

ಅಧ್ಯ ಯನ ಪ್ರವಾಸಕ್ಕೆ ಯೋಗ್ಯರನ್ನೇ ಕಳುಹಿಸಲಾಗಿದ್ದು, ಅವರು ತಮ್ಮ ಅನುಭವಗಳನ್ನು ಅಲ್ಲಿನ ಸ್ಥಿತಿಗತಿಗಳನ್ನು ಸ್ಥಳೀಯವಾಗಿ ಚರ್ಚೆ ನಡೆಸಿದ್ದಾರೆ ಎಂದರು.

ಹೋರಾಟ ಸಮಿತಿಯ ಸರಿತಾ ಹರಿಕಂತ್ರ ಮಾತನಾಡಿ ಹೋರಾಟ ಸಮಿತಿಯ ನಾಯಕತ್ವ ಬದಲಾವಣೆಯ ಕುರಿತು ಮಾತನಾಡುವ ರಾಜು ಹರಿಕಂತ್ರ ಕಣಗೀಲ ಮೀನುಗಾರರ ಸಹಕಾರಿ ಸಂಘದ ಅಧ್ಯಕ್ಷರಾಗಿ ಸಾಕಷ್ಟು ಕಾಲದಿಂದ ಅಧಿಕಾರ ನಡೆಸುತ್ತ ಬಂದಿದ್ದು ಹೊಸಬರಿಗೆ ಅವಕಾಶ ಮಾಡಿಕೊಡಲಿ ಎಂದರು.

ಚಂದ್ರಕಾಂತ ಹರಿಕಂತ್ರ ಮಾತನಾಡಿ ಪ್ರತಿಭಟನೆಯ ಸಂದರ್ಭ ದಲ್ಲಿ ಸಾರ್ವಜನಿಕರಿಂದ ಸಂಗ್ರಹ ಮಾಡಿರುವ ಹಣ ಸುರಕ್ಷಿತವಾಗಿ ರಾಜು ಹರಿಕಂತ್ರ ಅವರ ಸಂಬಂಧಿಯೊಬ್ಬರ ಬಳಿ ಇಡಲಾಗಿದ್ದು, ಈ ವಿಷಯ ಅವರಿಗೆ ಸಹ ಗೊತ್ತಿದೆ ಆದರೂ ಸಹ ಆರೋಪ ಮಾಡುತ್ತಿರುವುದು ನೋವಿನ ಸಂಗತಿ ಎಂದರು. ಹೋರಾಟ ಸಮಿತಿಯ ಯಾರು ಅಂಕೋಲಾದಲ್ಲಿ ಜಮೀನು ಖರೀದಿ ಮಾಡುತ್ತಿದ್ದಾರೆ ಯಾರು ಕೃಷಿ ಭೂಮಿ ಖರೀದಿಸಲು ಹೊರಟಿದ್ದಾರೆ ಎಂದು ಅವರು ಸಾಕ್ಷಿ ಸಮೇತ ಬಹಿರಂಗಪಡಿಸಲಿ ಎಂದರು.

ಹೋರಾಟ ಸಮಿತಿಯ ಪ್ರಮುಖರುಗಳಾದ ಗೌರೀಶ ಖಾರ್ವಿ, ರಮೇಶ ಕುರ್ಲೆ, ಚಂದ್ರಕಾಂತ ಪಿರನಕರ್, ಶಂಕರ ಬಲೆಗಾರ,ನೀಲೇಶ ಹರಿಕಂತ್ರ, ಕುಮಾರ ಹರಿಕಂತ್ರ, ಗಿರೀಶ ಬಲೆಗಾರ, ಸುಭಾಷ ತಾಂಡೇಲ ವೀರೇಶ ಹರಿಕಂತ್ರ, ಜಯಂತಿ ದುರ್ಗೇಕರ್, ಸುಚಿತ್ರಾ ಕೇಣಿಕರ್ ಉಪಸ್ಥಿತರಿದ್ದರು.



ಎಲ್ಪಿಜಿ ಗ್ಯಾಸ್ ಸಮಸ್ಯೆ ಪರಿಹರಿಸಲು ಒತ್ತಾಯ

◆ **ಕುಮಟಾ:** ಗ್ಯಾಸ್ ಬಂಕ್‌ಗಳಲ್ಲಿ ಆಟೋರಿಕ್ಷಾಗಳಿಗೆ ಅಗತ್ಯವಾದ ಎಲ್ಪಿಜಿ ಗ್ಯಾಸ್ ಲಭ್ಯವಾಗದ ಕಾರಣ ಚಾಲಕರು ತೀವ್ರ ಸಂಕಷ್ಟ ಅನುಭವಿಸುತ್ತಿದ್ದು, ಅವರ ದಿನನಿತ್ಯದ ಜೀವನ ಸಾಗಿಸುವುದೇ ಕಷ್ಟಕರವಾಗಿದೆ. ಈ ಸಮಸ್ಯೆಯನ್ನು ತಕ್ಷಣವೇ ಬಗೆಹರಿಸಲು ಆಡಳಿತ ವ್ಯವಸ್ಥೆ ಮುಂದಾಗಬೇಕು ಎಂದು ಜನಪರ ಹೋರಾಟ ವೇದಿಕೆಯ ಸ್ಥಾಪಕ ಅಧ್ಯಕ್ಷ ಎಂ.ಜಿ. ಭಟ್ ಆಗ್ರಹಿಸಿದ್ದಾರೆ.

ಆಟೋರಿಕ್ಷಾ ಚಾಲಕರು ಸಮಾಜದಲ್ಲಿ ಪ್ರಾಮಾಣಿಕವಾಗಿ ದುಡಿದು ತಮ್ಮ ಕುಟುಂಬವನ್ನು ಸಾಗಿಸುತ್ತಿರುವವರು. ಆದರೆ ಇತ್ತೀಚಿನ ದಿನಗಳಲ್ಲಿ ಗ್ಯಾಸ್ ಕೊರತೆಯಿಂದಾಗಿ ಅವರು ಕಿಲೋಮೀಟರ್‌ಗಳಷ್ಟು ದೂರ ಸಾಲಿನಲ್ಲಿ ನಿಂತು ಕಾಯಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಇಂತಹ ಪರಿಸ್ಥಿತಿ ಉಕ ಜಿಲ್ಲೆಯಲ್ಲಿ ಮಾತ್ರ ಕಾಣಿಸಿಕೊಂಡಿರುವುದು ಆಡಳಿತ ವೈಫಲ್ಯಕ್ಕೆ ಕಾರಣವಾಗಿದೆ ಎಂದು ಹೇಳಿದರು.

ಆಟೋರಿಕ್ಷಾ ಚಾಲಕರು ಕೇವಲ ತಮ್ಮ ಜೀವನೋಪಾಯಕ್ಕಾಗಿ ಮಾತ್ರವಲ್ಲ, ಸಮಾಜದ ಭದ್ರತೆಯಲ್ಲಿಯೂ ಮಹತ್ವದ ಪಾತ್ರ ವಹಿಸುತ್ತಾರೆ. ವಿಶೇಷವಾಗಿ ರಾತ್ರಿ ವೇಳೆಯಲ್ಲಿ ಮಹಿಳೆಯರು ಹಾಗೂ ಪ್ರಯಾಣಿಕರನ್ನು ಸುರಕ್ಷಿತವಾಗಿ ತಲುಪಿಸುವಲ್ಲಿ ಅವರ ಸೇವೆ ಅನನ್ಯವಾಗಿದೆ. ಇಂತಹ ಸೇವಾ ಮನೋಭಾವ ಹೊಂದಿರುವ ಚಾಲಕರು ಇಂದು ಬದುಕಿಗಾಗಿ ಹೋರಾಡಬೇಕಾದ ಪರಿಸ್ಥಿತಿ ನಿರ್ಮಾಣವಾಗಿರುವುದು ವಿಷಾದನೀಯ ಎಂದು ಅವರು ಹೇಳಿದರು.

ತಕ್ಷಣವೇ ಗ್ಯಾಸ್ ಪೂರೈಕೆಯನ್ನು ಸುಧಾರಿಸಿ, ಬಂಕ್‌ಗಳಲ್ಲಿ ಸರಿಯಾದ ವ್ಯವಸ್ಥೆ ಕಲ್ಪಿಸಬೇಕು. ಇಲ್ಲವಾದಲ್ಲಿ ದೊಡ್ಡ ಮಟ್ಟದ ಹೋರಾಟ ಮತ್ತು ಪ್ರತಿಭಟನೆ ನಡೆಸಬೇಕಾಗಬಹುದು ಎಂದು ಎಚ್ಚರಿಕೆ ನೀಡಿದರು.

ಕಾಂಗ್ರೆಸ್ ಸೋಲು ನಿಶ್ಚಿತ: ಬಿಎಸ್‌ವೈ

◆**ಬಾಗಲಕೋಟೆ:** ಈ ಬಾರಿಯ ಉಪ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಸೋಲು ನಿಶ್ಚಿತ ಎಂಬುದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವರಿಕೆ ಆಗಿದೆ ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹೇಳಿದರು.

ತಾಂಡಾಗಳ ಮುಖಂಡರೊಂದಿಗೆ ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ ಪರ ಪ್ರಚಾರ ಸಭೆ ನಡೆಸಿದ ಮತಯಾಚಿಸಿಅವರುಮಾತನಾಡಿದರು. ಸಿದ್ದರಾಮಯ್ಯ ಅವರು ಇಲ್ಲಿಗೆ ಬಂದು ವಾರಗಟ್ಟಲೆ ಉಳಿದು ಪ್ರಚಾರ ಮಾಡುತ್ತಿದ್ದಾರೆ. ಇಲ್ಲೇ ಕ್ಯಾಂಪ್ ಹೂಡಿದ್ದಾರೆ. ಅವರ ಪಕ್ಷದ ಅಭ್ಯರ್ಥಿ ಅವರದೇ ಸಮುದಾಯದವರು. ಅವರನ್ನು ಗೆಲ್ಲಿಸಲೇ ಬೇಕು ಎಂಬ ಒಂದೇ ಕಾರಣದಿಂದ ಇಲ್ಲೇ ಠಿಕಾಣಿ ಹೂಡಿದ್ದಾರೆ ಎಂದರು.

ಕಾಂಗ್ರೆಸ್‌ಗೆ ಸೋಲು ಖಂಡಿತ ಎಂಬುದು ಎಲ್ಲರಿಗೂ ತಿಳಿದಿದೆ. ಬಾಗಲಕೋಟೆಯಲ್ಲಿ ಬಿಜೆಪಿಯು ಅಭ್ಯರ್ಥಿ ವೀರಣ್ಣ ಚರಂತಿಮಠ ಅವರೇ ಗೆಲುವು ಸಾಧಿಸಲಿದ್ದಾರೆ ಎಂಬ ವಿಶ್ವಾಸವಿದೆ ಎಂದು ನುಡಿದರು. ಸಿದ್ದರಾಮಯ್ಯ ಅವರೇ ಜಾತಿ ವಿಷಬೀಜ ಬಿತ್ತಿ ರಾಜಕಾರಣ ಮಾಡುವು ದನ್ನು ಈಗಲಾದರೂ ಬಿಡಿ. ಸರ್ಕಾರದ ಖಜಾನೆಯನ್ನು ಲೂಟಿ ಮಾಡಿ ಸದಾ ಒಂದಿಲ್ಲೊಂದು ಭ್ರಷ್ಟಾಚಾರದಲ್ಲಿ ತೊಡಗಿರುವ ಸರ್ಕಾರ ಇನ್ನಾದರೂ ಪ್ರಾಮಾಣಿಕವಾಗಿ ಜನರ ಒಳಿತಿಗಾಗಿ ಕೆಲಸ ಮಾಡಲಿ ಎಂದು ಆಗ್ರಹಿಸಿದರು.



ನಿರೀಕ್ಷೆಗೂ ಮೀರಿ ಜನಬೆಂಬಲ

ನಮ್ಮೆಲ್ಲ ಕಾರ್ಯಕರ್ತರು ಸಾಕಷ್ಟು ಕೆಲಸ ಮಾಡುತ್ತಿದ್ದಾರೆ. ಹಳ್ಳಿ ಹಳ್ಳಿಗೆ ಹೋಗಿ ಪ್ರಚಾರದಲ್ಲಿ ತೊಡಗಿದ್ದಾರೆ. ಜನ ಬೆಂಬಲ ನಿರೀಕ್ಷೆಗೂ ಮೀರಿ ಚೆನ್ನಾಗಿದೆ. ನಮ್ಮೊಂದಿಗೆ ಕೇಂದ್ರ ಸಚಿವರಾದ ಎಚ್.ಡಿ ಕುಮಾರಸ್ವಾಮಿ ಅವರು ಜೊತೆ ಪ್ರಚಾರಕ್ಕೆ ಬಂದಿರುವುದು ಹೆಮ್ಮೆಯ ಸಂಗತಿ. ಅವರ ಶಕ್ತಿಯೂ ನಮ್ಮ ಜೊತೆ ಸೇರಿದೆ. ಕಾಂಗ್ರೆಸ್‌ನವರು ಸೂಟ್ ಕೇಸ್ ನಲ್ಲಿ ಹಣ ತಂದು ಇಲ್ಲಿ ಹಂಚಿ ಹಣದ ಬಲದಲ್ಲಿ, ಹೆಂಡದ ಬಲದಲ್ಲಿ ಮತ್ತು ತೋಳ್ಬಲದಲ್ಲಿ ಗೆಲ್ಲುತ್ತೇವೆ ಅಂದುಕೊಂಡಿದ್ದಾರೆ. ಆದರೆ ಹಾಗೆ ಆಗದು. ನಮ್ಮ ಪಕ್ಷದ ಅಭ್ಯರ್ಥಿ ವೀರಣ್ಣ ಚರಂತಿಮಠ ಅವರಂತಹ ಪ್ರಾಮಾಣಿಕರೇ ಇಲ್ಲಿ ಗೆಲ್ಲುವುದು ಎಂದರು.



ಬೆಳಗಾವಿಯಲ್ಲಿ ಭಾನುವಾರ ನಡೆದ ಬಾಬು ಜಗಜೀವನ್‌ರಾಂ ಅವರ ಜನ್ಮದಿನಾಚರಣೆ ಪ್ರಯುಕ್ತ ವಿವಿಧ ನೃತ್ಯ ಕಲಾ ತಂಡಗಳಿಂದ ಮೆರವಣಿಗೆ ನಡೆಯಿತು.

ರಾಜ್ಯ ಸರ್ಕಾರದ ವಿರುದ್ಧ ಕೇಂದ್ರ ವ್ಯವಸ್ಥಿತ ಪಿತೂರಿ: ಸುರ್ಜೇವಾಲ

◆**ಬೆಂಗಳೂರು:** ಕೃಷಿ, ನೀರಾವರಿ, ರಕ್ಷಣೆ ಮತ್ತು ಮೂಲಸೌಕರ್ಯ ಯೋಜನೆಗಳನ್ನು ತಡೆಯುವ ಮೂಲಕ ಕರ್ನಾಟಕದ ವಿರುದ್ಧ ಕೇಂದ್ರ ಸರ್ಕಾರವು ವ್ಯವಸ್ಥಿತ ಪಿತೂರಿ ನಡೆಸಿದೆ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ ಆರೋಪಿಸಿದರು.



ಭಾನುವಾರ ಕೆಪಿಸಿಸಿ ಕಚೇರಿಯಲ್ಲಿ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿ, ಬಿಜೆಪಿಯ ಷಡ್ಯಂತ್ರ ಮತ್ತು ಕನ್ನಡಿಗ ವಿರೋಧಿ ಧೋರಣೆ ಈಗ ಸಂಪೂರ್ಣವಾಗಿ ಬಯಲಾಗಿದೆ. ಮೋದಿ ಸರ್ಕಾರ ಮತ್ತು ಬಿಜೆಪಿ ಯೋಜಿತವಾಗಿ 6.5 ಕೋಟಿ ಕನ್ನಡಿಗರನ್ನು ಶಿಕ್ಷಿಸುತ್ತಿದೆ ಎಂದು ಕಿಡಿಕಾರಿದರು.

ತೆರಿಗೆ ಮತ್ತು ಅನುದಾನದಲ್ಲಿ ಕರ್ನಾಟಕದ ನ್ಯಾಯಸಮ್ಮತ ಪಾಲನ್ನು ನಿರಾಕರಿಸುವುದು ಮತ್ತು ಕನ್ನಡಿಗರ ಹಿತದೃಷ್ಟಿಯಿಂದ ನಿರ್ಮಿಸಲಾಗುತ್ತಿರುವ ಕೃಷಿ, ನೀರಾವರಿ, ರಕ್ಷಣೆ ಮತ್ತು ಮೂಲಸೌಕರ್ಯ ಯೋಜನೆಗಳಿಗೆ ಅಡ್ಡಿಪಡಿಸುವ ಮೂಲಕ ಬಿಜೆಪಿ ತನ್ನ ವಿರೋಧಿ ನೀತಿಯನ್ನು ಪ್ರದರ್ಶಿಸುತ್ತಿದೆ ಎಂದರು. 14ನೇ ಮತ್ತು 15ನೇ ಹಣಕಾಸು ಆಯೋಗದಲ್ಲಿ ರಾಜ್ಯಕ್ಕೆ ಬರಬೇಕಿದ್ದ ಪಾಲು 79,770 ಕೋಟಿ ರೂ.ಗಳ ನಿರಾಕರಣೆ, ಅವೈಜ್ಞಾನಿಕ ಜಿಎಸ್‌ಟಿ ಜಾರಿಯಿಂದ ರಾಜ್ಯಕ್ಕೆ 59,274 ಕೋಟಿ ರೂ. ಮತ್ತು ಹೊಸ ಜಿಎಸ್‌ಟಿ ಪರಿಷ್ಕರಣೆಯಿಂದ ರಾಜ್ಯಕ್ಕೆ 9 ಸಾವಿರ ಕೋಟಿ ರೂ. ನೇರ ನಷ್ಟವಾಗಿದೆ. ಭದ್ರಾ ಮೇಲ್ದಂಡೆ ಯೋಜನೆಗೆ ಬಜೆಟ್‌ನಲ್ಲಿ 5,300 ಕೋಟಿ ರೂ. ಘೋಷಿಸಿ ಬಿಡುಗಡೆ ಮಾಡಲಿಲ್ಲ ಎಂದು ಕಿಡಿಕಾರಿದರು.

ಕಿರುಸುದ್ದಿ

ಗೌರವ ಡಾಕ್ಟರೇಟ್ ನಿರಾಕರಿಸಿದ ಬೊಮ್ಮಾಯಿ

◆**ಬೆಂಗಳೂರು:** ಹಾವೇರಿ ವಿಶ್ವವಿದ್ಯಾಲಯವು ಘೋಷಿಸಿರುವ ಗೌರವ ಡಾಕ್ಟರೇಟ್ ಅನ್ನು ಸಂಸದ ಬಸವರಾಜ ಬೊಮ್ಮಾಯಿ ನಿರಾಕರಿಸಿದ್ದು, ಸಾರ್ವಜನಿಕ ಸೇವೆಗೆ ಜನರ ಪ್ರೀತಿ ಮತ್ತು ವಿಶ್ವಾಸವೇ ನನಗೆ ಅತ್ಯಂತ ದೊಡ್ಡ ಗೌರವವೆಂದು ಭಾವಿಸುತ್ತೇನೆ. ಆದ್ದರಿಂದ ಗೌರವ ಡಾಕ್ಟರೇಟ್ ಸ್ವೀಕರಿಸುವುದಿಲ್ಲವೆಂದು ವಿನಮ್ರವಾಗಿ ಪುನರುಚ್ಚರಿಸುತ್ತೇನೆ ಎಂದು ತಿಳಿಸಿದ್ದಾರೆ. ಡಾಕ್ಟರೇಟ್ ನಿರಾಕರಿಸಿರುವ ಕುರಿತು ಎಕ್ಸ್‌ನಲ್ಲಿ ಪ್ರತಿಕ್ರಿಯೆ ನೀಡಿರುವ ಅವರು, ನನಗೆ ಗೌರವ ಡಾಕ್ಟರೇಟ್ ನೀಡಲು ತೀರ್ಮಾನಿಸಿರುವುದಕ್ಕೆ ವಿಶ್ವವಿದ್ಯಾಲಯದ ಕುಲಪತಿಗಳು, ಉಪಕುಲಪತಿಗಳು, ಕುಲಸಚಿವರು ಹಾಗೂ ಸಿಂಡಿಕೇಟ್ ಸದಸ್ಯರಿಗೆ ಹೃತ್ಪೂರ್ವಕ ಕೃತಜ್ಞತೆಗಳು ಮತ್ತು ಧನ್ಯವಾದಗಳು. ನಾನು ಗೌರವ ಡಾಕ್ಟರೇಟ್ ಸ್ವೀಕರಿಸುವುದಿಲ್ಲವೆಂದು ಈಗಾಗಲೇ ಕುಲಪತಿಗಳಿಗೆ ತಿಳಿಸಿದ್ದೇನೆ ಎಂದಿದ್ದಾರೆ. ಗೌರವ ಡಾಕ್ಟರೇಟ್ ಎಂಬುದು ದೀರ್ಘಕಾಲದಿಂದ ಯಾವುದಾದರೂ ಕ್ಷೇತ್ರದಲ್ಲಿ ವಿಶಿಷ್ಟ ಮತ್ತು ಮಹತ್ತರ ಸೇವೆ ಸಲ್ಲಿಸಿದವರಿಗೆ ನೀಡಬೇಕಾದ ಗೌರವವೆಂಬುದು ನನ್ನ ಅಭಿಪ್ರಾಯ. ಹೀಗಾಗಿ ಇದನ್ನು ಅಂಥ ಸಾಧಕರಿಗೆ ನೀಡಬೇಕು. ರಾಜಕಾರಣಿಗಳಿಗೆ ಅಥವಾ ಸ್ವಯಂ ಪ್ರೇರಣೆಯಿಂದ ಸಮಾಜ ಸೇವೆಯಲ್ಲಿ ತೊಡಗಿರುವವರಿಗೆ ಗೌರವ ಡಾಕ್ಟರೇಟ್ ನೀಡುವುದು ಸಮಂಜಸವಲ್ಲ ಎಂಬುದು ನನ್ನ ವೈಯಕ್ತಿಕ ಅಭಿಪ್ರಾಯ. ಈ ವಿಷಯದಲ್ಲಿ ಪುನರ್ ವಿಚಾರ ಮಾಡಬೇಕೆಂದು ವಿನಂತಿಸುತ್ತೇನೆ ಎಂದು ತಿಳಿಸಿದ್ದಾರೆ.



ಎರಡು ಪ್ರತ್ಯೇಕ ಅಪಘಾತ ನಾಲ್ವರ ಸಾವು

◆**ತುಮಕೂರು/ ಚಿತ್ರದುರ್ಗ:** ಎರಡು ಪ್ರತ್ಯೇಕ ರಸ್ತೆ ಅಪಘಾತ ಪ್ರಕರಣದಲ್ಲಿ ನಾಲ್ವರು ಮೃತಪಟ್ಟಿದ್ದು ಹಲವರಿಗೆ ಗಾಯಗೊಂಡಿರುವ ಘಟನೆ ತುಮಕೂರು ಮತ್ತು ಚಿತ್ರದುರ್ಗದಲ್ಲಿ ನಡೆದಿದೆ. ತುಮಕೂರು ಜಿಲ್ಲೆಯ ಶಿರಾ ಹೊರವಲಯದ ರಾಷ್ಟ್ರೀಯ ಹೆದ್ದಾರಿ 48ರಲ್ಲಿ ಸಂಭವಿಸಿದೆ. ನಿಂತಿದ್ದ ಖಾಸಗಿ ಬಸ್‌ಗೆ ಹಿಂದಿನಿಂದ ಬಂದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಬಸ್ ಭೀಕರವಾಗಿ ಡಿಕ್ಕಿ ಹೊಡೆದಿದೆ. ಈ ಘಟನೆಯಲ್ಲಿ ಇಬ್ಬರು ಯುವಕರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಬಸ್‌ನಲ್ಲಿದ್ದ ಹತ್ತಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ. ಕೆಎಸ್‌ಆರ್‌ಟಿಸಿ ಬಸ್ ಹಿಂದಿನಿಂದ ಬಂದು ಖಾಸಗಿ ಬಸ್‌ಗೆ ಡಿಕ್ಕಿ ರಭಸಕ್ಕೆ ಕೆಎಸ್ ಆರ್‌ಟಿಸಿ ಬಸ್‌ನಲ್ಲಿದ್ದ ಹತ್ತಕ್ಕೂ ಹೆಚ್ಚು ಪ್ರಯಾಣಿಕರು ಗಾಯಗೊಂಡಿದ್ದಾರೆ. ಗಾಯಾಳುಗಳನ್ನು ತಕ್ಷಣ ಶಿರಾ ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ಲಾರಿ-ಕಾರು ಮುಖಾಮುಖಿ: ಚಿತ್ರದುರ್ಗ ಜಿಲ್ಲೆ ಮೊಳಕಾಲ್ಮೂರು ತಾಲ್ಲೂಕು ರಾಜಾಪುರ ಬಳಿ ಲಾರಿ ಮತ್ತು ಕಾರು ಮುಖಾಮುಖಿ ಡಿಕ್ಕಿಯಾಗಿ ಸ್ಥಳದಲ್ಲಿಯೇ ಇಬ್ಬರು ಮೃತಪಟ್ಟಿದ್ದಾರೆ. ಮೃತರನ್ನು ಮಂಡ್ಯ ಜಿಲ್ಲೆ ನಾಗಮಂಗಲ ತಾಲೂಕು ಚಿಕ್ಕನಹಳ್ಳಿ ಗ್ರಾಮದ ಕಾರಿನ ಚಾಲಕ ಕಿರಣ್ ಗೌಡ (24) ಹಾಗೂ ಬೆಂಗಳೂರಿನ ಲಗ್ಗೆರೆಯ ಮುನೇಶ್ವರ ಲೇಔಟ್ ಸಿಬೇ ಗಾರ್ಡನ್ ನಿವಾಸಿ ಜೇಮ್ಸ್ ರವಿಚಂದ್ರ (42) ಎಂದು ಗುರುತಿಸಲಾಗಿದೆ. ಈ ಕುರಿತು ರಾಂಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬಾಗಲಕೋಟೆಯಲ್ಲಿ ಕರಪತ್ರ ಹಂಚಿದ್ದವರ ವಿರುದ್ಧ ಕ್ರಮಕ್ಕೆ ಆಗ್ರಹ

ಗೂಂಡಾ ಸರ್ಕಾರ: ಅಶೋಕ

◆**ಬಾಗಲಕೋಟೆ:** ಕಾಂಗ್ರೆಸ್ ಕಾರ್ಯಕರ್ತರು ಕರಪತ್ರವನ್ನು ಹಂಚುವ ಮೂಲಕ ಬಿಜೆಪಿಗೆ ಮತ ಹಾಕಿದರೆ ಜೈಲಿಗೆ ಕಳುಹಿಸಲಾಗುವುದು ಎಂದು ಕರಪತ್ರ ಹಂಚಿಕೆ ಬೆದರಿಕೆ ಹಾಕುತ್ತಿರುವುದನ್ನು ನೋಡಿದರೆ ರಾಜ್ಯದಲ್ಲಿ ಗೂಂಡಾ ಸರ್ಕಾರವಿದೆಯಾ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಆಕ್ರೋಶ ವ್ಯಕ್ತಪಡಿಸಿದರು.

ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠವರ ವಿರುದ್ಧ ಕರಪತ್ರ ಹಂಚಿದ್ದ ಕಾಂಗ್ರೆಸ್ ಕಾರ್ಯಕರ್ತರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಚುನಾವಣಾಧಿಕಾರಿಗಳಿಗೆ ಮನವಿ ಸಲ್ಲಿಸಿದ ಬಳಿಕ ಅವರು ಮಾಧ್ಯಮದವರೊಂದಿಗೆ ಮಾತನಾಡಿದರು. ಚುನಾವಣೆ ನಡೆಯುತ್ತಿದ್ದರೂ ಇಲ್ಲಿಯ ಅಧಿಕಾರಿಗಳು ಸರ್ಕಾರದ ಕೈಗೊಂಬೆಯಾಗಿ ಕೆಲಸ ಮಾಡುತ್ತಿದ್ದಾರೆ. ಇತ್ತೀಚಿಗೆ ಬಾಗಲಕೋಟೆಗೆ ಉಪಮುಖ್ಯಮಂತ್ರಿ ಡಿ.ಕೆ.ಶಿವುಕುಮಾರ ಭೇಟಿ ನೀಡಿದ ಸಂದರ್ಭದಲ್ಲಿ ಅಕ್ರಮ ಮತದಾನ ಮಾಡುವವರು ಹಾಗೂ ಬೇರೆ ರಾಜ್ಯದವರು ಇಲ್ಲಿ ಮತದಾನ ಮಾಡಿದರೆ ಜೈಲಿಗೆ ಕಳಿಸಲಾಗುವುದು ಇಲ್ಲಿ ಅದನ್ನು ನೋಡಿಕೊಳ್ಳಲು ನಮ್ಮ ತಂಡವಿದೆ ಎಂದು ಭಯ ಹುಟ್ಟಿಸಿ ಹೋಗಿದ್ದು, ಈಗ ಕರಪತ್ರ ಹಂಚಲು ಅವರ ಪ್ರಚೋದನೆಯೇ ಕಾರಣವಾಗಿದೆ ಎಂದು ಹೇಳಿದರು.

ಬಿಜೆಪಿಅಭ್ಯರ್ಥಿ ವಿರುದ್ಧಕರಪತ್ರ ಹಂಚಿಕೆಮಾಡಿದ ಎನ್‌ಎಸ್‌ಯು ಕಾರ್ಯಕರ್ತರನ್ನು ಪೊಲೀಸ್ ಠಾಣೆಗೆಕರೆತಂದು ಅವರಿಗೆ ರಾಜಮರ್ಯಾದೆಯನ್ನು ನೀಡಲಾಗಿದೆ. ಪೊಲೀಸ್ ಠಾಣೆಯಲ್ಲಿಯೇ ನಿಂತು ಕರ ಪತ್ರ ಹಂಚಿದವರು ಲೈವ್ ವಿಡಿಯೋ ಮಾಡು ತ್ತಾರೆಂದರೆ ಅಧಿಕಾರಿಗಳು ಸರ್ಕಾರದ ಕೈಗೊಂಬೆಯಾಗಿದ್ದಾರೆಂದು ಸಾಬೀತಾಗಿದೆ. ಮುಖ್ಯಮಂತ್ರಿ, ಡಿಸಿಎಂ ಗೂಂಡಾಗಿರಿ ನೇತೃತ್ವ ವಹಿಸಿದ್ದಾರೆ. ವಿದ್ಯಾರ್ಥಿಗಳು ಧೈರ್ಯವಾಗಿ ಮತದಾನ ಮಾಡಬೇಕು. 2028ಕ್ಕೆ ರಾಜ್ಯದಲ್ಲಿ ಬಿಜೆಪಿ ಸರ್ಕಾರ ಬರಲಿದೆ ಎಂದರು. ನೂರಾರು ಕೋಟಿ ರೂ.ಗಳನ್ನು ಚುನಾವಣೆಗೆ ಹಂಚಲು ಸರ್ಕಾರದವರು ತಂದಿದ್ದಾರೆ. ಬಾಗಲಕೋಟೆಯಲ್ಲಿ ಭಯದ ವಾತಾವರಣ ಸೃಷ್ಟಿ ಮಾಡಲಾಗುತ್ತಿದೆ. ಶಾಂತಿಯುತ ಚುನಾವಣೆಗೆ ಜಿಲ್ಲಾಡಳಿತ ಮುಂದಾಗಬೇಕು ಎಂದರು.



ಬಿಜೆಪಿಯಿಂದ ಉಚ್ಚಾಟನೆಯಾಗಿರುವ ಬಸನಗೌಡ ಪಾಟೀಲ ಯತ್ನಾಳ ಅವರನ್ನು ಪಕ್ಷಕ್ಕೆ ಮರಳಿ ಸೇರ್ಪಡೆ ಮಾಡಿಕೊಳ್ಳುವ ಕುರಿತು ಪಕ್ಷದ ಹೈಕಮಾಂಡ್ ನಿರ್ಣಯ ಕೈಗೊಳ್ಳಲಿದೆ. ಯತ್ನಾಳ ಅವರು ಹಿಂದೂತ್ವದ ಬ್ರ್ಯಾಂಡ್ ಆಗಿದ್ದಾರೆ. ಯತ್ನಾಳ, ಕಾರಜೋಳ, ಬೊಮ್ಮಾಯಿ, ಹೀಗೆ ಬಿಜೆಪಿ ನಾಯಕರು ಚುನಾವಣೆ ಪ್ರಚಾರಕ್ಕೆ ಬಂದಿದ್ದರಿಂದ ಸರ್ಕಾರಕ್ಕೆ ಸೋಲಿನ ಭಯ ಹುಟ್ಟಿದೆ. ಬಾಗಲಕೋಟೆಯಲ್ಲಿ ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ ಗೆಲ್ಲಲಿದ್ದಾರೆ ಎಂದರು.

ಪ್ರತ್ಯಕ್ಷವಾಗಿ ಅಲ್ಲದಿದ್ದರೂ ಪರೋಕ್ಷವಾಗಿ ಬಾಗಲಕೋಟೆಯಲ್ಲಿ ಬಿಜೆಪಿ ಅಭ್ಯರ್ಥಿ ಗೆಲುವಿಗೆ ಕೆಲವು ಕಾಂಗ್ರೆಸ್ ನಾಯಕರು ಬೆಂಬಲ ಕೊಡುತ್ತಿದ್ದಾರೆ ಇವರಲ್ಲಿ ಡಿ.ಕೆ.ಶಿವುಕುಮಾರ ಕೂಡ ಇದ್ದಾರೆ. ಮುಖ್ಯಮಂತ್ರಿ ಸಿದ್ಧರಾಮಯ್ಯನವರ ಸಿಎಂ ಹುದ್ದೆಯಿಂದ ಮನೆಗೆ ಕಳುಹಿಸಲು ಬಿಜೆಪಿ ಅಭ್ಯರ್ಥಿ ಗೆಲ್ಲಬೇಕು ಎಂದು ಡಿ.ಕೆ.ಶಿವುಕುಮಾರ ಅವರ ಆಶಯವಾಗಿದೆ ಎಂದರು.

ವಿದ್ಯಾರ್ಥಿಗಳಿಗೆ ಬೆದರಿಕೆ

ಕಾಂಗ್ರೆಸ್ ಪಕ್ಷದ ಸರ್ಕಾರದಿಂದ ಪ್ರಜಾಪ್ರಭುತ್ವ ಕಗ್ಗೊಲೆಯಾಗಿದೆ. ಕಾಲೇಜಿನಲ್ಲಿ ವಿದ್ಯಾರ್ಥಿಗಳ ಬಳಿ ಹೋಗಿ ಕರಪತ್ರ ಹಂಚಿಕೆ ಮಾಡಿ ವಿದ್ಯಾರ್ಥಿಗಳಿಗೆ ಬೆದರಿಕೆ ಹಾಕುವ ಕೆಲಸ ಮಾಡಲಾಗಿದೆ. ಇನ್ನೂ ಈ ಪ್ರಕರಣದ ಕುರಿತು ಚುನಾವಣಾ ಅಧಿಕಾರಿಗಳಿಗೆ ದೂರು ನೀಡಲಾಗಿದೆ. ನ್ಯಾಯಸಮ್ಮತ ತನಿಖೆಯನ್ನು ನಡೆಸಲು ಹೊರಗಿನ ಅಧಿಕಾರಿಗಳನ್ನು ಇಲ್ಲಿಗೆ ನೇಮಕ ಮಾಡಬೇಕು ಎಂದು ಚಿತ್ರದುರ್ಗದ ಸಂಸದ ಗೋವಿಂದ ಕಾರಜೋಳ ಆಗ್ರಹಿಸಿದರು.

ಕೇರಳ ಟೆಕ್ಕಿ ಜಿಎಸ್ ಶರಣ್ಯ ಪತ್ತೆ

◆**ಬೆಂಗಳೂರು:** ಕೊಡಗು ಜಿಲ್ಲೆಯ ತಡಿಯಾಂಡಮೋಲ್ ಶಿಖರಕ್ಕೆ ಕೇರಳದಿಂದ ಚಾರಣಕ್ಕಾಗಿ ಬಂದು ಏ.2ರಂದು ನಾಪತ್ತೆಯಾಗಿದ್ದ ಜಿ.ಎಸ್. ಶರಣ್ಯ ಪತ್ತೆಯಾಗಿದ್ದಾರೆ ಮತ್ತು ಆರೋಗ್ಯವಾಗಿದ್ದಾರೆ ಎಂದು ಅರಣ್ಯ ಸಚಿವ ಈಶ್ವರ ಬಿ. ಖಂಡ್ರೆ ತಿಳಿಸಿದ್ದಾರೆ.



ಬೆಂಗಳೂರಿನಲ್ಲಿ ಭಾನುವಾರ ತುರ್ತು ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಅವರು, 9 ತಂಡಗಳು ಹಗಲಿರುಳು ಕಾರ್ಯಾಚರಣೆ ನಡೆಸಿ ಯುವತಿಯನ್ನು ಕರೆತಂದಿದ್ದಾರೆ. ಅವರನ್ನು ಸುರಕ್ಷಿತವಾಗಿ ಕೇರಳದ ಅವರ ಮನೆಗೆ ತಲುಪಿಸುವಂತೆ ಸೂಚಿಸಿರುವುದಾಗಿ ತಿಳಿಸಿದರು.

ಚಾರಣಕ್ಕೆ ಬಂದಿದ್ದ ಶರಣ್ಯ ಏ.2ರಂದು ಇತರ 15 ಮಂದಿ ಚಾರಣಿಗರೊಂದಿಗೆ ಮತ್ತು ನೇಚರ್ ಗೈಡ್ ಜೊತೆಯಲ್ಲಿ ಚಾರಣಕ್ಕೆ ಹೋಗಿದ್ದರು. ಆದರೆ, ಮಧ್ಯಾಹ್ನ ಮೂಲನೆಲೆಗೆ ಎಲ್ಲ ಚಾರಣಿಗರು ಬಂದಾಗ ಇವರು ದಾರಿ ತಪ್ಪಿರುವುದು ತಿಳಿಯಿತು. ವಿಷಯ ತಿಳಿದ ಕೂಡಲೇ ಅಂದಿನಿಂದಲೇ 5 ತಂಡಗಳಿಂದ ಶೋಧ ಕಾರ್ಯಾಚರಣೆ ನಡೆಸಲಾಗಿತ್ತು. ಇಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಎ.ಐ.ಸಿ.ಸಿ. ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣು ಗೋಪಾಲ್ ಅವರು ಯುವತಿ ನಾಪತ್ತೆ ಆಗಿರುವ ಬಗ್ಗೆ ಆತಂಕ ವ್ಯಕ್ತಪಡಿಸಿದ್ದರು. ಮುಖ್ಯಮಂತ್ರಿಗಳ ಸೂಚನೆಯ ಮೇರೆಗೆ ಇಂದು ಹೆಚ್ಚುವರಿ ಸಿಬ್ಬಂದಿಯನ್ನು ಶೋಧ ಕಾರ್ಯಕ್ಕೆ ನಿಯೋಜಿಸಲಾಗಿತ್ತು ಎಂದು ಮಾಹಿತಿ ನೀಡಿದರು.

ತಾವು ದಾವಣಗೆರೆ ಉಪ ಚುನಾವಣೆ ಪ್ರಚಾರಕ್ಕೆ ತೆರಳಿದ್ದಾಗ ವಿಷಯ ತಿಳಿಯಿತು. ಕೂಡಲೇ ಪೊಲೀಸ್ ವರಿಷ್ಠಾಧಿಕಾರಿಗಳು ಮತ್ತು ಇಲಾಖೆಯ ಹಿರಿಯ ಅಧಿಕಾರಿಗಳೊಂದಿಗೆ ಸತತ ಸಂಪರ್ಕದಲ್ಲಿದ್ದೆ. ಯುವತಿ ಈಗ ಪತ್ತೆಯಾಗಿದ್ದು, ಅವರೊಂದಿಗೆ ಸಹ ಮಾತನಾಡಿದ್ದೇನೆ. ಅವರು ಆರೋಗ್ಯವಾಗಿದ್ದಾರೆ ಎಂದು ಸಚಿವರು ಹೇಳಿದರು.

9 ತಂಡಗಳಿಂದ ಕಾರ್ಯಾಚರಣೆ

ಭಾನುವಾರ ಹೆಚ್ಚುವರಿಯಾಗಿ 40 ಅರಣ್ಯ ಸಿಬ್ಬಂದಿ ನಿಯೋಜಿಸಲಾಗಿತ್ತು. ಒಟ್ಟು 9 ತಂಡಗಳು ಶೋಧ ಕಾರ್ಯಾಚರಣೆ ನಡೆಸಿದ್ದವು. ಇದರಲ್ಲಿ ಪೊಲೀಸ್ ಇಲಾಖೆ, ನಕ್ಸಲ್ ನಿಗ್ರಹ ದಳ, ಅರಣ್ಯ ಇಲಾಖೆ ಸೇರಿದಂತೆ ಬಹು ಸಂಸ್ಥೆಗಳು ಸಹಯೋಗ ನೀಡಿದ್ದವು. ಸ್ಥಳೀಯ ಬುಡಕಟ್ಟು ಜನರೂ ಶೋಧ ಕಾರ್ಯಾಚರಣೆಗೆ ನೆರವಾಗಿದ್ದರು. ಎಲ್ಲರಿಗೂ ತಾವು ಅಭಿನಂದನೆ ಮತ್ತು ಧನ್ಯವಾದ ಸಲ್ಲಿಸುವುದಾಗಿ ತಿಳಿಸಿದರು.

ಹೆಚ್ಚಿದ ಸಾಮಾಜಿಕ ಜಾಲತಾಣ ಬಳಕೆ

◆**ಬೆಂಗಳೂರು:** ಇಂದಿನ ಮಕ್ಕಳು ಪುಸ್ತಕಗಳಿಗಿಂತ ಹೆಚ್ಚಾಗಿ ಫೇಸ್‌ಬುಕ್, ಇನ್‌ಸ್ಟಾಗ್ರಾಂಗಳಂತಹ ಸಾಮಾಜಿಕ ಜಾಲತಾಣಗಳನ್ನು ನೋಡುವುದು ಹೆಚ್ಚಾಗಿದೆ. ಇದರಿಂದ ಮಕ್ಕಳ ಕಲಿಕೆ ಕುಂಠಿತವಾಗಿವೆ. ಈಗಿನ ಮಕ್ಕಳು, ಓದುವ ಕಲೆಯನ್ನು ಹೆಚ್ಚಿಸಿಕೊಳ್ಳಬೇಕು. ಅವರು ತಮ್ಮ ಕಲ್ಪನಾಶಕ್ತಿ, ಆಸಕ್ತಿ ಬೆಳೆಸಿಕೊಳ್ಳಬೇಕು ಎಂದು ಪ್ರಜಾವಾಣಿ ಸಂಪಾದಕ ರವೀಂದ್ರ ಭಟ್ಟ ತಿಳಿಸಿದರು.

ಭಾನುವಾರ ಸೌಟ್ಸ್ ಮತ್ತು ಗೈಡ್ಸ್‌ನ ಕೊಂಡಜ್ಜಿ ಬಸಪ್ಪ ಸಭಾಂಗಣದಲ್ಲಿ ಬೆರಗು ಪ್ರಕಾಶನ ವತಿಯಿಂದ ಲೇಖಕಿ ಭಾರತಿ ವಸ್ತ್ರದ ಅವರ ಚೇತನ ಭಾರತಿ, ಲೇಖಕಿ ಹಾಗೂ ಪತ್ರಕರ್ತೆ ರಶ್ಮಿ ಎಸ್. ಅವರ ಮಿದು ಮಾತು ಹಾಗೂ ಆರ್ನಿ ಸಿ. ನವೀನ್ ಅವರ ಆಚೋಸ್ ಫ್ರಂ ಮೈ ಜಾರ್ ಕೃತಿಗಳು ಲೋಕಾರ್ಪಣೆಗೊಳಿಸಿ ಅವರು ಮಾತನಾಡಿದರು.

ಇಂದಿನ ಕಾಲಘಟ್ಟದಲ್ಲಿ ಎಲ್ಲದಕ್ಕೂ ಪರ್ಯಾಯವಾಗಿ ಮೊಬೈಲ್ ಬಳಕೆಮಾಡುವಂತಾಗಿದೆ. ನಾವೊಂದು ಚೌಕಟ್ಟನ್ನು ಹಾಕಿಕೊಂಡಿದ್ದೇವೆ. ಅದನ್ನು ಮೀರಿ ಓದು ಹಾಗೂ ಸಾಹಿತ್ಯದ ಕಡೆ ಹೆಚ್ಚು ಒತ್ತು ನೀಡುವ ಅಗತ್ಯವಿದೆ. ತಮ್ಮ ಮಕ್ಕಳು ಕನಿಷ್ಠ ಪಕ್ಷ ಓದುವುದನ್ನು ರೂಢಿಸಿಕೊಳ್ಳಲಿ ಎಂಬುದು ಪ್ರತಿಯೊಬ್ಬ ತಂದೆ-ತಾಯಿಯ ಆಶಯವಾಗಬೇಕು ಎಂದರು.

ಕಾರ್ಯಕ್ರಮದಲ್ಲಿ ಅಂಕಣಕಾರ ಎಸ್. ರವಿಶಂಕರ್, ಬೆರಗು ಪ್ರಕಾಶನದ ವಿಜಯಲಕ್ಷ್ಮಿ ಕತ್ತಿ, ಕರ್ನಾಟಕ ಮಾಧ್ಯಮ ಅಕಾಡೆಮಿಯ ಆಯೇಷಾ ಖಾನಂ, ಪ್ರಕಾಶ್ ಕಂಬತ್ತಳ್ಳಿ, ಗಿರೀಶ್ ಎಸ್. ತಿಳಿ, ಸಂತೋಷ್ ಎಸ್. ತಿಳಿ ಮತ್ತಿತರರಿದ್ದರು.



> ಗಜಲ್‌ಗಳೇ ನನ್ನ ಬರವಣಿಗೆಗೆ ಕಾರಣವಾಯಿತು. ನನ್ನ ತಾಯಿ ಕೂಡ ಉದ್ಯೋಗಸ್ಥ ಮಹಿಳೆಯಾಗಿದ್ದರು. ಅವರಿಗೆ ನಮಗಿದ್ದ ಅನುಕೂಲತೆಗಳು ಸಹ ಇರಲಿಲ್ಲ. ಕೆಲಸದ ಒತ್ತಡ ಹಾಗೂ ಮನೆಯ ಜವಾಬ್ದಾರಿಯನ್ನು ಜೊತೆ ಜೊತೆಗೆ ನಿಭಾಯಿಸಿಕೊಂಡು ಹೋಗುತ್ತಿದ್ದ ಅವರ ಜೀವನ ಸಹ ಸಾಕಷ್ಟು ಪ್ರೇರೇಪಣೆ ನೀಡಿತು.
>
> ■ **ರಶ್ಮಿ ಎಸ್., ಲೇಖಕಿ**

ಎಐ ಸಂಶೋಧಕರಿಗೆ ಆನೆಬಲ: ಪವನಜ

◆**ಬೆಂಗಳೂರು:** ತಂತ್ರಜ್ಞಾನವು ಕೇವಲ ಇಂಗ್ಲಿಷ್‌ಗೆ ಸೀಮಿತವಲ್ಲ, ಎಐ ತಂತ್ರಜ್ಞಾನ ಕನ್ನಡ ಮತ್ತು ಕನ್ನಡದ ಸಂಶೋಧಕರಿಗೂ ಆನೆಬಲ ನೀಡುತ್ತಿವೆ ಎಂದು ತಂತ್ರಜ್ಞ ಡಾ.ಪವನಜ ಯು.ಬಿ. ಹೇಳಿದರು.

ಮಿಥಿಕ್ ಸೊಸೈಟಿಯ ಸಭಾಂಗಣದಲ್ಲಿ ನಡೆದ ಸಿರಿಭೂವಲಯ ವಿಶ್ವಕೋಶ ಮತ್ತು ಕನ್ನಡ ಸಂಶೋಧನೆಯಲ್ಲಿ ಕೃತಕ ಬುದ್ಧಿಮತ್ತೆ ಬಳಕೆಯ ಕುರಿತು ನಡೆದ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿ, ಕೃತಕ ಬುದ್ಧಿಮತ್ತೆಯು ಲಭ್ಯವಿರುವ ದತ್ತಾಂಶಗಳ ಆಧಾರದ ಮೇಲೆ ನಿರಂತರವಾಗಿ ಕಲಿಯುತ್ತಾ ಸಾಗುತ್ತದೆ. ಇದರಲ್ಲಿ ಪ್ರಮುಖವಾಗಿ ಎರಡು ವಿಧಗಳಿವೆ. ಪ್ರೆಡಿಕ್ಟಿವ್ ಎಐ ಭವಿಷ್ಯದ ಮುನ್ಸೂಚನೆಗಳನ್ನು ನೀಡಲು ಬಳಕೆಯಾದರೆ, ಜನರೇಟಿವ್ ಎಐ ಹೊಸ ಲೇಖನ, ಕವನ ಅಥವಾ ಚಿತ್ರಗಳನ್ನು ಸೃಷ್ಟಿಸುವ ಸಾಮರ್ಥ್ಯ ಹೊಂದಿದೆ ಎಂದರು.

ಸಂಶೋಧನಾ ಕ್ಷೇತ್ರಕ್ಕೆ ವರದಾನ: ಸಂಶೋಧನಾ ಕ್ಷೇತ್ರದಲ್ಲಿ ಎಐ ಕ್ರಾಂತಿಕಾರಿ ಬದಲಾವಣೆ ತರುತ್ತಿದೆ. ಸಾವಿರಾರು ಪುಟಗಳ ಮಾಹಿತಿ ಅಥವಾ ಹಳೆಯ ಹಸ್ತಪ್ರತಿಗಳನ್ನು ವಿಶ್ಲೇಷಿಸಿ ಕೆಲವೇ ನಿಮಿಷಗಳಲ್ಲಿ ಸಾರಾಂಶ ನೀಡುವುದು ಇದರಿಂದ ಸಾಧ್ಯ. ಭಾಷಾ ಅನುವಾದದಲ್ಲೂ ಇದು ಮಹತ್ತರ ಪಾತ್ರ ವಹಿಸುತ್ತಿದೆ. ಲೇಖಕರ ಬರವಣಿಗೆಯ ಶೈಲಿಯನ್ನು ಗುರುತಿಸಲು ಮತ್ತು ಕೃತಿಚೌರ್ಯವನ್ನು ಸುಲಭವಾಗಿ ಪತ್ತೆ ಹಚ್ಚಲು ಈ ತಂತ್ರಜ್ಞಾನ ಪೂರಕವಾಗಿದೆ ಎಂದು ಮಾಹಿತಿ ನೀಡಿದರು.



ಗಣಿತ ಸೂತ್ರಗಳಲ್ಲಿ ಜಗತ್ತಿನ ಜ್ಞಾನ


40 ವರ್ಷಗಳಿಂದ ಈ ಕೃತಿಯ ಸಂಶೋಧನೆಯಲ್ಲಿ ತೊಡಗಿರುವ ಹಿರಿಯ ಸಂಶೋಧಕ ಸುಧಾರ್ಥಿ ಹಾಸನ ಅವರು, ಕುಮುದೇಂದು ಮುನಿ ವಿರಚಿತ ಸಿರಿಭೂವಲಯ ಕಾವ್ಯ ವಿಸ್ಮಯವಾಗಿದೆ. ಸಿರಿಭೂವಲಯವು ಕೇವಲ ಒಂದು ಕಾವ್ಯವಲ್ಲ, ಅದು 718 ಭಾಷೆಗಳ ಸಾರವನ್ನು ಹೊಂದಿರುವ ಜಗತ್ತಿನ ಏಕೈಕ ಅಂಕ ಕಾವ್ಯ. ನವಮಾಂಕ ಪದ್ಧತಿಯನ್ನು ಬಳಸಿ ರಚಿಸಲಾದ ಈ ಕೃತಿಯಲ್ಲಿ ವಿಮಾನಯಾನ, ವೈದ್ಯಕೀಯ ಹಾಗೂ ಗಣಕ ವಿಜ್ಞಾನದಂತಹ ಆಧುನಿಕ ವಿಷಯಗಳೂ ಅಡಗಿವೆ. ಕ್ರಿಸ್ತ ಶಕ 800ರ ಸುಮಾರಿಗೆ ಗಂಗರ ಕಾಲದಲ್ಲಿ ಜೀವಿಸಿದ್ದ ಕುಮುದೇಂದು ಮುನಿಯು 16,000 ಪುಟಗಳ ಕೃತಿಯಲ್ಲಿ 6,000 ಗಣಿತ ಸೂತ್ರ ಬಳಸಿದ್ದಾರೆ ಎಂದರು.

ಎಚ್ಚರಿಕೆಯ ಹೆಜ್ಜೆ ಅಗತ್ಯ: ಎಐ ತಂತ್ರಜ್ಞಾನವು ವರವಾಗಿದ್ದರೂ ಅದನ್ನು ಬಳಸುವಾಗ ಎಚ್ಚರಿಕೆ ಅಗತ್ಯ ಎಂದು ತಿಳಿಸಿದರು.

ಪರೋಪಕಾರಾರ್ಥಮಿದಂ ಶರೀರಮ್

▸ **ಗಿರಿಧರ್ ಉದ್ಯಾವರ**

ಸೇವಾಗಾಥ ಕಥೆ-2



ಮನೆಯ ಹೊರಗೆ ಶವವಾಹನ ಮತ್ತು ಅಂಗಳದಲ್ಲಿ ಮೃತ ಪತಿಯ ದೇಹ! ಒಂದೆಡೆ, ವರ್ಷಗಳ ಹಿಂದೆ ಪತಿ ಕೈಗೊಂಡ ನಿರ್ಣಯವನ್ನು ಈಡೇರಿಸಲು ಕಾಯುತ್ತಿದ್ದ ಪತ್ನಿ. ಮತ್ತೊಂದೆಡೆ, ಅಮ್ಮನ ವಿರುದ್ಧ ಕೂಗಾಡುತ್ತಿರುವ ಮಕ್ಕಳು! ನಾವು ಅಪ್ಪನ ದೇಹವನ್ನು ಹಿಂಸಿಸಲು ಬಿಡುವುದಿಲ್ಲ, ಈ ಪದ್ಧತಿ ಸರಿಯಿಲ್ಲ, ಶಾಸ್ತ್ರೋಕ್ತವಾಗಿ ಅಂತ್ಯಕ್ರಿಯೆ ಮುಗಿಸುತ್ತೇವೆ. ಆಗ ಮೌನ ಮುರಿದ ಮೃತನ ಹೆಂಡತಿ ಉಮ್ಮಳಿಸುತ್ತಿದ್ದ ದುಃಖದಿಂದ ಆಡಿದ ಒಂದೇ ಮಾತಿನಿಂದ ಎಲ್ಲರೂ ಸುಮ್ಮನಾದರು. ನನ್ನ ಪತಿ ದೇಹದಾನದ ಸಂಕಲ್ಪ ಮಾಡಿದ್ದಾರೆ, ಅಷ್ಟೇ! ಯಾರನ್ನೂ ಇದಕ್ಕೆ ಅಡ್ಡಿಯಾಗಲು ನಾನು ಬಿಡುವುದಿಲ್ಲ. 'ದಧೀಚಿ ದೇಹದಾನ ಸಮಿತಿಯ' ಪರವಾಗಿ ತಮ್ಮ ಕರ್ತವ್ಯ ನಿರ್ವಹಿಸಲು ತೆರಳಿದ್ದ ಸಮಿತಿಯ ಜಂಟಿ ಪ್ರಧಾನ ಕಾರ್ಯದರ್ಶಿ ಡಾ. ವಿಶಾಲ್ ಚಡ್ಡಾ ಹೇಳುವಂತೆ- ಅಂತಹ ಭಾವುಕ ಕ್ಷಣದಲ್ಲಿ, ಅಗಲಿರುವ ಗಂಡನ ನಿರ್ಧಾರವನ್ನು ಪೂರೈಸಲು ಹೊರಟ ಪತ್ನಿ ತನ್ನ ಸ್ವಂತ ಮಕ್ಕಳ ವಿರುದ್ಧ ನಿಂತಿದ್ದಳು. ಈ ಭಾವನೆ ಸಾಮಾನ್ಯವಲ್ಲ, ಆಧ್ಯಾತ್ಮಿಕವಾದದ್ದು ಮತ್ತು ಈ ರೀತಿಯ ಅನೇಕ ನೆನಪುಗಳು ದಧೀಚಿ ಪರಿವಾರದಲ್ಲಿವೆ. ಈ ಸತ್ಯ ಘಟನೆ ಶ್ರೀಮತಿ ಸಂಪೂರ್ಣ ಜೀತ್ ಕೌರ್ ಮತ್ತು ಡಾಕ್ಟರರಾಗಿದ್ದ ಅವರ ದಿವಂಗತ ಪತಿಗೆ ಸಂಬಂಧಿಸಿದ್ದು.

ದೇಹದಾನದ ಸಂಕಲ್ಪ ಎನ್ನುವುದು ಜೀವನದ ನಂತರವೂ ಬದುಕುವ ಒಂದು ವಿಶಿಷ್ಟ ಪ್ರಯಾಣ. ಈ ಸಂಕಲ್ಪವನ್ನು ಮಾಡಿಸುವವರೂ ಈ ಯಾತ್ರೆಯ ಭಾಗಿಗಳೇ. ಇಂಥ ಪುಣ್ಯಕಾರ್ಯಕ್ಕೆ ಒಂದು ವ್ಯವಸ್ಥಿತ ರೂಪ ನೀಡಲು, ರಾಷ್ಟ್ರೀಯ ಸ್ವಯಂಸೇವಕ ಸಂಘದ ಖ್ಯಾತ ಪ್ರಚಾರಕರಾದ ದಿವಂಗತ ನಾನಾಜಿ ದೇಶಮುಖರು, ಮಹರ್ಷಿ ದಧೀಚಿ ಅವರಿಂದ ಪ್ರೇರಿತರಾಗಿ, ಅಕ್ಟೋಬರ್ 11, 1997ರಂದು ದಧೀಚಿ ದೇಹದಾನ/ಅಂಗದಾನ ಸಮಿತಿಯನ್ನು ರಚಿಸಿದ್ದಲ್ಲದೆ, ಮೊದಲ ದೇಹದಾನ ನಿರ್ಣಯಪತ್ರವನ್ನು ತಾವೇ ತುಂಬಿದ್ದರು. ಈ ಸಮಿತಿಯು ದೆಹಲಿಯ ಎನ್.ಸಿ. ಆರ್, ಬುಲಂದ್ಶಹರ್ ಸೇರಿದಂತೆ ಸುಮಾರು 9 ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿದೆ. ಸುಮಾರು 300 ಕಾರ್ಯಕರ್ತರ ಕಠಿಣ ಪರಿಶ್ರಮದ ಫಲವಾಗಿ, ಕಳೆದ 13 ವರ್ಷಗಳಲ್ಲಿ ಸುಮಾರು 1300 ಮೃತ ವ್ಯಕ್ತಿಗಳ ವಿವಿಧ ಅಂಗಗಳು ಇತರರ ದೇಹಗಳಲ್ಲಿ ಇನ್ನೂ ಜೀವಂತವಾಗಿವೆ. ಇದರಲ್ಲಿ 375 ಮಂದಿಯ ಸಂಪೂರ್ಣ ದೇಹ ಹಾಗೂ 925ಕ್ಕೂ ಹೆಚ್ಚು ಜನರ ಕಣ್ಣುಗಳನ್ನು ದಾನ ಮಾಡಲಾಗಿದೆ. ಸಮಿತಿಯ ಸ್ವಯಂಸೇವಕರು ಈವರೆಗೆ 18000ಕ್ಕೂ ಹೆಚ್ಚು ಸಂಕಲ್ಪಪತ್ರಗಳನ್ನು ಭರ್ತಿ ಮಾಡಿದ್ದಾರೆ.

ಇಷ್ಟೇ ಅಲ್ಲ, ದಧೀಚಿ ದೇಹದಾನ ಸಮಿತಿಯಿಂದ ಸ್ಫೂರ್ತಿ ಪಡೆದ ಇತರ 46 ಸಮಿತಿಗಳು ಈಗ ಸ್ವತಂತ್ರವಾಗಿ ದೇಶಾದ್ಯಂತ ಇದೇ ಕೆಲಸ ನಿರ್ವಹಿಸುತ್ತಿವೆ. ಅವೆಲ್ಲವುಗಳ ಮಾರ್ಗದರ್ಶನ ಮತ್ತು ನಾಯಕತ್ವವನ್ನು ದಧೀಚಿ ದೇಹದಾನ ಸಮಿತಿಯ ಸಂಸ್ಥಾಪಕ, ಪೋಷಕ ಮತ್ತು ವಿಶ್ವ ಹಿಂದೂ ಪರಿಷತ್ತಿನ ಪ್ರಸ್ತುತ ಕಾರ್ಯಾಧ್ಯಕ್ಷರಾದ ಶ್ರೀಮಾನ್ ಅಲೋಕ್ ಜೀಯವರೇ ವಹಿಸಿದ್ದಾರೆ.

ಸಮಿತಿಯ ಉಪಾಧ್ಯಕ್ಷೆ 'ಮಂಜು ಪ್ರಭಾ ಮಾತನಾಡಿ, ದೇಹದಾನ ಮಾಡಲು ಆರಂಭದಲ್ಲಿ ಹಲವು ತೊಂದರೆಗಳು ಎದುರಾದವು. ಕೆಲವೊಮ್ಮೆ ಮೃತದೇಹ ಸಾಗಿಸಲು ವಾಹನಗಳು ಇರುತ್ತಿರಲಿಲ್ಲ, ಕೆಲವೊಮ್ಮೆ ಡ್ರೈವರ್ ಇರುತ್ತಿರಲಿಲ್ಲ, ಕೆಲವೊಮ್ಮೆ ಕುಟುಂಬದವರು ನಿರ್ಣಯ ತೆಗೆದುಕೊಳ್ಳುವಷ್ಟರಲ್ಲಿ ಕಾಲ ಮಿಂಚಿರುತ್ತಿತ್ತು. ಕೆಲವೊಮ್ಮೆ ಮೃತದೇಹ ಸ್ವೀಕರಿಸಬೇಕಾದ ವೈದ್ಯಕೀಯ ಕಾಲೇಜುಗಳಿಗೆ ಕರೆ ಮಾಡಿದರೂ ಉತ್ತರವಿಲ್ಲ, ಅಥವಾ ಉತ್ತರಿಸಿದರೂ ಮೃತದೇಹವನ್ನಿಡುವ ಟಬ್ ಇರುತ್ತಿರಲಿಲ್ಲ, ಸುಮಾರು 3-4 ವರ್ಷಗಳ ಅವಿರತ ಪ್ರಯತ್ನದ ಬಳಿಕ ದೆಹಲಿಯ ಯಾವುದೇ ಸರ್ಕಾರಿ ವೈದ್ಯಕೀಯ ಕಾಲೇಜಿನಲ್ಲಿ ದೇಹದಾನದ ಪ್ರಕ್ರಿಯೆ 24/7 ಸುಗಮವಾಗುವ ಪರಿಸ್ಥಿತಿ ನಿರ್ಮಾಣವಾಯಿತು. ಒಟಿಖಿನಲ್ಲಿ ತೆರೆಯಲಾಗುತ್ತಿರುವ ಕಾಲೇಜುಗಳ ಮೃತದೇಹದ ಬೇಡಿಕೆಯೂ ಈಗ ಪೂರೈಕೆಯಾಗುತ್ತಿದೆ.

ದೇಹದಾನದ ನಿರ್ಣಯವು ಒಂದೆಡೆ ನಮ್ಮ ಆಧ್ಯಾತ್ಮಿಕ ಪ್ರಜ್ಞೆಯನ್ನು ಜಾಗೃತಗೊಳಿಸುತ್ತದೆ. ನಾನು ಈ ದೇಹವಲ್ಲ, ಆತ್ಮ ಮತ್ತು ಈ ದೇಹವು ಇಹಲೋಕದ ಪ್ರಯಾಣಕ್ಕೆ ಕೇವಲ ಸಾಧನವಷ್ಟೇ ಎಂಬ ಭಾವನೆಯನ್ನು ಉದ್ದೀಪಿಸುತ್ತದೆ. ಇನ್ನೊಂದೆಡೆ, ಈ ದೇಹದ ಆರೋಗ್ಯ ಕಾಪಾಡಲು ಮತ್ತು ಇದನ್ನು ಗಟ್ಟಿಮುಟ್ಟಾಗಿರಿಸಲು ಪ್ರೇರಣೆ ನೀಡುತ್ತದೆ. ಏಕೆಂದರೆ ಉತ್ತಮ ದೇಹದ ಅಂಗಗಳು ಮಾತ್ರ ಇತರರ ಒಳಿತಿಗೆ ಬಳಕೆಯಾಗುತ್ತವೆ. ಕೊನೆಗಾಲದಲ್ಲಿರುವ ವ್ಯಕ್ತಿಗೆ, ತನ್ನ ಪಾರ್ಥಿವ ಶರೀರವೂ ಮತ್ತೊಬ್ಬರ ನೀರಸ, ದಣಿದ, ಹತಾಶ ಜೀವನಕ್ಕೆ ಹೊಸ ಭರವಸೆ, ಹೊಸ ಬೆಳಕು ಮತ್ತು ಹೊಸ ಜೀವವನ್ನು ತುಂಬಬಲ್ಲದೆಂಬ ಯೋಚನೆಯೇ, ಅದೆಷ್ಟು ತೃಪ್ತಿ ನೀಡಬಹುದಲ್ಲವೇ?? ಈ ಕುರಿತಾಗಿ ಬರೆಯುವುದು ಮತ್ತು ಹೇಳುವುದು ಎಷ್ಟು ಸರಳವೋ, ಈ ಕೆಲಸವನ್ನು ಸಕಾಲದಲ್ಲಿ ಮಾಡಿ ಮುಗಿಸುವುದು ಅಷ್ಟೇ ಕಷ್ಟಕರ.

ದಾನ ಬಯಸುವ ಕುಟುಂಬದವರು ಸಮಿತಿಗೆ ಒಂದು ಕರೆ ಮಾಡಿದರೆ ಸಾಕು, ಬಳಿಕ ಅಂತಿಮ ಘಟ್ಟದವರೆಗೆ ನಮ್ಮ 300 ಸ್ವಯಂಸೇವಕರು ನಿಸ್ವಾರ್ಥವಾಗಿ ಹಗಲಿರುಳೂ ಖುದ್ದಾಗಿ ಸಹಾಯ ಮಾಡುತ್ತಾರೆ ಎಂದು ಸಮಿತಿಯ ಅಧ್ಯಕ್ಷ ಹರ್ಷದೀಪ್ ಜೀ ಹೇಳುತ್ತಾರೆ. ದಾನಿಗಳು ಮತ್ತು ಫಲಾನುಭವಿಗಳೆಲ್ಲರೂ ದಧೀಚಿ ಕುಟುಂಬದ ಸದಸ್ಯರಾಗುವ ಮೂಲಕ ಸಮಾಜದಲ್ಲಿ ದೇಹದಾನ ಮತ್ತು ಅಂಗದಾನದ ಜಾಗೃತಿಯನ್ನು ಪ್ರೇರೇಪಿಸುತ್ತಾರೆ. ಸಮಿತಿಯಿಂದ ನಡೆಯುವ ನೈಮಿಷಾರಣ್ಯ ತೀರ್ಥಯಾತ್ರೆ ಹಾಗೂ ಮಹರ್ಷಿ ದಧೀಚಿಯ ದೇಹದಾನದ ಕಥಾನಕವು ಇಂದು ಸಮಾಜದಲ್ಲಿ ದೇಹದಾನದ ಬಗ್ಗೆ ಜಾಗೃತಿ ಮೂಡಿಸುವ ಕೆಲಸವನ್ನು ಮಾಡುತ್ತಿದೆ.

ಮುಖ್ಯಮಂತ್ರಿ ವಿರುದ್ಧ ಛಲವಾದಿ ವಾಗ್ದಾಳಿ

◆**ದಾವಣಗೆರೆ:** ಸಿಎಂ ಸಿದ್ದರಾಮಯ್ಯ ಅನ್ನರಾಮಯ್ಯ ಅಲ್ಲ, ಅವರೊಬ್ಬ ಡೋಂಗಿ ರಾಜಕಾರಣಿ. ಕನ್ನರಾಮಯ್ಯ. ಎನ್ನುವುದು ಇನ್ನೂ ಸೂಕ್ತ ಎಂದು ವಿಧಾನ ಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ವ್ಯಂಗ್ಯವಾಡಿದರು. ನಗರದಲ್ಲಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಅನ್ನಭಾಗ್ಯ ಹೆಸರಿನಲ್ಲಿ ಪ್ರಧಾನಿ ಮೋದಿಯವರು ಕೊಟ್ಟ ಅಕ್ಕಿ ಬಿಟ್ಟು ಬೇರೇನನ್ನೂ ರಾಜ್ಯದ ಕಾಂಗ್ರೆಸ್ ಸರ್ಕಾರ ಜನರಿಗೆ ನೀಡಿಲ್ಲ, ಎಲ್ಲದಕ್ಕೂ ಕನ್ನ ಹಾಕುತ್ತಿದ್ದಾರೆ ಎಂದು ಟೀಕಿಸಿದರು.

ಪಶ್ಚಿಮ ಬಂಗಾಳದಲ್ಲಿ ಜಂಗಲ್‌ರಾಜ್

ಪುಟ ೧ ➜ ಇಂತಹ ಸರಕಾರ ರಾಜ್ಯದ ಜನರನ್ನು ಸುರಕ್ಷಿತ ಕಾಪಾಡುವುದೆಂಬ ಭರವಸೆಯೇ ಇಲ್ಲ ಎಂದು ಉತ್ತರ ಬಂಗಾಳದ ಕೂಚ್‌ಬಿಹಾರ್‌ನಲ್ಲಿ ತಮ್ಮ ಪ್ರಥಮ ಚುನಾವಣಾ ರ‍್ಯಾಲಿಯಲ್ಲಿ ಪ್ರಧಾನಿ ಮೋದಿ ಆರೋಪಿಸಿದರು. ಪ.ಬಂಗಾಳದಲ್ಲಿ ಕಾನೂನು ವ್ಯವಸ್ಥೆ ತೀರಾ ದುರ್ಬಲವಾಗಿದೆ, ಅಕ್ರಮ ನುಸುಳುಕೋರರ ಹಾವಳಿಯಿಂದಾಗಿ ರಾಜ್ಯದ ಜನಸಂಖ್ಯಾಸ್ವರೂಪದಲ್ಲಿ ವ್ಯತ್ಯಯವಾಗಿದೆ. ಮಾತೆಯರಿಗೆ ಸುರಕ್ಷೆ ಇಲ್ಲ ಎಂದು ಟಿಎಂಸಿ ಸರಕಾರವನ್ನು ತೀವ್ರವಾಗಿ ತರಾಟೆಗೆತ್ತಿಕೊಂಡರು.

ಟಿಎಂಸಿಯಿಂದ ಕಾನೂನು ವ್ಯವಸ್ಥೆ ನಾಶ: ಟಿಎಂಸಿಯ ಮಹಾ ಜಂಗಲ್‌ರಾಜ್‌ಗೆ ಮಾಲ್ಡಾ ದುರ್ಘಟನೆ ಒಂದು ನಿದರ್ಶನ. ಆಳುವ ಟಿಎಂಸಿ ಕಾನೂನು ಸುವ್ಯವಸ್ಥೆಗಳ ಅಂತಿಮಯಾತ್ರೆ ನಡೆಸುತ್ತಿದೆ ಎಂದು ಆಪಾದಿಸಿದ ಪ್ರಧಾನಿ ಮೋದಿ, ಪ.ಬಂಗಾಳದ ಮತದಾರರಿಗೆ ಒಂದೆಡೆ ಟಿಎಂಸಿ ತಾಂಡವಿಸಿರುವ ಭಯವಿದೆ. ಇನ್ನೊಂದೆಡೆ ಬಿಜೆಪಿಯಲ್ಲಿ ಭರವಸೆ ಇದೆ. ಒಂದೆಡೆ ಟಿಎಂಸಿಯ ಭ್ರಷ್ಟಾಚಾರ, ಹಣಕಡಿತಗಳ ಹೆದರಿಕೆಯಾದರೆ, ಇನ್ನೊಂದೆಡೆ ಅಭಿವೃದ್ಧಿ ಚಟುವಟಿಕೆಗಳ ವಿಸ್ತತಗೊಳಿಸಬಲ್ಲ ಬಿಜೆಪಿಯಲ್ಲಿ ಆತ್ಮವಿಶ್ವಾಸವಿದೆ. ಅಕ್ರಮ ನುಸುಳುಕೋರರ ಹಾವಳಿ, ಬಂಗಾಳದಲ್ಲಿ ವಿದೇಶಿಯರ ಅಕ್ರಮ ನೆಲೆಸುವಿಕೆಯ ಭೀತಿ ಕೂಡ ಜನರನ್ನು ಕಾಡಿದೆ. ಅಕ್ರಮ ನುಸುಳುಕೋರರ ಹಾವಳಿಗೆ ಬಿಜೆಪಿ ಸಂಪೂರ್ಣ ಕಡಿವಾಣ ಹಾಕಲಿದೆ ಮತ್ತು ನುಸುಳುಕೋರರನ್ನು ಹುಡುಕಿ ಹುಡುಕಿ ಹೊರದಬ್ಬಲಿದೆ ಎಂದು ಭರವಸೆ ನೀಡಿದರು.


ಪ್ರತಿ ಅನ್ಯಾಯ ಕೃತ್ಯಗಳ ವಿಚಾರಣೆ

ಪುಟ ೧ ➜ ಮೇ 4ರ ನಂತರ ಕಾನೂನು ವ್ಯವಸ್ಥೆ ಬಿಗಿಯಾಗುವುದು. ಟಿಎಂಸಿ ಆಳ್ವಿಕೆಯಲ್ಲಿ ನಡೆದಿರುವ ಭ್ರಷ್ಟಾಚಾರ, ಹಿಂಸಾಚಾರಗಳ ಪ್ರತಿ ಕೃತ್ಯವನ್ನೂ ತನಿಖೆಗೆ ಗುರಿಪಡಿಸಲಾಗುವುದು ಎಂದು ಪ್ರಧಾನಿ ಮೋದಿ ಜನರಲ್ಲಿ ಧೈರ್ಯ ತುಂಬಿದರು. ತಪ್ಪು ಮಾಡಿದ ಪ್ರತಿಯೊಬ್ಬರನ್ನೂ ಚುನಾವಣೆ ನಂತರ ವಿಚಾರಣೆಗೆ ಗುರಿಪಡಿಸಲಾಗುವುದು. ಚುನ್ ಚುನ್ ಕೆ ಹಿಸಾಬ್ ಹೋಗ(ಹುಡುಕಿ ಹುಡುಕಿ ಲೆಕ್ಕಾಚಾರ ತೀರಿಸುತ್ತೇವೆ). ಕ್ರಿಮಿನಲ್ ಅದೆಷ್ಟೇ ಶಕ್ತಿಶಾಲಿಯಾಗಿರಲಿ, ಈ ಬಾರಿ ನ್ಯಾಯ ತೀರ್ಮಾನ ಮಾತ್ರ ಖಚಿತ ಎಂದು ಪ್ರಧಾನಿ ಭರವಸೆ ನೀಡಿದರು.

ಸ್ವಂತ ಭೂಮಿಯಲ್ಲಿ ಹೆಮ್ಮೆಯಿಂದ ಬದುಕಿ: ಒಂದೆಡೆ ಬದಲಾಗುತ್ತಿರುವ ಜನಸಂಖ್ಯಾ ಸ್ವರೂಪದಿಂದಾಗಿ ತಮ್ಮ ಸ್ವಂತ ಭೂಮಿ ಕೈತಪ್ಪಿ ಹೋಗುವುದೋ ಎಂಬ ಭೀತಿ ಜನರನ್ನು ಬಹುವಾಗಿ ಕಾಡಿದೆ. ಇನ್ನೊಂದೆಡೆ ತಮ್ಮ ಸ್ವಂತ ಭೂಮಿಯಲ್ಲೇ ತುಂಬು ಹೆಮ್ಮೆಯಿಂದ ತಲೆಎತ್ತಿ ಜೀವಿಸಲು ಅವಕಾಶ ಕೊಡುತ್ತೇವೆಂದು ಬಿಜೆಪಿ ಭರವಸೆ ನೀಡುತ್ತದೆ. ಅಕ್ರಮ ನುಸುಳುಕೋರರನ್ನು ರಕ್ಷಿಸುವನ್ವಯ ಟಿಎಂಸಿ ಎಸ್‌ಐಆರ್‌ನ್ನು ವಿರೋಧಿಸುತ್ತಿದೆ. ಹಿಂದು ನಿರಾಶ್ರಿತರು ಪೌರತ್ವ ಪಡೆಯುವುದು ಟಿಎಂಸಿಗೆ ಸಹ್ಯವಲ್ಲದ ವಿಚಾರ. ಹಾಗಾಗಿಯೇ ಟಿಎಂಸಿ ಸಿಎಎಯನ್ನು ವಿರೋಧಿಸುತ್ತಿದೆ ಎಂದು ಪ್ರಧಾನಿ ಮೋದಿ ಆರೋಪಿಸಿದರು.

ಬಂಗಾಳದ ಅಸ್ಮಿತೆ ಬದಲಿಸಲು ಯತ್ನಿಸುವವರ ಪದಚ್ಯುತಿ: ಟಿಎಂಸಿ ಆಳ್ವಿಕೆಯಲ್ಲಿ ಬಂಗಾಳದ ಗಡಿಪ್ರದೇಶಗಳಲ್ಲಿ ಜನಸಂಖ್ಯಾ ಸ್ವರೂಪದಲ್ಲಿ ಅಪಾಯಕಾರಿ ಬದಲಾವಣೆಯಾಗಿದೆ. ಅಕ್ರಮ ನುಸುಳುಕೋರರಿಗೆ ಟಿಎಂಸಿ ಸಿಂಡಿಕೇಟ್‌ನಿಂದ ನೇರ ರಕ್ಷಣೆ ಸಿಗುತ್ತಿದ್ದು, ತನ್ಮೂಲಕ ನುಸುಳುಕೋರರು ರಾಜ್ಯದ ಜನರ ಬದುಕನ್ನು ಗಂಡಾಂತರಕ್ಕೊಡ್ಡಿದ್ದಾರೆ. ತುಷ್ಟೀಕರಣ ರಾಜನೀತಿಯ ಈ ಆಟದಲ್ಲಿ ಮಹಾನ್ ಬಂಗಾಳದ ಅಸ್ಮಿತೆಯೇ ಬದಲಾಗಿದೆ ಎಂದು ಆರೋಪಿಸಿದ ಪ್ರಧಾನಿ ಮೋದಿ, ಬಂಗಾಳದ ಅಸ್ಮಿತೆ ಬದಲಿಸಲು ಪ್ರಯತ್ನಿಸುವವರನ್ನು ಈ ಬಾರಿ ಪದಚ್ಯುತಗೊಳಿಸಲಾಗುವುದು ಎಂದು ಗುಡುಗಿದರು. ಒಂದೆಡೆ, ಸಂದೇಶ್‌ಖಾಲಿಯಂತೆ ಕ್ರೂರ ದೌರ್ಜನ್ಯಗಳಿಗೀಡಾದ ಸೋದರಿಯರು, ಮಾತೆಯರ ಆಕ್ರಂದನವಾದರೆ, ಮಾತೆಯರಿಗೆ ಭದ್ರತೆ, ಘನತೆಯನ್ನು ಕಲ್ಪಿಸಿ, ಸಬಲೀಕರಣಕ್ಕೆ ಪ್ರಾಧಾನ್ಯತೆ ನೀಡಲಾಗುವುದು ಎಂಬುದು ಮೋದಿ ಗ್ಯಾರಂಟಿಯಾಗಿದೆ. ಬಂಗಾಳದಲ್ಲಿ ಬಿಜೆಪಿ ಸರಕಾರ ಮಾತೆಯರ ನೈಜ ಸಬಲೀಕರಣಕ್ಕೆ ಮುಂದಾಗಲಿದೆ ಎಂದು ಭರವಸೆ ನೀಡಿದರು.

ರಾಮ ಬಾಣ



ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

◈ ಆಹಾರ ಇಲಾಖೆಗೆ ಹೆಚ್ಚು ಹಣ ಕೊಟ್ಟರೆ ಸ್ಕೂಲುಗಳು ಸಾಯ್ತಾ ಇವೆ ಅಂತ ಹೇಳ್ತಾರೆ, ಸ್ಕೂಲಿಗೆ ಹೆಚ್ಚು ಕೊಟ್ಟರೆ ಆಸ್ಪತ್ರೆಗಳು ಸರಿಯಿಲ್ಲ ಅಂತ ಅಂತಾರೆ, ರಾಮಮಂದಿರ ಏನಾಯ್ತು ಎಂದು ಕೇಳಿದವರು ಮಂದಿರ ಆದ ಮೇಲೆ ಅದರ ಬದಲು ಆಸ್ಪತ್ರೆಗಳನ್ನು ಕಟ್ಟಿಸಬಹುದಿತ್ತು ಅಂತ ಹೇಳುತ್ತಾರೆ, ಎಲ್ಲರನ್ನೂ ಮೆಚ್ಚಿಸುವ ಬಜೆಟ್ ಸಾಧ್ಯವಿಲ್ಲ
- ಲೇಖಿನ ವಾಕ್ಯ
- **ಭೂಮಿಗೆ ಅವತಾರವೆತ್ತಿ ಬಂದ ಶ್ರೀರಾಮ, ಶ್ರೀ ಕೃಷ್ಣರಿಗೂ ಲೋಕದ ಎಲ್ಲರನ್ನೂ ಮೆಚ್ಚಿಸಲು ಸಾಧ್ಯವಾಗಲಿಲ್ಲ!**

ದಿನ ಭವಿಷ್ಯ

ಮೇಷ ವೈಯಕ್ತಿಕವಾಗಿ ಅನಿರೀಕ್ಷಿತ ಬೆಳವಣಿಗೆ ಸಂಭವ. ಅದಕ್ಕೆ ಹೊಂದಿಕೊಳ್ಳಿ. ಮನೆಯಲ್ಲಿ ಸಂಘರ್ಷದ ಸನ್ನಿವೇಶ. ಸಹನೆಯಿಂದ ವರ್ತಿಸಿ.

ವೃಷಭ ಭಾವನಾತ್ಮಕ ಪರಿಸ್ಥಿತಿ ಏರ್ಪಡಬಹುದು. ಸಂಗಾತಿ ಜತೆ ವೈಮನಸ್ಸು. ಹೊಂದಾಣಿಕೆ ಸಾಧಿಸಿ. ಧನಹಾನಿ ಉಂಟಾದೀತು. ಆರೋಗ್ಯದ ಬಗ್ಗೆ ಚಿಂತೆ.

ಮಿಥುನ ದಿನವಿಡೀ ಏನಾದರೊಂದು ಒತ್ತಡ. ಬಂಧು ಜತೆ ವೈಮನಸ್ಸು ಉಂಟಾದೀತು. ಸಮಸ್ಯೆ ತರುವ ವಿಷಯ ಬೇಗ ಇತ್ಯರ್ಥಪಡಿಸಿ.

ಕಟಕ ಪ್ರಗತಿಯ ದಿನ. ಬಯಸಿದ ಫಲ ಸಿಗಲಿದೆ. ಇತರರ ಗಮನ ಸೆಳೆಯುವ ಸಾಧನೆ ತೋರುವಿರಿ. ಆರೋಗ್ಯದ ಬಗ್ಗೆ ಕಾಳಜಿಯಿರಲಿ.

ಸಿಂಹ ಕಾರ್ಯದಲ್ಲಿ ಇಂದು ಹಿನ್ನಡೆ ಕಾಣುವಿರಿ. ಅಪೂರ್ಣ ಕೆಲಸ, ಅಸಹಕಾರ ಎದುರಿಸುವಿರಿ. ಮುಖ್ಯ ವಿಷಯದಲ್ಲಿ ಸಂವಹನದ ಕೊರತೆ.

ಕನ್ಯಾ ಇಂದು ಕಠಿಣ ನಿರ್ಧಾರ ತಾಳಬೇಕಾದ ಪ್ರಸಂಗ ಒದಗೀತು. ಯಾರಿಗೋ ನೋವು ಆದೀತೆಂದು ಮೃದು ನಿಲುವು ತಳೆಯದಿರಿ.

ತುಲಾ ಬಯಸಿದ ಕಾರ್ಯ ಪೂರ್ಣ. ಹಣ ಗಳಿಕೆಯ ಹಾದಿ ಸುಗಮ. ತುಸು ಆರೋಗ್ಯದ ಸಮಸ್ಯೆ ಕಾಡಬಹುದು. ಬಂಧು ಜತೆ ವಿರಸ ಕಟ್ಟಿಕೊಳ್ಳದಿರಿ.

ವೃಶ್ಚಿಕ ಪ್ರತಿಯೊಂದು ವ್ಯವಹಾರದಲ್ಲೂ ಇಂದು ಸಹನೆ ಕಾಯ್ದುಕೊಳ್ಳಿ. ಮಹತ್ವದ ನಿರ್ಧಾರ ತಾಳಬೇಡಿ. ಒತ್ತಡದಿಂದ ತಲೆನೋವು ಬಾಧಿಸೀತು.

ಧನು ಸಹನೆ ಕೆಡಿಸುವ ಪ್ರಸಂಗ ಎದುರಿಸುವಿರಿ. ಪೂರ್ತಿಯಾಗದ ಕೆಲಸ, ಇನ್ನಿತರ ಬೆಳವಣಿಗೆ ಇದಕ್ಕೆ ಕಾರಣ. ಮನಸ್ಸು ಇತರೆಡೆ ಹರಿಯದಿರಲಿ.

ಮಕರ ವೃತ್ತಿಯಲ್ಲಿ ಪ್ರಗತಿ. ಉತ್ಸಾಹ ಹೆಚ್ಚಿಸುವ ಸನ್ನಿವೇಶ. ನಿಮ್ಮ ಚಿಂತನೆಗೆ ಇತರರ ಮನ್ನಣೆ. ಆರ್ಥಿಕ ಗುರಿ ಸಾಧಿಸುವಿರಿ. ದೈಹಿಕ ಶ್ರಮದಿಂದ ಬಳಲಿಕೆ.

ಕುಂಭ ಗ್ರಹಗತಿ ಇಂದು ನಿಮಗೆ ಪೂರಕ. ನಿಮ್ಮ ಕಾರ್ಯದಲ್ಲಿ ತೃಪ್ತಿಕರ ಪ್ರಗತಿ. ಪ್ರೀತಿಯಲ್ಲಿ ಸಮಾಧಾನಕರ ಬೆಳವಣಿಗೆ. ಧನಪ್ರಾಪ್ತಿ.

ಮೀನ ನಿಮ್ಮ ಆಕಾಂಕ್ಷೆ ಈಡೇರುವ ದಿನ. ಆಪ್ತರ ಜತೆ ಆತ್ಮೀಯ ಸಂಬಂಧ ಕಾಯ್ದುಕೊಳ್ಳಿ. ಏಕಾಂಗಿಗಳಿಗೆ ಸಂಗಾತಿ ಸಿಗುವರು. ಧನಲಾಭ.

ರಾಹುಕಾಲ: 7.30-9.00
ಗುಳಿಕಕಾಲ: 1.30-3.00

ಅದೃಷ್ಟ ಸಂಖ್ಯೆ 7,3,5,8

ಕೇಂದ್ರದ ಜತೆ ಸಹಕಾರವಿರಲಿ

ಪುಟ ೧ ➜ ರಾಜ್ಯ ಸರಕಾರ ಕೇಂದ್ರದ ಜತೆಗೆ ಯುಕೆಪಿ ವಿಷಯದ ಚರ್ಚೆಗೆ ಒಮ್ಮೆಯೂ ಬಂದಿಲ್ಲ, ನೋಟಿಫಿಕೇಶನ್ ಮಾಡಿಲ್ಲ ಎಂದು ಆರೋಪಿಸುತ್ತಾರೆ. ಆದರೆ ನ್ಯಾಯಾಲಯದಲ್ಲಿ ವ್ಯಾಜ್ಯ ಇದೆ. ಕಾನೂನು ತೊಡಕುಗಳು ಮುಗಿದ ತಕ್ಷಣವೇ ನೋಟಿಫಿಕೇಶನ್ ಆಗುತ್ತದೆ ಎಂದರು. ರಾಜ್ಯದ ಜನರಿಗೆ ಶಕ್ತಿ ತುಂಬಲು ಗ್ಯಾರಂಟಿ ಕಾರ್ಯಕ್ರಮಗಳು ಯಶಸ್ಸು ಕಂಡಿದ್ದರೆ ಬಾಗಲಕೋಟೆಯಲ್ಲಿ ನಾಲ್ಕೈದು ದಿನ ಇದ್ದು, ಪ್ರಚಾರ ಮಾಡುವ ಅವಶ್ಯಕತೆ ಏನಿತ್ತು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯನವರನ್ನು ಕುಮಾರಸ್ವಾಮಿ ಪ್ರಶ್ನಿಸಿದರು. ಗ್ಯಾರಂಟಿ ಯೋಜನೆಗಳಿಗೆ ಹಣ ಕೊಡುತ್ತಿರುವುದಕ್ಕೆ ನಮ್ಮ ತಕರಾರು ಇಲ್ಲ, ಆದರೆ ರಾಜ್ಯದ ಆರ್ಥಿಕ ಅಭಿವೃದ್ಧಿಗೆ ಎಷ್ಟು ಹಣ ಕೊಟ್ಟಿದ್ದೀರಿ ಎಂಬುದನ್ನು ಮಾತ್ರ ಹೇಳಿ ಎಂದು ಪ್ರಶ್ನಿಸಿದರು. ಸಿದ್ದರಾಮಯ್ಯ ಹಿಂದುಳಿದ ನಾಯಕ ಎನ್ನುತ್ತಾರೆ. ಅವರು ಹಾಗೆ ಬೆಳೆಯಲು ಯಾರ ಕೊಡುಗೆ ಇದೆ ಎಂಬುದನ್ನು ಅವರು ನೆನಪು ಮಾಡಿಕೊಳ್ಳಬೇಕು. ಈಗ ಅವರ ಪಕ್ಷದಲ್ಲಿ ಕುರ್ಚಿ ಜಗಳ ಶುರುವಾಗಿದೆ. ಅದನ್ನು ನಾವು ಬಿಡಿ ಎನ್ನುತ್ತಿಲ್ಲ, ಅದು ಅವರ ಪಕ್ಷದ ವೈಯಕ್ತಿಕ ಸಮಸ್ಯೆ ಎಂದರು. ಬಾಗಲಕೋಟೆ, ದಾವಣಗೆರೆ ಉಪ ಚುನಾವಣೆ, ರಾಜ್ಯದಲ್ಲಿ ಸಿಎಂ ಕುರ್ಚಿ ಕಿತ್ತಾಟ, ಗ್ಯಾರಂಟಿ ಪದದ ದಾಖಲೆ ಹೇಳಿಕೆಗಳು ಈಗ ಮುನ್ನೆಲೆಗೆ ಬಂದಿವೆ.

ಪ್ರಸ್ತಾವಿತ ಕ್ಷೇತ್ರ ವಿಂಗಡಣೆಗೆ ಜಾಲತಾಣದಲ್ಲಿ ಸಿದ್ದರಾಮಯ್ಯ ತಿರುಗೇಟು

ರಾಜಕೀಯ ಲೆಕ್ಕಾಚಾರ

•**ಬೆಂಗಳೂರು:** ಪ್ರಸ್ತಾವಿತ ಕ್ಷೇತ್ರ ವಿಂಗಡಣೆ ಪ್ರಕ್ರಿಯೆಯ ಬಗ್ಗೆ ಅಂತಿಮವಾಗಿ ಪ್ರಧಾನಿ ಮೋದಿ ಮಾತಾಡಿದ್ದಾರೆ. ಅದನ್ನು ನಾನು ಸ್ವಾಗತಿಸುತ್ತೇನೆ. ಆದರೆ, ಈ ಹಠಾತ್ ಕಾಳಜಿಯು ರಾಜತಾಂತ್ರಿಕತೆಯಂತೆ ಕಾಣುತ್ತಿಲ್ಲ, ಬದಲಾಗಿ ಚುನಾವಣಾ ಲೆಕ್ಕಾಚಾರದಂತೆ ಗೋಚರಿಸುತ್ತಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.



ಜನಸಂಖ್ಯೆಯನ್ನು ಯಶಸ್ವಿಯಾಗಿ ನಿಯಂತ್ರಿಸುತ್ತಿರುವ ದಕ್ಷಿಣದ ರಾಜ್ಯಗಳಲ್ಲಿ ಲೋಕಸಭಾ ಕ್ಷೇತ್ರಗಳನ್ನು ಕಡಿಮೆ ಮಾಡುವುದಿಲ್ಲ ಎಂದು ಪ್ರಧಾನಿ ನರೇಂದ್ರ ಮೋದಿ ತಿರುವನಂತಪುರದಲ್ಲಿ ಹೇಳಿದ್ದರು. ಇದಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಾಮಾಜಿಕ ಜಾಲತಾಣದಲ್ಲಿ ಸುದೀರ್ಘ ಪೋಸ್ಟ್ ಬರೆದು ತಿರುಗೇಟು ನೀಡಿದ್ದಾರೆ.

ಕೇರಳ ಮತ್ತು ತಮಿಳುನಾಡಿನಂತಹ ರಾಜ್ಯಗಳಲ್ಲಿನ ರಾಜಕೀಯ ಲೆಕ್ಕಾಚಾರಗಳೊಂದಿಗೆ ಈ ಹೇಳಿಕೆ ನೀಡಿದಂತಿದೆ. ವಾಸ್ತವದಲ್ಲಿ, ದಕ್ಷಿಣ ರಾಜ್ಯಗಳ ಲೋಕಸಭಾ ಸ್ಥಾನಗಳ ಸಂಖ್ಯೆ ಹೆಚ್ಚಾಗುತ್ತದೆಯೇ ಎಂಬುದು ವಿಷಯ ಆಗಿರಲಿಲ್ಲ, ಆದರೆ, ಅವು ಹೇಗೆ ಹೆಚ್ಚಾಗುತ್ತವೆ ಮತ್ತು ಯಾವ ರಾಜ್ಯಗಳು ಹೆಚ್ಚು ಪ್ರಯೋಜನ ಪಡೆಯುತ್ತವೆ ಎಂಬುದೇ ವಿಷಯವಾಗಿತ್ತು ಎಂದು ಸ್ಪಷ್ಟಪಡಿಸಿದ್ದಾರೆ.

ಪ್ರಸ್ತಾವಿತ ವಿಸ್ತರಣೆಯ ಅಡಿಯಲ್ಲಿ, ಪ್ರತಿ ರಾಜ್ಯವು ಹೆಚ್ಚಳವನ್ನು ಕಾಣಬಹುದು. ಆದರೆ, ಹೆಚ್ಚಳದ ದರ ಮತ್ತು ಪ್ರಮಾಣವು ಬಿಜೆಪಿ ಪ್ರಾಬಲ್ಯದ ರಾಜ್ಯಗಳಿಗೆ ಸ್ಪಷ್ಟವಾಗಿ ಅನುಕೂಲಕರವಾಗಿದೆ. ಉತ್ತರ ಪ್ರದೇಶವು 80ರಿಂದ 120 ಸ್ಥಾನಗಳಿಗೆ (40 ಹೆಚ್ಚುವರಿ), ಮಹಾರಾಷ್ಟ್ರವು 48ರಿಂದ 72 (24 ಹೆಚ್ಚುವರಿ), ಬಿಹಾರವು 40ರಿಂದ 60 (20 ಹೆಚ್ಚುವರಿ), ಮಧ್ಯಪ್ರದೇಶವು 29ರಿಂದ 4344 (1415 ಹೆಚ್ಚುವರಿ), ರಾಜಸ್ಥಾನವು 25ರಿಂದ 3738 (1213 ಹೆಚ್ಚುವರಿ) ಮತ್ತು ಗುಜರಾತ್ 26ರಿಂದ 39 (13 ಹೆಚ್ಚುವರಿ)ಕ್ಕೇರುವ ನಿರೀಕ್ಷೆಯಿದೆ ಎಂದು ವಿವರಿಸಿದ್ದಾರೆ.

ಲೋಕಸಭೆಯನ್ನು 816 ಸ್ಥಾನಗಳಿಗೆ ವಿಸ್ತರಿಸಿದ ನಂತರವೂ ದಕ್ಷಿಣದ ರಾಜ್ಯಗಳ ಸಾಮೂಹಿಕ ಪಾಲು ಸುಮಾರು ಶೇ.24ರಷ್ಟಿರಲಿದೆ. ಜನಸಂಖ್ಯಾ ನಿಯಂತ್ರಣ ಮತ್ತು ಆಡಳಿತದಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸಿದ ರಾಜ್ಯಗಳನ್ನು ದಂಡಿಸಲಾಗುತ್ತಿದೆ. ರಾಷ್ಟ್ರೀಯ ಬೆಳವಣಿಗೆಯಲ್ಲಿ ಪ್ರಮುಖ ಸ್ಥಾನ ಪಡೆದಿರುವ ಕರ್ನಾಟಕವನ್ನು ಉದ್ದೇಶಪೂರ್ವಕವಾಗಿ ಬದಿಗಿಡುವ ಅಪಾಯಗಳಿವೆ. ದೊಡ್ಡ ರಾಜ್ಯಗಳ ಸಂಖ್ಯಾತ್ಮಕ ಪ್ರಾಬಲ್ಯ ಹೆಚ್ಚುತ್ತಿರುವಾಗ ನಮ್ಮ ಪಾಲು ವೃದ್ಧಿಸದೇ ಇದ್ದರೆ, ಈ ಪುನರ್‌ವಿಂಗಡನೆಯಿಂದ ಕರ್ನಾಟಕಕ್ಕೆ ನಿಖರವಾಗಿ ಏನು ಸಿಗಲಿದೆ? ಎಂದು ಪ್ರಶ್ನೆ ಮಾಡಿದ್ದಾರೆ.

ದಕ್ಷಿಣದ ಜನರ ವಿಶ್ವಾಸವನ್ನು ಗಳಿಸುವಲ್ಲಿ ವಿಫಲವಾದ ಮೋದಿ ಸರ್ಕಾರವು ಈಗ ಕ್ಷೇತ್ರ ಪುನರ್ ರಚನೆಯ ಮೂಲಕ ನಮ್ಮ ಧ್ವನಿ ದುರ್ಬಲಗೊಳಿಸಲು ಪ್ರಯತ್ನಿಸುತ್ತಿದೆ. ಆರ್ಥಿಕ ಮತ್ತು ಜಾಗತಿಕ ಸವಾಲುಗಳ ಸಮಯದಲ್ಲಿ, ಕೇಂದ್ರ ಸರ್ಕಾರವು ರಾಷ್ಟ್ರೀಯ ಆದ್ಯತೆಗಳಿಗಿಂತ ರಾಜಕೀಯ ಲೆಕ್ಕಾಚಾರದ ಮೇಲೆ ಹೆಚ್ಚು ಗಮನಹರಿಸುತ್ತಿದೆ. ಕರ್ನಾಟಕದ ಜನರು ಮತ್ತು ಒಕ್ಕೂಟ ವ್ಯವಸ್ಥೆಯಲ್ಲಿ ನಂಬಿಕೆ ಇಡುವ ಎಲ್ಲರೂ - ನ್ಯಾಯ, ಗೌರವ ಮತ್ತು ಪಾರದರ್ಶಕತೆಗೆ ಅರ್ಹರು. ನಮ್ಮ ಧ್ವನಿಯನ್ನು ದುರ್ಬಲಗೊಳಿಸುವ ಯಾವುದೇ ಪ್ರಯತ್ನವನ್ನು ನಾವು ದೃಢವಾಗಿ ವಿರೋಧಿಸುತ್ತೇವೆ ಎಂದು ಸಿದ್ದರಾಮಯ್ಯ ಸ್ಪಷ್ಟಪಡಿಸಿದ್ದಾರೆ.

ದಕ್ಷಿಣದ ರಾಜ್ಯಗಳಿಗೆ ದೊಡ್ಡ ಲಾಭವಿಲ್ಲ

ದಕ್ಷಿಣದ ರಾಜ್ಯಗಳಿಗೆ ಇಷ್ಟೊಂದು ದೊಡ್ಡ ಪ್ರಮಾಣದ ಪ್ರಯೋಜನವಾಗುತ್ತಿಲ್ಲ. **ಕರ್ನಾಟಕ 28ರಿಂದ 42 (14 ಹೆಚ್ಚುವರಿ), ತಮಿಳುನಾಡು 39ರಿಂದ 5859 (20 ಹೆಚ್ಚುವರಿ), ಆಂಧ್ರಪ್ರದೇಶ 25ರಿಂದ 3738 (1213 ಹೆಚ್ಚುವರಿ), ತೆಲಂಗಾಣ 17ರಿಂದ 25 26 (89 ಹೆಚ್ಚುವರಿ), ಮತ್ತು ಕೇರಳ 20ರಿಂದ 30 (10 ಹೆಚ್ಚುವರಿ)ಕ್ಕೇರಲಿದೆ. ದಕ್ಷಿಣದ ಐದು ರಾಜ್ಯಗಳು ಒಟ್ಟಾಗಿ ಕೇವಲ 6366 ಹೆಚ್ಚುವರಿ ಸ್ಥಾನಗಳನ್ನು ಪಡೆಯುತ್ತಿವೆ. ಆದರೆ, ಬಿಜೆಪಿ ಪ್ರಾಬಲ್ಯದ ಈ ಏಳು ರಾಜ್ಯಗಳು ಮಾತ್ರ ಸುಮಾರು 128131 ಸ್ಥಾನಗಳನ್ನು ಗಳಿಸುತ್ತಿವೆ ಎಂದು ಸಿದ್ದರಾಮಯ್ಯ ತಿಳಿಸಿದ್ದಾರೆ.**

ಅಮೆರಿಕಕ್ಕೆ ಭಾರೀ ಹಿನ್ನಡೆ

ಪುಟ ೧ ➜ ಇರಾನ್ ಮಾಧ್ಯಮಗಳ ಪ್ರಕಾರ, ಇಸ್ಫಹಾನ್ ದಕ್ಷಿಣ ಭಾಗದಲ್ಲಿ ಶೋಧ ಕಾರ್ಯಾಚರಣೆ ನಡೆಸುತ್ತಿದ್ದ ಅಮೆರಿಕದ ಸಿ-130 ಸಾರಿಗೆ ವಿಮಾನವನ್ನು ಇರಾನ್‌ನ ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್ (ಐಆರ್‌ಜಿಸಿ) ಪಡೆಗಳು ಹೊಡೆದುರುಳಿಸಿವೆ. ಈ ಕಾರ್ಯಾಚರಣೆಯಲ್ಲಿ ಇರಾನ್‌ನ ವಿಶೇಷ ಕಮಾಂಡೋ ಘಟಕ ಭಾಗವಹಿಸಿದ್ದಾಗಿ ತಿಳಿಸಲಾಗಿದೆ.

ಸಿ-130 ವಿಮಾನವು ಸಾಮಾನ್ಯವಾಗಿ ಇತರ ಯುದ್ಧ ವಿಮಾನಗಳಿಗೆ ಇಂಧನ ತುಂಬಿಸುವುದು ಮತ್ತು ಸೈನಿಕ ಸಾಮಗ್ರಿಗಳನ್ನು ಸಾಗಿಸುವ ಕೆಲಸ ಮಾಡುತ್ತದೆ. ಈ ವಿಮಾನದಲ್ಲಿ ಇದ್ದ ಸಿಬ್ಬಂದಿ ಬಗ್ಗೆ ಇನ್ನೂ ಸ್ಪಷ್ಟ ಮಾಹಿತಿ ಲಭ್ಯವಾಗಿಲ್ಲ. ಆದರೆ ಇರಾನ್ ಮೂಲಗಳ ಪ್ರಕಾರ, ಈ ದಾಳಿಯಲ್ಲಿ ಕನಿಷ್ಠ ಐದು ಅಮೆರಿಕದ ಸೈನಿಕರು ಮೃತಪಟ್ಟಿದ್ದಾರೆ. ಜತೆಗೆ, ಎರಡು ಬ್ಲ್ಯಾಕ್ ಹಾಕ್ ಹೆಲಿಕಾಪ್ಟರ್‌ಗಳನ್ನೂ ಹೊಡೆದುರುಳಿಸಲಾಗಿದೆ ಎಂಬ ಮಾಹಿತಿ ಕೂಡ ಹೊರಬಂದಿದೆ. ಆದರೆ ಈ ಎಲ್ಲ ಹೇಳಿಕೆಗಳಿಗೆ ಅಮೆರಿಕದಿಂದ ಇನ್ನೂ ಅಧಿಕೃತ ಪ್ರತಿಕ್ರಿಯೆ ಬಂದಿಲ್ಲ.

ಈ ಮಧ್ಯೆ, ಹಾರ್ಮುಜ್ ಜಲಸಂಧಿ ತೆರೆಯಲು ವಿಳಂಬ ಮಾಡಿದರೆ, ಇರಾನ್ ಮೂಲಸೌಕರ್ಯಗಳ ಮೇಲೆ ದಾಳಿ ನಡೆಸುವುದಾಗಿ ಟ್ರಂಪ್ ಬೆದರಿಕೆ ಹಾಕಿದ್ದಾರೆ. ಈ ಎಲ್ಲಾ ಘಟನೆಗಳು ಮಧ್ಯಪ್ರಾಚ್ಯ ಪ್ರದೇಶದಲ್ಲಿ ಉದ್ವಿಗ್ನತೆಯನ್ನು ಮತ್ತಷ್ಟು ಹೆಚ್ಚಿಸುತ್ತಿದ್ದು, ಜಾಗತಿಕ ಶಾಂತಿ ಮತ್ತು ಭದ್ರತೆಗೆ ಸವಾಲು ಎದುರಾಗುವ ಸಾಧ್ಯತೆಯಿದೆ. ಇಂತಹ ಪರಿಸ್ಥಿತಿಯಲ್ಲಿ, ಎರಡೂ ರಾಷ್ಟ್ರಗಳು ಶಾಂತಿಯುತ ಮಾತುಕತೆಗಳ ಮೂಲಕ ಸಮಸ್ಯೆ ಪರಿಹರಿಸುವತ್ತ ಗಮನಹರಿಸಬೇಕೆಂಬ ಅಭಿಪ್ರಾಯಗಳು ಜಾಗತಿಕ ಮಟ್ಟದಲ್ಲಿ ವ್ಯಕ್ತವಾಗುತ್ತಿವೆ.

ಒಟ್ಟಿನಲ್ಲಿ, ಈ ಬೆಳವಣಿಗೆಗಳು ಕೇವಲ ಎರಡು ರಾಷ್ಟ್ರಗಳ ನಡುವಿನ ಸಂಘರ್ಷವಲ್ಲದೆ, ವಿಶ್ವದ ರಾಜಕೀಯ ಮತ್ತು ಆರ್ಥಿಕ ಸ್ಥಿತಿಗತಿಗಳ ಮೇಲೆಯೂ ಪರಿಣಾಮ ಬೀರುವ ಸಾಧ್ಯತೆಯಿದೆ. ಮುಂದಿನ ದಿನಗಳಲ್ಲಿ ಈ ಸಂಘರ್ಷ ಯಾವ ದಿಕ್ಕಿನಲ್ಲಿ ಸಾಗುತ್ತದೆ ಎಂಬುದು ಎಲ್ಲರ ಗಮನ ಸೆಳೆಯುತ್ತಿದೆ.

ಅನುಕಂಪದಿಂದ ಕಾಂಗ್ರೆಸ್ ಟಿಕೆಟ್: ಪಾಟೀಲ್

•**ದಾವಣಗೆರೆ:** ರಾಷ್ಟ್ರಮಟ್ಟದಲ್ಲಿ ದಾವಣಗೆರೆಯನ್ನು ಗುರುತಿಸುವಂತಾಗಲು ದಿ. ಶಾಮನೂರು ಶಿವಶಂಕರಪ್ಪ ಕಾರಣ ಎಂದು ಸಚಿವ ಎಂ.ಬಿ.ಪಾಟೀಲ್ ಮನವಿ ಮಾಡಿದರು. ನಗರದಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿ, ದಾವಣಗೆರೆ ದಕ್ಷಿಣ ಮತ್ತು ಬಾಗಲಕೋಟೆಯಲ್ಲಿ ಹಾಲಿ ಶಾಸಕರಾಗಿದ್ದವರು ಮೃತರಾದ ಹಿನ್ನೆಲೆಯಲ್ಲಿ ಉಭಯ ಕುಟುಂಬದ ಸಮರ್ಥ ಶಾಮನೂರು ಹಾಗೂ ಉಮೇಶ ಮೇಟಿಗೆ ಕಾಂಗ್ರೆಸ್ ಟಿಕೆಟ್ ನೀಡಿದೆ ಎಂದು ಸಚಿವ ಎಂ.ಬಿ. ಪಾಟೀಲ್ ತಿಳಿಸಿದರು.

ದೇಶದ ಪ್ರಗತಿಗೆ ಬಾಬೂಜಿ ಕೊಡುಗೆ



ಪುಟ ೧ ➜ ಜಗಜೀವನರಾಂ ಅವರು ಭಾರತ ದೇಶದ ಸಂವಿಧಾನದ ಎಲ್ಲಾ ಹುದ್ದೆಗಳನ್ನು ಅಲಂಕರಿಸಬಹುದಿತ್ತು. ಅತ್ಯಂತ ಯಶಸ್ವಿ ರಾಜಕೀಯ ಮುತ್ಸದ್ದಿ ಬಾಬೂಜಿ, ದೇಶದ ಅಭಿವೃದ್ಧಿ ಮತ್ತು ದಲಿತರ ಹಕ್ಕುಗಳಿಗೆ ಕಾನುನಾತ್ಮಕ ನಿಲುವುಗಳನ್ನು ತಮ್ಮ ಅಧಿಕಾರದಲ್ಲಿ ಬಳಸಿ ಪರಿಹಾರ ಕಂಡುಕೊಂಡರು ಎಂದು ಹೇಳಿದರು.

ಹಸಿರು ಕ್ರಾಂತಿ, ಕಾರ್ಮಿಕ ಕಾಯ್ದೆ, ಬ್ಯಾಕ್‌ಲಾಗ್ ಹುದ್ದೆಗಳ ಭರ್ತಿ ಸೇರಿದಂತೆ ಅನೇಕ ವಿಷಯಗಳು ಬಾಬೂಜಿ ಅವರಲ್ಲಿ ಅಡಕವಾಗಿವೆ. ಇಂತಹವರು ಸಮಾಜದ ಹೆಮ್ಮೆ. ಅವರನ್ನು ಬೇರೆ ಬೇರೆ ಗುಂಪು ಮಾಡಿದರೆ ನಾವೇ ಛಿದ್ರರಾಗುತ್ತೇವೆ. ಯಾಕೆಂದರೆ ಇದು ಶ್ರೇಣಿಕೃತ ವ್ಯವಸ್ಥೆ ನಿರ್ಮಾಣದ ದೇಶ, ವರ್ಣಾಶ್ರಮ ಇನ್ನೂ ಜೀವಂತವಾಗಿದೆ ಎಂದು ಕಳವಳ ವ್ಯಕ್ತಪಡಿಸಿದರು.

ಸೈದ್ಧಾಂತಿಕ ನಿಲುವಿಗೆ ಬದ್ಧ: ನಮ್ಮಲ್ಲಿ ಒಡಕು ಇಲ್ಲ, ಭಿನ್ನಾಭಿಪ್ರಾಯ ಇಲ್ಲ. ಕಾಂಗ್ರೆಸ್ ಸರ್ಕಾರ, ಸಿದ್ದರಾಮಯ್ಯ ಅವರ ನೇತೃತ್ವದಲ್ಲಿ ದಲಿತರ ಹಕ್ಕುಗಳನ್ನು ಸಂವಿಧಾನಾತ್ಮಕವಾಗಿ ರಕ್ಷಣೆ ಮಾಡಲು ಬದ್ಧವಾಗಿದೆ. ಯಾವುದೇ ಒಂದು ನಿರ್ಧಾರದಿಂದ ಸಂಘಟನೆಗಳ ಮನಸ್ಸು ಬೇರೆ ಕಡೆ ತಿರುಗದಂತೆ ಎಚ್ಚರಿಕೆ ವಹಿಸಬೇಕು. ಯಾರ ಬಗ್ಗೆಯೂ ತಲೆಕೆಡಿಸಿಕೊಳ್ಳುವುದಿಲ್ಲ. ಸೈದ್ಧಾಂತಿಕ ನಿಲುವಿಗೆ ಬದ್ಧರಾಗಿದ್ದೇವೆ. ಸಂಪುಟ ಸಭೆಯ ನಿರ್ಧಾರದಂತೆ ಎಲ್ಲಾ ಸಮುದಾಯಗಳಿಗೆ ನ್ಯಾಯ ಕೊಡಲಾಗುವುದು. ಅನಾವಶ್ಯಕ ಮಾತು, ಗುಂಪು ಘರ್ಷಣೆ ಅವಶ್ಯಕತೆ ಇಲ್ಲ ಎಂದು ಡಾ.ಮಹದೇವಪ್ಪ ಹೇಳಿದರು.

ಪ್ರಶಸ್ತಿ ಪ್ರದಾನ
ಚಂದ್ರಮ್ಮ, ಡಿಂಗ್ರಿ ನರಸಪ್ಪ, ಡಾ. ಸರಜೂ ಕಾಟ್ಕರ್, ನಾರಾಯಣ ಮತ್ತು ನರಸೀಯಪ್ಪ ಅವರಿಗೆ ಡಾ. ಬಾಬು ಜಗಜೀವನರಾಂ ಪ್ರಶಸ್ತಿ ನೀಡಿ ಗೌರವಿಸಲಾಯಿತು.

> **ರಾಜ್ಯದ ಜನತೆಗೆ 5 ಗ್ಯಾರಂಟಿ ಕೊಟ್ಟಿದ್ದೇವೆ. ಈ ಯೋಜನೆಗಳು ಜನರಿಗೆ ಕಷ್ಟದ ಸಮಯದಲ್ಲಿ ಒಂದಲ್ಲ ಒಂದು ರೀತಿ ಸಹಾಯವಾಗುತ್ತಿವೆ. ನಾವೆಲ್ಲ ಒಗ್ಗಟ್ಟಾಗಿದ್ದೇವೆ. ಉಪಚುನಾವಣೆ ನಂತರ ಒಳಮೀಸಲಾತಿ ನೀಡುತ್ತೇವೆ.**
> ■ **ಕೆ.ಎಚ್. ಮುನಿಯಪ್ಪ**, ಆಹಾರ ಸಚಿವ

ಹೈದರಾಬಾದ್‌ನಲ್ಲೂ ಲವ್ ಜಿಹಾದ್

ಪುಟ ೧ ➜ ಈ ಘಟನೆಯ ವಿಡಿಯೋ ಮತ್ತು ಫೋಟೋಗಳನ್ನು ತೆಗೆದು ಮದುವೆಗೆ ಬಲವಂತಪಡಿಸಿದ್ದಾನೆ ಎಂದು ಮಹಿಳೆ ಹೇಳಿದ್ದಾರೆ. ಮದುವೆಯ ಬಳಿಕ ಆಕೆಯ ಹೆಸರನ್ನು ನಜೀರಾ ಎಂದು ಹೆಸರು ಬದಲಾಯಿಸಿ, ಮತಾಂತರಗೊಳಿಸಿ, ಮಾಂಸಾಹಾರ ಸೇವಿಸಲು ಬಲವಂತ ಮಾಡಿದ್ದಾರೆ ಎನ್ನಲಾಗಿದೆ. ಜತೆಗೆ, ಶಾರೀರಿಕ ಮತ್ತು ಮಾನಸಿಕ ಹಿಂಸೆ ನೀಡುತ್ತಾ, ಸುಮಾರು 25ರಿಂದ 30 ಲಕ್ಷ ರೂಪಾಯಿ ಹಣವನ್ನು ವಂಚನೆ ಮೂಲಕ ಪಡೆದುಕೊಂಡಿದ್ದಾನೆ ಎಂದು ಆರೋಪಿಸಿದ್ದಾರೆ.

ಅಲ್ಲದೆ, ಆಕೆಯ ಹೆಸರಿನಲ್ಲಿ ಸಾಲ ಪಡೆದು ಜಮೀನು ಮಾರಾಟ ಮಾಡಿದ್ದಾನೆ. ಗರ್ಭಿಣಿಯಾಗಿದ್ದಾಗ ಬಲವಂತವಾಗಿ ಗರ್ಭಪಾತ ಮಾಡಿಸಿದ್ದಾಗಿಯೂ ಆರೋಪಿಸಲಾಗಿದೆ. ಈ ಪ್ರಕರಣದಲ್ಲಿ ಪತಿ ಹಾಗೂ ಅವರ ಕುಟುಂಬದ ಹಲವರ ವಿರುದ್ಧ ಮಹಿಳೆ ದೂರು ನೀಡಿದ್ದಾರೆ. ಆದಾಗ್ಯೂ, ಪೊಲೀಸ್ ಇಲಾಖೆಯಿಂದ ಸಮರ್ಪಕ ಕ್ರಮ ಕೈಗೊಳ್ಳಲಾಗಿಲ್ಲ ಎಂದು ಆಕೆ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಪ್ರಕರಣದ ತನಿಖೆ ಮುಂದುವರಿದಿದೆ.

ಗುರುತು ಮುಚ್ಚಿಟ್ಟು ಪ್ರೇಮದ ಹೆಸರಲ್ಲಿ ಮೋಸ

ಪುಟ ೧ ➜ ಪೊಲೀಸ್ ಮಾಹಿತಿಯ ಪ್ರಕಾರ, ಸಮೀರ್ ಖಾನ್ ಎಂಬಾತ ತನ್ನನ್ನು ರವಿ ಠಾಕೂರ್ ಎಂದು ಪರಿಚಯಿಸಿಕೊಂಡು ಯುವತಿಯೊಂದಿಗೆ ಸ್ನೇಹ ಬೆಳೆಸಿಕೊಂಡಿದ್ದ. ದೀರ್ಘಕಾಲ ತನ್ನ ನಿಜಸ್ವರೂಪವನ್ನು ಮರೆಮಾಚಿ, ಅವಳ ವಿಶ್ವಾಸ ಗಳಿಸಿ ಪ್ರೇಮ ಸಂಬಂಧ ಮುಂದುವರಿಸಿದ್ದಾನೆ ಎನ್ನಲಾಗಿದೆ. ನಂತರ ಯುವತಿಗೆ ಆತನ ನಿಜವಾದ ಗುರುತು ತಿಳಿದಾಗ ಆಕೆ ಆತಂಕಗೊಮಡಿದ್ದು, ಸತ್ಯ ಬಹಿರಂಗವಾದ ನಂತರ ಆಕೆ ದೂರವಾಗಲು ಪ್ರಯತ್ನಿಸಿದಾಗ, ಆರೋಪಿ ಬೆದರಿಕೆ ಹಾಕಲು ಆರಂಭಿಸಿದ್ದಾನೆ. ಖಾಸಗಿ ವಿಡಿಯೋಗಳನ್ನು ಇಂಟರ್‌ನೆಟ್‌ನಲ್ಲಿ ಹರಡುವುದಾಗಿ ಬೆದರಿಕೆ ಹಾಕಿದ್ದು, ಆಕೆಯ ಮೇಲೆ ಹಲ್ಲೆ ಮಾಡಿದ್ದಾನೆ ಎಂಬ ಆರೋಪವೂ ಕೇಳಿಬಂದಿದೆ. ಈ ಕುರಿತು ಯುವತಿ ದೂರು ನೀಡಿದ ನಂತರ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ತನಿಖೆ ಆರಂಭಿಸಿದ್ದಾರೆ. ಘಟನೆ ಸ್ಥಳೀಯವಾಗಿ ಆತಂಕ ಮೂಡಿಸಿದ್ದು, ಆರೋಪಿಯ ವಿರುದ್ಧ ಕಠಿಣ ಕ್ರಮಕ್ಕೆ ಒತ್ತಾಯಗಳು ಕೇಳಿಬರುತ್ತಿವೆ.

ದಕ್ಷಿಣ ರಾಜ್ಯಗಳು ಲೋಕಸಭೆ ಕ್ಷೇತ್ರ ಕಳೆದುಕೊಳ್ಳಲ್ಲ

ಪುಟ ೧ ➜ ದೇಶದಾದ್ಯಂತ ಎಲ್ಲ ರಾಜ್ಯಗಳಿಗೂ ಸಮತೋಲನವಾಗುವಂತೆ ಲೋಕಸಭಾ ಕ್ಷೇತ್ರಗಳ ಸಂಖ್ಯೆಯನ್ನು ಹೆಚ್ಚಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತದೆ ಎಂದು ದಕ್ಷಿಣ ಭಾರತದ ರಾಜ್ಯಗಳಿಗೆ ಭರವಸೆ ನೀಡಿದರು. ಲೋಕಸಭಾ ಕ್ಷೇತ್ರಗಳ ಪುನರ್ವಿಂಗಡಣೆ ನಂತರ ದಕ್ಷಿಣ ರಾಜ್ಯಗಳಿಗೆ ಅನ್ಯಾಯವಾಗಬಹುದು ಎಂಬ ಆತಂಕ ಇತ್ತೀಚೆಗೆ ಹೆಚ್ಚಾಗಿದೆ. ಜನಸಂಖ್ಯೆ ನಿಯಂತ್ರಣದಲ್ಲಿ ಯಶಸ್ವಿಯಾದ ಕಾರಣದಿಂದಾಗಿ ಈ ರಾಜ್ಯಗಳ ಕ್ಷೇತ್ರಗಳು ಕಡಿಮೆಯಾಗಬಹುದು ಎಂಬ ಭೀತಿ ವ್ಯಕ್ತವಾಗಿತ್ತು. ಇದೇ ಹಿನ್ನೆಲೆಯಲ್ಲಿಯೇ ಮೋದಿ ಅವರ ಸ್ಪಷ್ಟನೆ ಗಮನಾರ್ಹವಾಗಿದೆ.

ದಕ್ಷಿಣ ರಾಜ್ಯಗಳ ವಿರುದ್ಧ ತಪ್ಪು ಮಾಹಿತಿ ಹರಡಲಾಗುತ್ತಿದೆ. ಜನಸಂಖ್ಯೆ ನಿಯಂತ್ರಿಸಿದ ಕಾರಣಕ್ಕೆ ಯಾವುದೇ ರಾಜ್ಯಕ್ಕೂ ಶಿಕ್ಷೆಯಂತಾಗುವ ನಿರ್ಧಾರ ಕೈಗೊಳ್ಳುವುದಿಲ್ಲ, ಬದಲಾಗಿ, ಅವರ ಹಕ್ಕುಗಳನ್ನು ರಕ್ಷಿಸಲು ಸಂಸತ್ತಿನಲ್ಲಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು. ಕೇರಳ, ಕರ್ನಾಟಕ, ಆಂಧ್ರಪ್ರದೇಶ, ಗೋವಾ, ತೆಲಂಗಾಣ, ತ.ನಾಡು ರಾಜ್ಯಗಳನ್ನು ಉಲ್ಲೇಖಿಸಿದ ಅವರು, ಈ ರಾಜ್ಯಗಳು ಜನಸಂಖ್ಯೆ ನಿಯಂತ್ರಣದಲ್ಲಿ ಉತ್ತಮ ಸಾಧನೆ ಮಾಡಿವೆ ಎಂದರು.

ದಶಕಗಳ ಹೋರಾಟಕ್ಕೆ ಸಿಕ್ಕಿಲ್ಲ ಮುಕ್ತಿ | ಜೀವಜಲಕ್ಕೆ ಇನ್ನೆಷ್ಟು ಕಾಯಬೇಕು?

ಮಹದಾಯಿ ಮುಗಿಯದ ಕಥೆ!

▸ ಮಹಾಂತೇಶ ಕಣವಿ

ದಿಗಂತ ವಿಶೇಷ

•**ಧಾರವಾಡ:** ಉತ್ತರ ಕರ್ನಾಟಕದ ಜನರ ಜೀವನಾಡಿ ಮಹಾದಾಯಿ, ಕಳಸಾ-ಬಂಡೂರಿ ಯೋಜನೆ ದಶಕಗಳು ಕಳೆದರೂ, ಅನುಷ್ಠಾನದ ಹಂತದಲ್ಲಿ ಇನ್ನೂ ಹಲವು ಅಡೆತಡೆ ಎದುರಿಸುತ್ತಲೇ ಇದೆ. ಕುಡಿಯುವ ನೀರಿನ ಈ ಹೋರಾಟ ತಾರ್ಕಿಕ ಅಂತ್ಯಕ್ಕೆ ಬರುವ ಲಕ್ಷಣ ಕಾಣಿಸುತ್ತಿದ್ದರೂ, ತಾಂತ್ರಿಕ ಮತ್ತು ಕಾನೂನು ಸಂಘರ್ಷಗಳು ಕಾಮಗಾರಿಗೆ ಬ್ರೇಕ್ ಹಾಕುತ್ತಿವೆ.

ಕೇಂದ್ರ ಜಲ ಆಯೋಗವು ಕಳೆದೊಂದು ವರ್ಷದ ಹಿಂದೆಯೇ ಕಳಸಾ- ಬಂಡೂರಿ ನಾಲಾ ತಿರುವು ಯೋಜನೆಯ ಪರಿಷ್ಕೃತ ವಿವರವಾದ ಯೋಜನಾ ವರದಿಗೆ ಒಪ್ಪಿಗೆ ನೀಡಿದೆ. ಆದರೆ, ಈ ಯೋಜನೆ ಪೂರ್ಣ ಪ್ರಮಾಣದಲ್ಲಿ ಆರಂಭದಲ್ಲಿ ಉಂಟಾದ ಅಡೆತಡೆ ಈ ಭಾಗದ ಜನರಲ್ಲಿ ನಿರಾಸೆಯ ಕಾರ್ಮೋಡ ಕವಿಸಿದೆ.



ಪರಿಸರ-ಅರಣ್ಯ ಇಲಾಖೆ ಅನುಮತಿ: ಪ್ರಸ್ತುತ ಮಹದಾಯಿ ಯೋಜನೆ ಅಭಯಾರಣ್ಯದ ವ್ಯಾಪ್ತಿಯಲ್ಲಿ ಬರುವುದರಿಂದ ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯದಿಂದ ಅಂತಿಮ ಹಸಿರು ನಿಶಾನೆ ಸಿಗಬೇಕಿದೆ. ಈ ಕೆಲಸ ಪ್ರಕ್ರಿಯೆಯಲ್ಲಿದೆಂಬ ಮಾತು ಇದ್ದರೂ, ಈ ವಿಷಯದಲ್ಲಿ ಈ ಭಾಗದ ರಾಜಕೀಯ ಇಚ್ಛಾಶಕ್ತಿ ಕೊರತೆಯೂ ಎದ್ದುಕಾಣುತ್ತಿದೆ.

ನ್ಯಾಯಾಲಯದ ಸಂಘರ್ಷ: ಮಹದಾಯಿ ವಿಷಯದಲ್ಲಿ ನ್ಯಾಯಾಲಯದ ಸಂಘರ್ಷವೂ ಮುಗಿಯುವ ಲಕ್ಷಣ ಕಾಣುತ್ತಿಲ್ಲ. ಈ ಯೋಜನೆಯಿಂದ ಪರಿಸರಕ್ಕೆ ಹಾನಿಯಾಗುತ್ತದೆ ಎಂದು ಗೋವಾ ಸರ್ಕಾರವು ಸುಪ್ರೀಂಕೋರ್ಟ್‌ನಲ್ಲಿ ವಾದಿಸುತ್ತಿದೆ. ಕರ್ನಾಟಕ ಮತ್ತು ಗೋವಾ ನಡುವಿನ ಈ ಕಾನೂನು ಹೋರಾಟವು ಯೋಜನೆಯ ವೇಗಕ್ಕೆ ಅಡ್ಡಿಯಾಗಿದೆ.

ವನ್ಯಜೀವಿ ಮಂಡಳಿ ಅನುಮತಿ: ಕಳಸಾ-ಬಂಡೂರಿ ನಾಲಾ ಪ್ರದೇಶ ಮಲಪ್ರಭಾ ನದಿಯ ಜಲಾನಯನ ಪ್ರದೇಶಕ್ಕೆ ಸೇರಿದ ಹಿನ್ನಲೆ ವನ್ಯ ಜೀವಿಗಳ ಸಂರಕ್ಷಣಾ ನಿಯಮಗಳ ಅಡಿಯಲ್ಲಿ ಅನುಮತಿ ಪಡೆಯುವುದು ಕಡ್ಡಾಯವಾಗಿದೆ. ಈ ವಿಷಯ ಮುಂದಿಟ್ಟ ಗೋವಾ, ಕಾನೂನು ಹೋರಾಟ ಮಾಡುತ್ತಿದೆ. ಇದೇ ಕಾರಣಕ್ಕೆ ಕರ್ನಾಟಕದ ಪಾಲಿಗೆ ಈ ಯೋಜನೆ ವರದನಾಗುತ್ತಿಲ್ಲ.

> **ಮಹದಾಯಿ, ಕಳಸಾ-ಬಂಡೂರಿ ಯೋಜನೆ ವಿಳಂಬಕ್ಕೆ ಈ ಭಾಗದ ಸಂಸದರೇ ಕಾರಣ. ಹೀಗಾಗಿ ಧಾರವಾಡ, ಬೆಳಗಾವಿ, ಗದಗ ಮತ್ತು ಬಾಗಲಕೋಟೆ ಜಿಲ್ಲೆಯ ಸಂಸದರು ಕೇಂದ್ರ ಸರ್ಕಾರದ ಮೇಲೆ ಒತ್ತಡ ಹಾಕಿ ವನ್ಯಜೀವಿ ಮಂಡಿಯಿಂದ ಕ್ಲಿರೆಯನ್ಸ್ ಕೊಡಿಸಿ, ಯೋಜನೆ ಆರಂಭಿಸಬೇಕು.**
> ■ **ವೀರೇಶ ಸೊಬರದಮಠ**, ಅಧ್ಯಕ್ಷರು ಕರ್ನಾಟಕ ರೈತ ಸಂಘ ಹಸಿರು ಸೇನಾ

ವಿಳಂಬಕ್ಕೆ ಪ್ರಮುಖ ಕಾರಣಗಳೇನು?

ಗೋವಾ ಸರ್ಕಾರದ ತಗಾದೆ: ಮಹದಾಯಿ ನದಿ ನೀರು ಹಂಚಿಕೆಯ ಕುರಿತು ನ್ಯಾಯಾಧೀಕರಣವು ಈಗಾಗಲೇ ತೀರ್ಪು ನೀಡಿದ್ದರೂ, ಗೋವಾ ಸರ್ಕಾರ ಮೇಲಿಂದ ಮೇಲೆ ತಾಂತ್ರಿಕ ಕಾರಣಗಳನ್ನು ಮುಂದಿಟ್ಟು ಆಕ್ಷೇಪಣೆ ಎತ್ತುತ್ತಿದೆ.

ಕೇಂದ್ರದ ನಿರ್ಧಾರದಲ್ಲಿ ವಿಳಂಬ: ಡಿಪಿಆರ್ ಅನುಮೋದನೆ ಸಿಕ್ಕರೂ, ವನ್ಯಜೀವಿ ಮತ್ತು ಪರಿಸರ ಇಲಾಖೆಯ ಅಂತಿಮ ಕ್ಲಿಯರೆನ್ಸ್ ನೀಡುವಲ್ಲಿ ಕೇಂದ್ರದ ಮೇಲೆ ಒತ್ತಡ ಹೇರುವಲ್ಲಿ ರಾಜಕೀಯ ಇಚ್ಛಾಶಕ್ತಿಯ ಕೊರತೆ ಎದ್ದುಕಾಣುತ್ತಿದೆ ಎಂಬುದು ಹೋರಾಟಗಾರರ ವಾದ.

ಅಂತಾರಾಜ್ಯ ಜಲ ವಿವಾದ: ನದಿ ತಿರುವು ಮಾಡುವುದರಿಂದ ಕೆಳಭಾಗದ ಗೋವಾಕ್ಕೆ ನೀರಿನ ಹರಿವು ಕಡಿಮೆಯಾಗುತ್ತದೆ ಎಂಬ ಆತಂಕವನ್ನು ಅಲ್ಲಿನ ಪರಿಸರವಾದಿಗಳು ವ್ಯಕ್ತಪಡಿಸುತ್ತಿದ್ದಾರೆ.

ಮುಂದಿನ ಹಾದಿ ಏನು: ಕರ್ನಾಟಕ ಸರ್ಕಾರವು ಈಗಾಗಲೇ ಟೆಂಡರ್ ಪ್ರಕ್ರಿಯೆಗಳಿಗೆ ಪ್ರಾಥಮಿಕ ಸಿದ್ಧತೆ ಮಾಡಿಕೊಂಡಿದೆ. ಆದರೆ, ಅರಣ್ಯ ಭೂಮಿ ಬಳಕೆಗೆ ಅನುಮತಿ ಸಿಕ್ಕರೆ ಮಾತ್ರ ಜೆಸಿಬಿಗಳು ಮಣ್ಣಿಗೆ ಇಳಿಯಲು ಸಾಧ್ಯ. ಹುಬ್ಬಳ್ಳಿ-ಧಾರವಾಡ, ಬೆಳಗಾವಿ ಗದಗ ಮತ್ತು ಬಾಗಲಕೋಟೆ ಜಿಲ್ಲೆಗಳ ಜನರಿಗೆ ಕುಡಿಯುವ ನೀರು ಪೂರೈಸುವ ಈ ಕನಸು ನನಸಾಗಲು ಕೇಂದ್ರದ ಅಂತಿಮ ಅನುಮತಿ ಹಾಗೂ ಸುಪ್ರೀಂ ಕೋರ್ಟ್‌ನಲ್ಲಿ ಕರ್ನಾಟಕದ ಪರವಾದ ಬಲವಾದ ವಾದದ ಅಗತ್ಯವಿದೆ. ರೈತರು ಮತ್ತು ಸಂಘಟನೆಗಳ ನಿರಂತರ ಪ್ರತಿಭಟನೆಯ ಫಲವಾಗಿ ಯೋಜನೆಗೆ ಒಂದಿಷ್ಟು ಚಾಲನೆ ಸಿಕ್ಕಿದ್ದರೂ, ಕಾಮಗಾರಿ ಪೂರ್ಣಗೊಂಡು ನೀರು ಹರಿಯಲು ಇನ್ನೂ ಕಾನೂನು ಮತ್ತು ಪರಿಸರ ಇಲಾಖೆಯ ಸಂಕೀರ್ಣ ಹಾದಿಗಳನ್ನು ದಾಟಬೇಕಿದೆ.

ಶರಣೆ ಅಕ್ಕಮಹಾದೇವಿ ಜಯಂತಿ | ಡಾ.ವಿಜಯಲಕ್ಷ್ಮೀ ಬಾಳೇಕುಂದ್ರಿ, ಸಲಹೆ

ಬಿಟ್ಟಿ ಭಾಗ್ಯಗಳ ಬೆನ್ನ ಬೀಳಬೇಡಿ

ಧಾರವಾಡ: ಮಹಿಳೆಯರು ಬಿಟ್ಟಿಭಾಗ್ಯಗಳ ಬೆನ್ನು ಬೀಳದೆ ಕಾಯಕ, ದಾಸೋಹ ತತ್ವದಿಂದ ಸ್ವಾವಲಂಬಿಯಾಗಿಬದುಕುಸಾಗಿಸಬೇಕು.ಸಮಾಜದಲ್ಲಿ ಸ್ಥಾನಮಾನ ಪಡೆಯಲು ಪ್ರಯತ್ನಿಸಬೇಕು ಎಂದು ಸಾಹಿತಿ ಡಾ. ವಿಜಯಲಕ್ಷ್ಮೀ ಬಾಳೇಕುಂದ್ರಿ ಹೇಳಿದರು.

ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಜಿಲ್ಲಾಘಟಕದಿಂದಇಲ್ಲಿನ ಚನ್ನಬಸವೇಶ್ವರ ನಗರದ ಲಿಂಗಾಯತ ಭವನದಲ್ಲಿ ಭಾನುವಾರ ನಡೆದ ಶರಣೆ ಅಕ್ಕಮಹಾದೇವಿ ಜಯಂತಿ, ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಉದ್ಘಾಟಿಸಿ ಮಾತನಾಡಿದರು.

12ನೇ ಶತಮಾನದ ಪೂರ್ವದಲ್ಲಿ ನಾಲ್ಕು ಗೋಡೆಗಳ ಮಧ್ಯೆದಲ್ಲಿ ಬದುಕುತ್ತಿದ್ದ ಮಹಿಳೆಯರನ್ನು ಪುರುಷ ಪ್ರಧಾನ ಸಮಾಜದಿಂದ ಮುಕ್ತಗೊಳಿಸಿ, ಸಮಾನತೆ ಹಕ್ಕು ದೊರಕುವಂತೆ ಮಾಡಿದ ಕೀರ್ತಿ ಶರಣೆ ಅಕ್ಕಮಹಾದೇವಿಗೆ ಸಲ್ಲುವುದಾಗಿ ಹೇಳಿದರು.

ಅಕ್ಕನನ್ನು ನಿತ್ಯ ನೆನೆಯಬೇಕು. ಅವರು ಕೊಟ್ಟ ಸಂಸ್ಕಾರ, ಸಂಸ್ಕೃತಿ, ಅತ್ಯುತ್ತಮ ಚಿಂತನೆ ಮೈಗೂಡಿಸಿಕೊಳ್ಳಬೇಕು. ಬಿಟ್ಟಿ ಭಾಗ್ಯಗಳನ್ನು ಪಡೆಯುವ ಬದಲಾಗಿ ಅಕ್ಕನ ಕಾಯಕ, ದಾಸೋಹ, ಪ್ರಾಮಾಣಿಕ ನಡೆನುಡಿ ಅಳವಡಿಸಿಕೊಳ್ಳಲು ಸಲಹೆ ನೀಡಿದರು.

ನಮ್ಮ ಯುವತಿಯರ ಅಸಭ್ಯ ವರ್ತನೆಗಳು ಹೆಚ್ಚಿವೆ. ಅವರ ಉಡುಗೆ-ತೊಡುಗೆ ನಮ್ಮ ಸಂಸ್ಕೃತಿ, ಪರಂಪರೆ ಹಾಳು ಮಾಡುತ್ತಿವೆ. ಹೀಗಾಗಿ ಮಕ್ಕಳಿಗೆ ವಿಭೂತಿ, ರುದ್ರಾಕ್ಷಿ, ಇಷ್ಟಲಿಂಗ ಪೂಜೆ, ಪಾರಂಪರಿಕ ಉಡುಗೆಗಳ ಅರಿವು ಮೂಡಿಸುವಂತೆ ಹೇಳಿದರು.



> **ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ವೇಶಾವಾಟಿಕೆ ಮಾಡುವವರಿಗೆ ಮೇಡಂ ಎನ್ನುತ್ತಾರೆ. ಈ ಶಬ್ಧ ಇಲ್ಲಿಯೂ ಬಳಸುವುದು ಸೂಕ್ತವಲ್ಲ, ಮೇಡಂ ಅಂದರೆ ನರಕ, ಅಕ್ಕ ಅಂದರೆ ಸ್ವರ್ಗ' ಎಂದು ಭಾವಿಸಿ ಶಬ್ಧಗಳು ಬಳಸಬೇಕು. ಇಷ್ಟಲಿಂಗ ಪೂಜೆ, ಧ್ಯಾನ, ವಚನ ಪಠಣ, ಅಧ್ಯಯನದಿಂದ ಮಹಿಳೆಗೆ ಕಷ್ಟವನ್ನು ಮೆಟ್ಟಿ ನಿಲ್ಲುವ ಶಕ್ತಿ ಬರುತ್ತದೆ.**
> ■ ಡಾ.ವಿಜಯಲಕ್ಷ್ಮೀ ಬಾಳೇಕುಂದ್ರಿ, ಸಾಹಿತಿ

ಮಹಾನಗರ ಪಾಲಿಕೆ ಉಪ ಆಯುಕ್ತ ಅನುರಾಧಾ ವಸ್ತ್ರದ ಮಾತನಾಡಿ, ಜಗತ್ತಿನ ಮೊದಲ ಕವಯತ್ರಿ, ಸ್ತ್ರೀ-ಸ್ವಾತಂತ್ರ್ಯದ ಮುಕುಟಮಣಿ ಅಕ್ಕಮಹಾದೇವಿ ತಾಯಿ ನಮಗೆ ಸ್ಮರಣೀಯರು. ಅಕ್ಕನ ವಚನಗಳಿಂದ ಸ್ಥಾನಮಾನ ಪಡೆಯಲು ಸಾಧ್ಯ ಎಂದರು.

ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ ಮಹಿಳಾ ಸಾಧಕಿಯರನ್ನು ಸನ್ಮಾನಿಸಲಾಯಿತು. ಪ್ರೊ. ವಿ.ಸಿ.ಸವಡಿ ಅಧ್ಯಕ್ಷತೆ ವಹಿಸಿದ್ದರು. ವೇದಿಕೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಕುಮಾರ ಬೆಕ್ಕೇರಿ, ಡಾ. ಸುವರ್ಣಾ ಬಿರಾದಾರ ಇದ್ದರು. ಡಾ.ಪಾರ್ವತಿ ಹಾಲಭಾವಿ ಸ್ವಾಗತಿಸಿದರು. ಮಹಾಸಭಾ ರಾಜ್ಯ ಉಪಾಧ್ಯಕ್ಷೆ ಸವಿತಾ ಅಮರಶೆಟ್ಟಿ ಪ್ರಾಸ್ತಾವಿಕ ಮಾತನಾಡಿದರು. ಸುಧಾ ಕಬ್ಬೂರ ನಿರೂಪಿಸಿದರು. ಕವಿತಾ ಕೆ.ಎಸ್.ವಂದಿಸಿದರು. ಬಳಿಕ ವಿದ್ಯಾರ್ಥಿಗಳಿಂದ ವಚನಗಳ ನೃತ್ಯ ರೂಪಕ ಜರುಗಿತು.

ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹೇಳಿಕೆ

ಕಾಂಗ್ರೆಸ್ ಸರ್ಕಾರದಿಂದ ತುಘಲಕ್ ದರ್ಬಾರ್

ಕಮತಗಿ: ಕರ್ನಾಟಕ ರಾಜ್ಯದಲ್ಲಿ ಈ ಕಾಂಗ್ರೆಸ್ ಸರ್ಕಾರ ತುಘಲಕ್ ದರ್ಬಾರ್ ನಡೆಸಿದೆ ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಖಾರವಾಗಿ ನುಡಿದರು.

ಕಮತಗಿ ಪಟ್ಟಣದಲ್ಲಿ ಬಸ್ ಸ್ಟ್ಯಾಂಡ್ ಹತ್ತಿರ ವೇದಿಕೆಯ ಬಹಿರಂಗ ಸಮಾರಂಭದಲ್ಲಿ ಮಾತನಾಡಿದಅವರು, ಈತುಘಲಕ್‌ಸರ್ಕಾರವು ಹೆಣ್ಣು ಮಕ್ಕಳು ಹುಟ್ಟಿದರೆ ಲಕ್ಷ್ಮಿ ಭಾಗ್ಯವನ್ನು ತಂದಿದ್ದೆ ಅದನ್ನು ಬಂದ್ ಮಾಡಿದ್ದಾರೆ. ರೈತರಿಗೆ ಅನುಕೂಲವಾಗಲೆಂದು ಕಿಸಾನ್ ಯೋಜನೆಯ 4000 ರೂ. ನೀಡುತ್ತಿದ್ದೇವು. ಅದನ್ನು ಈ ಸರ್ಕಾರ ರದ್ದುಗೊಳಿಸಿ, ರೈತರಿಗೆ ಮೋಸ ಮಾಡಿದೆ ಮತ್ತು ಈ ಭಾಗದಲ್ಲಿ ಇರುವಂತಹ ಎಲ್ಲ ನೇಕಾರರಿಗೂ ಸಹ ಯಾವುದೇ ರೀತಿ ನೇಕಾರರ ಯೋಜನೆಗಳನ್ನು ಅಭಿವೃದ್ಧಿ ಮಾಡದೆ ಇರುವಂತಹ ಯೋಜನೆಗಳನ್ನು ರದ್ದು ಮಾಡಿ ಅವರಿಗೂ ಸಹ ಮೋಸ ಮಾಡಿದೆ ಎಂದು ಹೇಳಿದರು.

ಇಂಥ ಈ ಸರ್ಕಾರಕ್ಕೆ ನಾವೆಲ್ಲರೂ ಕೂಡಿಕೊಂಡು ತಕ್ಕ ಶಾಸ್ತಿ ಕಲಿಸುವ ಕಾಲ ಕೂಡಿ ಬಂದಿದೆ, ಅದಕ್ಕಾಗಿ ನಾಳೆ ಏ. 9ರಂದು ನಡೆಯಲಿರುವ ಉಪ ಚುನಾವಣೆಯಲ್ಲಿ ನಮ್ಮ ಬಾಗಲಕೋಟೆ ವಿಧಾನಸಭಾ ಮತಕ್ಷೇತ್ರದ ಬಿಜೆಪಿ ಅಭ್ಯರ್ಥಿಯಾದ ವೀರಣ್ಣ ಚರಂತಿಮಠ ಅವರಿಗೆ ಅಮೂಲ್ಯವಾದ ಮತವನ್ನು ನೀಡುವುದರ ಮೂಲಕ ಅವರನ್ನು 10000 ಮತಗಳ ಅಂತರದಿಂದ ಜಯಭೇರಿ ಬಾರಿಸಿ ಪ್ರಚಂಡ ಬಹುಮತದಿಂದ ಆರಿಸಿ ತರಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ ಎಂದು ಹೇಳಿದರು.

ಈ ವಿಜಯೋತ್ಸವವನ್ನು ನೋಡಿ ಕಾಂಗ್ರೆಸ್ ಸರ್ಕಾರ ತನ್ನಿಂತಾನೆ ಪತನ ವಾಗುವುದರಲ್ಲಿ ಸಂದೇಹವಿಲ್ಲವೆಂದು ತಿಳಿಸಿದರು.

ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಮಾತನಾಡಿದರು.

ಸಿದ್ದು ಸವದಿ, ರಮೇಶ್ ಕತ್ತಿ, ಜಗದೀಶ ಶೆಟ್ಟರ, ಜನಾರ್ದನ ರೆಡ್ಡಿ, ಸಿ.ಸಿ. ಪಾಟೀಲ, ಪಿ.ಎಚ್. ಪೂಜಾರ್, ಸುರೇಶ್ ಬಾಬು, ಬಂಡೆಪ್ಪ ಕಾಶಂಪುರ್, ದೊಡ್ಡಪ್ಪ ಗೌಡ , ಮನೋಹರ್ ಶಿರೋಳ, ಕಮತಗಿ ಪಟ್ಟಣ ಹಾಗೂ ಸುತ್ತಮುತ್ತಲಿನ ಹಳ್ಳಿಯ ಎಲ್ಲ ಬಿಜೆಪಿ ಮುಖಂಡರು ಕಾರ್ಯಕರ್ತರು ಭಾಗವಹಿಸಿದ್ದರು.



ನೀಲಾನಗರ ತಾಂಡಾದಲ್ಲಿ ಚರಂತಿಮಠ ಪರ ಭರ್ಜರಿ ರೋಡ್ ಶೋ

ಯತ್ನಾಳ ನೇತೃತ್ವದಲ್ಲಿ ಚರಂತಿಮಠ ಪರ ಮತಯಾಚನೆ

ಬಾಗಲಕೋಟೆ: ವಿಧಾನಸಭಾ ಉಪಚುನಾವಣೆಯ ಹಿನ್ನಲೆಯಲ್ಲಿ ನೀಲಾನಗರ ತಾಂಡಾದಲ್ಲಿ ಬಿಜೆಪಿ ಪರ ಭರ್ಜರಿ ರೋಡ್ ಶೋ ನಡೆಯಿತು. ಮಾಜಿ ಕೇಂದ್ರ ಸಚಿವರು ಹಾಗೂ ಶಾಸಕರಾದ ಬಸನಗೌಡ ಪಾಟೀಲ ಯತ್ನಾಳ ಅವರು ಅಭ್ಯರ್ಥಿ ಡಾ. ವೀರಣ್ಣ ಚರಂತಿಮಠ ಪರವಾಗಿ ಮತಯಾಚನೆ ನಡೆಸಿದರು.

ರೋಡ್ ಶೋ ವೇಳೆ ಸ್ಥಳೀಯರು ಉತ್ಸಾಹದಿಂದ ಭಾಗವಹಿಸಿ ಬೆಂಬಲ ಸೂಚಿಸಿದರು. ಮಹಿಳೆಯರು, ಯುವಕರು ಹಾಗೂ ಹಿರಿಯರು ಸೇರಿದಂತೆ ವಿವಿಧ ವರ್ಗದ ಜನರು ದೊಡ್ಡ ಸಂಖ್ಯೆಯಲ್ಲಿ ಪಾಲ್ಗೊಂಡರು. ಪಕ್ಷದ ಘೋಷಣೆಗಳು ಮತ್ತು ಡೊಳ್ಳು-ತಾಳಗಳ ನಡುವೆ ರೋಡ್ ಶೋ ಗಮನಸೆಳೆಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಯತ್ನಾಳ ಅವರು, ಕ್ಷೇತ್ರದ ಅಭಿವೃದ್ಧಿಗಾಗಿ ಬಲಿಷ್ಠ ನಾಯಕತ್ವ ಅಗತ್ಯವಿದ್ದು, ಚರಂತಿಮಠ ಅವರನ್ನು ಭರ್ಜರಿ ಬಹುಮತದಿಂದ ಗೆಲ್ಲಿಸುವಂತೆ ಮನವಿ ಮಾಡಿದರು.

ನಂತರ ಶ್ರೀ ಮರಗಮ್ಮ ದೇವಿ ದೇವಸ್ಥಾನಕ್ಕೆ ಭೇಟಿ ನೀಡಿ ವಿಶೇಷ ಪೂಜೆ ಸಲ್ಲಿಸಿ ಆಶೀರ್ವಾದ ಪಡೆದರು. ಅಭ್ಯರ್ಥಿಯ ಗೆಲುವು ಹಾಗೂ ನಾಡಿನ ಒಳಿತಿಗಾಗಿ ಪ್ರಾರ್ಥಿಸಿದರು.

ಈ ವೇಳೆ ಶಾಸಕರಾದ ಸಿದ್ದು ಸವದಿ ಸೇರಿದಂತೆ ಹಲವು ಮುಖಂಡರು, ಕಾರ್ಯಕರ್ತರು ಮತ್ತು ಅಭಿಮಾನಿಗಳು ಉಪಸ್ಥಿತರಿದ್ದರು.



ಸಚಿವ ಖರ್ಗೆ ತವರಲ್ಲಿ ನೀರಿಗಾಗಿ ಹಾಹಾಕಾರ

ರಸ್ತೆ ತಡೆದು ಪ್ರತಿಭಟಿಸಿದ ಜನತೆ

ಕಲಬುರಗಿ: ಜಿಲ್ಲೆಯ ಚಿಂಚೋಳಿ ತಾಲೂಕಿನ ಮಿರಿಯಾಣ ಗ್ರಾಮದಲ್ಲಿ ಕುಡಿಯುವ ನೀರು, ವಯೋವೃದ್ಧರ ಪಿಂಚಣಿ, ಶಾಲಾ ಸೌಲಭ್ಯಗಳು ಹಾಗೂ ಆರೋಗ್ಯ ಕೇಂದ್ರದ ಕಾಮಗಾರಿಗಳ ಸಮಸ್ಯೆಗಳ ಹಿನ್ನೆಲೆ ಗ್ರಾಮಸ್ಥರು ಭಾನುವಾರ ಪಿರ್ ಕಟ್ಟಿಯ ಸಮೀಪ ರಸ್ತೆ ತಡೆದು ಪ್ರತಿಭಟಿಸಿದರು.

ಗ್ರಾಮದ ಇಂದಿರಾ ನಗರ ಬಡಾವಣೆಯಲ್ಲಿ ಕುಡಿಯುವ ನೀರಿನ ತೀವ್ರ ಸಮಸ್ಯೆ ಉಲ್ಬಣಗೊಂಡಿದ್ದು, ಜನರು ಬೇಸಿಗೆ ಕಾಲದಲ್ಲಿ ನೀರಿಗಾಗಿ ಅಲೆದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಸಾರ್ವಜನಿಕ ಕುಡಿಯುವ ನೀರಿನ ಮೋಟಾರು ಮತ್ತು ಸ್ಟಾರ್ಟರ್ ಕೆಟ್ಟಿದ್ದು,ತಕ್ಷಣ ದುರಸ್ತಿ ಮಾಡಿ ನೀರಿನ ವ್ಯವಸ್ಥೆ ಕಲ್ಪಿಸಬೇಕೆಂದು ಗ್ರಾಮಸ್ಥರು ಆಗ್ರಹಿಸಿದ್ದಾರೆ.

ಇನ್ನೊಂದೆಡೆ, ವಯೋವೃದ್ಧರು ಮಾಸಾಶನ ಪಿಂಚಣಿ ಹಣದ ಮೇಲೆ ಅವಲಂಬಿತರಾಗಿದ್ದು, ಕಳೆದ ಕೆಲವು ತಿಂಗಳುಗಳಿಂದ ಪಿಂಚಣಿ ಹಣ ಬಂದ್ ಆಗಿರುವುದರಿಂದ ಸಂಕಷ್ಟಕ್ಕೆ ಸಿಲುಕಿದ್ದಾರೆ. ತಹಶೀಲ್ದಾರರ ಕಚೇರಿಗೆ ತೆರಳಿ ಮನವಿ ಸಲ್ಲಿಸಿದರೂ ಸಮರ್ಪಕ ಸ್ಪಂದನೆ ಸಿಗುತ್ತಿಲ್ಲ ಎಂದು ವಯೋವೃದ್ಧರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಸಂಧ್ಯಾ ಸುರಕ್ಷೆ, ವಿಧವಾ ಹಾಗೂ ವೃದ್ಧಾಪ್ಯ ವೇತನ ತಕ್ಷಣ ಬಿಡುಗಡೆ ಮಾಡಬೇಕೆಂದು ಒತ್ತಾಯಿಸಲಾಗಿದೆ.

ಮಿರಿಯಾಣ ಗ್ರಾಮದಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕುಡಿಯುವ ನೀರಿನ ಶುದ್ಧೀಕರಣ ಘಟಕ ಕೆಟ್ಟು ಹೋಗಿದ್ದು, ವಿದ್ಯಾರ್ಥಿಗಳಿಗೆ ಶುದ್ಧ ನೀರು ಸಿಗದ ಪರಿಸ್ಥಿತಿ ಉಂಟಾಗಿದೆ. ಮಕ್ಕಳ ಆರೋಗ್ಯದ ಹಿತದೃಷ್ಟಿಯಿಂದ ಶೀಘ್ರದಲ್ಲೇ ಘಟಕವನ್ನು ದುರಸ್ತಿ ಮಾಡಬೇಕೆಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದ ವಸತಿ ಕಟ್ಟಡ ಕಾಮಗಾರಿ ನಾಲ್ಕು ವರ್ಷಗಳಾದರೂ ಅಪೂರ್ಣವಾಗಿದ್ದು,ಕಳಪೆ ಮಟ್ಟದ ಕಾಮಗಾರಿ ನಡೆದಿದೆ ಎಂಬ ಆರೋಪ ಕೇಳಿಬಂದಿದೆ. ಗುತ್ತಿಗೆದಾರರು ಭೋಗಸ್ ಬಿಲ್ ಎತ್ತಿದ್ದಾರೆ ಎಂದು ಆರೋಪಿಸಿರುವ ಗ್ರಾಮಸ್ಥರು, ಸಂಬಂಧಪಟ್ಟ ಅಧಿಕಾರಿಗಳು ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದ್ದಾರೆ. ಈ ಸಂದರ್ಭದಲ್ಲಿ ಪ್ರಾಂತ ರೈತ ಸಂಘದ ಜಿಲ್ಲಾಧ್ಯಕ್ಷ ಶರಣಬಸಪ್ಪಾ ಮಮಶೆಟ್ಟಿ, ಜಾಫರ್ ಖಾನ್ ಸಾಬ್, ಬಸಲಿಂಗಪ್ಪ ಪಾಟೀಲ್,ದೌಲತರಾಯ್ ಮಾಡಗಿ, ಗುರುನಾಥ ಮಂಗಲಗಿ ಸೇರಿದಂತೆ ಹಲವು ಗ್ರಾಮಸ್ಥರು ಉಪಸ್ಥಿತರಿದ್ದರು.



CHANGE OF NAME
I, **NIYAAZ AHEMAD** (Old Name) Resident of Ward No 1 Pampa Nagar Gangavati 583227 (address), have changed my name as **NIYAAZ AHMED** (New Name) henceforth I will be called and recognized by new name for all future purposes, dated: 05/04/2026.

CHANGE OF NAME
I, **RAHIMANSA BURANSA BIRADAR** (Old Name) Resident of H No: 226 Rajiva Gandhi Ashray Colony Navanagar 587103 (address), have changed my name as **RAHIMANSAB BURANSAB BIRADAR** (New Name) henceforth I will be called and recognized by new name for all future purposes, dated: 05/04/2026.

CHANGE OF NAME
I, **YASHARAFFUNNISSA** (Old Name) Resident of Noorani Colony, Jambagi Road, Jamakhandi Tq: Jamakhandi Dist: Bagalkot, Karnataka - 587301, have changed my name as **YASHRAFFUNISA NAJEER KANGANOLLI** (New Name) henceforth I will be called and recognized by new name for all future purposes, dated: 05/04/2026.

CHANGE OF NAME
I, **TUKARAM** (Old Name) Resident of #34 Near Water Tank Methi Melkunda, Taluk Bhalki, Dist: Bidar 585411 (address), have changed my name as **TUKARAM BABURAO PATIL** (New Name) henceforth I will be called and recognized by new name for all future purposes, dated: 04/04/2026.

CHANGE OF NAME
I, **SANATAJ HALWOOR** (Old Name) Resident of Ward No 1 Pampa Nagar Gangavati 583227 (address), have changed my name as **SANATAJ** (New Name) henceforth I will be called and recognized by new name for all future purposes, dated: 05/04/2026.

CHANGE OF NAME
I, **SHOAIB AHMED MAHMOOD BAGWAN** (Old Name) Resident of #3154, Tilak Nagar, Alnavar 581103 (address), have changed my name as **SHOAIB AHMED BAGWAN** (New Name) henceforth I will be called and recognized by new name for all future purposes, dated: 05/04/2026.

CHANGE OF NAME
I, **SUMANA** (Old Name) Resident of #11, Sandya Nagar, 3rd Cross, Dasappanapalya, Chikkabanavara, Bengaluru, Karnataka - 560090, have changed my name as **SUMANA N BHANDARI** (New Name) for all purposes affidavit Dtd.: 01-04-2026 sworn before notary **S. G. Hegde.**

CHANGE OF NAME
I, **ABDUL RAZAK ABDUL KHADAR MAGAVI** (Old Name) Resident of Sadar Sofa Old Hubli 24 (address), have changed my name as **ABDUL RAZAQ MAGAMI** (New Name) henceforth I will be called and recognized by new name for all future purposes, dated: 05/04/2026.

CHANGE OF NAME
I, **ANJALI S JARTARKAR** (Old Name) Resident of H No: 5 and 14, Ganesh Colony 2nd Cross Kalyan Nagar Vidyanagar, Hubli Dharwad Karnataka, 580031, have changed my name as **ANJALI MANJUNATH MEHARWADE** (New Name) henceforth I will be called and recognized by new name for all future purposes, dated: 05/04/2026.

ಮಾನ್ಯ ಹಿರಿಯ ದಿವಾಣಿ ನ್ಯಾಯಾಧೀಶರು, ಬನಹಟ್ಟಿ ಇವರ ನ್ಯಾಯಾಲಯದಲ್ಲಿ...
ಜಿ.ಆ್ಯಂಡ್.ಡಬ್ಲ್ಯೂ.ಸಿ. ನಂ.52/2025
1. ಶ್ರೀಮತಿ. ಮಹಾನಂದಾ ಗಂಡ ಸುರೇಶ ಮುತ್ತಪ್ಪಗೋಳ ವಯಾ: 32 ವರ್ಷ, ಉದ್ಯೋಗ: ಮನೆಗೆಲಸ ಸಾ: ಸಂಗಾನಟ್ಟಿ, ತಾ: ರಬಕವಿ-ಬನಹಟ್ಟಿ
2. ಶ್ರೀ. ಸುರೇಶ ತಂದೆ ಪರಪ್ಪ ಮುತ್ತಪ್ಪಗೋಳ ವಯಾ: 40 ವರ್ಷ, ಉದ್ಯೋಗ: ಶೇತಿ ಸಾ: ಸಂಗಾನಟ್ಟಿ, ತಾ: ರಬಕವಿ-ಬನಹಟ್ಟಿ -ಅರ್ಜಿದಾರರು
::ವಿರುದ್ಧ::
1. ಸರಕಾರ ಪ್ರತಿನಿಧಿಸುವವರು-ಜಿಲ್ಲಾಧಿಕಾರಿಗಳು, ಬಾಗಲಕೋಟೆ -ಎದುರುದಾರರು.
ಜಾಹೀರನಾಮೆ
ಪ್ರಸ್ತುತ ಕೇಸನ್ನು ಮಾನ್ಯ ನ್ಯಾಯಾಲಯದಲ್ಲಿ ಅರ್ಜಿದಾರರು ಕಲಂ 8 (2) (ಎ) ಹಿಂದೂ ಅಲ್ಪವಯಿ ... [illegible]

ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ಹೂವಿನಹಡಗಲಿ.
ಕ್ರಿಮಿನಲ್ ಮಿಸ್ಲೇನಿಯಸ್ ಸಂಖ್ಯೆ: 338/2026
ಕ್ರಿಮಿನಲ್ ಮಿಸ್ಲೇನಿಯಸ್ ಸಂಖ್ಯೆ: 339/2026
ಅರ್ಜಿದಾರರು:ಹೆಚ್.ಜಿ.ಪ್ರಶಾಂತ ತಂದೆ ಗೋಣೆಪ್ಪ ವಯಸ್ಸು31 ವರ್ಷ, ಸಾ॥ ಕತ್ತೆಬೆನ್ನೂರು ಹೂವಿನಹಡಗಲಿ ತಾಲೂಕು, ವಿಜಯನಗರ ಜಿಲ್ಲೆ,
ವಿರುದ್ಧ
ಎದುರುದಾರರು:ಮಾನ್ಯ ತಹಶೀಲ್ದಾರರು ತಾಲೂಕು ಕಾರ್ಯಾಲಯ & ಇನ್ನೊಬ್ಬರು, ಹೂವಿನಹಡಗಲಿ,
ಸಾರ್ವಜನಿಕ ನೋಟಿಸು
ಈ ಪ್ರಕರಣದಲ್ಲಿ ಅರ್ಜಿದಾರನು ಸಾರ್ವಜನಿಕರ ಗಮನಕ್ಕೆ ಪ್ರಕಟಿಸಿದ ಈ ನೋಟೀಸು ಏನೆಂದರೆ, ಅರ್ಜಿದಾರನು ಮಾನ್ಯ ಹೂವಿನಹಡಗಲಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ ... [illegible]
... ಅಥವಾ ತಮ್ಮ ಪರವಾಗಿ ವಕೀಲರ ಮೂಲಕವಾಗಲೀ ದಿನಾಂಕ: 27-05-2026 ರಂದು ಸಮಯ ಬೆಳಗ್ಗೆ 11-00 ಗಂಟೆಗೆ ಹೂವಿನಹಡಗಲಿ ನ್ಯಾಯಾಲಯದಲ್ಲಿ ತಕರಾರು ಸಲ್ಲಿಸತಕ್ಕದ್ದು, ಇಲ್ಲವಾದಲ್ಲಿ ಮಾನ್ಯ ಘನ ನ್ಯಾಯಾಲಯವು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವುದೇ ತಕರಾರು ಇರುವುದಿಲ್ಲವೆಂದು ಏಕತರ್ಫಿ(ಏಕಪಕ್ಷೀಯ) ಆದೇಶ ಮಾಡಲಾಗುವುದು ಎಂದು ತಿಳಿಯತಕ್ಕದ್ದು,
ದಿನಾಂಕ: 24-03-26 ರಂದು ನ್ಯಾಯಾಲಯದ ಆದೇಶ ಹಾಗೂ ಮೊಹರಿನೊಂದಿಗೆ ನೀಡಲಾಗಿದೆ
ಸಹಿ/-ಶಿರಸ್ತೆದಾರರು
ಸಿ.ಜೆ.& ಜೆ.ಎಂ.ಎಫ್.ಸಿ.ನ್ಯಾಯಾಲಯ,
ಸಹಿ/- ಶ್ರೀ . ಸಂಗಮೇಶ ಎಂ
ಅರ್ಜಿದಾರರ ಪರ ವಕೀಲರು, ಹೂವಿನಹಡಗಲಿ.

ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಹೂವಿನಹಡಗಲಿ.
ಅಸಲು ದಾವಾ ಸಂಖ್ಯೆ: 92/2024
ಶ್ರೀ.ಮಡಿವಾಳರ ಬಸವರಾಜ ಮತ್ತು ಇತರರು ..ವಾದಿಗಳು
ವಿರುದ್ಧ
ಶ್ರೀಮತಿ.ಮಡಿವಾಳರ ಪಕ್ಕೀರವ್ವ ಮತ್ತು ಇತರರು ..ಪ್ರತಿವಾದಿಗಳು
ಸಿ.ಪಿ.ಸಿ ಆದೇಶ ಸಂಖ್ಯೆ 5 ನಿಯಮ 20 (1)(ಎ) ದ ಅಡಿಯಲ್ಲಿ ಪ್ರತಿವಾದಿಗೆ ಸಮನ್ಸ್.
13) ಪ್ರತಿವಾದಿ ಸಂಖ್ಯೆ 5 ಇವರ ವಿಳಾಸ. ಹೆಸರು: ಶ್ರೀಮತಿ ಮಡಿವಾಳರ ಕಂಚಮ್ಮ @ ಮಂಜವ್ವ, ಗಂಡ: ಸುರೇಶ, ತಂದೆ: ಲೇ॥ ಕರಿಯಪ್ಪ 33 ವರ್ಷ, ಉದ್ಯೋಗ: ... [illegible]
... ನೀವು ವಕೀಲರ ಮುಖಾಂತರವಾಗಲೀ ಹಾಜರಾಗಿ ತಕರಾರು ಸಲ್ಲಿಸಬೇಕು. ಇಲ್ಲವಾದಲ್ಲಿ ಮಾನ್ಯ ಘನ ನ್ಯಾಯಾಲಯವು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವುದೇ ತಕರಾರು ಇರುವುದಿಲ್ಲವೆಂದು ಪರಿಗಣಿಸಿ ದಾವೆಯನ್ನು ಚೌಕಾಸಿ ಮಾಡಲಾಗುವುದು.
ಈ ದಿನ ಅಂದರೆ ದಿನಾಂಕ: ರಂದು ಮಾನ್ಯ ನ್ಯಾಯಾಲಯದ ಮೊಹರಿನೊಂದಿಗೆ ಆದೇಶ ಹೊರಡಿಸಲಾಗಿದೆ.
ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/-ಶಿರಸ್ತೇದಾರರು,
ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ.ನ್ಯಾಯಾಲಯ ಹೂವಿನಹಡಗಲಿ.
ಸಹಿ/-ಶ್ರೀ ಎಸ್ ಹೆಚ್ ಛಬ್ಬಿ
ಅರ್ಜಿದಾರರ ಪರ ವಕೀಲರು ಹೂವಿನಹಡಗಲಿ.

ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್.ಸಿ.ನ್ಯಾಯಾಲಯ ಹೂವಿನಹಡಗಲಿ
ಕ್ರಿಮಿನಲ್ ಸಂಖ್ಯೆ : 1309/2024
ಅರ್ಜಿದಾರರು:ಶ್ರೀ ಪಿ. ಮಾಬುಲಿಸಾಬ್ ತಂದೆ ಬಡೆಸಾಬ್. ವಯಸ್ಸು: 78 ವರ್ಷ. ವೃತ್ತಿ: ವ್ಯವಸಾಯ. ಸಾ:ಬೂದನೂರ ಗ್ರಾಮ. ಹೂವಿನಹಡಗಲಿ ತಾ, ವಿಜಯನಗರ ಜಿಲ್ಲೆ.
ವಿರುದ್ಧ
ಎದುರುದಾರರು: ತಹಶೀಲ್ದಾರರು, ಹೂವಿನಹಡಗಲಿ ಹಾಗೂ ಇನ್ನೊಬ್ಬರು
ಸಾರ್ವಜನಿಕ ನೋಟಿಸು
ಈ ಪ್ರಕರಣದಲ್ಲಿ ಅರ್ಜಿದಾರರು ಸಾರ್ವಜನಿಕರ ಗಮನಕ್ಕೆ ಪ್ರಕಟಿಸಿದ ನೋಟಿಸ್ ಏನೆಂದರೆ, ಅರ್ಜಿದಾರನು ಮಾನ್ಯ ಹೂವಿನಹಡಗಲಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ಇವರ ನ್ಯಾಯಾಲಯದಲ್ಲಿ ... [illegible]
... ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವುದೇ ತಕರಾರು ಇರುವುದಿಲ್ಲವೆಂದು ಏಕತರ್ಫಿ (ಏಕಪಕ್ಷೀಯ) ಆದೇಶ ಮಾಡಲಾಗುವುದೆಂದು ತಿಳಿಯತಕ್ಕದ್ದು.
ದಿನಾಂಕ: 28/03/2026 ರಂದು ನ್ಯಾಯಾಲಯದ ಆದೇಶ ಹಾಗೂ ಮೊಹರಿನೊಂದಿಗೆ ನೀಡಲಾಗಿದೆ.
ಸಹಿ/-ಶಿರಸ್ತೆದಾರರು,
ಸಿ.ಜೆ. & ಜೆ.ಎಂ.ಎಫ್.ಸಿ.ನ್ಯಾಯಾಲಯ ಹೂವಿನಹಡಗಲಿ.
ಸಹಿ/-ಶ್ರೀ. ಎಸ್.ಗುರುಬಸವರಾಜ್
ಅರ್ಜಿದಾರರ ಪರ ವಕೀಲರು, ಹೂವಿನಹಡಗಲಿ.

ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಹೂವಿನಹಡಗಲಿ
ಕ್ರಿಮಿನಲ್ ಸಂಖ್ಯೆ : 347/2026
ಅರ್ಜಿದಾರರು: ಇಮಾಮಲಿಸಾಬ್ ಬಾವಾಜಿ ತಂದೆ ಬಿ.ಮೀರಾಸಾಬ್ ವಯಸ್ಸು 68 ವರ್ಷ, ಸಾ॥ 307, 13ನೇ ವಾರ್ಡ್, ಜಾಮಿಯ ಮಸೀದಿ ಹತ್ತಿರ, ಹೂವಿನ ಹಡಗಲಿ ಪಟ್ಟಣ, ಹೂವಿನಹಡಗಲಿ ತಾಲೂಕು, ... [illegible]
... ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವುದೇ ತಕರಾರು ಇರುವುದಿಲ್ಲವೆಂದು ಏಕತರ್ಫಿ (ಏಕಪಕ್ಷೀಯ) ಆದೇಶ ಮಾಡಲಾಗುವುದೆಂದು ತಿಳಿಯತಕ್ಕದ್ದು.
ದಿನಾಂಕ: 02/04/2026 ರಂದು ನ್ಯಾಯಾಲಯದ ಆದೇಶ ಹಾಗೂ ಮೊಹರಿನೊಂದಿಗೆ ನೀಡಲಾಗಿದೆ.
ಸಹಿ/-ಶಿರಸ್ತೆದಾರರು,
ಸಿ.ಜೆ. & ಜೆ.ಎಂ.ಎಫ್.ಸಿ.ನ್ಯಾಯಾಲಯ ಹೂವಿನಹಡಗಲಿ.
ಸಹಿ/-ಶ್ರೀ. ವಸಂತಕುಮಾರ್.ಹೆಚ್
ಅರ್ಜಿದಾರರ ಪರ ವಕೀಲರು, ಹೂವಿನಹಡಗಲಿ.

ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ಹೂವಿನಹಡಗಲಿ.
ಕ್ರಿಮಿನಲ್ ಮಿಸ್ಲೇನಿಯಸ್ ಸಂಖ್ಯೆ: 345/2026
ಕ್ರಿಮಿನಲ್ ಮಿಸ್ಲೇನಿಯಸ್ ಸಂಖ್ಯೆ: 346/2026
ಅರ್ಜಿದಾರರು:ಇಮಾಮಲಿಸಾಬ್ ಬಾವಾಜಿ ತಂದೆ ಬಿ.ಮೀರಾಸಾಬ್ ವಯಸ್ಸು 68 ವರ್ಷ, ಸಾ॥ 307, 13ನೇ ವಾರ್ಡ್ ಜಾಮಿಯ ಮಸೀದಿ ಹತ್ತಿರ. ಹೂವಿನ ಹಡಗಲಿ ಪಟ್ಟಣ, ಹೂವಿನಹಡಗಲಿ ತಾಲೂಕು. ವಿಜಯನಗರ ಜಿಲ್ಲೆ
ವಿರುದ್ಧ
ಎದುರುದಾರರು:ಮಾನ್ಯ ಮುಖ್ಯಾಧಿಕಾರಿಗಳು ಪುರಸಭೆ ಕಾರ್ಯಾಲಯ ಹೂವಿನಹಡಗಲಿ,
ಸಾರ್ವಜನಿಕ ನೋಟಿಸು
ಈ ಪ್ರಕರಣದಲ್ಲಿ ಅರ್ಜಿದಾರನು ಸಾರ್ವಜನಿಕರ ಗಮನಕ್ಕೆ ಪ್ರಕಟಿಸಿದ ಈ ನೋಟೀಸು ಏನೆಂದರೆ, ಅರ್ಜಿದಾರನು ಮಾನ್ಯ ಹೂವಿನಹಡಗಲಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ ತನ್ನ ಕುಟುಂಬದ ಹಿರಿಯರ ಮರಣ ಪ್ರಮಾಣಪತ್ರ ಪಡೆಯಲು ಅರ್ಜಿ ಹಾಕಿರುತ್ತಾರೆ.
ಅರ್ಜಿದಾರರು ತನ್ನ ಕುಟುಂಬದ ಹಿರಿಯರ ಮರಣ ದಿನಾಂಕದ ವಿವರ.
1.ಹೆಸರು: ಬಾವಾಜಿ ನನ್ನೆಸಾಬ್ ತಂದೆ ಬಾವಾಜಿ ... [illegible]

ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ಹೂವಿನಹಡಗಲಿ
ಕ್ರಿಮಿನಲ್ ಮಿಸ್ಲೇನಿಯಸ್ ಸಂಖ್ಯೆ: 1220/2025.
ಕ್ರಿಮಿನಲ್ ಮಿಸ್ಲೇನಿಯಸ್ ಸಂಖ್ಯೆ: 1173/2025.
ಅರ್ಜಿದಾರರು: ನೇಪಾರ ಜಗದೀಶ ತಂದೆ ವಿರುಪಾಕ್ಷಪ್ಪ, ವ: 36 ವಾಸ: ಇಟ್ಟಿಗಿ ಹಡಗಲಿ ತಾ: ವಿಜಯನಗರ ಜಿಲ್ಲೆ
ವಿರುದ್ಧ
ಎದುರುದಾರರು: ತಹಶೀಲ್ದಾರರು, ಹೂವಿನಹಡಗಲಿ ಹಾಗೂ ಇನ್ನೊಬ್ಬರು
... [illegible]

ಕ್ರಿ ಮಿ.ನಂ : 15/2026
ಮಾನ್ಯ 3ನೇ ಜೆ ಎಮ್ ಎಫ್ ಸಿ ಹುಬ್ಬಳ್ಳಿ ಇವರ ನ್ಯಾಯಾಲಯದಲ್ಲಿ.
ಅರ್ಜಿದಾರರು: 1) ಶ್ರೀಮತಿ ದೇವಕ್ಕ ಕೋಂ ಕರಿಯಪ್ಪ ಬಾಗಲಕೋಟೆ ಮತ್ತು ಇತರರು.
ವಿರುದ್ಧ
... [illegible]
ದಿನಾಂಕ: 26-03-2026

ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್.ಸಿ.ನ್ಯಾಯಾಲಯ ಹೂವಿನಹಡಗಲಿ
ಕ್ರಿಮಿನಲ್ ಸಂಖ್ಯೆ : 157/2026
ಅರ್ಜಿದಾರರು:ಶ್ರೀಮತಿ ಮಲ್ಲಮ್ಮ ಹೆಚ್. ಗಂಡ ಹೆಚ್. ಮೈಲಪ್ಪ, ವಯಸ್ಸು 47 ವರ್ಷ, ಸಾ॥ ದೇವಗೊಂಡನಹಳ್ಳಿ ಹೂ.ಹಡಗಲಿ ತಾಲೂಕು, ವಿಜಯನಗರ ಜಿಲ್ಲೆ.
ವಿರುದ್ಧ
... [illegible]
ದಿನಾಂಕ: 28/03/2026

ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್.ಸಿ.ನ್ಯಾಯಾಲಯ ಹೂವಿನಹಡಗಲಿ
ಕ್ರಿಮಿನಲ್ ಸಂಖ್ಯೆ : 287/2026
ಅರ್ಜಿದಾರರು: ಪ್ರಕಾಶ ತಂದೆ ಲೇಟ್ ಭರಮಪ್ಪ ವಯಸ್ಸು 63 ವರ್ಷ, ಸಾ॥ ದೇವಗೊಂಡನಹಳ್ಳಿ ಹೂವಿನಹಡಗಲಿ ತಾಲೂಕು, ವಿಜಯನಗರ ಜಿಲ್ಲೆ.
ವಿರುದ್ಧ
... [illegible]
ದಿನಾಂಕ: 28/03/2026

ಕ್ರಿ. ಮಿ. ನಂ. 421/2025
ರಟ್ಟಿಹಳ್ಳಿ ಸಂಚಾರಿ ಸಿವ್ಹಿಲ್ ಜಡ್ಜ್ ವ ಜೆ.ಎಮ್.ಎಫ್.ಸಿ ಇವರ ನ್ಯಾಯಾಲಯದಲ್ಲಿ
ಅರ್ಜಿದಾರರು: ಮಹದೇವಕ್ಕ ಕೊಂ ಕರಬಸಪ್ಪ ಬಣಕಾರ, ಹಾಗೂ ಇತರರು.
ವಿರುದ್ಧ
ಎದರುಗಾರರ :ತಹಶಿಲ್ದಾರರು, ಜನನ ವ ಮರಣ ನೋಂದಣಾಧಿಕಾರಿಗಳು, ತಾ:ರಟ್ಟಿಹಳ್ಳಿ, ಜಿ:ಹಾವೇರಿ,
ಇಸ್ತಿಯಾರ ನಾಮೆ
ಈ ಪ್ರಕರಣದಲ್ಲಿಯ ಅರ್ಜಿದಾರನಾದ ನಾನು ಈ ಮೂಲಕ ಸಾರ್ವಜನಿಕರ ಗಮನಕ್ಕಾಗಿ ಪ್ರಕಟಿಸಿದ ನೋಟಿಸ್ ಏನೆಂದರೆ:-ಸದರ ಪ್ರಕರಣದ ... [illegible]
ದಿನಾಂಕ: 2-4-2026



ಶ್ರೀ ಶೇಷಾಚಲ ಸದ್ಗುರು ಶಿಕ್ಷಣ ಸಂಸ್ಥೆ (ರಿ)
ಆನಂದವನ, ಅಗಡಿ, ತಾ:/ಜಿ: ಹಾವೇರಿ ಮೋ : 9916760508

ನೇಮಕಾತಿ ಪ್ರಕಟಣೆ

ನಮ್ಮ ಸಂಸ್ಥೆ ವತಿಯಿಂದ ನಡೆಯುತ್ತಿರುವ ಶ್ರೀ ಸುರಭಾರತಿ ಸಂಸ್ಕೃತ ಪಾಠಶಾಲೆ, ಆನಂದವನ, ಅಗಡಿ, ತಾಲೂಕು ಮತ್ತು ಜಿಲ್ಲೆ ಹಾವೇರಿ ಈ ಪಾಠಶಾಲೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಅಡಿಯಲ್ಲಿ ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದಿಂದ ಮಾನ್ಯತೆ ಪಡೆದಿರುತ್ತದೆ. ಸಂಸ್ಕೃತ ಪಾಠಶಾಲೆಗಳ ಅನುದಾನ ಸಂಹಿತೆ 1979 ರ ನಿಯಮ ನಿಬಂಧನೆಗಳಿಗೆ ಒಳಪಡಿಸಿ ಮಾನ್ಯ ನಿರ್ದೇಶಕರ ಆದೇಶ ಸಂಖ್ಯೆ ಕ.ಸಂ.ವಿ./ಸಂ.ಶಿ.ನಿ./ಶ್ರೀ ಸು.ಸಂ.ಪಾ.ಶಾ.ಹು.ಭ/2025-26 ದಿ:18.02.2026 ಹಾಗೂ ಕುಲಪತಿಗಳ ಒಪ್ಪಿಗೆ ಸಂಖ್ಯೆ 17, ದಿ: 09.02.2026 ರ ಅನ್ವಯ ಸರಕಾರದ ವೇತನಾನುದಾನ ಅನುಮೋದನೆಯನ್ನು ಕಾಯ್ದಿರಿಸಿ ಪಾಠಶಾಲೆಯಲ್ಲಿ ವಯೋ ನಿವೃತ್ತಿಯಿಂದ ತೆರವಾದ ಸಂಸ್ಕೃತ ಸಹಶಿಕ್ಷಕರ ಒಂದು ಹುದ್ದೆಯನ್ನು ನಿಯಮಾನುಸಾರ ಅನುದಾನ ರಹಿತವಾಗಿ ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಕ್ರ. ಸಂ.	ಪಾಠಶಾಲೆಯ ಹೆಸರು	ಹುದ್ದೆಯ ಹೆಸರು / ವೇತನ ಶ್ರೇಣಿ	ಹುದ್ದೆ ಸಂಖ್ಯೆ	ವರ್ಗ	ವಿದ್ಯಾರ್ಹತೆ
1	ಶ್ರೀ ಸುರಭಾರತಿ ಸಂಸ್ಕೃತ ಪಾಠಶಾಲೆ, ಆನಂದವನ, ಅಗಡಿ, ತಾಲೂಕು ಮತ್ತು ಜಿಲ್ಲೆ ಹಾವೇರಿ	ಸಂಸ್ಕೃತ ಸಹಶಿಕ್ಷಕರು (34,100/- 67,600/-)	01	ಸಾಮಾನ್ಯ ವರ್ಗ	ಎಸ್ಎಸ್ಎಲ್‌ಸಿ / ತತ್ಸಮಾನ ಮತ್ತು ಪಿಯುಸಿ / ಸಂಸ್ಕೃತ ಸಾಹಿತ್ಯ

1) ಪತ್ರಿಕಾ ಪ್ರಕಟಣೆಗೊಂಡ 21 ದಿನಗಳೊಳಗಾಗಿ ವ್ಯವಸ್ಥಾಪಕ ಟ್ರಸ್ಟಿಗಳವರ ಹೆಸರಿಗೆ 300 ಡಿ.ಡಿ.ಯೊಂದಿಗೆ ಶಾಲಾ ವಿಳಾಸಕ್ಕೆ ಅರ್ಜಿ ಸಲ್ಲಿಸುವುದು. 2) ಅಭ್ಯರ್ಥಿಗಳು ವಿದ್ಯಾರ್ಹತೆಯ ಮೂಲದಾಖಲೆ ಹಾಗೂ ಪ್ರಮಾಣಪತ್ರ ಝೆರಾಕ್ಸ್‌ಗಳೊಂದಿಗೆ ಸಂದರ್ಶನಕ್ಕೆ ಹಾಜರಾಗುವುದು. 3) ತಡವಾಗಿ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. 4) ಅಭ್ಯರ್ಥಿಯ ವಯೋಮಿತಿ ಕನಿಷ್ಠ 18 ರಿಂದ ಗರಿಷ್ಠ 40 ವರ್ಷಗಳು.

ಸಹಿ/- ಅಧ್ಯಕ್ಷರು, ಶ್ರೀ ಶೇಷಾಚಲ ಸದ್ಗುರು ಶಿಕ್ಷಣ ಸಂಸ್ಥೆ (ರಿ)
ಆನಂದವನ, ಅಗಡಿ, ತಾ/ಜಿ॥ ಹಾವೇರಿ -581128

ಸಂಪಾದಕೀಯ

ಪಿಓಕೆ: ದೇಶ ಮಾತಾಡಬೇಕಾಗಿದೆ

ಭಾರತದ ಹಿಡಿತದಲ್ಲಿದ್ದ ಕಾಶ್ಮೀರದ ಉತ್ತರ ಭಾಗದ (ಪಾಕ್ ಆಕ್ರಮಿತ ಕಾಶ್ಮೀರ) ಸಮೇತ ಭೂಪಟವನ್ನು ಬಿಡಿಸಿದರಷ್ಟೇ ಅದು ಸಂಪೂರ್ಣ ಭಾರತ! ಸ್ವಾತಂತ್ರ್ಯಾನಂತರದಿಂದಲೂ ಇದು ಭಾರತೀಯರಿಗೆ ಅದೆಷ್ಟು ಒಗ್ಗಿಹೋಗಿದೆಯೆಂದರೆ ಭೂಪಟವನ್ನು ಬಿಡಿಸುತ್ತಲೇ ಬೃಹತ್ತಾದ ಸಮಸ್ಯೆಯನ್ನು ಮೂಲೆಗೆ ಮಾಡಿಬಿಟ್ಟಿವೆ. ಆದರೆ ಕಳೆದೊಂದು ದಶಕದಿಂದ ಜನರಲ್ಲಿ ಹೊಸ ಅಭಿಪ್ರಾಯವೊಂದು ರೂಪುಗೊಂಡಿದೆ. ಹಿಂದೆಲ್ಲಾ ಪಾಕ್ ಆಕ್ರಮಿತ ಕಾಶ್ಮೀರವೆಂದರೆ ಅದೆಲ್ಲಿದೆ ಎನ್ನುತ್ತಿದ್ದವರಿಗೆ ಇಂದು ಅದರ ನಿಜಸ್ವರೂಪದ ಅರಿವಾಗಿದೆ. ಪಾಕಿಸ್ತಾನದ ದುರುಳತನ ಮತ್ತು ಮೋಸದಾಟ ಇಂದು ದೇಶಕ್ಕೆ ತಿಳಿದಿದೆ. ಹಿಂದಿನಿಂದಲೂ ಈ ಭಾಗವನ್ನು ದೇಶದ ಅವಿಭಾಜ್ಯ ಅಂಗ ಎನ್ನುತ್ತಾ ಬಂದ ಏಕೈಕ ಸಂಘಟನೆ ರಾಷ್ಟ್ರೀಯ ಸ್ವಯಂಸೇವಕ ಸಂಘ. ಪಾಕ್ ಆಕ್ರಮಿತ ಕಾಶ್ಮೀರವನ್ನು ಎಲ್ಲರೂ ಅಂತಾರಾಷ್ಟ್ರೀಯ ಸಮಸ್ಯೆಯನ್ನಾಗಿ ಪರಿಗಣಿಸಿ ಸ್ವಾಭಿಮಾನವನ್ನು ಒತ್ತೆ ಇಡುವ ಕೆಲಸವನ್ನು ಮಾತ್ರ ಮಾಡಿತು. ಮುಂದೆ ಭಾರತೀಯ ಜನಸಂಘ ಮತ್ತು ಭಾರತೀಯ ಜನತಾ ಪಾರ್ಟಿ ಸ್ವಾಸ್ಥ್ಯತೆಯನ್ನು ದೇಶದ ಮುಂದಿಡುವ ಕಾರ್ಯವನ್ನು ಮಾಡಿದ್ದಾಗ ದೇಶದ ಇತರ ಪಕ್ಷಗಳು ಅವುಗಳಿಗೆ ಉಗ್ರ ರಾಷ್ಟ್ರೀಯತೆಯ ಪಟ್ಟವನ್ನು ಕಟ್ಟುತ್ತಿದ್ದರು. ಕಾಶ್ಮೀರವನ್ನು ಭಾರತ ಮಾತೆಯ ಸಿಂದೂರ ಎಂದು ಘೋಷಣೆ ಹಾಕಿದ್ದವರೇ ಅಲ್ಲಿ ಅಸ್ತಿತ್ವದಲ್ಲಿದ್ದ 370ನೇ ವಿಧಿಯನ್ನು ರದ್ದು ಪಡಿಸಿದ್ದೇ ಇಂದು ಇತಿಹಾಸ.



ಆದರೆ ಇಂದು ಪಾಕ್ ಆಕ್ರಮಿತ ಕಾಶ್ಮೀರದ ಬಗ್ಗೆ ದೇಶ ಮಾತಾಡುತ್ತಿದೆ. ಅದರಲ್ಲೂ ಬಾಲಾಕೋಟ್ ಭಯೋತ್ಪಾದಕ ಕೇಂದ್ರದ ಮೇಲೆ ಭಾರತ ದಾಳಿ ಮಾಡಿದ ಅನಂತರ ಆ ಭಾಗದ ಬಗ್ಗೆ ಜನರ ಗಮನ ಹೆಚ್ಚಾಗಿದೆ. ಪಾಕ್ ಆಜಾದಿ ಕಾಶ್ಮೀರ ಎಂದು ಹೇಳಿಕೊಳ್ಳುವ ಈ ಭಾಗ ಜಮ್ಮು ಮತ್ತು ಕಾಶ್ಮೀರದ ಎಲ್ಲಾ ಭಯೋತ್ಪಾದಕ ಶಕ್ತಿಗಳ ಕೇಂದ್ರ. ಭಾರತದ ವಿರುದ್ಧ ಪಾಕಿಸ್ತಾನ ಆಕ್ರಮಿತ ಶಸ್ತ್ರಾಸ್ತ್ರ ಮತ್ತು ಫಿದಾಯಿನ್‌ಗಳನ್ನು ರವಾನಿಸುವ ಹೆಬ್ಬಾಗಿಲಾಗಿ ಈ ಪ್ರದೇಶ ಕಾರ್ಯಾಚರಿಸುತ್ತಿದೆ. ಪಾಕ್ ಆಕ್ರಮಿತ ಕಾಶ್ಮೀರದ ಗಿಲ್ಗಿಟ್-ಬಾಲ್ಟಿಸ್ತಾನ್, ಮುಜಫರಾಬಾದ್‌ಗಳಲ್ಲಿ ನಾಗರಿಕ ಹಕ್ಕುಗಳನ್ನು ಕಿತ್ತುಕೊಂಡ ಪಾಕ್ ಅಲ್ಲಿನ ಜನರನ್ನು ಭಾರತದ ವಿರುದ್ಧ ದಾಳವಾಗಿ ಬಳಸುತ್ತಿದೆ. ಅಲ್ಲಿನ ಸಂಪನ್ಮೂಲಗಳ ಬಹುಪಾಲನ್ನು ಪಂಜಾಬಿಗಳು ಮತ್ತು ಪಠಾಣರು ಅನುಭವಿಸುತ್ತಾ ಬಂದರು. ಹೇಗೆ ಬಲೂಚ್ ಮತ್ತು ಸಿಂಧ್ ಭಾಗಗಳಲ್ಲಿ ಪಾಕ್ ಆಡಳಿತ ತಾರತಮ್ಯವನ್ನು ಎಸಗುತ್ತದೋ ಹಾಗೆಯೇ ಮುಜಫರಾಬಾದ್ ಮತ್ತು ಗಿಲ್ಗಿಟ್-ಬಾಲ್ಟಿಸ್ತಾನ್‌ಗಳಲ್ಲೂ ಎಸಗಲಾಯಿತು. ಪರಿಣಾಮ ಅಲ್ಲಿನ ಪರಿಸ್ಥಿತಿ ಹೀನಾಯವಾಯಿತು. ಇಂದು ಇಲ್ಲಿದ್ದರ ಬಗ್ಗೆ ಸ್ಥಳೀಯರು ಆಕ್ರೋಶಿತರಾಗಿದ್ದಾರೆ. ಸಾಮಾಜಿಕ ನರಮೇಧಗಳು ಸಾಮಾನ್ಯವೆಂಬಂತೆ ನಡೆಯುತ್ತಿವೆ. ಆದರೆ ಸುದ್ದಿಗಳು ಭಾರತಕ್ಕೂ ಮುಟ್ಟುತ್ತಿವೆ. ಇಂಥದ್ದರ ನಡುವೆ ಭಾರತದಲ್ಲಿ ಆ ಭಾಗವನ್ನು ಭಾರತದೊಳಗೆ ಸೇರಿಸಿಕೊಳ್ಳುವ ಮಾತುಗಳನ್ನು ವಿವಿಧ ಕ್ಷೇತ್ರಗಳ ಜನರು ಆಡುತ್ತಿರುವುದು ಸ್ವಾಗತಾರ್ಹ. ಭಾರತದ ಪ್ರಮುಖ ಇಸ್ಲಾಂ ನಾಯಕರಾದ ಇಮಾಮ್ ಉಮರ್ ಅಹ್ಮದ್ ಇಲ್ಯಾಸಿಯವರು ಕೂಡ ಈಗ ಅದರ ಬಗ್ಗೆ ಮಾತಾಡಿದ್ದಾರೆ. ದೇಶದ ಭೂಭಾಗ ಪರರ ವಶದಲ್ಲಿದೆ ಎನ್ನುವ ಜಾಗೃತಿ ಆಗಬೇಕಾಗಿದೆ. ಇಂಥ ಬೆಳವಣಿಗೆಗಳು ಮುಂದೊಂದು ದಿನ ಆಕ್ರಮಿತ ಪ್ರದೇಶ ಭಾರತದ ಆಡಳಿತಕ್ಕೊಳಪಡುವ ದಿನಗಳು ದೂರವಿಲ್ಲ ಎಂಬುದನ್ನು ಹೇಳುತ್ತವೆ.

ಪವಾಡ ಪುರುಷನಾದ ಸಾಮಾನ್ಯ ಸೈನಿಕ

ತಾನು ಮಡಿದ ಮೇಲೂ ಭಾರತದ ಗಡಿಯನ್ನು ಕಾಯುತ್ತಿರುವ ಹರಭಜನ್ ಸಿಂಗ್ ಆತ್ಮದ ಕತೆಯಿದು.

ನೇರ ನೋಟ
• ದು.ಗು. ಲಕ್ಷ್ಮಣ
dugulakshman@yahoo.com



ಸೈನಿಕನೊಬ್ಬ ನಿವೃತ್ತಿಯಾಗುವವರೆಗೆ ಅಥವಾ ತನ್ನ ವೀರಮರಣದವರೆಗೆ ದೇಶಸೇವೆಯಲ್ಲಿ ನಿರತನಾಗುವ ಸಂಗತಿ ನಮಗೆ ಗೊತ್ತು. ಆದರೆ ತನ್ನ ಮರಣದ ನಂತರವೂ ದೇಶದ ರಕ್ಷಣೆಗಾಗಿ ಗಡಿಯಲ್ಲಿ ಕರ್ತವ್ಯನಿರತನಾಗಿರುತ್ತಾನೆ ಎಂದರೆ ನೀವು ಖಂಡಿತ ನಂಬುವುದಿಲ್ಲ. 'ಏನು ತಮಾಷೆ ಮಾಡ್ತಿದೀರಾ?' ಎಂದು ನೀವು ಕಾಲೆಳೆಯಬಹುದು. ಆದರಿದು ತಮಾಷೆಯಲ್ಲ. ನಿಜದ ತಲೆಗೆ ಹೊಡೆಯುವಂತಹ ನಿಜ. ಭಾರತೀಯ ಸೈನ್ಯಪಡೆಯಲ್ಲಿ ಜರುಗಿದ ವಾಸ್ತವ ಘಟನೆ.

ಪಂಜಾಬ್ ಪ್ರಾಂತದ ಕಪೂರ್ತಲ ಜಿಲ್ಲೆಯಲ್ಲಿ 1946ರ ಆಗಸ್ಟ್ 30ರಂದು ಜನಿಸಿದ ಹರ್‌ಭಜನ್‌ಸಿಂಗ್ ಚಿಕ್ಕಂದಿನಿಂದಲೇ ದೇಶಪ್ರೇಮ, ಪರೋಪಕಾರ, ಧರ್ಮ ರಕ್ಷಣೆಯ ಸ್ವಭಾವಗಳನ್ನು ಮೈಗೂಡಿಸಿಕೊಂಡಿದ್ದ. ಹತ್ತನೇ ತರಗತಿ ಓದಿದ ಬಳಿಕ ಭಾರತೀಯ ಸೇನೆಗೆ 1966ರಲ್ಲಿ ಒಬ್ಬ ಸಾಮಾನ್ಯ ಸಿಪಾಯಿಯಾಗಿ ಆತ ಸೇರ್ಪಡೆಗೊಂಡ. ಸಾಮಾನ್ಯ ಸಿಪಾಯಿಯಾಗಿದ್ದರೂ ಆತನ ಧೈರ್ಯ, ಕರ್ತವ್ಯನಿಷ್ಠೆ, ದೇಶಪ್ರೇಮ ಸೈನ್ಯಾಧಿಕಾರಿಗಳ ಗಮನಕ್ಕೆ ಬಿದ್ದಿತ್ತು. ಭಾರತದ ವಿರುದ್ಧ ಚೀನೀ ಸೈನಿಕರು ಗಡಿಯಲ್ಲಿ ಕಿರುಕುಳ ನೀಡತೊಡಗಿದ್ದರು. ಸಿಕ್ಕಿಂನ ನಾಥುಲಾ ಪಾಸ್‌ಗೆ ಭಾರತೀಯ ಸೈನಿಕರನ್ನು ಕಳಿಸುವ ಪ್ರಕ್ರಿಯೆ ನಡೆದಿತ್ತು. ಪಂಜಾಬ್ 23ನೇ ರೆಜಿಮೆಂಟ್ ಸೈನಿಕರನ್ನೂ ಕರ್ತವ್ಯ ನಿರ್ವಹಣೆಗಾಗಿ ನಾಥುಲಾ ಗಡಿಗೆ ಕಳಿಸಲಾಗಿತ್ತು. ಆ ರೆಜಿಮೆಂಟ್‌ನಲ್ಲಿದ್ದವನೇ ಸಿಪಾಯಿ ಹರ್ ಭಜನ್ ಸಿಂಗ್.

ನಾಥುಲಾ ಗಡಿಯೆಂದರೆ ಎಂತಹ ಎಂಟೆದೆಯ ಸೈನಿಕನಿಗೂ ಹೆದರಿಕೆ ಹುಟ್ಟಿಸುವ ಪ್ರದೇಶ. ಸಮುದ್ರಮಟ್ಟದಿಂದ 13 ಸಾವಿರ ಅಡಿ ಎತ್ತರ, ಭಯಾನಕ ಕೊರೆಯುವ ಹಿಮಚಳಿ. ಮೈನಸ್ 20-22 ಡಿಗ್ರಿ ಉಷ್ಣತೆಯ ಕೊರೆಯುವ ಚಳಿಯಲ್ಲಿ ಎತ್ತರೆತ್ತರದ ಚೂಪಾದ ಹಿಮಶಿಖರ, ಕೆಳಗೆ ಭೀಕರ ಪ್ರಪಾತದ ಸ್ಥಳದಲ್ಲಿ ಕರ್ತವ್ಯ ನಿರ್ವಹಿಸಬೇಕಾದ ಸ್ಥಿತಿ. 13 ಸಾವಿರ ಅಡಿ ಎತ್ತರದ ಹಿಮ ಶಿಖರದ ಮೇಲೆ ಸೈನ್ಯದ ಬಂಕರ್. ಅಷ್ಟೆತ್ತರಕ್ಕೆ ಕೆಳಗಿನಿಂದ ಮದ್ದುಗುಂಡು, ಇನ್ನಿತರ ಅಗತ್ಯ ವಸ್ತುಗಳನ್ನು ಸಾಗಿಸುವ ಕಾರ್ಯ ಅತ್ಯಂತ ಪ್ರಯಾಸಕರ. ಹರ್ ಭಜನ್ ಸಿಂಗ್ ಒಂದು ದಿನ ಹೀಗೆ ಯುದ್ಧೋಪಕರಣಗಳನ್ನು ಕಾಲ್ನಡಿಗೆ ಮೂಲಕ ಸಾಗಿಸುತ್ತಿರುವಾಗ ಕಾಲುಜಾರಿ ಹಿಮನದಿಯಲ್ಲಿ ಕೊಚ್ಚಿಹೋದ. ರಾತ್ರಿಯಾದರೂ ಆತನ ಪತ್ತೆಯಾಗಲಿಲ್ಲ. ಈ ಕಠಿಣ ವಾತಾವರಣ ಹಾಗೂ ಮುಂದೆ ಬರಲಿರುವ ಯುದ್ಧಕ್ಕೆ ಹೆದರಿ ಆತ ಪಲಾಯನ ಮಾಡಿರಬೇಕೆಂದೇ ಎಲ್ಲರ ಊಹೆಯಾಗಿತ್ತು. ಏಕೆಂದರೆ ಆಗಿನ್ನೂ ಹರ್ ಭಜನ್‌ಸಿಂಗ್‌ನಿಗೆ 22ರ ಹರೆಯ.

ಆದರೆ ಆತ ನಾಪತ್ತೆಯಾದ ಐದನೇ ದಿನ ರಾತ್ರಿ ಹರ್ ಭಜನ್‌ಸಿಂಗ್‌ನ ಇನ್ನೊಬ್ಬ ಸ್ನೇಹಿತ ಪ್ರೀತಂ ಸಿಂಗ್‌ನ ಕನಸಿನಲ್ಲಿ ಕಾಣಿಸಿಕೊಂಡು, ತಾನು ಹಿಮನದಿಯಲ್ಲಿ ಜಾರಿ ಸಾವನ್ನಪ್ಪಿರುವೆ. ನನ್ನ ಶವವನ್ನು ನೀವು ಇಂಥ ಕಡೆ ಹುಡುಕಿದರೆ ಸಿಗುತ್ತದೆ ಎಂದು ಹೇಳಿದಂತಾಯಿತು. ಕನಸನ್ನು ನಂಬುವುದು ಹೇಗೆ? ಆದರೂ ಕನಸಿನಲ್ಲಿ ಹರ್‌ಭಜನ್ ಸಿಂಗ್ ತಿಳಿಸಿದ ನಿರ್ದಿಷ್ಟ ಜಾಗಕ್ಕೆ ಸೈನಿಕರು ತೆರಳಿ ಹುಡುಕಿದಾಗ ಆತನ ಶವ ಪತ್ತೆಯಾಯಿತು. ಅನಂತರ ಶವದ ಅಂತ್ಯಸಂಸ್ಕಾರವೂ ನೆರವೇರಿತು.

ಇಲ್ಲಿಗೆ ಹರ್‌ಭಜನ್ ಸಿಂಗ್ ಎಂಬ ಸಿಪಾಯಿಯೊಬ್ಬನ ಕಥೆ ಅಂತ್ಯಗೊಳ್ಳಬೇಕಿತ್ತು. ಆದರೆ ಹಾಗಾಗಲಿಲ್ಲ. ಆತನ ಕಥೆ ಶುರುವಾಗಿದ್ದೇ ಅಲ್ಲಿಂದ. ನಾಥುಲಾ ಗಡಿಯಲ್ಲಿ ಚೀನಿ ಶತ್ರು ಸೈನಿಕರು ಎಲ್ಲೆಲ್ಲಿ ಅಡಗಿದ್ದಾರೆ, ಅವರನ್ನು ಹೇಗೆ ಸದೆಬಡಿಯಬೇಕು ಇತ್ಯಾದಿ ಮಾಹಿತಿಗಳನ್ನು ಹರ್‌ಭಜನ್ ಸಿಂಗ್‌ನ ಆತ್ಮ ಸಹಪಾಠಿ ಸೈನಿಕರ ಕನಸಿನಲ್ಲಿ ಬಂದು ಹೇಳುತ್ತಿತ್ತು. ಆ ಆತ್ಮ ಹೇಳಿದ್ದೆಲ್ಲವೂ ನಿಖರವಾಗಿರುತ್ತಿತ್ತು. ಆ ಆತ್ಮ ಹೇಳಿದ ಮಾಹಿತಿಗಳಿಂದ ಭಾರತೀಯ ಸೈನ್ಯಕ್ಕೆ ಶತ್ರುಗಳನ್ನು ಗಡಿಯೊಳಗೆ ನುಗ್ಗಿ ಬರದಂತೆ ಹದ್ದುಬಸ್ತಿನಲ್ಲಿಡಲು ತುಂಬಾ ನೆರವಾಗುತ್ತಿತ್ತು. ಚೀನಿ ಸೈನಿಕರು ಕೂಡ ತಾವು ಭಾರತದ ಗಡಿಯೊಳಗೆ ನುಗ್ಗದಂತೆ ಬಿಳಿಕುದುರೆ ಏರಿದ ಸೈನಿಕನೊಬ್ಬ ತಡೆಯುತ್ತಿರುವ ದೃಶ್ಯ ಕಂಡು ಹಿಂದೆ ಸರಿದರು.

ಈ ಎಲ್ಲ ಅನೂಹ್ಯ ವಿದ್ಯಮಾನಗಳು ಪಂಜಾಬ್ ರೆಜಿಮೆಂಟ್ ಸೈನಿಕರ ಪಾಲಿಗೆ ಪವಾಡಸದೃಶ ಎನಿಸತೊಡಗಿತು. ಅವರೆಲ್ಲರೂ ಹರ್‌ಭಜನ್ ಸಿಂಗ್ ಎಂಬ ಮೃತ ಸೈನಿಕನನ್ನು ಒಬ್ಬ ಬಾಬಾನಂತೆ ಭಕ್ತಿಭಾವದಿಂದ ಆರಾಧಿಸತೊಡಗಿದರು. ಗಡಿಪ್ರದೇಶದಲ್ಲಿ ಕರ್ತವ್ಯ ನಿರ್ವಹಣೆಗೆ ಮುಂಚೆ ಭಾರತೀಯ ಸೈನಿಕರು ಹರ್‌ಭಜನ್ ಸಿಂಗ್‌ನನ್ನು ಸ್ಮರಿಸುತ್ತಿದ್ದರು. ಸೈನಿಕರ ಮೀಟಿಂಗ್ ಸಂದರ್ಭದಲ್ಲಿ ಹರ್‌ಭಜನ್ ಸಿಂಗ್‌ಗೆ ಕುಳಿತುಕೊಳ್ಳಲು ಒಂದು ಕುರ್ಚಿ ಹಾಕಲಾಗುತ್ತಿತ್ತು. ಆ ಕುರ್ಚಿ ಮಾತ್ರ ಸದಾ ಖಾಲಿಯಾಗಿಯೇ ಇರುತ್ತಿತ್ತು. ಚೀನೀ ಸೈನಿಕರಂತೂ ಹರ್‌ಭಜನ್ ಸಿಂಗ್‌ನ ಆತ್ಮ ನಾಥುಲಾ ಕಣಿವೆಯ ಸುತ್ತ ಹಗಲುರಾತ್ರಿ ಗಸ್ತು ತಿರುಗುತ್ತಿದೆ ಎಂದೇ ಭಾವಿಸಿ ಹೆದರಿದ್ದರು. ತಾವೆಷ್ಟೇ ಗುಪ್ತ ತಯಾರಿ ಮಾಡಿಕೊಂಡರೂ ಅದು ಭಾರತೀಯ ಸೈನ್ಯಪಡೆಗೆ ಕ್ಷಣಮಾತ್ರದಲ್ಲಿ ತಿಳಿಯುತ್ತಿದ್ದುದರ ಹಿನ್ನೆಲೆ ಇದೇ ಹರ್‌ಭಜನ್ ಸಿಂಗ್‌ನ ಆತ್ಮ ಎಂದು ಭೀತರಾದರು. ತಮ್ಮ ಮೀಟಿಂಗ್ ವೇಳೆ ಆತನಿಗೊಂದು ಖಾಲಿ ಕುರ್ಚಿ ಇಟ್ಟು ಗೌರವಿಸತೊಡಗಿದರು.



ಇತ್ತ ಭಾರತೀಯ ಸೈನ್ಯಪಡೆಯಲ್ಲಿ ದಿನೇದಿನೇ ಹರ್‌ಭಜನ್ ಸಿಂಗ್ ಬಗ್ಗೆ ಗೌರವಾದರ ಹೆಚ್ಚತೊಡಗಿತು. ನಾಥುಲಾ ಗಡಿಗೆ ಕೊಂಚ ದೂರದಲ್ಲಿ ಬಂಕರ್ ನಿರ್ಮಿಸಿ, ಅಲ್ಲಿ ಹರ್‌ಭಜನ್ ಸಿಂಗ್ ಧರಿಸುತ್ತಿದ್ದ ಸೈನಿಕ ಸಮವಸ್ತ್ರ, ಬೂಟು, ಗನ್ ಜೋಡಿಸಿಡಲಾಯಿತು. ಪ್ರತಿನಿತ್ಯ ಆ ಸಮವಸ್ತ್ರಕ್ಕೆ ಇಸ್ತ್ರಿ ಮಾಡಿ, ಬೂಟು ಒರೆಸಿ ಇಡಲಾಗುತ್ತಿತ್ತು. ಆತನಿಗೆ ವಿಶ್ರಾಂತಿ ಪಡೆಯಲು ಒಂದು ಹಾಸಿಗೆಯನ್ನೂ ಇಡಲಾಗಿತ್ತು. ಆಶ್ಚರ್ಯವೆಂದರೆ ರಾತ್ರಿ ಜೋಡಿಸಿಟ್ಟ ಸಮವಸ್ತ್ರ, ಬೂಟು ಮರುದಿನ ಬೆಳಗ್ಗೆ ಬಳಸಿದಂತಿರುತ್ತಿತ್ತು. ಹಾಸಿಗೆ ಮುದುಡಿರುತ್ತಿತ್ತು. ಬೂಟಿಗೆ ಮಣ್ಣು ಮೆತ್ತಿರುತ್ತಿತ್ತು. ಸಮವಸ್ತ್ರ ಅಲ್ಲಲ್ಲಿ ಸುಕ್ಕಾಗಿ ಕೊಳೆ ಅಂಟಿಕೊಂಡಿರುತ್ತಿತ್ತು. ಹರ್‌ಭಜನ್ ಸಿಂಗ್ ಆತ್ಮ ರಾತ್ರಿಯಿಡೀ ಕರ್ತವ್ಯ ನಿರ್ವಹಿಸಿದೆ ಎಂಬುದರ ಸಂಕೇತ ಇದು ಎಂದು ಎಲ್ಲರೂ ಭಾವಿಸಿದರು.

ಹರ್‌ಭಜನ್‌ಸಿಂಗ್ ಸೈನಿಕನಾಗಿದ್ದಾಗ ಪ್ರತಿ ಸೆಪ್ಟೆಂಬರ್ 15ರಿಂದ ನವೆಂಬರ್ 15 ರವರೆಗೆ ಎರಡು ತಿಂಗಳು ರಜೆಯಲ್ಲಿ ಊರಿಗೆ ತೆರಳಿ ತಾಯಿಯೊಂದಿಗೆ ಇರುತ್ತಿದ್ದ. ಹಾಗಾಗಿ ಆತ ಸತ್ತ ಮೇಲೂ ಪ್ರತಿ ವರ್ಷ ಆತನ ಸಮವಸ್ತ್ರ ಲಗೇಜ್ ಪ್ಯಾಕ್ ಮಾಡಿ ಇಬ್ಬರು ಸೈನಿಕರು ಕಪೂರ್ತಲದ ಆತನ ಮನೆಗೆ ಒಯ್ಯುತ್ತಿದ್ದರು. ಊರಿನ ಜನರೆಲ್ಲ ಅಲ್ಲಿಗಾಗಮಿಸಿ ಸಮವಸ್ತ್ರ, ಭಾವಚಿತ್ರಕ್ಕೆ ವಂದಿಸಿ ಹೋಗುತ್ತಿದ್ದರು. ರಜೆ ಮುಗಿದ ಬಳಿಕ ಮತ್ತೆ ಆತನ ಸಮವಸ್ತ್ರ ಲಗೇಜನ್ನು ಪ್ಯಾಕ್ ಮಾಡಿ ನಾಥುಲದ ಬಂಕರಿಗೆ ಸೈನಿಕರು ತರುತ್ತಿದ್ದರು.

ಈ ನಡುವೆ ಸೈನ್ಯದಲ್ಲಿ ಆತನಿಗೆ (ಆತನ ಆತ್ಮಕ್ಕೆ) ಪದೋನ್ನತಿಯನ್ನು ನೀಡಲಾಯಿತು. ಸಿಪಾಯಿ ಆಗಿದ್ದ ಹರ್‌ಭಜನ್‌ಸಿಂಗ್ ಈಗ ಕ್ಯಾಪ್ಟನ್ ಹುದ್ದೆಗೇರಿದ್ದ. ಆತನ ವೇತನವನ್ನು ತಪ್ಪದೆ ಊರಿಗೆ ಕಳಿಸಲಾಗುತ್ತಿತ್ತು. ಕೊನೆಗೂ ಆತನಿಗೆ 60 ವರ್ಷವಾದಾಗ ನಿವೃತ್ತಿಗೊಳಿಸಲಾಯಿತು. ಆದರೆ ಅಷ್ಟರೊಳಗೆ ನಾಥುಲಾ ಸಮೀಪ ಹರ್ ಭಜನ್ ಸಿಂಗ್‌ಗೊಂದು ದೇಗುಲವನ್ನು ಸೈನಿಕರು ನಿರ್ಮಿಸಿದ್ದರು. ಹರ್‌ಭಜನ್‌ಸಿಂಗ್ ಭಾವಚಿತ್ರಕ್ಕೆ ಹಾರ ಹಾಕಿ ಪ್ರತಿನಿತ್ಯ ಧೂಪ, ದೀಪ ಸೇವೆ ಅಲ್ಲಿ ನಡೆಯುತ್ತಿತ್ತು. ಮಂದಿರ ಪ್ರವೇಶಿಸುವ ಮುನ್ನ ಸೈನಿಕರು ಬೂಟು ಕಳಚಿ ಒಳಗೆ ಬರುತ್ತಿದ್ದರು. ಬಾಬಾ ಹರ್‌ಭಜನ್ ಸಿಂಗ್ ಮಂದಿರವೆಂದೇ ಅದು ಪ್ರಖ್ಯಾತವಾಯಿತು. ಮಂದಿರಕ್ಕೆ ಸೈನಿಕರಲ್ಲದೆ ಸ್ಥಳೀಯ ನಿವಾಸಿಗಳೂ ಬಂದು ಗೌರವ ಸಲ್ಲಿಸ ತೊಡಗಿದರು.

1987ರ ಒಂದು ರಾತ್ರಿ ಚೀನಿ ಸೈನಿಕರು ಭಾರತದ ಗಡಿಯೊಳಗೆ ನುಗ್ಗಿ ಕಿರುಕುಳ ನೀಡಲು ಹೊಂಚು ಹಾಕಿದ್ದರು. ಆದರೆ ಆ ರಾತ್ರಿ ವಿಪರೀತ ಹಿಮಗಾಳಿ. ಹಿಮ ಪರ್ವತದಿಂದ ಹಿಮದ ಬಂಡೆಗಳು, ಜೊತೆಗೆ ತಲವಾರ್ ಹಿಡಿದ ಬಿಳಿ ಕುದುರೆ ಏರಿ ಬರುತ್ತಿದ್ದ ಸಿಖ್ ಯೋಧ. ಈ ದೃಶ್ಯ ನೋಡಿದ ಚೀನಿ ಸೈನಿಕರು ಹೆದರಿ, ಕಂಗಾಲಾಗಿ ಓಡಿ ಹೋಗಿದ್ದರು.

1999ರ ಕಾರ್ಗಿಲ್ ಯುದ್ಧದ ಸಂದರ್ಭದಲ್ಲಿ ಇಡೀ ದೇಶದ ಎಲ್ಲಾ ಗಡಿಗಳಲ್ಲಿ ಮುನ್ನೆಚ್ಚರಿಕೆ ವಹಿಸಲಾಗಿತ್ತು. ಸೈನಿಕರು ಎಲ್ಲೆಡೆ ಗಡಿ ಕಾಯುತ್ತಿದ್ದರು. ಆದರೆ ನಾಥುಲಾ ಸೆಕ್ಟರ್ ಮಾತ್ರ ಶಾಂತವಾಗಿತ್ತು. ಒಂದೇ ಒಂದು ಗುಂಡಿನ ಸದ್ದು ಅಲ್ಲಿ ಕೇಳಿ ಬರಲಿಲ್ಲ. ಆಗ ಒಬ್ಬ ಭಾರತೀಯ ಸೈನ್ಯಾಧಿಕಾರಿ ಹೇಳಿದ್ದರಂತೆ ''ಬಾಬಾನೇ ಪಹಲೇ ಹಿ ಡಾಂಟ್ ದಿಯಾ ಹೋಗಾ'' (ಬಾಬಾ ಹರ್‌ಭಜನ್‌ಸಿಂಗ್ ಮೊದಲೇ ಇಲ್ಲಿ ಶತ್ರುಗಳಿಗೆ ಹೆದರಿಕೆ ಹುಟ್ಟಿಸಿದ್ದಿರಬಹುದು.)

ಚೀನಾದ ಕಾಮ್ರೇಡ್ ದೊರೆಗಳು ಬಾಬಾ ಹರ್ ಭಜನ್‌ಸಿಂಗ್‌ನ ಆತ್ಮ ಭಾರತದ ಗಡಿಯನ್ನು ಸುರಕ್ಷಿತವಾಗಿಟ್ಟಿದೆ ಎಂಬುದನ್ನು ಸುತರಾಂ ನಂಬುವುದಿಲ್ಲ. ಆದರೆ ಗಡಿ ಕಾಯುವ ಚೀನಿ ಸೈನಿಕರು ಮಾತ್ರ ಬಾಂಬ್, ಕ್ಷಿಪಣಿಗಳಿಗಿಂತ ಬಾಬಾನ ಆಧ್ಯಾತ್ಮಿಕ ಶಕ್ತಿ ಹೆಚ್ಚು ಪ್ರಭಾವಶಾಲಿ. ಬಾಬಾನ ಆತ್ಮ ಶಕ್ತಿಯು ಸಕ್ರಿಯವಾಗಿರುವ ವರೆಗೆ ಭಾರತದ ಗಡಿಯೊಳಗೆ ನಮ್ಮ ಕಿತಾಪತಿ ಸಾಧ್ಯವಾಗದೆಂದು ನಂಬಿದ್ದಾರೆ.

ನಾಥುಲಾದಲ್ಲಿ ಈಗ ಬಾಬಾ ಹರ್‌ಭಜನ್‌ಸಿಂಗ್ ಹೆಸರಿನಲ್ಲಿ ಎರಡು ಮಂದಿರಗಳಿವೆ. ಒಂದು ಸಿಲ್ಕ್‌ರೋಡಿನಲ್ಲಿರುವ ಹಳೆಯ ಮಂದಿರ. ಇನ್ನೊಂದು ಡೋಕ್ಲಮ್‌ಗೆ ಸಮೀಪವಿರುವ ಹೊಸ ಮಂದಿರ. ಈ ಎರಡು ಮಂದಿರಗಳಿಗೆ ವರ್ಷವಿಡಿ ಅನೇಕ ಭಕ್ತರು, ಅಭಿಮಾನಿಗಳು ಆಗಮಿಸಿ ಗೌರವ ಸಲ್ಲಿಸುತ್ತಾರೆ. ಸಮವಸ್ತ್ರ ಧರಿಸಿದ ಸೈನಿಕರು ದಿನದ 24 ಗಂಟೆ ಈ ಮಂದಿರಗಳ ಕಾವಲು ಕಾಯುತ್ತಾರೆ. ಬಾಬಾ ಹರ್‌ಭಜನ್‌ಸಿಂಗ್ ಬಗ್ಗೆ ಅಂತಹ ಶ್ರದ್ಧೆ, ನಿಷ್ಠೆ ಅವರದು.

ಭಾರತೀಯ ಭೂಸೇನೆ ಹರ್‌ಭಜನ್ ಸಿಂಗ್‌ಗೆ ಮರಣೋತ್ತರ ಮಹಾವೀರ ಚಕ್ರ ಬಿರುದು ನೀಡಿ ಗೌರವಿಸಿದೆ. ತಾನು ಮಡಿದ ಮೇಲೂ ಭಾರತದ ಗಡಿಯನ್ನು ಕಟ್ಟೆಚ್ಚರ ವಹಿಸಿ ಕಾಯುತ್ತಿರುವ ಹರಭಜನ್ ಸಿಂಗ್ ಆತ್ಮದ ಕಥೆಯನ್ನು ಕೆಲವು ವಿಚಾರವಾದಿಗಳು ಒಪ್ಪದಿರಬಹುದು. ಇದೆಲ್ಲ ಭ್ರಮೆ ಎಂದು ಲೇವಡಿ ಮಾಡಬಹುದು. ಆದರೆ ಪ್ರತ್ಯಕ್ಷ ಗಡಿ ಕಾಯುತ್ತಿರುವ ಭಾರತೀಯ ಸೈನಿಕರು ಮಾತ್ರ ಇದನ್ನು ಈಗಲೂ ನಂಬುತ್ತಾರೆ. ಬಾಬಾ ಹರ್‌ಭಜನ್ ಸಿಂಗ್ ಮಂದಿರಕ್ಕೆ ಬೂಟು ಕಳಚಿ, ಬರಿಗಾಲದಲ್ಲಿ ತೆರಳಿ ಪೂಜೆ ಸಲ್ಲಿಸುತ್ತಾರೆ. ತಮಗೂ ಅಂತಹುದೇ ದೇಶ ಪ್ರೇಮ, ಪರಾಕ್ರಮ, ಸಾಹಸ ಪ್ರಾಪ್ತವಾಗಲೆಂದು ಮೌನವಾಗಿ ಪ್ರಾರ್ಥಿಸುತ್ತಾರೆ. ಸಿಕ್ಕಿಂನ ಡೋಕ್ಲಮ್, ನಾಥುಲಾಕ್ಕೆ ನೀವೇನಾದರೂ ಹೋದರೆ ತಪ್ಪದೇ ಬಾಬಾ ಹರ್ ಭಜನ್ ಸಿಂಗ್ ಮಂದಿರದ ದರ್ಶನ ಮಾಡಿ ಬನ್ನಿ.

ಹರೆಯದವರಲ್ಲಿ ಮಾನಸಿಕ ಕಾಯಿಲೆಗಳು


ಅಧ್ಯಯನಗಳ ಪ್ರಕಾರ ಸುಮಾರು ಶೇಕಡಾ ಅರವತ್ತು ಭಾಗದ ಮನೋರೋಗಗಳು ಪ್ರಾರಂಭವಾಗುವುದು ಹದಿನಾರರಿಂದ ಇಪ್ಪತ್ತನೇ ವಯಸ್ಸಿನ ಅವಧಿಯಲ್ಲಿ.

ತಾರುಣ್ಯ ತಲ್ಲಣ
• ಡಾ. ಕೆ. ಆರ್. ಶ್ರೀಧರ್
drkrsridhar208@gmail.com



'ಅರವತ್ತಕ್ಕೆ ಅರುಳೋ ಮರುಳೋ' ಎಂಬ ಗಾದೆಯಂತೆ ಮಕ್ಕಳು ಮತ್ತು ಹರೆಯದವರು ಮಾನಸಿಕವಾಗಿ ಕಾಯಿಲೆಗೆ ತುತ್ತಾಗುವುದಿಲ್ಲ ಎಂಬ ಕಾಲವೊಂದಿತ್ತು. ಹರೆಯದ ಹುಡುಗನೊಬ್ಬನಿಗೆ ಮಾನಸಿಕ ಕಾಯಿಲೆ ಇದೆಯೇ ಎಂದು ಯಾರಾದರೂ ಕೇಳಿದರೆ, ಅಯ್ಯೋ ಅವನು ಇನ್ನೂ ಹುಡುಗ. ಅವನಿಗೆ ಯಾವ ಜವಾಬ್ದಾರಿಯೂ ಇಲ್ಲ. ಹಾಗಾಗಿ ಅವನಿಗೆ ಮನೋರೋಗ ಎಲ್ಲಿಂದ ಬರಬೇಕು? ಎನ್ನುತ್ತಿದ್ದರು. ಈಗಲೂ ಈ ತಪ್ಪು ಕಲ್ಪನೆ ಸಮಾಜದಲ್ಲಿ ವ್ಯಾಪಕವಾಗಿದೆ.

ಹರೆಯದವರಲ್ಲಿ ನಾವು ನೋಡುವ ಆತಂಕ, ಗಾಬರಿ, ಬೇಸರ, ತುಂಟಾಟ, ಕೋಪ, ದುಃಖ ಇವುಗಳನ್ನು ಮನೋರೋಗ ಎನ್ನಬಹುದೇ ಎಂದು ಕೇಳುವವರಿದ್ದಾರೆ. ಹರೆಯದವರು ಎದುರಿಸಬೇಕಾದ ಒತ್ತಡಗಳು ಮತ್ತು ಸವಾಲುಗಳು ಅವರ ಮನಸ್ಸನ್ನು ಅಲ್ಲೋಲ ಕಲ್ಲೋಲಗೊಳಿಸುತ್ತವೆ. ಒತ್ತಡಗಳು ಮತ್ತು ಸವಾಲುಗಳಿಂದ ಅಪಕ್ವವಾದ ಹರೆಯದ ಮನಸ್ಸು ವಿಚಲಿತಗೊಳ್ಳುತ್ತದೆ. ಹರೆಯದಲ್ಲಿ ಸ್ರವಿಸುವ ಲೈಂಗಿಕ ಮತ್ತು ನರಚೋದನಿಕೆಗಳು ಮನಸ್ಸನ್ನು ಆತಂಕಕ್ಕೀಡು ಮಾಡುತ್ತವೆ. ಈ ವಿಧದ ಏರಿಳಿತಗಳು ಹರೆಯದವರಲ್ಲಿ ಸಾಮಾನ್ಯ. ಒಮ್ಮೆ ಸವಾಲುಗಳನ್ನು ಮತ್ತು ಒತ್ತಡಗಳನ್ನು ಯಶಸ್ವಿಯಾಗಿ ನಿಭಾಯಿಸಿ, ಪರಿಹಾರ ಕಂಡುಕೊಂಡಾಗ ಮನಸ್ಸು ನಿರಾಳವಾಗಿ ಎಂದಿನಂತೆ ಸಾಧನೆಗೈಯ್ಯಲು ತಯಾರಾಗುತ್ತದೆ. ಇವು ಮನೋರೋಗಗಳು ಎನಿಸಿಕೊಳ್ಳುವುದಿಲ್ಲ. ಇದಕ್ಕೆ ಬಾಲ್ಯದಿಂದಲೂ ಜೀವನ ಕೌಶಲಗಳನ್ನು ರೂಢಿಸಿಕೊಳ್ಳುವುದು ಅವಶ್ಯ. ಒತ್ತಡಗಳನ್ನು ಆತ್ಮೀಯರೊಂದಿಗೆ ಹಂಚಿಕೊಂಡಾಗ, ಪರಿಹಾರ ದೊರೆತು ಮನಸ್ಸು ನಿರಾಳಗೊಳ್ಳುತ್ತದೆ. ಸವಾಲುಗಳನ್ನು ಸಮಾಧಾನ ಮತ್ತು ಧೈರ್ಯದಿಂದ ಎದುರಿಸಬಹುದು. ಅವು ಕಷ್ಟವೆನಿಸಿದಾಗ ಹಿರಿಯರು, ಪೋಷಕರು, ಉಪಾಧ್ಯಾಯರು ಮತ್ತು ಆತ್ಮೀಯ ಸ್ನೇಹಿತರೊಂದಿಗೆ ಹಂಚಿಕೊಂಡು, ಪರಿಹಾರ ಕಂಡುಕೊಳ್ಳಬೇಕು.



ಮೇಲಿನದನ್ನು ಅವಲೋಕಿಸಿದಾಗ ಹರೆಯದವರಲ್ಲಿ ಮನೋರೋಗಗಳು ಬರುವುದಿಲ್ಲವೇ? ಎಂಬ ಪ್ರಶ್ನೆ ಏಳುತ್ತದೆ. ಮೊದಲೇ ತಿಳಿಸಿದಂತೆ ಹರೆಯದ ಒತ್ತಡ ಮತ್ತು ಸವಾಲುಗಳನ್ನು ಎದುರಿಸಿಯೂ ಕೆಲವು ವೇಳೆ ಮನೋರೋಗಕ್ಕೆ ತುತ್ತಾಗಬಹುದು. ಅಧ್ಯಯನಗಳ ಪ್ರಕಾರ ಪ್ರತಿಶತ ಅರವತ್ತು ಭಾಗದ ಮಾನಸಿಕ ಕಾಯಿಲೆಗಳು ಪ್ರಾರಂಭವಾಗುವುದು ಹರೆಯದ ಅವಧಿಯಲ್ಲಿ. ಅದರ ಅರ್ಥ ಸೌಮ್ಯತರದ ಮನೋರೋಗ ಲಕ್ಷಣಗಳು ಪ್ರಾರಂಭವಾಗಿ ಅವು ಯಾರ ಗಮನಕ್ಕೂ ಬರುವುದಿಲ್ಲ. ತಮ್ಮ ಮಗುವಿನ ನಡವಳಿಕೆಯಲ್ಲಿ ಏನೋ ವ್ಯತ್ಯಾಸವಾಗಿದೆ ಎಂದು ಕಂಡುಬಂದರೂ ಅದು ತೀವ್ರವಾಗುವವರೆಗೆ ಗಮನ ನೀಡುವುದಿಲ್ಲ. ಗಮನ ನೀಡಿದರೂ ಅದು ಯಾವುದೋ ದೆವ್ವ, ಭೂತಚೇಷ್ಟೆ, ಗ್ರಹಚಾರ ಎಂದು ಭಾವಿಸಿ, ಅವುಗಳ ಮೊರೆಹೋಗುತ್ತಾರೆ. ಅದು ಮನೋರೋಗ ಎಂದು ಭಾವಿಸುವುದಿಲ್ಲ. ಒಮ್ಮೆ ತಮ್ಮ ಮಗುವಿಗೆ ಮನೋರೋಗ ಇದೆ ಎಂದು ಅನಿಸಿದರೂ, ಅದಕ್ಕೆ ಮನೋವೈದ್ಯರನ್ನು ಸಂಪರ್ಕಿಸುವುದಿಲ್ಲ. ಅದಕ್ಕೆ ಕಾರಣ, ಅದು ಇತರರಿಗೆ ತಿಳಿದು ಎಲ್ಲಿ ತಮ್ಮ ಸಾಮಾಜಿಕ ಪ್ರತಿಷ್ಠೆಗೆ ಅಡ್ಡಗಾಲಾಗುವುದೋ ಎಂಬ ಪೋಷಕರ ಭಾವನೆ.

ಮನೋರೋಗಕ್ಕೆ ಕೌನ್ಸೆಲಿಂಗ್ ಉತ್ತಮವಾದ ಮದ್ದೆಂದು ನಂಬುವವರು ವ್ಯಾಪಕವಾಗಿದ್ದಾರೆ. ತೀವ್ರತರದ ಮನೋರೋಗಕ್ಕೆ ಕೌನ್ಸೆಲಿಂಗ್ ಚಿಕಿತ್ಸೆಯ ಒಂದು ಭಾಗವೇ ವಿನಃ, ಅದೇ ಮುಖ್ಯವಾದ ಚಿಕಿತ್ಸೆಯಲ್ಲ. ಔಷಧ ಚಿಕಿತ್ಸೆ ಅನಿವಾರ್ಯ. ಕೆಲವು ಪೋಷಕರು ತಮ್ಮ ಮಕ್ಕಳನ್ನು ತಿಂಗಳುಗಟ್ಟಲೆ ಅಥವಾ ವರ್ಷಗಟ್ಟಲೇ ಕೌನ್ಸೆಲಿಂಗ್ ಮಾಡಿಸಿ ಕೊನೆಗೆ ಮನೋವೈದ್ಯರ ಹತ್ತಿರ ಚಿಕಿತ್ಸೆಗಾಗಿ ಕರೆತರುತ್ತಾರೆ.

ಹರೆಯದವರಲ್ಲಿ ಮಾನಸಿಕ ಕಾಯಿಲೆಗಳನ್ನು ಗುರುತಿಸುವಾಗ ಇನ್ನೂ ಕೆಲವು ಅಂಶಗಳನ್ನು ಗಮನಿಸಬೇಕಾಗುತ್ತದೆ. ಅವುಗಳನ್ನು ಎರಡು ವಿಧಗಳಾಗಿ ಗುರುತಿಸಬಹುದು. ಮೊದಲನೆಯದು ಗುರುತಿಸಲು ಇರುವ ಅಡೆತಡೆಗಳು (Barriers). ಎರಡನೆಯದು ಸಹಾಯಕವಾಗುವ (Facililators) ಅಂಶಗಳು. ಹರೆಯದವರ ಸಮಸ್ಯೆಗಳನ್ನು ನಿಭಾಯಿಸುವುದು (Intervention) ಮೂರನೆಯ ಅಂಶ.

ಅಧ್ಯಯನಗಳ ಪ್ರಕಾರ ಸುಮಾರು ಶೇಕಡಾ ಅರವತ್ತು ಭಾಗದ ಮನೋರೋಗಗಳು ಪ್ರಾರಂಭವಾಗುವುದು ಹದಿನಾರರಿಂದ ಇಪ್ಪತ್ತನೇ ವಯಸ್ಸಿನ ಅವಧಿಯಲ್ಲಿ. ಅದರಲ್ಲಿಯೂ ಹೆಚ್ಚಾಗಿ ಕಂಡುಬರುವುದು ಖಿನ್ನತೆ, ಆತಂಕ ಮತ್ತು ಭಯ. ಇದನ್ನು ಗುರುತಿಸಿ ಚಿಕಿತ್ಸೆ ಕೊಡಿಸಲು, ಅದರ ಕುರಿತು ಪೋಷಕರಿಗೆ ಇರುವ ಕಳಂಕ ಮತ್ತು ತಪ್ಪು ಕಲ್ಪನೆಗಳು ಒಂದು ಅಡ್ಡಗೋಡೆ. ಎಲ್ಲಿ ತಮ್ಮ ಸಾಮಾಜಿಕ ಪ್ರತಿಷ್ಠೆಗೆ ಕುಂದು ಬರುತ್ತದೋ ಎಂಬ ಅನಿಸಿಕೆ. ಇದಕ್ಕೆ ಕಾರಣ ಮನೋರೋಗವು ಒಂದು ಕಳಂಕ ಮತ್ತು ಮನೋರೋಗಕ್ಕೆ ಮದ್ದಿಲ್ಲ ಎಂಬ ತಪ್ಪು ಕಲ್ಪನೆಗಳು. ಚಿಕಿತ್ಸೆ ಕೊಡಿಸಿದರೆ, ಮನೋವೈದ್ಯರು ನಿದ್ದೆ ಗುಳಿಗೆಗಳನ್ನು ಕೊಡುತ್ತಾರೆ. ಆಜೀವ ಪರ್ಯಂತ ಔಷಧಗಳನ್ನು ಸೇವಿಸಬೇಕಾಗುತ್ತದೆ ಎಂಬ ಭಯ. ಅದರಿಂದ ಅಡಿಕ್ಷನ್ ಆಗಿ ಮಕ್ಕಳ ಭವಿಷ್ಯ ಹಾಳಾಗುತ್ತದೆ ಎಂದು ಪೋಷಕರು ತಪ್ಪಾಗಿ ಭಾವಿಸುತ್ತಾರೆ. ಹರೆಯದ ಮಕ್ಕಳು ಬೇಸರ ಪಟ್ಟುಕೊಳ್ಳುವುದು, ಮಂಕಾಗಿರುವುದು ಅಥವಾ ತಮಗೆ ಓದುವುದಕ್ಕೆ ಆಸಕ್ತಿ ಇಲ್ಲ ಎಂದು ಹೇಳುವುದು ಸಾಮಾನ್ಯ ಎಂದು ಭಾವಿಸಿ, ತಿಂಗಳು-ವರ್ಷಗಟ್ಟಲೇ ಅವರ ಕುರಿತು ಗಮನವೀಯುವುದೇ ಇಲ್ಲ. ಮಗು ಏನಾದರೂ ಅಮ್ಮ ನನಗೆ ಸುಸ್ತಾಗುತ್ತದೆ, ಜೀವವೇ ಬೇಡ ಅನ್ನಿಸುತ್ತೆ ಎಂದರೆ, ಹಾಗೆಲ್ಲಾ ಹೇಳಬಾರದು. ಅದು ಅಪಶಕುನ. ಅಂಥಾದ್ದು ನಿನಗೇನಾಗಿದೆ. ಸುಮ್ಮನೆ ಓದು ಹೋಗು ಎಂದು ಪೋಷಕರು ಹೇಳುತ್ತಾರೆ.

ಮಾನಸಿಕ ಕಾಯಿಲೆಗಳನ್ನು ಗುರುತಿಸಲು ಸಹಾಯಕವಾಗುವ ಕೆಲವು ಅಂಶಗಳನ್ನು ತಿಳಿಯೋಣ. ''ಕೆಲವಂ ಬಲ್ಲವರಿಂದೆ ಕಲ್ತು ಕೆಲವಂ ಶಾಸ್ತ್ರಂಗಳಂ ಕೇಳುತಂ ಕೆಲವಂ ಮಾಳ್ಪವರಿಂದೆ ಕಂಡು, ಕೆಲವಂ ಸುಜ್ಞಾನದಿಂದ ನೋಡುತಂ ಕೆಲವಂ ಸಜ್ಜನ ಸಂಘದಿಂದಲರಿಯಲ್ ಸರ್ವಜ್ಞನಪ್ಪಾ ಕೇಳ್ವವಂ ಪಳ್ಳಸಮುಧವೇ ಹರಹರಾ ಶ್ರೀ ಚೆನ್ನಸೋಮೇಶ್ವರಾ'' ಎಂಬ ಹಾಗೆ ಆಕಾಶವಾಣಿ, ದೃಶ್ಯ ಮಾಧ್ಯಮಗಳು, ಚಲನ ಚಿತ್ರಗಳ ಮೂಲಕ ತಿಳಿಯುವ ಮಾಹಿತಿಗಳು, ಮುದ್ರಣ ಮಾಧ್ಯಮಗಳಲ್ಲಿ ಬರುವ ಲೇಖನಗಳು, ಅಕ್ಕ ಪಕ್ಕದವರು, ಆತ್ಮೀಯರು ತಮ್ಮ ಅನುಭವಗಳಿಂದ ತಿಳಿಸಿ ಹೇಳುವ ಮಾಹಿತಿಗಳು ಇವು ಹರೆಯದವರಲ್ಲಿ ಮಾನಸಿಕ ಕಾಯಿಲೆಗಳನ್ನು ಗುರುತಿಸಿ ಚಿಕಿತ್ಸೆ ಕೊಡಿಸಲು ಪೂರಕವಾಗುತ್ತವೆ.

ಮೇಲಿನ ಅಂಶಗಳು ಹರೆಯದವರಲ್ಲಿ ಮಾನಸಿಕ ಸಮಸ್ಯೆ ಅಥವಾ ಕಾಯಿಲೆಗಳನ್ನು ಪ್ರಾರಂಭದಲ್ಲೇ ಗುರುತಿಸಿ ಚಿಕಿತ್ಸೆ ಕೊಡಿಸಿದರೆ, ಅವರ ಮನೋರೋಗವನ್ನು ಪ್ರಾರಂಭದಲ್ಲೆ ಗುಣಪಡಿಸಬಹುದು.

ಕೆಲವು ಹರೆಯದವರು ತಮ್ಮ ಸಮಸ್ಯೆಗಳನ್ನು ತಾವೇ ನಿಭಾಯಿಸಬಲ್ಲರು. ಇದಕ್ಕೆ ಕಾರಣ ತಮಗೆ ಉಂಟಾಗುವ ವಿಫಲತೆ ಮತ್ತು ಸವಾಲುಗಳನ್ನು ನಿಭಾಯಿಸುವುದು ಹೇಗೆ ಎಂಬುದನ್ನು ತಾಳ್ಮೆಯಿಂದ ಯೋಚಿಸುತ್ತಾರೆ. ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಸಾಧ್ಯವಾಗದಿದ್ದರೆ, ಪೋಷಕರು, ಆತ್ಮೀಯ ಗೆಳೆಯರು ಅಥವಾ ಹಿರಿಯರ ಹತ್ತಿರ ಕೇಳಿ ಪರಿಹಾರವನ್ನು ಕಂಡುಕೊಳ್ಳುತ್ತಾರೆ. ಸವಾಲಿನಲ್ಲಿ ವಿಫಲರಾದರೆ, ವಿಚಲಿತಗೊಳ್ಳದೇ ತಾಳ್ಮೆಯಿಂದ ಸಮಸ್ಯೆಯನ್ನು ಕುರಿತು ಬೇರೆ ಬೇರೆ ದೃಷ್ಟಿಕೋನಗಳಿಂದ ಚಿಂತನೆ ನಡೆಸಿ ಪರಿಹಾರವನ್ನು ಕಂಡುಕೊಳ್ಳುತ್ತಾರೆ. ಪೋಷಕರು ಮತ್ತು ಸದಸ್ಯರು ಸದಾ ಇವರ ಬೆಂಬಲಕ್ಕಿರುತ್ತಾರೆ. ಬಾಲ್ಯದಿಂದಲೂ ಸಕಾರಾತ್ಮಕವಾಗಿ ಮಾರ್ಗದರ್ಶನ ಮಾಡುವ ಪೋಷಕರು ಅಥವಾ ಹಿರಿಯರ ಸಹಾಯದಿಂದ ಅವಶ್ಯವಾದ ಜೀವನ ಕೌಶಲಗಳನ್ನು ತಮ್ಮಲ್ಲಿ ಅಳವಡಿಸಿಕೊಂಡರುತ್ತಾರೆ.

ವಿಶ್ವ ಆರೋಗ್ಯ ಸಂಸ್ಥೆಯು ಹತ್ತು ಜೀವನ ಕೌಶಲಗಳನ್ನು ಮಕ್ಕಳು ಮತ್ತು ಹರೆಯದವರಲ್ಲಿ ರೂಢಿಸಬೇಕೆಂಬ ಸಂದೇಶ ನೀಡಿದೆ. ಅವುಗಳು ಯಾವುವೆಂದರೆ, ಸಮಗ್ರವಾಗಿ ಯೋಚಿಸುವುದು, ಸೃಜನಾತ್ಮಕವಾಗಿ ಯೋಚಿಸುವುದು, ತೀರ್ಮಾನ ಕೈಗೊಳ್ಳುವುದು. ಸಮಸ್ಯೆಗಳನ್ನು ಪರಿಹರಿಸುವುದು, ಪರಿಣಾಮಕಾರೀ ಸಂವಹನ, ಮಾನವೀಯ ಸಂಬಂಧಗಳನ್ನು ನಿಭಾಯಿಸುವುದು, ಅನುಭೂತಿ, ಸ್ವಅರಿವು, ಒತ್ತಡಗಳನ್ನು ನಿಭಾಯಿಸುವುದು, ಮತ್ತು ಭಾವನೆಗಳನ್ನು ಹಿಡಿತದಲ್ಲಿಡುವುದು. ಇವುಗಳನ್ನು ಮಕ್ಕಳು ಮತ್ತು ಹರೆಯದವರಲ್ಲಿ ಪೋಷಕರು ರೂಢಿಗೊಳಿಸಬೇಕು. ಇದರಿಂದ ಆತ್ಮವಿಶ್ವಾಸ ಹೆಚ್ಚುತ್ತದೆ. ಧೈರ್ಯ, ಸಕಾರಾತ್ಮಕ ಆಲೋಚನೆಗಳು ಮನಸ್ಸನ್ನು ಶಾಂತವಾಗಿಡುತ್ತದೆ. ಹರೆಯದವರು ತಮ್ಮ ಸವಾಲು ಮತ್ತು ಒತ್ತಡಗಳನ್ನು ಸುಲಭವಾಗಿ ನಿಭಾಯಿಸಬಲ್ಲರು.


ಹಳೆಯ ಪುಸ್ತಕಗಳ, ಹಳತಾಗದ ನೆನಪುಗಳು!

ಮೊದಲೆಲ್ಲ ಪರೀಕ್ಷೆ ಮುಗಿದು, ಫಲಿತಾಂಶ ಹೊರಬೀಳುವ ಮುನ್ನವೇ ಹಳೆ ಪುಸ್ತಕಗಳನ್ನು ಇನ್ನೊಬ್ಬ ವಿದ್ಯಾರ್ಥಿಗೆ ಮಾರಾಟ ಮಾಡುವ ವಹಿವಾಟು ನಡೆದಿರುತ್ತಿತ್ತು.

ವಾರದ ವರಸೆ
• ಸಂದೇಶ್ ನಾಯ್ಕ್ ಹಕ್ಲಾಡಿ
naiksh2@gmail.com



ಶೈಕ್ಷಣಿಕ ವರ್ಷವೊಂದು ತನ್ನ ಕೊನೆ ದಿನಗಳನ್ನು ಎಣಿಸಲು ಶುರುವಿಟ್ಟುಕೊಂಡಿದೆ. ಇನ್ನೇನು ಕೆಲವೇ ದಿನಗಳಲ್ಲಿ ಅದು ನನ್ನ ಪಾಳಿ ಮುಗಿಯಿತು ಎಂದು ಎದ್ದು ನಡೆಯಲಿದೆ. ಪರೀಕ್ಷೆಗಳೂ, ಅದರ ಹಿಂದಿನ ಪೋಷಕರ ನಿರೀಕ್ಷೆಗಳೂ ಒಂದೇ ಸಮನೇ, ಏರುತ್ತಿರುವ ಬೇಸಿಗೆಯ ಬಿಸಿಯನ್ನೂ ಹಿಂದಿಕ್ಕಿ ಮೇಲೆ ಮೇಲೇರುತ್ತಲೇ ಇದೆ. ಈ ತಾಪಮಾನ, 'ಕೋಪ'ಮಾನಗಳನ್ನು ಅಳೆಯಲು ಯಾವ ಮಾಪಕವೂ ಸದ್ಯಕ್ಕೆ ಲಭ್ಯವಿಲ್ಲ ಎನ್ನಬಹುದು. ಅಂಕಗಳ ಅಂತರ್ಯದಲ್ಲಿ ಅಡಗಿರುವ ಆತಂಕವೂ ಮೆಲ್ಲಮೆಲ್ಲನೇ ಈಚೆ ಬರಲು ಹವಣಿಸುತ್ತಿರುವ ಕಾಲವಿದು. ಏನೇ ಆದರೂ ಈ ವರ್ಷದ ತನ್ನ ಪ್ರಯತ್ನ 'ರಿಮಾರ್ಕ್‌ಬಲ್' ಎನಿಸಿಕೊಳ್ಳಬೇಕು, ಎಲ್ಲರಿಂದಲೂ ಅದಕ್ಕಾಗಿ ಹೊಗಳಿಸಿಕೊಳ್ಳಬೇಕು ಎಂದರೆ ಮಕ್ಕಳ ಕೈಯ್ಯಲ್ಲಿ ಇರುವ ಒಂದೇ ಆಯ್ಕೆ ಎಂದರೆ ಅದು ಒಳ್ಳೆಯ 'ಮಾರ್ಕ್' ಗಳಿಸುವುದು. ಇದಕ್ಕಾಗಿ ವರ್ಷ ಪೂರ್ತಿ ಸದ್ದಿಲ್ಲದೇ ಶ್ರಮಿಸುವಲ್ಲಿ ಪುಸ್ತಕಗಳ ಪಾತ್ರವೂ ದೊಡ್ಡದು. ಅಂತಿಪ್ಪ ಪುಸ್ತಕಗಳೂ ತಮ್ಮ ಕೆಲಸ ಮುಗಿಯಿತೆಂದು ಇನ್ನೇನು ನಿಧಾನಕ್ಕೆ ಬದಿಗೆ ಸರಿಯಲಿವೆ. ಹಳತಾದ ಪುಸ್ತಕಗಳ ಈ ಕಾಲದ ಹಳಹಳಿಕೆಗಳೇ ಬೇರೆ. ಆದರೆ ಈ ಹಳೆ ಪುಸ್ತಕಗಳ ಹಿಂದೆ ಎಂದೂ ಹಳತಾಗದ ನೆನಪಿನ ಹೊಳಹುಗಳು ಮಸ್ತಕದಲ್ಲಿ ಸಾಕಷ್ಟು ಸಂಗ್ರಹವಾಗಿದೆ ಎಂದರೆ ಅಂಥವರನ್ನು 90ರ ದಶಕದಲ್ಲಿ ಓದಿ, ಬೆಳೆದವರು ಎಂದು ಖಂಡಿತವಾಗಿಯೂ ಹೇಳಬಹುದು.



ಹಾಗೆ ನೋಡಿದರೆ ಆ ಕಾಲವೇ ಅಂಥದ್ದು. 'ಹಳತು ಹೊನ್ನು' ಎಂಬ ನಂಬಿಕೆ ಅತ್ಯಂತ ಬಲವಾಗಿದ್ದು, ಅದನ್ನು ಎಲ್ಲದರಲ್ಲೂ ಚಾಚೂ ತಪ್ಪದೇ ಪಾಲಿಸಲಾಗುತ್ತಿತ್ತು. 'ಹೊನ್ನು' ಎಂದ ಕಾರಣಕ್ಕೆ ಅದನ್ನು ಸುವರ್ಣ ಕಾಲ ಎನ್ನಬಹುದೇ? ಬರು ಬರುತ್ತಾ ಹೊನ್ನಿನ ದರವೂ ಎರ್ರಾಬಿರ್ರಿ ಏರಿಕೆಯಾಯಿತು, ಹಾಗೆಯೇ ಹಳತೆಲ್ಲ ಹೊನ್ನು ಎಂದು ಭಾವಿಸುವ ಮನೋಭಾವವೂ ಕ್ರಮೇಣ ಹೊಳಪು ಕಳೆದುಕೊಂಡು, ಇಂದಿನವರ ಪಾಲಿಗೆ ಅದು ಅಕ್ಷರಶಃ ಗೋಲ್ಡ್ ಅಲ್ಲ ರೋಲ್ಡ್‌ಗೋಲ್ಡ್ ಎಂದು ಅನಿಸಲೂ ಪ್ರಾರಂಭವಾಯಿತು. ಇರಲಿ ಅದು ಕಾಲದ ಬದಲಾವಣೆಯ ಪ್ರಭಾವವೆನ್ನಿ. ಮತ್ತೆ ನಾವು ಆ ಹಳೆಯದರತ್ತ ಕೊಂಚ ಹೊರಳೋಣ. ಹಾಗಂತ ಇದು ಬರೀ ಹಳಿಹಳಿಕೆಯೋ, ಅತಾರ್ಕಿಕ ಹೊಗಳಿಕೆಯೋ ಅಲ್ಲ.

ಆ ದಿನಮಾನಗಳಲ್ಲಿ ಹಳೆಯ ಪುಸ್ತಕಗಳಿಗೆ ಭಾರೀ ಡಿಮ್ಯಾಂಡ್ ಇದ್ದಿರುತ್ತಿತ್ತು. ಈ ವರ್ಷದ ಪರೀಕ್ಷೆ ಮುಗಿಯಿತು, ಇನ್ನು ಈ ಪುಸ್ತಕಗಳಿಗೆ ಚಿಕ್ಕಾಸಿನ ಬೆಲೆಯೂ ಇಲ್ಲವೇನೋ ಎಂಬಂತೆ ಎಲ್ಲೆಂದರಲ್ಲಿ ಎಸೆಯೋ ರೂಢಿ ಆಗ ಇರಲಿಲ್ಲವಾಗಿತ್ತು. ಪರೀಕ್ಷೆಗಳೆಲ್ಲ ಮುಗಿದು, ಫಲಿತಾಂಶ ಹೊರಬೀಳುವ ಮುನ್ನವೇ ಈ ಹಳೆ ಪುಸ್ತಕಗಳನ್ನು ಇನ್ನೊಬ್ಬ ವಿದ್ಯಾರ್ಥಿಗೆ ಮಾರಾಟ ಮಾಡುವ ವಹಿವಾಟು ನಡೆದಿರುತ್ತಿತ್ತು. ಅಲ್ಲಿಗೆ ಆ ಪುಸ್ತಕಗಳೆಲ್ಲವೂ ಮಾರುದ್ದದ ಭಾಷಣ, ಭಾರೀ ಪ್ರಚಾರದ ತೆವಲು ಇತ್ಯಾದಿಗಳಾವುವೂ ಇಲ್ಲದೇ ಮರುಬಳಕೆಯಾಗುತ್ತಿದ್ದವು.

ನಿಗದಿತ ತರಗತಿಯ ಪುಸ್ತಕಗಳು, ಆ ವರ್ಷ ಮುಗಿದಾಕ್ಷಣ ತಾವು ತೊಟ್ಟಿದ್ದ ಬಟ್ಟೆಯನ್ನು ಬಿಚ್ಚಿಸಿಕೊಂಡು, ಅಂದರೆ ಅದಕ್ಕೆ ಹಾಕಿದ್ದ ಬೈಂಡ್‌ನ್ನು ತೆಗೆದಿರಿಸಿಕೊಂಡು ಚೊಕ್ಕಟವಾಗಿ ಜೋಡಿಸಲ್ಪಡುತ್ತಿದ್ದವು. ಒಮ್ಮೆ ಆ ಎಲ್ಲಾ ಹಾಳೆಗಳನ್ನು ತಿರುವಿ ಹಾಕಿ ಅದರೊಳಗೆ ಏನಾದರೂ ಇರಿಸಿದ್ದರೆ ಅದನ್ನೆಲ್ಲಾ ತೆಗೆದು ಅವುಗಳ ಆ ವರ್ಷದ ಜವಾಬ್ದಾರಿಯಿಂದ ಮುಕ್ತಗೊಳಿಸಲಾಗುತ್ತಿತ್ತು. ಆದರೆ ಅವುಗಳು ವ್ಯರ್ಥವಾಗುತ್ತಿರಲಿಲ್ಲ, ಬದಲಿಗೆ ನಾಳೆಯ ಇನ್ನಾರದೋ ಓದಿಗೆ ಅವು ಆ ಮೂಲಕ ಸಜ್ಜುಗೊಳ್ಳುತ್ತಿದ್ದವು. ಆ ವರ್ಷ ಹಾಕಿದ್ದ ಬೈಂಡ್, ಲೇಬಲ್ ಮತ್ತು ಅದರ ಮೇಲೆ ಬರೆದ ಹೆಸರುಗಳಿಗೆ ಅಲ್ಲೇ ಶಾಶ್ವತ ನಿವೃತ್ತಿ. ಆ ಜಾಗಕ್ಕೆ ಇನ್ನು ಬೇರೆ ಪುಸ್ತಕಗಳು ಬಂದರೆ, ಖಾಲಿಯಾದ ಮತ್ತಾವುದೋ ಜಾಗವನ್ನು ಭರ್ತಿ ಮಾಡಲು ಈ ಪುಸ್ತಕಗಳ ಕಟ್ಟು ಹೊರಡಲನುವಾಗುತ್ತಿತ್ತು. ಪ್ರತೀ ಶೈಕ್ಷಣಿಕ ವರ್ಷಾಂತ್ಯದಲ್ಲೂ ಅದು ತಪ್ಪದೇ ನಡೆಯುವ ಪ್ರಕ್ರಿಯೆ. ಪುಸ್ತಕದ ಗರಿ ಗರಿ ಹಾಳೆಗಳ ನಡುವೆ ಅಲ್ಲಲ್ಲಿ ಹಾಕಿದ್ದ ಚಿತ್ತು, ಕಾಟು, ಗೀಚು ಹಾಗೂ ಗೀಟುಗಳೆಲ್ಲವೂ ತಮ್ಮ ಆ ವರುಷದ ಮಾಲೀಕನಿಗೆ ವಿದಾಯ ಹೇಳಿ, ಇನ್ನಾರದೋ ಕೈ ಸೇರಲು ಮನಸ್ಸಿಲ್ಲದ ಮನಸ್ಸಿನಲ್ಲಿ ಅನುವಾಗುತ್ತಿದ್ದವು.

ಈ ಹಳೆಯ ಪುಸ್ತಕಗಳ ಕೊಡು-ಕೊಳ್ಳುವಿಕೆ ಎನ್ನುವುದು ಅಂದಿನ ಮಕ್ಕಳಲ್ಲಿ ಒಂದು ರೀತಿಯ ವ್ಯಾಪಾರ ಹಾಗೂ ವ್ಯವಹಾರ ಜ್ಞಾನದ ಪ್ರಾಯೋಗಿಕ ಅನುಭವ ಮೂಡಿಸುವಲ್ಲಿ ಸಫಲವಾಗುತ್ತಿದ್ದವು. ಕೆಲವೊಮ್ಮೆ ಮನೆಯ ಹಿರಿಯರ ಪಾತ್ರವೂ ಇರುತ್ತಿತ್ತು. ಅವರೇ ಖುದ್ದು ಬಂದು ಮುಂದಿನ ವರ್ಷಕ್ಕೆ ಪುಸ್ತಕ ತಮ್ಮ ಮಕ್ಕಳಿಗೇ ನೀಡಬೇಕು ಎಂದು ಆ ಹಳೆಯ ಬುಕ್‌ಗಳನ್ನೇ ಪ್ರೀ-ಬುಕ್ ಮಾಡಿ ಹೋಗುತ್ತಿದ್ದರು. ಆಗೆಲ್ಲ ಸರ್ಕಾರಿಯೇ ಆಗಲಿ ಅಥವಾ ಖಾಸಗಿ ಶಾಲೆಗಳಲ್ಲೇ ಆಗಲಿ ಫ್ರೀ ಬುಕ್ಸ್ ನೀಡುವ ಪದ್ಧತಿ ಚಾಲ್ತಿಯಲ್ಲಿ ಇರಲಿಲ್ಲ, ತಮಗೆ ಬೇಕಾದ ಪುಸ್ತಕಗಳನ್ನು ವಿದ್ಯಾರ್ಥಿಗಳು ಹಾಗೂ ಅವರ ಪೋಷಕರು ವ್ಯವಸ್ಥೆ ಮಾಡಿಕೊಳ್ಳಬೇಕಾದ್ದರಿಂದ ಈ ವಹಿವಾಟು ಒಂದು ಕ್ರಮಬದ್ಧ ರೀತಿಯಲ್ಲಿ ನಡೆಯುತ್ತಿತ್ತು. ತಮ್ಮಲ್ಲಿರುವ ಹಳೆಯ ಪುಸ್ತಕಗಳಿಗೆ ವಿದ್ಯಾರ್ಥಿಯೇ ಒಂದು ಸೆಕೆಂಡ್ ಹ್ಯಾಂಡ್ ದರವನ್ನು ನಿಗದಿಪಡಿಸುತ್ತಿದ್ದರೂ, ಕೆಲವೊಮ್ಮೆ ಅದಕ್ಕಾಗಿ ಹಿರಿಯರ ಸಲಹೆ-ಸೂಚನೆಯನ್ನೂ ಪಡೆದುಕೊಳ್ಳಲಾಗುತ್ತಿತ್ತು. ಪ್ರತೀ ಪುಸ್ತಕದಲ್ಲಿ ಅಚ್ಚಾಗಿರುತ್ತಿದ್ದ ಅಸಲಿ ದರದ ಮೇಲೆಯೇ, ಒಂದು ಪೆನ್ಸಿಲ್‌ನಲ್ಲಿ ಈ ಸೆಕೆಂಡ್ ಹ್ಯಾಂಡ್ ರೇಟ್‌ನ್ನು ನಮೂದಿಸಲಾಗುತ್ತಿತ್ತು. ಕೊನೆಗೆ ಆ ಎಲ್ಲಾ ಬೆಲೆಗಳನ್ನೂ ಒಂದು ಪ್ರತ್ಯೇಕ ಹಾಳೆಯಲ್ಲಿ ನಮೂದಿಸಿ, ತಮ್ಮಲ್ಲಿರುವ ಗಣಿತದ ಎಲ್ಲಾ ಕೌಶಲ್ಯಗಳನ್ನೂ ಬಳಸಿಕೊಂಡು ಅದರ ಮೊತ್ತವನ್ನು ಲೆಕ್ಕ ಹಾಕಿ, ಇಷ್ಟು ರೂಪಾಯಿ, ಇಂತಿಷ್ಟು ಪೈಸೆ ಎಂದು ಸ್ಪಷ್ಟವಾಗಿ ಬರೆಯುವ ಮೂಲಕ ಬಲೆ ನಿಗದಿಯ ಟಾಸ್ಕ್ ಒಂದು ಹಂತಕ್ಕೆ ಮುಗಿಯುತ್ತಿತ್ತು. ಮತ್ತೇನಿದ್ದರೂ ಮನೆಯವರು ಇನ್ನೊಮ್ಮೆ ಅದನ್ನು ಪರಿಶೀಲಿಸಿ ಸರಿ ಎಂದರೆ, ಅಲ್ಲಿಗೆ ಅದಕ್ಕೆ ಅಪ್ರೂವಲ್ ಸಿಕ್ಕಂತೆಯೇ ಸರಿ.

ಬೆಲೆಯನ್ನಾದರೂ ಯಾವ ಆಧಾರದಲ್ಲಿ ನಿಗದಿಪಡಿಸಲಾಗುತ್ತಿತ್ತು ಎಂದರೆ, ಆ ಪುಸ್ತಕ ಖರೀದಿಸಿ ಎಷ್ಟು ವರ್ಷಗಳಾಗಿವೆ ಎಂಬ ಲೆಕ್ಕಾಚಾರದ ಮೇಲೆ. ಖರೀದಿಸಿ ಒಂದೇ ವರ್ಷ ಆಗಿದ್ದರೆ ಪ್ರತಿಶತ 70 ರಂತೆ, ಎರಡು ಮೂರು ವರ್ಷ ಆಗಿದ್ದರೆ 50 ಪ್ರತಿಶತ ಅದಕ್ಕೂ ಮೀರಿದ್ದರೆ ಆಗ 25-30 ಶೇಕಡಾ ಎಂದು ನಿಗದಿಪಡಿಸಲಾಗುತ್ತಿತ್ತು. ಯಾರಾದರೂ ಶ್ರೀಮಂತರು ಕೆಲವೊಮ್ಮೆ ಉಚಿತವಾಗಿಯೇ ತಮ್ಮ ಮಕ್ಕಳ ಪುಸ್ತಕಗಳನ್ನು ಯಾರಿಗಾದರೂ ಕೊಟ್ಟು ಬಿಟ್ಟರಂತೂ ಆ ಸುದ್ದಿ ಊರಲ್ಲೆಲ್ಲಾ ಹಬ್ಬಿ, ಮುಂದಿನ ವರ್ಷಕ್ಕೆ ಆ ಪುಸ್ತಕ ತಮಗೇ ನೀಡಿ ಎಂದು ಅವರಲ್ಲಿ ಅದೆಷ್ಟೋ ಜನರು ದುಂಬಾಲು ಬೀಳುತ್ತಿದ್ದುದೂ ಉಂಟು. ಇದರ ಪ್ರತೀ ಪೈಸೆ ಪೈಸೆಯನ್ನೂ ಹಗಲು ರಾತ್ರಿಯೆನ್ನದೇ ಕನವರಿಸುವ ಮಕ್ಕಳಿಗೆ ಅದೊಂದು ದೊಡ್ಡ ಮೊತ್ತದಂತೆ ಭಾಸವಾಗುತ್ತಿತ್ತು.

ಇಲ್ಲಿ ಅಡ್ವಾನ್ಸ್ ನೀಡುವ ಕ್ರಮವೂ ಇರುತ್ತಿತ್ತು. ಈ ವರ್ಷದ ಪುಸ್ತಕ ತನಗೇ ನೀಡಬೇಕು ಎಂದು ಎರಡೋ, ಐದೋ ರುಪಾಯಿಯನ್ನು ಮುಂಗಡ ನೀಡಿ ಕಾಯ್ದಿರಿಸಲಾಗುತ್ತಿತ್ತು ಎಂದರೆ ಆ ಪುಸ್ತಕಗಳ ಮಾರ್ಕೆಟ್ ಏನು ಎತ್ತ ಎನ್ನುವುದು ತಿಳಿಯುತ್ತದೆ. ಆ ಪುಸ್ತಕಗಳಿಗೆ ಬುಕ್ ಬೈಂಡ್ ಮಾಡಿಸಿದ್ದರೆ ಆಗ ಅದಕ್ಕೆ ತುಸು ಹೆಚ್ಚುವರಿ ದರ. ಅದೇ ರೀತಿ ಪುಸ್ತಕದ ಸ್ಥಿತಿಗತಿ, ಇಟ್ಟುಕೊಂಡಿರುವ ರೀತಿ, ಅದರ ಬಣ್ಣ, ಮೇಲಿನ ಕಲೆ ಇತ್ಯಾದಿಗಳ ಆಧಾರದ ಮೇಲೆಯೂ ಬೆಲೆಯಲ್ಲಿ ವ್ಯತ್ಯಾಸವಾಗುತ್ತಿತ್ತು. ಖರೀದಿಸಿಕೊಂಡು ಹೋದ ಮೇಲೆಯೂ, ಆ ಪುಸ್ತಕಗಳಲ್ಲಿ ಏನಾದರೂ ಸಮಸ್ಯೆ ಕಂಡರೆ, ಆಗ ಕೊಟ್ಟಿರುವ ಬೆಲೆಯ ಮೇಲೇ ಚೌಕಾಸಿಗೆ ಇಳಿಯುವುದು, ವಾಪಾಸು ಕೊಡಲು ಕೇಳುವುದು ಮತ್ತು ಅದರಲ್ಲಿ ಮನೆಯ ದೊಡ್ಡವರೂ ಭಾಗಿಯಾಗುವುದೆಲ್ಲವೂ ನಡೆಯುತ್ತಿತ್ತು.

ಈ ಸೌಭಾಗ್ಯ ಕೇವಲ ಪಠ್ಯ ಪುಸ್ತಕಗಳಿಗಷ್ಟೇ ಸೀಮಿತವಾಗಿರಲಿಲ್ಲ, ನೋಟ್ ಪುಸ್ತಕವೂ ಈ ಮರುಬಳಕೆಗೆ ಒಳಗಾಗುತ್ತಿತ್ತು. ಅದರ ಖಾಲಿ ಹಾಳೆಗಳನ್ನೆಲ್ಲಾ ಕಿತ್ತು ಅವುಗಳನ್ನೆಲ್ಲಾ ಒಟ್ಟುಗೂಡಿಸಿ ಪುಸ್ತಕದ ರೀತಿ ಬುಕ್ ಬೈಂಡ್ ಮಾಡಿಸಿ ಇರಿಸಿಕೊಳ್ಳಲಾಗುತ್ತಿತ್ತು. ಈ ಪುಸ್ತಕಗಳೂ, ವಿದ್ಯಾರ್ಥಿಗಳ ಜೊತೆ ಜೊತೆಗೇ ಈ ರೂಪದಲ್ಲಾದರೂ ಮುಂದಿನ ತರಗತಿಗಳಿಗೆ ತೇರ್ಗಡೆ ಹೊಂದುತ್ತಿದ್ದವು. ಬರೆಯದೇ ಉಳಿದ ಒಂದೇ ಒಂದು ಹಾಳೆಯೂ ವ್ಯರ್ಥವಾಗುವ ಸಾಧ್ಯತೆಯೇ ಆಗ ಇರುತ್ತಿರಲಿಲ್ಲ, ಅವು ಕ್ಲಾಸ್ ವರ್ಕ್, ರಫ್ ವರ್ಕ್‌ಗಳಾಗಿ ಬಳಸಲ್ಪಡುತ್ತಿದ್ದವು. ಏನೇ ಹೇಳಿ, ಹಳೆಯದೆಂದು ಹೀಗಳೆಯದೇ, ಹರಿದು ಮೂಲೆಗೆಸೆಯದೇ ಮತ್ತೆ ಮತ್ತೆ ಬಳಸಲು ಕಾರಣವಾಗುವ ಆ ಒಟ್ಟಾರೆ ಚಟುವಟಿಕೆ ಒಂದು ಚೆಂದದ ಪ್ರಕ್ರಿಯೆಯಂತೆ ನಡೆಯುತ್ತಿತ್ತು. ಹೀಗಾಗಿಯೇ ಅದು ಹಳೆಯ ಪುಸ್ತಕದ ನೆನಪುಗಳೇ ಆದರೂ ಅದನ್ನು ಅನುಭವಿಸಿದವರಿಗೆ ಇದೆಂದೂ ಹಳತು ಎಂದೆನಿಸುವುದೇ ಇಲ್ಲ, ಅದು ಸದಾ ಹೊಸತು, ತಾಜಾ ಹಾಗೂ ಹಸಿ ಹಸಿರು!

ಓವರ್‌ಡೋಸ್: ಆ ಕಾಲದಲ್ಲಿ ಹಳೆಯದನ್ನು ಉಳಿಸಿಕೊಳ್ಳಲು ಕಾರಣ ಹುಡುಕುತ್ತಿದ್ದರು, ಈಗ ಹೊಸತನ್ನು ಕೊಂಡುಕೊಳ್ಳಲು ಕಾರಣ ಹುಡುಕುತ್ತಾರೆ!

36 ಗಂಟೆ ಪರ್ವತದಲ್ಲಿ ಅವಿತಿದ್ದ ಪೈಲಟ್!



ಅಮೆರಿಕದ ಎಫ್-15ಇ ಯುದ್ಧ ವಿಮಾನವನ್ನು ಇರಾನ್ ಸೇನೆ ಕಳೆದ ಶುಕ್ರವಾರ ಹೊಡೆದುರುಳಿಸಿದ್ದು, ಇರಾನ್‌ನೊಳಗೆ ವಿಶೇಷ ಕಾರ್ಯಾಚರಣೆ ನಡೆಸಿ ನಾಪತ್ತೆಯಾಗಿದ್ದ ಪೈಲಟ್ ರಕ್ಷಿಸಿರುವುದಾಗಿ ಅಮೆರಿಕ ಘೋಷಿಸಿದೆ. ಅಂದಹಾಗೆ ಈ ರಕ್ಷಣಾ ಕಾರ್ಯಕ್ಕೆ ಅಮೆರಿಕ ನೂರಾರು ಸೈನಿಕರು, ಯುದ್ಧ ವಿಮಾನ, ಹೆಲಿಕಾಪ್ಟರ್‌ಗಳನ್ನು ಬಳಕೆ ಮಾಡಿದೆ. ಪೈಲೆಟ್ ಹೆಸರನ್ನು ಅಮೆರಿಕ ಬಹಿರಂಗಗೊಳಿಸಿಲ್ಲ. ಇರಾನ್ ಹೊಡೆದುರುಳಿಸಿದ್ದ ಎಫ್-15ಇ ಯುದ್ಧ ವಿಮಾನದ ಪೈಲಟ್ ಅನ್ನು ಅಮೆರಿಕ ಸೇನಾ ಪಡೆ ತಂಡವೊಂದು ಅದೇ ದಿನ ರಕ್ಷಿಸಿತ್ತು. ಆದರೆ, ಎರಡನೇ ಪೈಲಟ್ ಕಾಣೆಯಾಗಿದ್ದರು. ನಾಪತ್ತೆಯಾಗಿದ್ದ ಪೈಲಟ್ ಪರ್ವತ ಪ್ರದೇಶದಲ್ಲಿ 36 ಗಂಟೆಗಳ ಕಾಲ ಸಿಲುಕಿಕೊಂಡಿದ್ದರು. ಪೈಲಟ್ ರಕ್ಷಣೆಗಾಗಿ ಅಮೆರಿಕ ವಿಶೇಷ ಕಾರ್ಯಾಚರಣೆ ನಡೆಸಿತು.



» ಇರಾನ್‌ನೊಳಗೆ ನುಗ್ಗಿ ದುರ್ಗಮ ಪ್ರದೇಶದಲ್ಲಿ ಅಮೆರಿಕ ರಕ್ಷಣಾ ಕಾರ್ಯಾಚರಣೆ

» ಎಫ್-15ಇ ಪೈಲಟ್ ರಕ್ಷಿಸಿದ ಟ್ರಂಪ್ ಪಡೆ

ಪೈಲಟ್ ರಕ್ಷಣೆಗಾಗಿ ವಿಶೇಷ ಕಾರ್ಯಾಚರಣೆ!: ನಾಪತ್ತೆಯಾಗಿದ್ದ ಎಫ್-15 ಪೈಲಟ್ ಪತ್ತೆಯಾಗುವ ಮುನ್ನವೇ, ಅವರನ್ನು ಪತ್ತೆಹಚ್ಚಿ ಭೂಮಾರ್ಗವಾಗಿ ಇರಾನ್‌ನಿಂದ ಹೊರಕ್ಕೆ ಸುರಕ್ಷಿತ ಸ್ಥಳಾಂತರಿಸಿದ್ದೇವೆ ಎಂಬ ಸುಳ್ಳು ಸುದ್ದಿಯನ್ನು ಅಮೆರಿಕ ಹರಡಿತು. ಸುಳ್ಳು ಸುದ್ದಿ ಹಬ್ಬಿದ್ದರಿಂದ ಇರಾನ್ ಸೇನೆ ಮತ್ತು ನಾಯಕತ್ವ ಗೊಂದಲಕ್ಕೀಡಾಗಿದೆ.



ಅಮೆರಿಕದ ಗುಪ್ತಚರ ಸಂಸ್ಥೆ ಸಿಐಎ ಸ್ಥಳವನ್ನು ಪತ್ತೆಹಚ್ಚಲು ಸೇನೆಗೆ ನೆರವಾಗಿದೆ. ಇದು ಬೈಹುಲ್ಲಿನ ರಾಶಿಯಲ್ಲಿ ಸೂಜಿ ಹುಡುಕುವಂತಹ ಪರಿಸ್ಥಿತಿ ಎಂದು ಅಮೆರಿಕದ ಒಬ್ಬ ಅಧಿಕಾರಿ ಹೇಳಿದ್ದಾರೆ. ಸುಲಭದಲ್ಲಿ ಪತ್ತೆಯಾಗದಂತಹ ಪರ್ವತವೊಂದರ ಬಿರುಕುಗಳಲ್ಲಿ ಅಡಗಿದ್ದ ಅಮೆರಿಕದ ವೀರ ಸೇನಾನಿಯನ್ನು ಸಿಐಎ ಗುಪ್ತಚರ ಮಾಹಿತಿ ಆಧಾರದಲ್ಲಿ ಪತ್ತೆಹಚ್ಚಲಾಯಿತು ಎಂದಿದ್ದಾರೆ.

ಸಿಐಎ ಗುಪ್ತಚರ ಕಾರ್ಯಾಚರಣೆ ಜತೆ ರಕ್ಷಣಾ ಕಾರ್ಯಾಚರಣೆಯಲ್ಲಿ ನೂರಾರು ವಿಶೇಷ ಪಡೆಗಳ ಸೈನಿಕರು, ಡಜನ್‌ಗಟ್ಟಲೆ ಅಮೆರಿಕದ ಯುದ್ಧ ವಿಮಾನಗಳು ಮತ್ತು ಹೆಲಿಕಾಪ್ಟರ್‌ಗಳು ಭಾಗವಹಿಸಿದ್ದವು ಎಂದು ನ್ಯೂಯಾರ್ಕ್ ಟೈಮ್ಸ್ ವರದಿ ಮಾಡಿದೆ.

ಇರಾನ್ ಭೂಭಾಗದಲ್ಲಿ ಎರಡು ದಿನಗಳ ಕಾಲ ಅಮೆರಿಕದ ವಿಶೇಷ ಪಡೆಗಳು ಶೋಧ ಕಾರ್ಯಾಚರಣೆ ನಡೆಸಿವೆ. ಅಮೆರಿಕ ಹುಡುಕಾಟ ನಡೆಸುತ್ತಿದ್ದಾಗ, ಇರಾನ್ ಸೇನೆಯೂ ನಾಪತ್ತೆಯಾಗಿದ್ದ ಪೈಲೆಟ್ ಪತ್ತೆಹಚ್ಚಲು ತಂಡಗಳನ್ನು ಕಳುಹಿಸಿತ್ತು. ಈ ಪ್ರಯತ್ನಗಳನ್ನು ತಡೆಯಲು, ಅಮೆರಿಕದ ವಾಯುಪಡೆ ಜೆಟ್‌ಗಳು ಇರಾನ್ ಪಡೆಗಳ ಮೇಲೆ ದಾಳಿಗಳನ್ನು ನಡೆಸಿ ಅವುಗಳನ್ನು ಆ ಪ್ರದೇಶಕ್ಕೆ ತಲುಪುವುದನ್ನು ತಡೆಯುವ ಕೆಲಸ ಮಾಡಿವೆ ಎಂದು ಮೂಲಗಳು ತಿಳಿಸಿವೆ.

ಇರಾನ್-ಅಮೆರಿಕ ಗುಂಡಿನ ಚಕಮಕಿ : ಸೇನಾ ಕಾರ್ಯಾಚರಣೆಯ ಮಾಹಿತಿಯಿದ್ದ ಇಬ್ಬರು ಅಧಿಕಾರಿಗಳು ನ್ಯೂಯಾರ್ಕ್ ಟೈಮ್ಸ್ ಜತೆ ಮಾತನಾಡಿದ್ದು, ಎರಡನೇ ಪೈಲೆಟ್ ಪತ್ತೆಹಚ್ಚಿ ರಕ್ಷಣೆಗೆ ಮುಂದಾದಾಗ ಅಮೆರಿಕ ಮತ್ತು ಇರಾನ್ ಸೈನಿಕರ ಮಧ್ಯೆ ಗುಂಡಿನ ಚಕಮಕಿ ನಡೆದಿದೆ. ಅಮೆರಿಕದ ವಿಶೇಷ ಕಾರ್ಯಾಚರಣೆಗಳ ಇತಿಹಾಸದಲ್ಲೇ ಇದು ಅತ್ಯಂತ ಸವಾಲಿನ ಮತ್ತು ಬಹಳ ಸಂಕೀರ್ಣ ಕಾರ್ಯಾಚರಣೆಯಾಗಿತ್ತು ಎಂದು ಹೇಳಿದ್ದಾರೆ.

ಇರಾನ್‌ನೊಳಗೆ ಸಿಲುಕಿದ್ದ ಎರಡು ಎಂಸಿ-130ಜೆ: ಶತ್ರು ರಾಷ್ಟ್ರದೊಳಗೆ ರಹಸ್ಯ ಕಾರ್ಯಾಚರಣೆ ವೇಳೆ ಸೈನಿಕರನ್ನು ಒಳನುಗ್ಗಿಸುವ ಮತ್ತು ಹೊರಸಾಗಿಸುವ ಎರಡು ಎಂಸಿ-130ಜೆ ವಿಮಾನಗಳು ಪೈಲೆಟ್ ಹುಡುಕಾಟದ ವೇಳೆ ಇರಾನ್‌ನೊಳಗೆ ಸಿಲುಕಿಕೊಂಡಿದ್ದವು.

ತಮ್ಮ ವೀರನಿಗಾಗಿ ಅಮೆರಿಕ ಕಾರ್ಯಾಚರಣೆ ನಡೆಸುವುದಕ್ಕಾಗಿ ತಾತ್ಕಾಲಿಕ ವಾಯುನೆಲೆಯನ್ನು ಸ್ಥಾಪಿಸಿತ್ತು. ಎರಡು ವಿಮಾನಗಳು ಸಂಚರಿಸಲಾಗದ ಕಾರಣ ಇನ್ನೂ ಮೂರು ವಿಮಾನಗಳನ್ನು ಅಮೆರಿಕ ಕಳುಹಿಸಿಕೊಟ್ಟು ಕಾರ್ಯಾಚರಣೆ ಪೂರ್ಣಗೊಳಿಸಿದೆ.

ಇರಾನ್‌ನಿಂದ ತೆರಳುವ ಮೊದಲು ಆ ಎರಡೂ ವಿಮಾನಗಳನ್ನು ಸ್ಫೋಟಿಸಲು ಅಮೆರಿಕ ನಿರ್ಧರಿಸಿತ್ತು. ಅಮೆರಿಕ ಕಾರ್ಯಾಚರಣೆ ಯಶಸ್ವಿಯಾಗಿ ಪೂರ್ಣಗೊಳಿಸಿದ್ದು, ಎರಡು ಎಂಸಿ-130 ವಿಮಾನಗಳ ಅವಶೇಷಗಳನ್ನು ಪತ್ತೆಹಚ್ಚಿದ ಇರಾನ್ ಸೇನೆ ತಮ್ಮ ದಾಳಿಗೆ ಅಮೆರಿಕದ ವಿಮಾನಗಳು ಧ್ವಂಸಗೊಂಡಿವೆ ಎಂದು ತಪ್ಪಾಗಿ ತಿಳಿದುಕೊಂಡಿವೆ ಎನ್ನಲಾಗಿದೆ.


ಪಾಳುಬಿದ್ದ ನಿಲ್ದಾಣ ಬಳಸಿದ ಅಮೆರಿಕ: ದಕ್ಷಿಣ ಇಸ್ಫಹಾನ್ ಪ್ರದೇಶದಲ್ಲಿ ಪಾಳುಬಿದ್ದಿರುವ ವಿಮಾನ ನಿಲ್ದಾಣವನ್ನು ಅಮೆರಿಕ ಸೇನೆ ತನ್ನ ಕಾರ್ಯಾಚರಣೆಯಲ್ಲಿ ಬಳಸಿಕೊಂಡಿದೆ. ಪಾಳುಬಿದ್ದ ವಿಮಾನ ನಿಲ್ದಾಣ ಬಳಸಿಕೊಂಡು ಮೋಸದಿಂದ ತಪ್ಪಿಸಿಕೊಂಡಿದೆ. ಆದರೆ ಅಮೆರಿಕದ ಪೈಲೆಟ್ ರಕ್ಷಣಾ ಕಾರ್ಯಾಚರಣೆ ಸಂಪೂರ್ಣ ವಿಫಲಗೊಂಡಿದೆ ಎಂದು ಇರಾನ್ ಸೇನಾ ವಕ್ತಾರ ಇಬ್ರಾಹಿಂ ಜೊಲ್ಫಾಘಾರಿ ಭಾನುವಾರ ಆರೋಪಿಸಿದ್ದಾರೆ. ಈ ಕಾರ್ಯಾಚರಣೆಯ ವೇಳೆ ಅಮೆರಿಕದ ಎರಡು ಸಿ-130 ಹರ್ಕ್ಯುಲಸ್ ಸಾರಿಗೆ ವಿಮಾನಗಳು ಹಾಗೂ ಎರಡು ಬ್ಲ್ಯಾಕ್ ಹಾಕ್ ಹೆಲಿಕಾಪ್ಟರ್‌ಗಳನ್ನು ನಾಶ ಮಾಡಿದ್ದೇವೆ. ಐವರು ಅಮೆರಿಕ ಸೈನಿಕರನ್ನು ಹೊಡೆದುರುಳಿಸಿದ್ದೇವೆ ಎಂದು ಇಬ್ರಾಹಿಂ ತಿಳಿಸಿದ್ದಾರೆ.

ಪೈಲಟ್ ಸಿಕ್ಕಿದ್ದಾರೆ: ಟ್ರಂಪ್

ಎಫ್-15 ಸ್ಟ್ರೈಕ್ ಈಗಲ್ ಯುದ್ಧ ವಿಮಾನದ ಎರಡನೇ ಪೈಲಟ್‌ನ ರಕ್ಷಣಾ ಕಾರ್ಯಾಚರಣೆ ಯಶಸ್ವಿ ಆಗಿರುವುದನ್ನು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಭಾನುವಾರ ಘೋಷಿಸಿದ್ದಾರೆ. ನನ್ನ ಮಾರ್ಗದರ್ಶನದೊಂದಿಗೆ ಅಮೆರಿಕ ಸೇನೆ ಡಜನ್‌ಗಟ್ಟಲೆ ಯುದ್ಧ ವಿಮಾನಗಳನ್ನು, ಅತ್ಯಂತ ವಿಧ್ವಂಸಕ ಶಸ್ತ್ರಾಸ್ತ್ರಗಳನ್ನು ಕಳುಹಿಸಿದೆ. ಪೈಲೆಟ್‌ಗೆ ಸಣ್ಣ ಪುಟ್ಟ ಗಾಯಗಳಾಗಿವೆ. ಆದರೆ ಆತ ಬೇಗನೆ ಗುಣಮುಖರಾಗಲಿದ್ದಾರೆ ಎಂದು ಟ್ರಂಪ್ ಹೇಳಿದ್ದಾರೆ. ನಮ್ಮ ಅತ್ಯಂತ ಅಸಾಮಾನ್ಯ ಪೈಲಟ್‌ಗಳಲ್ಲೊಬ್ಬರಿಗಾಗಿ ನಡೆಸಿದ ಶೋಧ ಮತ್ತು ರಕ್ಷಣಾ ಕಾರ್ಯಾಚರಣೆ ಯಶಸ್ವಿಯಾಗಿದೆ. ನಾವು ನಮ್ಮ ಸೇನಾನಿಗಳನ್ನು ಎಂದೂ ಕೈಬಿಡೆವು. ಈಸ್ಟರ್ ಶುಭಾಶಯಗಳು ಎಂದಿದ್ದಾರೆ.

ಇರಾನ್‌ನಲ್ಲಿ ಸಿಲುಕಿದ್ದ ಭಾರತದ 345 ಮೀನುಗಾರರು ಸ್ವದೇಶಕ್ಕೆ

ಚೆನ್ನೈ: ಪಶ್ಚಿಮ ಏಷ್ಯಾದ ಉದ್ವಿಗ್ನ ಪರಿಸ್ಥಿತಿಗಳ ನಡುವೆ ಇರಾನಿನಲ್ಲಿ ಸಿಲುಕಿಕೊಂಡಿದ್ದ ಭಾರತೀಯ ಮೀನುಗಾರರ ರಕ್ಷಣಾ ಕಾರ್ಯ ಯಶಸ್ವಿಯಾಗಿ ನಡೆದಿದೆ. ಸುಮಾರು 345 ಭಾರತೀಯ ಮೀನುಗಾರರನ್ನು ಆರ್ಮೇನಿಯಾ ಮಾರ್ಗವಾಗಿ ಸ್ಥಳಾಂತರಿಸಿ ವಿಶೇಷ ವಿಮಾನದ ಮೂಲಕ ಶನಿವಾರ ಸಂಜೆ ಚೆನ್ನೈಗೆ ಸುರಕ್ಷಿತವಾಗಿ ಕರೆತರಲಾಗಿದೆ. ಚೆನ್ನೈ ವಿಮಾನ ನಿಲ್ದಾಣದಲ್ಲಿ ಕೇಂದ್ರ ಸಚಿವ ಪಿಯೂಷ್ ಗೋಯಲ್ ಅವರು ಮೀನುಗಾರರನ್ನು ಆತ್ಮೀಯವಾಗಿ ಸ್ವಾಗತಿಸಿದರು. ನಂತರ ಅವರನ್ನು ತಮ್ಮ ತಮ್ಮ ಊರುಗಳಿಗೆ ತೆರಳಲು ಅಗತ್ಯ ವ್ಯವಸ್ಥೆಗಳನ್ನು ಕಲ್ಪಿಸಲಾಯಿತು. ಸಚಿವರು ಮಾತನಾಡುತ್ತಾ, ಯುದ್ಧಪೀಡಿತ ಪ್ರದೇಶದಲ್ಲಿ ಸಿಲುಕಿದ್ದ ಮೀನುಗಾರರು ಕಠಿಣ ಪರಿಸ್ಥಿತಿಗಳನ್ನು ಎದುರಿಸಿದ್ದರೂ, ಸರ್ಕಾರದ ಸಮನ್ವಯಿತ ಪ್ರಯತ್ನಗಳಿಂದ ಅವರನ್ನು ಸುರಕ್ಷಿತವಾಗಿ ವಾಪಸ್ ಕರೆತರಲಾಗಿದೆ ಎಂದು ತಿಳಿಸಿದರು. ಈ ಕಾರ್ಯಾಚರಣೆ ವಿದೇಶಾಂಗ ಸಚಿವಾಲಯದ ನಿರಂತರ ಪ್ರಯತ್ನಗಳ ಭಾಗವಾಗಿದ್ದು, ಸಂಘರ್ಷದ ಹಿನ್ನೆಲೆ ವಿಮಾನ ಸೇವೆಗಳು ಸ್ಥಗಿತಗೊಂಡಿದ್ದರಿಂದ ರಕ್ಷಣಾ ಕಾರ್ಯಾಚರಣೆಗೆ ವಿಳಂಬ ಉಂಟಾಗಿತ್ತು. ಮೊದಲ ಹಂತದಲ್ಲಿ ಮೀನುಗಾರರನ್ನು ಇರಾನಿನಿಂದ ಆರ್ಮೇನಿಯಾಗೆ ಸ್ಥಳಾಂತರಿಸಿ, ಅಲ್ಲಿಂದ ವಿಶೇಷ ವಿಮಾನದ ಮೂಲಕ ಭಾರತಕ್ಕೆ ಕರೆತರಲಾಯಿತು. ಈ 345 ಮಂದಿಯಲ್ಲಿ ಬಹುತೇಕರು ತಮಿಳುನಾಡಿನವರು(327 ಜನರು) ಆಗಿದ್ದು, ಉಳಿದವರು ಕೇರಳ, ಪುದುಚೇರಿ, ಗುಜರಾತ್ ಮತ್ತು ಒಡಿಶಾ ರಾಜ್ಯಗಳಿಗೆ ಸೇರಿದವರು. ತಮಿಳುನಾಡಿನ ಮೀನುಗಾರರನ್ನು ವಿವಿಧ ಜಿಲ್ಲೆಗಳಾದ ಕನ್ಯಾಕುಮಾರಿ, ತಿರುನಲ್ವೇಲಿ ಸೇರಿದಂತೆ ಹಲವು ಪ್ರದೇಶಗಳಿಗೆ ವಿಶೇಷ ಬಸ್ಸುಗಳಲ್ಲಿ ಕಳುಹಿಸಲಾಯಿತು. ಮೀನುಗಾರರು ತಮ್ಮ ಸಂಕಷ್ಟವನ್ನು ಹಂಚಿಕೊಂಡು, ತಕ್ಷಣ ಕ್ರಮ ಕೈಗೊಂಡ ಕೇಂದ್ರ ಸರ್ಕಾರ ಮತ್ತು ಪ್ರಧಾನ ಮಂತ್ರಿಗೆ ಕೃತಜ್ಞತೆ ವ್ಯಕ್ತಪಡಿಸಿದರು. ಇನ್ನು ಉಳಿದ ಭಾರತೀಯರನ್ನು ಕೂಡ ಶೀಘ್ರದಲ್ಲೇ ಸುರಕ್ಷಿತವಾಗಿ ಮರಳಿ ತರಲು ಸರ್ಕಾರ ಕ್ರಮಗಳನ್ನು ಮುಂದುವರಿಸುತ್ತಿದೆ.



ಇರಾನ್ ಪ್ರತೀಕಾರದ ದಾಳಿ

ಕಳೆದ ವಾರ ಡೊನಾಲ್ಡ್ ಟ್ರಂಪ್ ಇರಾನ್ ಅನ್ನು ಅಮೆರಿಕ ಸಂಪೂರ್ಣವಾಗಿ ಧ್ವಂಸಗೊಳಿಸಿದೆ ಮತ್ತು ಯುದ್ಧವನ್ನು ತ್ವರಿತವಾಗಿ ಮುಗಿಸುತ್ತೇವೆ ಎಂದು ಹೇಳಿದ ನಂತರ ಇರಾನ್ ತನ್ನ ಪ್ರತೀಕಾರದ ದಾಳಿ ತೀವ್ರಗೊಳಿಸಿದ್ದು, ಅಮೆರಿಕದ ಎರಡು ಯುದ್ಧ ವಿಮಾನಗಳನ್ನು ಹೊಡೆದುರುಳಿಸಿದೆ. ಇದು ಬಾಂಬ್ ದಾಳಿಗಳ ನಡುವೆಯೂ ದುರ್ಬಲಗೊಂಡಿದ್ದ ಇರಾನ್ ಸೇನೆ ಇನ್ನೂ ಪ್ರತಿದಾಳಿ ಮಾಡಲು ಸಾಧ್ಯವಿದೆ ಎಂಬುದನ್ನು ತೋರಿಸುತ್ತದೆ. ಕುಸಿದ ಮತ್ತೊಂದು ವಿಮಾನವು ಅಮೆರಿಕದ ಎಫ್-10 ದಾಳಿ ವಿಮಾನವಾಗಿತ್ತು. ಅದರ ಸಿಬ್ಬಂದಿಯ ಸ್ಥಿತಿ ಅಥವಾ ಅದು ಎಲ್ಲಿ ಕುಸಿದಿತು ಎಂಬುದು ತಕ್ಷಣ ಸ್ಪಷ್ಟವಾಗಿಲ್ಲ. ಭಾನುವಾರ, ಇರಾನ್ ಸರ್ಕಾರದ ಟಿವಿ ಅಮೆರಿಕದ ವಿಮಾನಗಳ ಅವಶೇಷಗಳು ಎಂದು ಹೇಳಲಾದ ವಿಡಿಯೋವನ್ನು ಪ್ರಸಾರ ಮಾಡಿದೆ. ಜತೆಗೆ ದಟ್ಟವಾದ ಕಪ್ಪು ಹೊಗೆ ಏರುತ್ತಿರುವ ಚಿತ್ರವನ್ನೂ ತೋರಿಸಲಾಯಿತು. ಪ್ರಸಾರ ಸಂಸ್ಥೆಯ ಪ್ರಕಾರ, ರಕ್ಷಣಾ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದ ಒಂದು ಅಮೆರಿಕದ ಸಾರಿಗೆ ವಿಮಾನ ಮತ್ತು ಎರಡು ಹೆಲಿಕಾಪ್ಟರ್‌ಗಳನ್ನು ಇರಾನ್ ಹೊಡೆದುರುಳಿಸಿದೆ.

ಆದರೆ, ಮಿಷನ್ ಬಗ್ಗೆ ಮಾಹಿತಿ ಹೊಂದಿದ್ದ ಪ್ರಾದೇಶಿಕ ಗುಪ್ತಚರ ಅಧಿಕಾರಿ ಒಬ್ಬರು, ತಾಂತ್ರಿಕ ದೋಷದಿಂದ ಅಮೆರಿಕ ಸೇನೆ ಸ್ವತಃ ಎರಡು ಸಾರಿಗೆ ವಿಮಾನಗಳನ್ನು ಸ್ಫೋಟಗೊಳಿಸಬೇಕಾಯಿತು ಎಂದು ಹೇಳಿದ್ದಾರೆ. ಇದರಿಂದ ರಕ್ಷಣಾ ಕಾರ್ಯವನ್ನು ಪೂರ್ಣಗೊಳಿಸಲು ಹೆಚ್ಚುವರಿ ವಿಮಾನಗಳನ್ನು ಬಳಸಬೇಕಾಯಿತು. ಇರಾನ್ ಜಂಟಿ ಸೇನಾ ಕಮಾಂಡ್ ಭಾನುವಾರ ನಾಲ್ಕು ಅಮೆರಿಕದ ವಿಮಾನಗಳು ನಾಶವಾಗಿವೆ ಎಂದು ಹೇಳಿ, ಅಮೆರಿಕ ಮತ್ತು ಇಸ್ರೇಲ್ ಇರಾನ್‌ನ ನಾಗರಿಕ ಮೂಲಸೌಕರ್ಯಗಳ ಮೇಲೆ ದಾಳಿ ನಡೆಸಿದರೆ, ತಾವು ಹೆಚ್ಚಿನ ತೀವ್ರ ಪ್ರತಿದಾಳಿ ನಡೆಸುವುದಾಗಿ ಎಚ್ಚರಿಸಿದೆ.





ಮೂರು ಗಲ್ಫ್ ರಾಷ್ಟ್ರಗಳ ಮೇಲೆ ಇರಾನ್ ದಾಳಿ

ಕುವೈತ್‌ನಲ್ಲಿ ಇರಾನ್ ಡ್ರೋನ್ ದಾಳಿಯಿಂದ ವಿದ್ಯುತ್ ಘಟಕಗಳು ಮತ್ತು ಪೆಟ್ರೋಕೆಮಿಕಲ್ ಘಟಕಗಳಿಗೆ ಭಾರೀ ಹಾನಿಯಾಗಿದೆ. ಜತೆಗೆ ನೀರಿನ ಉಪ್ಪು ತೆಗೆಯುವ ಘಟಕವೂ ಕಾರ್ಯನಿರ್ವಹಣೆಯಿಂದ ಸ್ಥಗಿತಗೊಳಿಸಿದೆ. ಬಹ್ರೇನ್‌ನಲ್ಲಿ ಡ್ರೋನ್ ದಾಳಿಯಿಂದ ರಾಷ್ಟ್ರೀಯ ತೈಲ ಕಂಪನಿಯ ಸಂಗ್ರಹ ಕೇಂದ್ರ ಮತ್ತು ಸರ್ಕಾರಿ ಪೆಟ್ರೋಕೆಮಿಕಲ್ ಘಟಕದಲ್ಲಿ ಬೆಂಕಿ ಕಾಣಿಸಿಕೊಂಡಿದೆ. ಯುನೈಟೆಡ್ ಅರಬ್ ಎಮಿರೇಟ್ಸ್‌ನಲ್ಲಿ, ರುವೈಸ್‌ನ ಪೆಟ್ರೋಕೆಮಿಕಲ್ ಘಟಕದಲ್ಲಿ ತಡೆಗಟ್ಟಲಾದ ಡ್ರೋನ್ ಅವಶೇಷಗಳಿಂದ ಬೆಂಕಿ ಕಾಣಿಸಿಕೊಂಡು ಕಾರ್ಯಾಚರಣೆ ಸ್ಥಗಿತಗೊಂಡಿತು. ಈ ದಾಳಿಗಳು ಇಸ್ರೇಲ್ ಇರಾನ್‌ನ ಪೆಟ್ರೋಕೆಮಿಕಲ್ ಘಟಕದ ಮೇಲೆ ನಡೆಸಿದ ದಾಳಿಯ ನಂತರ ನಡೆದಿವೆ. ಪ್ರಧಾನಿ ಬೆಂಜಮಿನ್ ನೆತನ್ಯಾಹು ಆ ಘಟಕವು ಯುದ್ಧಕ್ಕೆ ಹಣ ಒದಗಿಸುತ್ತಿದೆ ಎಂದು ಹೇಳಿದ್ದಾರೆ. ಪೆಟ್ರೋಕೆಮಿಕಲ್ ಉದ್ಯಮವು ಗಲ್ಫ್ ರಾಷ್ಟ್ರಗಳ ಪ್ರಮುಖ ಆರ್ಥಿಕ ಕ್ಷೇತ್ರವಾಗಿದೆ. ಇವು ಪ್ಲಾಸ್ಟಿಕ್, ಪಾಲಿಮರ್, ರಸಗೊಬ್ಬರ ಉತ್ಪಾದನೆಗೆ ಬಳಸಲಾಗುತ್ತವೆ ಮತ್ತು ಬಿಲಿಯನ್ ಡಾಲರ್‌ಗಳಷ್ಟು ಆದಾಯ ತರುತ್ತವೆ.

ಮುಂದುವರಿದ ಸಂಧಾನ ಯತ್ನ

ಪಾಕಿಸ್ತಾನ ವಿದೇಶಾಂಗ ಸಚಿವಾಲಯದ ವಕ್ತಾರ ತಾಹಿರ್ ಅಂದ್ರಾಬಿ, ಯುದ್ಧ ವಿರಾಮದ ಮಾತುಕತೆಗಳು ಸರಿಯಾದ ದಿಕ್ಕಿನಲ್ಲಿ ಸಾಗುತ್ತಿವೆ ಎಂದು ಹೇಳಿದ್ದಾರೆ. ಪಾಕಿಸ್ತಾನ, ಟರ್ಕಿ ಮತ್ತು ಈಜಿಪ್ಟ್ ದೇಶಗಳು ಮಧ್ಯಸ್ಥಿಕೆ ನಡೆಸಿ ಅಮೆರಿಕ ಮತ್ತು ಇರಾನ್ ನಡುವೆ ಮಾತುಕತೆ ನಡೆಸಲು ಪ್ರಯತ್ನಿಸುತ್ತಿವೆ.ಈ ಪ್ರಸ್ತಾಪದಲ್ಲಿ ಯುದ್ಧ ವಿರಾಮದ ಮೂಲಕ ರಾಜತಾಂತ್ರಿಕ ಪರಿಹಾರ ಕಂಡುಕೊಳ್ಳುವುದು ಉದ್ದೇಶವಾಗಿದೆ.

ಸಾವು-ನೋವು ಹೆಚ್ಚಳ

ಯುದ್ಧ ಪ್ರಾರಂಭವಾದ ನಂತರ ಇರಾನ್‌ನಲ್ಲಿ 1,900ಕ್ಕೂ ಹೆಚ್ಚು ಜನರು ಮೃತಪಟ್ಟಿದ್ದಾರೆ. ಗಲ್ಫ್ ರಾಷ್ಟ್ರಗಳು ಮತ್ತು ಪಶ್ಚಿಮ ತೀರ ಪ್ರದೇಶದಲ್ಲಿ ಎರಡು ಡಜನ್ ಜನರು ಮೃತಪಟ್ಟಿದ್ದಾರೆ. ಇಸ್ರೇಲ್‌ನಲ್ಲಿ 19 ಜನರು ಮತ್ತು 13 ಅಮೆರಿಕ ಸೈನಿಕರು ಮೃತಪಟ್ಟಿದ್ದಾರೆ. ಲೆಬನಾನ್‌ನಲ್ಲಿ 1,400ಕ್ಕೂ ಹೆಚ್ಚು ಜನರು ಮೃತಪಟ್ಟಿದ್ದು, 10 ಲಕ್ಷಕ್ಕೂ ಹೆಚ್ಚು ಜನರು ಸ್ಥಳಾಂತರಗೊಂಡಿದ್ದಾರೆ. ಅಲ್ಲದೆ 10 ಇಸ್ರೇಲ್ ಸೈನಿಕರೂ ಮೃತರಾಗಿದ್ದಾರೆ.

ಕಿರುಸುದ್ದಿ

ಬಂಗಾಳದಲ್ಲಿ ಅವ್ಯವಸ್ಥೆ: 4 ಪೊಲೀಸರ ಅಮಾನತು

ಕೋಲ್ಕತ್ತಾ: ಪಶ್ಚಿಮ ಬಂಗಾಳ ಬಿಜೆಪಿ ನಾಯಕ ಸುವೇಂದು ಅಧಿಕಾರಿ ಅವರ ನಾಮ ನಿರ್ದೇಶನ ಸಲ್ಲಿಕೆಯ ವೇಳೆ ಕಾನೂನು ಸುವ್ಯವಸ್ಥೆ ಕಾಪಾಡುವಲ್ಲಿ ವಿಫಲರಾದ ನಾಲ್ವರು ಕೋಲ್ಕತ್ತಾ ಪೊಲೀಸ್ ಸಿಬ್ಬಂದಿಯನ್ನು ಚುನಾವಣಾ ಆಯೋಗ ಅಮಾನತುಗೊಳಿಸಿದೆ. ಏ.2ರಂದು ಸುವೇಂದು ಅಧಿಕಾರಿಯವರ ನಾಮ ನಿರ್ದೇಶನ ಸಂದರ್ಭ ಬಿಜೆಪಿ ಆಯೋಜಿಸಿದ್ದ ಬೃಹತ್ ರೋಡ್‌ಶೋ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರ ನಿವಾಸದ ಸಮೀಪ ಕಾಲಿಘಾಟ್ ತಲುಪಿದ್ದಾಗ ತೃಣಮೂಲ ಕಾಂಗ್ರೆಸ್ ಕಾರ್ಯಕರ್ತರು ತಮ್ಮ ಧ್ವಜವನ್ನು ತೋರಿಸಿ ಜಯ್ ಬಾಂಗ್ಲಾ ಮತ್ತು ಮಮತಾ ಬ್ಯಾನರ್ಜಿ ಜಿಂದಾಬಾದ್ ಎಂಬ ಘೋಷಣೆಗಳನ್ನು ಕೂಗುತ್ತಾ ಸುವೇಂದು ರೋಡ್‌ಶೋ ತಡೆದಿದ್ದರು. ಈ ವೇಳೆ ಎರಡೂ ಬಣಗಳು ಎದುರೆದುರು ನಿಂತು ಘೋಷಣೆಗಳನ್ನು ಕೂಗುತ್ತಾ ನಿಂತಿದ್ದವು. ಇದಾದ ಬಳಿಕ ಪೊಲೀಸ್ ಗುಂಪುಗಳು ಹೊಡೆದಾಡುವುದನ್ನು ತಡೆದಿದ್ದಾರೆ.

ತರೂರ್ ಮೇಲೆ ದಾಳಿ ಯತ್ನ: ಕೇರಳದ ಮಲಪ್ಪುರಂ ಜಿಲ್ಲೆಯಲ್ಲಿ ಚುನಾವಣಾ ಪ್ರಚಾರದಲ್ಲಿ ಭಾಗವಹಿಸಲು ತೆರಳಿದ್ದ ಕಾಂಗ್ರೆಸ್ ಸಂಸದ ಶಶಿ ತರೂರ್ ಮೇಲೆ ದಾಳಿ ಯತ್ನ ನಡೆದಿದ್ದು, ತರೂರ್ ಭದ್ರತಾ ಸಿಬ್ಬಂದಿ ಮತ್ತು ಅವರ ಕಾರು ಚಾಲಕನ ಮೇಲೆ ಐವರ ಗುಂಪೊಂದು ಹಲ್ಲೆ ನಡೆಸಿತ್ತು. ಒಬ್ಬ ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ.

ಐಸಿಸ್ ಉಗ್ರರ ಸಂಚು ಭೇದಿಸಿದ ಪೊಲೀಸರು

ಅಮರಾವತಿ: ಆಂಧ್ರ ಪ್ರದೇಶದಲ್ಲಿ ಇಸ್ಲಾಮಿಕ್ ಸ್ಟೇಟ್ ಸಂಬಂಧಿತ ಉಗ್ರ ಸಂಚೊಂದನ್ನು ಪೊಲೀಸರು ಭೇದಿಸಿದ್ದಾರೆಂದು ಗುಪ್ತಚರ ಇಲಾಖೆಯ ಮೂಲಗಳು ಭಾನುವಾರ ತಿಳಿಸಿವೆ. ಪ್ರಕರಣದಲ್ಲಿ ವಿದೇಶಿ ಹ್ಯಾಂಡ್ಲರ್‌ಗಳು, ಇಸ್ಲಾಮಿಕ್ ಸ್ಟೇಟ್ (ಐಸಿಸ್) ಸೇರಿದಂತೆ ಇಸ್ಲಾಮಿಕ್ ಮೂಲಭೂತವಾದಿ ಸಂಘಟನೆಗಳು ಒಳಗೊಂಡಿದ್ದು, ದಕ್ಷಿಣ ಭಾರತದಲ್ಲಿ ಮುಸ್ಲಿಂ ಯುವಕರಲ್ಲಿ ಇಸ್ಲಾಮಿಕ್ ಉಗ್ರವಾದ ಪ್ರಚರಿಸಲು ಸಂಚು ರೂಪಿಸಿದ್ದರೆಂದು ಮೂಲಗಳು ತಿಳಿಸಿವೆ. ಈ ಹಿಂದೆಯೇ ಬಿಹಾರ, ದಿಲ್ಲಿ, ಕರ್ನಾಟಕ, ಮಹಾರಾಷ್ಟ್ರ, ಪಶ್ಚಿಮ ಬಂಗಾಳ, ತೆಲಂಗಾಣ ಮತ್ತು ರಾಜಸ್ಥಾನಕ್ಕೆ ಆಂಧ್ರಪ್ರದೇಶ ಪೊಲೀಸ್ ವಿವಿಧ ತಂಡಗಳನ್ನು ಕಳುಹಿಸಿತ್ತು. ಆಂಧ್ರಪ್ರದೇಶದಲ್ಲಿ ಮೂವರು ಮತ್ತು ಇತರ ರಾಜ್ಯಗಳಿಂದ ಅಂದಾಜು 12 ಶಂಕಿತರನ್ನು ಪೊಲೀಸರು ಬಂಧಿಸಿದ್ದಾರೆ. ರಹಮತ್ತುಲ್ಲಾ ಶರೀಫ್ ಮುಖ್ಯ ಆರೋಪಿ ಎಂದು ಪ್ರಾಥಮಿಕ ತನಿಖೆ ವೇಳೆ ತಿಳಿದುಬಂದಿದೆ. ಜಿಹಾದಿ ಮುಸ್ಲಿಂ ಮಹಿಳೆಯರಿಗಾಗಿ ಖವಾತೀನ್ ಎಂಬ ಪ್ರತ್ಯೇಕ ಮಹಿಳಾ ಘಟಕ ನಿರ್ಮಾಣ ಮಾಡಲಾಗಿತ್ತು. ಜಿಹಾದಿ ಸಂಚಿನ ಹಿಂದೆ ವಿದೇಶಿ ಹ್ಯಾಂಡ್ಲರ್‌ಗಳು, ಇರಾಕ್ ಮತ್ತು ಸಿರಿಯಾದಲ್ಲಿನ ಐಸಿಸ್, ಭಾರತೀಯ ಉಪಖಂಡದ ಅಲ್-ಖೈದಾ ಉಗ್ರ ಸಂಘಟನೆಗಳು ಒಳಗೊಂಡಿವೆ. ಕುಖ್ಯಾತ ಉಗ್ರರ ವಿಡಿಯೋ ಬಳಕೆ: ಒಸಮಾ ಬಿನ್ ಲಾಡೆನ್, ಇಸ್ರಾರ್ ಅಹ್ಮದ್ ಶೇಖ್, ಝಾಕಿರ್ ನಾಯ್ಕ್ ಮತ್ತು ಅನ್ವರ್ ಅಲ್-ಅವ್ಲಾಕಿ ಮೊದಲಾದ ಕುಖ್ಯಾತ ಉಗ್ರರ ವಿಡಿಯೋ ತೋರಿಸಿ ಭಾರತೀ ಮುಸ್ಲಿಂ ಯುವಕರನ್ನು ಭಯೋತ್ಪಾದನೆಯತ್ತ ಸೆಳೆಯುತ್ತಿದ್ದರೆಂದು ತಿಳಿದುಬಂದಿದೆ.

ದೇಶದಲ್ಲಿ 6.6 ಲಕ್ಷ ಸಣ್ಣ ಸಿಲಿಂಡರ್‌ಗಳ ಮಾರಾಟ

ಹೊಸದಿಲ್ಲಿ: ಸಣ್ಣ 5 ಕೆ.ಜಿ. ಎಲ್‌ಪಿಜಿ ಸಿಲಿಂಡರ್‌ಗಳು ದೇಶದೆಲ್ಲೆಡೆ ಎಲ್‌ಪಿಜಿ ಪೂರೈಕೆದಾರರ ಬಳಿ ಮಾರಾಟಕ್ಕೆ ಲಭ್ಯವಿದೆ. ಶನಿವಾರ ಒಟ್ಟು 90,000 ಇಂಥಾ ಸಿಲಿಂಡರ್‌ಗಳ ಮಾರಾಟವಾಗಿವೆ. ಮಾ.23ರಿಂದ ಇಲ್ಲಿಯವರೆಗೆ ಒಟ್ಟು 6.6 ಲಕ್ಷ ಸಣ್ಣ ಅಡುಗೆ ಅನಿಲ ಸಿಲಿಂಡರ್‌ಗಳ ಮಾರಾಟವಾಗಿವೆ ಎಂದು ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯವು ಭಾನುವಾರ ಹೇಳಿಕೆ ನೀಡಿದೆ. ಮಾ.23ರಿಂದ ಎಲ್‌ಪಿಜಿ ಪೂರೈಕೆದಾರರು ಅಥವಾ ಡೀಲರ್‌ಗಳ ಬಳಿ ಮಾನ್ಯ ಗುರುತಿನ ಚೀಟಿಗಳನ್ನು ತೋರಿಸಿ ಎಲ್‌ಪಿಜಿ ಗ್ಯಾಸ್ ಸಿಲಿಂಡರ್‌ಗಳನ್ನು ಪಡೆದುಕೊಳ್ಳಲು ಅನುವು ಮಾಡಿಕೊಡಲಾಗಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ. ಸಬ್ಸಿಡಿ ಇರುವ ಗೃಹಬಳಕೆಯ 14.2 ಕೆ.ಜಿ ಸಿಲಿಂಡರ್‌ಗಳನ್ನು ಹೊರತುಪಡಿಸಿ, 5 ಕೆ.ಜಿ ಸಿಲಿಂಡರ್‌ಗಳು (ಎಫ್‌ಟಿಎಲ್) ಮಾರುಕಟ್ಟೆ ಬೆಲೆಗೆ ಲಭ್ಯವಿರಲಿವೆ ಎಂದು ತೈಲ ಸಚಿವಾಲಯ ತಿಳಿಸಿದೆ. ದಿನವೊಂದರಲ್ಲಿ 51 ಲಕ್ಷ ಗೃಹಬಳಕೆಯ ಸಿಲಿಂಡರ್‌ಗಳ ಮಾರಾಟವಾಗುತ್ತವೆ. ಒಟ್ಟು ಬೇಡಿಕೆಯ ಶೇ.95 ಬುಕ್ಕಿಂಗ್ ಆನ್ ಲೈನ್ ಮುಖೇನ ನಡೆಯುತ್ತವೆ. ಬ್ಲ್ಯಾಕ್ ಮಾರ್ಕೆಟ್ ಮೂಲಕ ಗ್ಯಾಸ್ ಸಿಲಿಂಡರ್‌ಗಳ ಅಕ್ರಮ ಮಾರಾಟದ ವಿರುದ್ಧ ಅಧಿಕಾರಿಗಳು ಕಠಿಣ ಕ್ರಮ ತೆಗೆದುಕೊಳ್ಳಲು ಸಚಿವಾಲಯ ಸೂಚನೆ ನೀಡಿದೆ. ಮಾರ್ಚ್‌ನಿಂದ ಇಲ್ಲಿಯವರೆಗೆ ಬ್ಲ್ಯಾಕ್ ಮಾರ್ಕೆಟ್‌ನಲ್ಲಿ ಅಕ್ರಮ ಮಾರಾಟವಾಗುತ್ತಿದ್ದ 50,000 ಸಿಲಿಂಡರ್‌ಗಳನ್ನು ವಶಪಡಿಸಿದ್ದು, ಸುಮಾರು 1,400 ಎಲ್‌ಪಿಜಿ ಪೂರೈಕೆದಾರರಿಗೆ ಶೋಕಾಸ್ ನೋಟಿಸ್ ನೀಡಲಾಗಿದೆ. ಇಲ್ಲಿಯವರೆಗೆ 36 ಪೂರೈಕೆದಾರರ ಡೀಲರ್‌ಶಿಪ್ (ಪೂರೈಕೆ ಪರವಾನಗಿ) ಅಮಾನತುಗೊಳಿಸಲಾಗಿದೆ ಎಂದು ಸಚಿವಾಲಯ ತಿಳಿಸಿದೆ.

650 ಕೋಟಿ ರೂ. ಅಕ್ರಮ ನಗದು, ಮಾದಕವಸ್ತು ವಶ

ಹೊಸದಿಲ್ಲಿ : ಚುನಾವಣೆ ಎದುರಿಸಲಿರುವ ನಾಲ್ಕು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶ ಪುದುಚೇರಿಯಲ್ಲಿ ಮತದಾರರನ್ನು ಓಲೈಸಲು ಬಳಕೆಯಾಗಲಿದ್ದ ಸುಮಾರು 650 ಕೋಟಿ ರೂ.ಅಕ್ರಮ ನಗದು, ಮಾದಕವಸ್ತುಗಳು ಮತ್ತು ಮದ್ಯವನ್ನು ಅನುಷ್ಠಾನ ನಿರ್ದೇಶನಾಲಯ ಅಧಿಕಾರಿಗಳು ಮುಟ್ಟುಗೋಲು ಹಾಕಿದ್ದಾರೆಂದು ಚುನಾವಣಾ ಆಯೋಗ ಭಾನುವಾರ ಮಾಹಿತಿ ನೀಡಿದೆ. ರೂ.319 ಕೋಟಿ ಅಕ್ರಮ ನಗದು, ಮಾದಕ ವಸ್ತುಗಳು, ಅಕ್ರಮ ಮದ್ಯ ಮತ್ತಿತರ ಬೆಲೆಬಾಳುವ ವಸ್ತುಗಳನ್ನು ಪ.ಬಂಗಾಳದಲ್ಲಿ ಮುಟ್ಟುಗೋಲು ಹಾಕಿದ್ದು, 170ಕೋಟಿ ರೂ.ಮೊತ್ತದ ವಸ್ತುಗಳನ್ನು ತಮಿಳ್ನಾಡಿನಿಂದ ವಶಪಡಿಸಲಾಗಿದೆ ಎಂದು ಆಯೋಗ ವಿವರಿಸಿದೆ.

ಜನರಿಂದ ಬರುವ ದೂರುಗಳನ್ನು 100 ನಿಮಿಷಗಳೊಳಗೆ ಇತ್ಯರ್ಥಪಡಿಸಲು 5,173 ಫ್ಲೈಯಿಂಗ್ ಸ್ಕ್ವಾಡ್‌ಗಳನ್ನು ನಿಯೋಜಿಸಲಾಗಿದೆ. ವಿವಿಧ ಕೇಂದ್ರಗಳಲ್ಲಿ ದಿಢೀರ್ ನಾಕಾಬಂಧಿ ರಚಿಸಲು 5,200 ಸ್ಟಾಟಿಕ್ ಸರ್ವೆಲೆನ್ಸ್ ಟೀಮ್(ಎಸ್‌ಎಸ್‌ಟಿ)ಗಳನ್ನು ನಿಯೋಜಿಸಲಾಗಿದೆ ಎಂದು ಆಯೋಗ ಮಾಹಿತಿ ನೀಡಿದೆ. ಕೇರಳ , ಅಸ್ಸಾಂ ಮತ್ತು ಪುದುಚೇರಿಗಳಲ್ಲಿ ಏ.9ರಂದು ಚುನಾವಣೆ ನಡೆಯಲಿದೆ. ಪ.ಬಂಗಾಳದಲ್ಲಿ ಎರಡು ಹಂತಗಳಲ್ಲಾಗಿ ಏ.23, 29ರಂದು ಚುನಾವಣೆಯಿದೆ. ತಮಿಳ್ನಾಡಲ್ಲಿ ಒಂದೇ ಹಂತದಲ್ಲಿ ಏ. 23ರಂದು ಮತದಾನ ನಡೆಯಲಿದೆ. ಆರು ರಾಜ್ಯಗಳಲ್ಲಿ ಎಂಟು ಸೀಟುಗಳಿಗೆ ಏ.9, 23ರಂದು ವಿಧಾನಸಭಾ ಉಪ ಚುನಾವಣೆ ನಡೆಯಲಿದೆ. ಇಲೆಕ್ಟ್ರಾನಿಕ್ ಸೀಝುರ್ ಮೆನೇಜ್‌ಮೆಂಟ್ ಸಿಸ್ಟಮ್ ನಿಂದ(ಇಎಸ್‌ಎಂಎಸ್) ಡೇಟಾ ಸಂಗ್ರಹಿಸಲಾಗಿದೆ ಎಂದು ಆಯೋಗ ತಿಳಿಸಿದೆ. ವಿಧಾನಸಭಾ ಚುನಾವಣೆ ಮತ್ತು ಉಪ ಚುನಾವಣೆಗಳನ್ನು ಮಾರ್ಚ್ 15ರಂದು ಘೋಷಿಸಲಾಗಿತ್ತು.

ಬಿಜೆಪಿ ಕಚೇರಿ ಬಳಿ ಸ್ಫೋಟ: ಇಬ್ಬರು ಆರೋಪಿಗಳ ಸೆರೆ

ಚಂಡೀಗಢ: ಇಲ್ಲಿನ ಬಿಜೆಪಿ ಮುಖ್ಯ ಕಚೇರಿಯ ಹೊರಗೆ ಸಂಭವಿಸಿದ ಸ್ಫೋಟ ಪ್ರಕರಣದಲ್ಲಿ ಇಬ್ಬರು ಪ್ರಮುಖ ಆರೋಪಿಗಳನ್ನು ಪಂಜಾಬ್ ಪೊಲೀಸರು ಬಂಧಿಸಿದ್ದಾರೆ. ಇದರೊಂದಿಗೆ ಪ್ರಕರಣದಲ್ಲಿ ಬಂಧಿತರಾದವರ ಸಂಖ್ಯೆ 7ಕ್ಕೇರಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿ ಭಾನುವಾರ ತಿಳಿಸಿದ್ದಾರೆ. ಆರೋಪಿಗಳು ಪಾಕಿಸ್ತಾನದ ಇಂಟರ್-ಸರ್ವಿಸಸ್ ಇಂಟೆಲಿಜೆನ್ಸ್(ಐಎಸ್‌ಐ) ಬೆಂಬಲಿತ ಜಾಲದ ಭಾಗವಾಗಿದ್ದು, ಜರ್ಮನಿ ಮತ್ತು ಪೋರ್ಚುಗಲ್ ನಲ್ಲಿರುವ ತಮ್ಮ ಹ್ಯಾಂಡ್ಲರ್‌ಗಳಿಂದ ಸೂಚನೆಗಳನ್ನು ಪಡೆಯುತ್ತಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ. ಹರ್ಯಾಣದ ರೇವಾರಿ ಪಟ್ಟಣದಲ್ಲಿ ಶನಿವಾರ ರಾತ್ರಿ ಹರಿಯಾಣ ಪೊಲೀಸ್ ವಿಶೇಷ ಕಾರ್ಯಪಡೆ(ಎಸ್‌ಟಿಎಫ್) ನಡೆಸಿದ ಜಂಟಿ ಕಾರ್ಯಾಚರಣೆಯಲ್ಲಿ ಈ ಬಂಧನಗಳು ನಡೆದಿವೆ ಎಂದು ಪಂಜಾಬ್ ಡಿಜಿಪಿ ಗೌರವ್ ಯಾದವ್ ತಿಳಿಸಿದ್ದಾರೆ. ಬಂಧಿತ ಇಬ್ಬರನ್ನು ಗುರುತೇಜ್ ಸಿಂಗ್ ಮತ್ತು ಅಮನ್‌ಪ್ರೀತ್ ಸಿಂಗ್ ಎಂದು ಗುರುತಿಸಲಾಗಿದ್ದು, ಇವರು ಪಂಜಾಬ್‌ನ ರೂಪನಗರ ಜಿಲ್ಲೆಯ ರತನ್‌ಗಢ ನಿವಾಸಿಗಳು. ಇವರು ರೈಡ್-ಹೈಲಿಂಗ್ ಸೇವೆ ರಾಪಿಡೊಗಾಗಿ ಬೈಕ್ ಚಾಲಕರಾಗಿ ಕೆಲಸ ಮಾಡುತ್ತಿದ್ದರು. ಐಎಸ್‌ಐ ಹ್ಯಾಂಡ್ಲರ್‌ಗಳು ಆರೋಪಿಗಳಿಗೆ 2 ಲಕ್ಷ ಹಣದ ಆಮಿಷವೊಡ್ಡಿದ್ದರು ಎಂದು ಡಿಜಿಪಿ ತಿಳಿಸಿದ್ದಾರೆ.

ಒಳನುಸುಳುಕೋರರನ್ನು ವಿರೋಧಿಸುತ್ತೇವೆ ವಿನಾ ಮುಸ್ಲಿಮರನ್ನಲ್ಲ

ಸಮಸ್ತರ ಕಲ್ಯಾಣ ಬಿಜೆಪಿ ನೀತಿ: ಗಡ್ಕರಿ

ಹೊಸದಿಲ್ಲಿ: ಯಾವುದೇ ಜಾತಿ ಮತ ಭೇದವಿಲ್ಲದೆ ಎಲ್ಲರನ್ನೂ ಜತೆಯಾಗಿ ಮುಂದಕ್ಕೊಯ್ಯೋದು, ಎಲ್ಲರ ಒಳಗೊಳ್ಳುವಿಕೆಗೆ ಅವಕಾಶ ನೀಡುವ ಅಭಿವೃದ್ಧಿ ಯೋಜನೆಗಳ ಸಾಕಾರ, ಸಮಸ್ತರ ಕಲ್ಯಾಣ ಬಿಜೆಪಿ ನೀತಿ. ನಾವು ಅಕ್ರಮ ನುಸುಳುಕೋರರನ್ನು ವಿರೋಧಿಸುತ್ತೇವೆ ವಿನಾ ಮುಸಲ್ಮಾನರನ್ನಲ್ಲ ಎಂದು ಬಿಜೆಪಿ ಹಿರಿಯ ನಾಯಕ, ಕೇಂದ್ರ ಸಚಿವ ನಿತಿನ್ ಗಡ್ಕರಿ ನುಡಿದರು.

ಅಸ್ಸಾಂ ಮತ್ತು ಪಶ್ಚಿಮ ಬಂಗಾಳಗಳಲ್ಲಿ ನಾವು ಖಂಡಿತ ಜಯಿಸುತ್ತೇವೆಂಬ ನಂಬಿಕೆ ತನ್ನದು ಎಂದವರು ಪಿಟಿಐಗೆ ಸಂದರ್ಶನದಲ್ಲಿ ತಿಳಿಸಿದ್ದಾರೆ. ಮೂಲಸೌಕರ್ಯ ರಂಗಗಳಿಗೆ ಬೃಹತ್ ಪ್ರಮಾಣದಲ್ಲಿ ಹೂಡಿಕೆಗಳು ಮತ್ತು ಆಡಳಿತ ಕೇಂದ್ರಿತ ಪ್ರಯತ್ನಗಳು ಬಿಜೆಪಿಯ ಪ್ರಚಾರ ಕಾರ್ಯತಂತ್ರದ ಪ್ರಧಾನ ಸ್ತಂಭಗಳಾಗಿವೆ ಎಂದು ಪಕ್ಷದ ಅಭಿವೃದ್ಧಿ ಸಾಧನೆಗಳತ್ತ ಗಮನ ಸೆಳೆದರು.

ಅಸ್ಸಾಂ ಸಹಿತ ಈಶಾನ್ಯ ವಲಯದಲ್ಲಿ 5 ಲಕ್ಷ ಕೋಟಿ ರೂ. ಮೊತ್ತದ ಯೋಜನೆಗಳನ್ನು ಅನುಷ್ಠಾನಿಸಲಾಗುತ್ತಿದೆ. 1.5 ಲಕ್ಷ ಕೋಟಿ ರೂ. ಮೊತ್ತದ ಮೂಲಸೌಕರ್ಯ ಯೋಜನೆಗಳು ಈಗಾಗಲೆ ಪೂರ್ತಿಯಾಗಿವೆ, 1.5 ಲಕ್ಷ ಕೋಟಿಗಳಿಂದ 2 ಲಕ್ಷ ಕೋಟಿ ರೂ. ಮೊತ್ತದ



ಯೋಜನೆಗಳು ಅನುಷ್ಠಾನ ಹಂತದಲ್ಲಿವೆ. 2 ಲಕ್ಷ ಕೋಟಿ ರೂ. ಮೊತ್ತದ ಯೋಜನೆಗಳು ಸಿದ್ಧತಾ ಹಂತದಲ್ಲಿವೆ. ಸಂಪರ್ಕ ವ್ಯವಸ್ಥೆಯಲ್ಲಿ ಪರಿವರ್ತನೆ, ವ್ಯಾಪಾರ ವ್ಯವಹಾರಗಳಿಗೆ ಉತ್ತೇಜನ, ಆರ್ಥಿಕ ಬೆಳವಣಿಗೆಯನ್ನು ವಿಸ್ತೃತಗೊಳಿಸುವುದು ರಸ್ತೆ ಸಾರಿಗೆ, ಹೆದ್ದಾರಿಗಳು ಹಾಗೂ ಲಾಜಿಸ್ಟಿಕ್ ರಂಗಗಳಲ್ಲಿನ ಪ್ರಸ್ತುತ ಉಪಕ್ರಮಗಳ ಹಿಂದಿನ ಮೂಲೋದ್ದೇಶವಾಗಿದೆ ಎಂದು ಸಚಿವರು ಮಾಹಿತಿ ನೀಡಿದರು.

ಈ ರೀತಿಯ ನಿರಂತರ ಉತ್ತೇಜನಗಳು, ಇತಿಹಾಸ ಕಾಲದಿಂದಲೇ ಸಂಪರ್ಕ ವ್ಯವಸ್ಥೆಯ ಸವಾಲುಗಳಿಂದ ತತ್ತರಿಸಿರುವ ಅಸ್ಸಾಂ ಮತ್ತು ಈಶಾನ್ಯ ವಲಯದಲ್ಲಿ ಮೂಲಸೌಕರ್ಯಗಳ ಸ್ವರೂಪವನ್ನೇ ಬದಲಿಸಿಬಿಡಲಿವೆ ಎಂದು ಗಡ್ಕರಿ ಹೇಳಿದ್ದಾರೆ. ಹಿಮಂತ್ ಬಿಸ್ವಾ ಶರ್ಮಾ ನೇತೃತ್ವದ ಸರಕಾರ ತನ್ನ ಅಭಿವೃದ್ಧಿ ದಾಖಲೆ, ಕಲ್ಯಾಣ ಉಪಕ್ರಮಗಳ ಬಲದಿಂದ ಈ ಬಾರಿಯೂ ಅಧಿಕಾರದಲ್ಲಿ ಮುಂದುವರೆಯುವ ಖಾತರಿ ಹಿನ್ನೆಲೆಯಲ್ಲಿ, ಗಡ್ಕರಿ ಅವರ ಪ್ರಸ್ತುತ ಹೇಳಿಕೆಗಳು ಮಹತ್ವಪೂರ್ಣವೆನಿಸಿವೆ.

ವಿವಿಧತೆಯಲ್ಲಿ ಏಕತೆ ನಮ್ಮ ಪ್ರಧಾನ ಅಸ್ತಿತ್ವ: ವಿವಿಧತೆಯಲ್ಲಿ ಏಕತೆ ನಮ್ಮ ಪ್ರಧಾನ ಅಸ್ತಿತ್ವವಾಗಿದೆ. ಬಿಜೆಪಿ ಯಾವುದೇ ಜಾತಿ ,ಧರ್ಮ ಅಥವಾ ಭಾಷಾ ವಿರೋಧಿಯಲ್ಲ, ಸಂವಿಧಾನಕ್ಕನುಸಾರ ಸಮಸ್ತರಿಗೂ ಹಕ್ಕುಗಳ ಕೊಡಮಾಡುವುದನ್ನು ಬಿಜೆಪಿ ಬೆಂಬಲಿಸುತ್ತದೆ. ಕಿರುಕುಳಕ್ಕೀಡಾದ ಅಲ್ಪಸಂಖ್ಯಾತರಿಗೆ ಪೌರತ್ವ(ತಿದ್ದುಪಡಿ) ಕಾಯ್ದೆಯಲ್ಲಿ ಪೌರತ್ವ ನೀಡಿದ್ದನ್ನು ಪರೋಕ್ಷವಾಗಿ ಉಲ್ಲೇಖಿಸಿ ಸಚಿವರು ಪ್ರಸ್ತುತ ಹೇಳಿಕೆ ನೀಡಿದರು. ಪ.ಬಂಗಾಳದಲ್ಲಿ ರಾಜಕೀಯ ಬದಲಾವಣೆಯಾಗಬೇಕೆಂದು ಮತದಾರರು ಆಗ್ರಹಪಟ್ಟಿದ್ದಾರೆ. ಅಲ್ಲಿನ ಜನರು ಬದಲಾವಣೆ ಬಯಸಿದ್ದಾರೆ. ಈ ನಿಟ್ಟಿನಲ್ಲಿ ಪ.ಬಂಗಾಳದಲ್ಲೂ ಬಿಜೆಪಿಗೆ ಜಯ ನಿಶ್ಚಯವೆಂದು ವಿಶ್ವಾಸ ವ್ಯಕ್ತಪಡಿಸಿದರು. ಅನಗತ್ಯ ರಾಜಕೀಯ ಸಂಘರ್ಷ ಬದಲು ದಕ್ಷ ಆಡಳಿತ ಮತ್ತು ಅಭಿವೃದ್ಧಿಗೆ ಪಕ್ಷವು ಆದ್ಯತೆ ನೀಡಲಿದೆ ಎಂದು ಹೇಳಿದರು.

ಈಸ್ಟರ್ ಹಬ್ಬದ ಶುಭಹಾರೈಸಿ ಕೇಂದ್ರ ಸಚಿವ ಅಮಿತ್ ಶಾ ಮನವಿ

ಕೇರಳದಲ್ಲಿ ಎನ್‌ಡಿಎಗೆ ಅವಕಾಶ ಕೊಡಿ

ಕೊಚ್ಚಿ /ತಿರುವನಂತಪುರಂ: ಸಂಪನ್ನ ಕೇರಳದ ಸಾಕಾರಕ್ಕಾಗಿ ಕೇರಳದಲ್ಲಿ ಸರಕಾರ ರಚಿಸಲು ಎನ್‌ಡಿಎಗೆ ಅವಕಾಶ ಕೊಡಿ, ಬಿಜೆಪಿ ನೇತೃತ್ವದ ಎನ್‌ಡಿಎಯನ್ನು ಬೆಂಬಲಿಸಿ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಕ್ರೈಸ್ತ ಬಾಂಧವರಿಗೆ ಈಸ್ಟರ್ ಹಬ್ಬದ ಶುಭಹಾರೈಸಿ ವಿನಂತಿಸಿದ್ದಾರೆ. ಕೇರಳದಲ್ಲಿ ಎನ್‌ಡಿಎ ಸರಕಾರ ರಚಿಸಿದಲ್ಲಿ, ಬರೇ ಎರಡು ತಿಂಗಳೊಳಗೆ ಶಬರಿಮಲೆ ಸನ್ನಿಧಾನದ ಬಂಗಾರ ದುರ್ಬಳಕೆ ಆರೋಪಿಗಳನ್ನು ಜೈಲಿಗೆ ಕಳುಹಿಸಲಿದೆ ಎಂದು ಸಚಿವರು ಭರವಸೆ ನೀಡಿದರು. ಎರ್ನಾಕುಳಂನ ಕುನ್ನತುನಾಡು ಕ್ಷೇತ್ರದಲ್ಲಿ ಸಚಿವರು ಸಾರ್ವಜನಿಕ ಸಭೆಯನ್ನು ಉದ್ದೇಶಿಸಿ ಈ ರೀತಿ ಆಶ್ವಾಸನೆಯಿತ್ತರು. ಕೇರಳಕ್ಕೆ ಪ್ರಪ್ರಥಮ ಏಐಐಎಂಎಸ್ ಆಸ್ಪತ್ರೆ ಮಂಜೂರು ಮಾಡಲಾಗುವುದು. ಎನ್‌ಡಿಎ ಸರಕಾರ ಅಧಿಕಾರ ಸೂತ್ರ ಹಿಡಿದ ನಂತರ ಎರಡು ವರ್ಷಗಳೊಳಗೆ ಆಸ್ಪತ್ರೆ ಕಾರ್ಯಾರಂಭಿಸಲಿದೆ ಎಂದು ಹೇಳಿದರು.



ಸುಳ್ಳುಗಾರ ರಾಹುಲ್: ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಓರ್ವ ಸುಳ್ಳುಗಾರ. ಕೇರಳದ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ನೇಮ್ ಚೇಂಜ್ ಸ್ಟಾರ್ಟ್‌ಅಪ್ ಶುರು ಮಾಡಿದ್ದಾರೆ. ಇದರಡಿ ಕೇಂದ್ರ ಪ್ರಾಯೋಜಿತ ಯೋಜನೆಗಳ ಹೆಸರು ಬದಲಿಸಿ ದುರ್ಲಾಭವೆತ್ತುವುದು ಸಿಎಂ ಪಿಣರಾಯಿ ತಂತ್ರವಾಗಿದೆ ಎಂದು ಟೀಕಿಸಿದರು. ಸಂಜೆ ತಿರುವನಂತಪುರ ಜಿಲ್ಲೆಯ ಕಟ್ಟಕಡದಲ್ಲಿನ ಸಾರ್ವಜನಿಕ ಸಭೆಯಲ್ಲೂ ಸಚಿವ ಶಾ ಇದೇ ಆರೋಪಗಳ ಜನರ ಮುಂದಿಟ್ಟರು.

ಎಲ್ಲರಿಗೂ ಸಮಾನನ್ಯಾಯ: ಎಲ್ಲರಿಗೂ ಸಮಾನನ್ಯಾಯ ಮತ್ತು ಯಾರ ತುಷ್ಟೀಕರಣ ಇಲ್ಲ ಎಂಬುದು ಎನ್‌ಡಿಎ ಧೋರಣೆ. ಇದು ದೇಶಾದ್ಯಂತ ಎನ್‌ಡಿಎಯ ಕಾರ್ಯವೈಖರಿಯಿಂದಲೇ ವೇದ್ಯವಾಗಿದೆ. ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ ಭಾರತ ವಿರೋಧಿ ಚಟುವಟಿಕೆಗಳಲ್ಲಿ ತೊಡಗಿದ್ದಾಗ, ಬರೇ ಒಂದು ದಿನದಲ್ಲಿ ಅದರ ನಾಯಕರು, ಸದಸ್ಯರೆಲ್ಲರನ್ನು ಸೆರೆಹಿಡಿದು ಜೈಲಿಗೆ ಹಾಕಿದ್ದೆವು . ಪಿಎಫ್‌ಐ ನಿಷೇಧವನ್ನು ಎಲ್‌ಡಿಎಫ್ ಮತ್ತು ಯುಡಿಎಫ್‌ಗಳು ಬಲವಾಗಿ ವಿರೋಧಿಸಿದ್ದವು. ಯಾಕೆಂದರೆ ಈ ಪೈಕಿ ಒಂದು ರಂಗ ಪಿಎಫ್‌ಐನ ರಾಜಕೀಯ ಘಟಕ ಎಸ್‌ಡಿಪಿಐ ಜತೆ ಕೈಜೋಡಿಸಿದ್ದರೆ, ಇನ್ನೊಂದು ಫ್ರಂಟ್ ಜಮಾತ್ -ಇ-ಇಸ್ಲಾಮಿ ಶಕ್ತಿಗಳ ಜತೆ ಕೈಜೋಡಿಸಿದೆಯೆಂದು ಆರೋಪಿಸಿದ ಶಾ, ಇವೆರಡೂ ರಂಗಗಳ ಆಡಳಿತದಲ್ಲಿ ಕೇರಳ ಸುರಕ್ಷಿತವಾಗಿಲ್ಲ ಎಂದು ಆರೋಪಿಸಿದರು.

ವಕ್ಫ್ ಮಂಡಳಿ ಎರ್ನಾಕುಳಂ ಜಿಲ್ಲೆಯಲ್ಲಿ 600 ಮುನಾಂಬಮ್ ನಿವಾಸಿಗಳ ಜಾಗದ ಮೇಲೆ ಹಿಡಿತ ಸಾಧಿಸಲು ಮುಂದಾಗಿದ್ದಾಗ ಎರಡೂ ರಂಗಗಳು ಬಹಳ ಮೌನ ಕಾಯ್ದಿದ್ದವು. ಆ ಸಂದರ್ಭ ಎನ್‌ಡಿಎ ಸರಕಾರ ವಕ್ಫ್ ಕಾಯಿದೆಗೆ ತಿದ್ದುಪಡಿ ಮಾಡಿ ಸಂತ್ರಸ್ತರ ಸೊತ್ತನ್ನು ರಕ್ಷಿಸಿತ್ತು. ಎಲ್‌ಡಿಎಫ್ ,ಯುಡಿಎಫ್ ದ್ವಿಮುಖದ ರಂಗಗಳು , ಕೇರಳದಲ್ಲಿ ಪರಸ್ಪರ ವಿರೋಧಿಗಳಾಗಿರುವ ಈ ರಂಗಗಳು ರಾಜ್ಯದ ಹೊರಗಡೆ ಜತೆಯಾಗಿ ಚುನಾವಣೆ ಎದುರಿಸುವುದು ತೀರಾ ನಾಚಿಕೆಗೇಡು ಎಂದು ಸಚಿವ ಶಾ ಟೀಕಿಸಿದರು.

ಕಿರುಸುದ್ದಿ

ಒಳಮೀಸಲಾತಿ ನೆಪ: ಆರೋಪ



• **ಧಾರವಾಡ:** ಸರ್ಕಾರಿ ನೌಕರಿ ಕನಸು ಕಂಡ ನಾಡಿನ ಯುವಕ-ಯುವತಿಯರಿಗೆ ಸಿದ್ದರಾಮಯ್ಯ ಸರ್ಕಾರ ಒಳಮೀಸಲಾತಿಯ ನೆಪ ಒಡ್ಡಿ ನೇಮಕಾತಿ ಮಾಡದೆ, ಅನ್ಯಾಯ ಮಾಡಿದೆ ಎಂದು ಬಿಜೆಪಿ ಮುಖಂಡ ಪಿ.ಎಚ್.ನೀರಲಕೇರಿ ಆರೋಪ ಮಾಡಿದ್ದಾರೆ.

ಈ ಕುರಿತು ಪ್ರಕಟಣೆ ನೀಡಿರುವ ಅವರು, ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಬಂದ ಮೇಲೆ ನೇಮಕಾತಿಗೆ ಗ್ರಹಣ ಹಿಡಿದೆ. ಇದು ಉದ್ದೇಶಪೂರಕ ಮಾಡಿದ ಕುತಂತ್ರ. ಈ ಕುತಂತ್ರಕ್ಕೆ ಪ್ರತಿಭಾವಂತ ಯುವಕ-ಯುವತಿಯರು ನಿರಾಸೆಗೊಂಡಿದ್ದಾರೆ ಎಂದಿದ್ದಾರೆ. ರಾಜ್ಯದಲ್ಲಿ 2 ಲಕ್ಷಕ್ಕೂ ಹೆಚ್ಚು ಸರ್ಕಾರಿ ಹುದ್ದೆಗಳು ಖಾಲಿ ಇವೆ. ಕಾನೂನು ಪ್ರಕಾರ ಒಳಮೀಸಲಾತಿ ಕಲ್ಪಿಸಿ ನೇಮಕಾತಿ ಪ್ರಕ್ರಿಯೆ ಆರಂಭಿಸಬೇಕಿದ್ದ ಸಿದ್ದರಾಮಯ್ಯ ಅವರು, ಒಳಮೀಸಲಾತಿ ನೆಪದಿಂದ ಬೇಕೆಂದೇ ಕಾಲಹರಣ ಮಾಡುತ್ತಿರುವುದಾಗಿ ದೂರಿದ್ದಾರೆ. ಇದೀಗ ಮೂರು ವರ್ಷ ಕಳೆಯಿತು. ಈಗ ಮಾಡದವರು ಇನ್ನೇನು ನೇಮಕಾತಿ ಮಾಡುತ್ತಾರೆ. ಮತ್ತೆ ಸುಳ್ಳು ಭರವಸೆ ನೀಡಿ ಚುನಾವಣೆಗೆ ಸಿದ್ಧರಾಗುತ್ತಾರೆ. ಅಲ್ಲಿಗೆ ಐದು ವರ್ಷ ಸರ್ಕಾರ ಮುಗಿಯುತ್ತೆ. ಇದೇ ನೋಡಿ ದೊಡ್ಡ ದುರಂತ ಎಂದು ಹೇಳಿದ್ದಾರೆ. ಬೆಳಗಾವಿ, ಧಾರವಾಡ ಸೇರಿ ಬಾಗಲಕೋಟೆ ಜಿಲ್ಲೆಯಲ್ಲೂ ಲಕ್ಷಾಂತರ ಯುವಕ- ಯುವತಿಯರು ಸರ್ಕಾರಿ ಹುದ್ದೆಗಳಿಗೆ ಕನಸು ಕಂಡಿದ್ದು, ಈ ಕನಸ್ಸಿಗೆ ಮುಖ್ಯಮಂತ್ರಿಗಳು ಎಳ್ಳು ನೀರು ಬಿಟ್ಟಿದ್ದಾರೆ ಎಂದು ಆರೋಪಿಸಿದ್ದಾರೆ.

ವಿವಿಧ ಧಾರ್ಮಿಕ ಕಾರ್ಯಕ್ರಮ

• **ಹುಬ್ಬಳ್ಳಿ:** ಆನಂದ ನಗರದ ವಿಶ್ವ ಹಿಂದು ವೀರಶೈವ ಸಮಾಜ ಸಂಘಟನಾ ಸೇವಾ ಸಮಿತಿ ವತಿಯಿಂದ ವೀರಭದ್ರೇಶ್ವರ ದೇವಸ್ಥಾನದ ಜಾತ್ರಾ ಮಹೋತ್ಸವ ಅಂಗವಾಗಿ ಏ.19 ರಿಂದ 23ರ ವರೆಗೆ ವಿವಿಧ ಧಾರ್ಮಿಕ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಸಮಿತಿ ಅಧ್ಯಕ್ಷ ಮಹೇಶ ಚಂದರಗಿ ತಿಳಿಸಿದರು. ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಏ.19ರಂದು ಬೆಳಗ್ಗೆ 7 ಗಂಟೆಗೆ ಆನಂದ ನಗರದ ಪ್ರಮುಖ ಬೀದಿಗಳಲ್ಲಿ ವೀರಭದ್ರೇಶ್ವರ ದೇವರ ಗುಗ್ಗಳೋತ್ಸವ, ಸಂಜೆ 7 ಗಂಟೆಗೆ ವೀರಭದ್ರೇಶ್ವರ ದೇವಸ್ಥಾನ ಜಾತ್ರ ಮಹೋತ್ಸವ ನಡೆಯಲಿದೆ. ಜಾತ್ರಾ ಮಹೋತ್ಸವ ಸಾನ್ನಿಧ್ಯ ರಾಯನಾಳ ವಿರಕ್ತಮಠ ಅಭಿನವ ರೇವಣಸಿದ್ದೇಶ್ವರ ಸ್ವಾಮೀಜಿ ವಹಿಸುವರು. ಜಾತ್ರಾ ಮಹೋತ್ಸವ ಅಂಗವಾಗಿ ಪ್ರತಿದಿನ 7.30 ರಿಂದ 9 ಗಂಟೆ ವರೆಗೆ ವೀರಭದ್ರೇಶ್ವರ ಚರಿತ್ರೆ ಪ್ರವಚನವನ್ನು ಶರಣಯ್ಯ ಶಾಸ್ತ್ರಿ ಹಿರೇಮಠ ಅವರಿಂದ ನಡೆಯಲಿದೆ. ಪ್ರತಿ ದಿನ ಪ್ರಸಾದ ವ್ಯವಸ್ಥೆ ಇರಲಿದೆ ಎಂದರು. ಏ. 21ರಂದು ಬೆಳಗ್ಗೆ 6 ಗಂಟೆಗೆ ಜಂಗಮ ವಟುಗಳ ಆಯಾಚಾರ ಹಾಗೂ ಲಿಂಗದೀಕ್ಷೆ ಜರುಗುವುದು. ಕಲಘಟಗಿ ಹನ್ನೆರಡು ಮಠದ ರೇವಣಸಿದ್ದೇಶ್ವರ ಶಿವಾಚಾರ್ಯರು ವಹಿಸುವರು. ಏ.23ರಂದು ಬೆಳಗ್ಗೆ ರುದ್ರಾಭಿಷೇಕ, ಸಹಸ್ರ ಬಿಲ್ವಾರ್ಚನೆ ನಡೆಯಲಿದೆ. 12 ಗಂಟೆಗೆ ಸರ್ವಧರ್ಮದ ಸಾಮೂಹಿಕ ವಿವಾಹ ನಡೆಯಲಿದ್ದು, ಕಾಶಿ ರಾಜಶೇಖರ ಶಿವಾಚಾರ್ಯ ಸ್ವಾಮೀಜಿ ವಹಿಸುವರು. ಸಂಜೆ 5.30 ಕ್ಕೆ ರಥೋತ್ಸವಕ್ಕೆ ಚಾಲನೆ ದೊರೆಯಲಿದೆ ಎಂದು ತಿಳಿಸಿದರು. ರಾಜಶೇಖರಯ್ಯ ಮಠದ, ಸಂಗಪ್ಪ ಗುಡಗೇರಿ, ಸಂಗಯ್ಯ ಸಾರಂಗಮಠ ಇದ್ದರು.

ದ್ವಿಭಾಷಾ ನೀತಿ ಜಾರಿಗೆ ವಿರೋಧ



• **ಹುಬ್ಬಳ್ಳಿ:** ರಾಜ್ಯ ಸರ್ಕಾರ ದ್ವಿಭಾಷಾ ನೀತಿ ಜಾರಿಗೊಳಿಸಲು ಮುಂದಾಗಿರುವುದನ್ನು ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ವಿರೋಧಿಸಿದೆ. ಈ ಕುರಿತು ಪ್ರಕಟಣೆಗೆ ತಿಳಿಸಿದ ಸಂಘವು, ಪ್ರಸ್ತುತ ಜಾರಿಯಲ್ಲಿರುವ ಕನ್ನಡ, ಇಂಗ್ಲಿಷ್, ಹಿಂದಿ ತ್ರಿಭಾಷಾ ಪದ್ಧತಿಯು ಕರ್ನಾಟಕ, ಭಾರತ ಮತ್ತು ಜಗತ್ತನ್ನು ಒಂದುಗೂಡಿಸುವ ಭಾವನಾತ್ಮಕ ವಿಚಾರವಾಗಿದೆ. ತ್ರಿಭಾಷಾ ಸೂತ್ರ ಎಂಬುವುದು ಯಾವುದೋ ಭಾಷೆಯ ಹೇರಿಕೆ ಅಥವಾ ಯಾವುದೋ ಹೋರಾಟದ ಫಲವಾಗಿ ಬಂದಿದ್ದಲ್ಲ. ಶಿಕ್ಷಣ ತಜ್ಞರ ಮತ್ತು ಶೈಕ್ಷಣಿಕ ಪರಿಣತರ ಅನೇಕ ವರ್ಷಗಳ ಯೋಚನೆಯಿಂದಾಗಿ ಮಕ್ಕಳ ಪ್ರತಿಭೆಯನ್ನು ಅನಾವರಣ ಗೊಳಿಸುವುದಕ್ಕಾಗಿ ಬಂದಂತಹ ನೀತಿಯಾಗಿದೆ. ಭಾರತದಲ್ಲಿ ತ್ರಿಭಾಷಾ ಸೂತ್ರವು 1968ರಲ್ಲಿ ಜಾರಿಗೆ ಬಂದಿದೆ. ಅಂದಿನಿಂದ ಸ್ಥಳೀಯ ಭಾಷೆ, ಆಂಗ್ಲ ಮತ್ತು ಹಿಂದಿ ಭಾಷೆಯನ್ನು ಕಲಿಸುವ ಅಭಿಪ್ರಾಯವನ್ನು ಕೋಠಾರಿ ಕಮಿಷನ್ ಶಿಫಾರಸಿನಂತೆ ಬಹು ಭಾಷಾ ಸೌಹಾರ್ದತೆಯ ಮೇರೆಗೆ ಮಾಡಲಾಯಿತು. ಮಾಧ್ಯಮಿಕ ಶಿಕ್ಷಕ ಸಂಘ ರಾಜ್ಯ ಅಧ್ಯಕ್ಷ ಸಂದೀಪ ಬೂದಿಹಾಳ ತಿಳಿಸಿದ್ದಾರೆ. ಆದರೆ ಸರ್ಕಾರವು ಪರೀಕ್ಷೆಯ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ ದ್ವಿಭಾಷಾ ನೀತಿ ಎಂಬ ಗೊಂದಲವನ್ನು ಸೃಷ್ಟಿಸಿ, ಕನಿಷ್ಠ ಸಾಮಾನ್ಯ ಜ್ಞಾನ ಇಲ್ಲದ ರೀತಿಯಲ್ಲಿ ವರ್ತಿಸಿ ವಿದ್ಯಾರ್ಥಿ ಸಮೂಹ ಮತ್ತು ಶಿಕ್ಷಕರನ್ನು ಏಕೆ ದಾರಿ ತಪ್ಪಿಸುವಂತಹ ಕೆಲಸವನ್ನು ಮಾಡುತ್ತಿದೆ ಎಂಬ ಪ್ರಶ್ನೆ ಕಾಡುತ್ತಿದೆ ಎಂದಿದ್ದಾರೆ. ಈ ರೀತಿ ದ್ವಿಭಾಷಾ ಸೂತ್ರವನ್ನು ತರಲೇಬೇಕೆಂಬ ಯೋಚನೆ ಸರ್ಕಾರದ ಬಳಿ ಇದ್ದದ್ದೆ ಆದಲ್ಲಿ ಈ ಮೊದಲೆ ಘೋಷಣೆ ಮಾಡಿ ಸಾರ್ವಜನಿಕವಾಗಿ ಚರ್ಚೆ ಆಗಲು ಮಾಡಿಕೊಡಬೇಕಾಗಿತ್ತು. ಅದನ್ನು ಬಿಟ್ಟು ಯಾರೋ ಒತ್ತಡಕ್ಕೆ ಮಣಿದು ದ್ವಿಭಾಷಾ ನೀತಿಯ ಮುಖಾಂತರ ದೇಶೀಯ ಭಾಷೆಗಳನ್ನು ನಾಶಮಾಡಲು ಹೊರಟಿರುವ ರಾಜ್ಯ ಸರ್ಕಾರದ ಯೋಜನೆಗೆ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ತೀವ್ರವಾಗಿ ವಿರೋಧಿಸುತ್ತದೆ ಎಂದು ತಿಳಿಸಿದ್ದಾರೆ.

ವಿನಾಯಕ ಕುಲಕರ್ಣಿ ನಿಧನ



• **ಹುಬ್ಬಳ್ಳಿ:** ನಗರದ ಕುಂಭಕೋಣಂ ಪ್ಲಾಟ್ ನಿವಾಸಿ ವಿನಾಯಕ ಮೋರೋಪಂತ ಕುಲಕರ್ಣಿ (70) ಅವರು ಶನಿವಾರ ತಡರಾತ್ರಿ ವಯೋಸಹಜ ಕಾಯಿಲೆಯಿಂದ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರಿ ಸೇರಿದಂತೆ ಬಂಧುಗಳನ್ನು ಅಗಲಿದ್ದಾರೆ.



ಹುಬ್ಬಳ್ಳಿ: ಹು-ಧಾ ಪೂರ್ವ ವಿಧಾನಸಭಾ ಕ್ಷೇತ್ರದ ವಾರ್ಡ್ ನಂ. 67 ರ ಅರಳಿಕಟ್ಟಿ ಓಣಿಯ ಮುಖ್ಯ ರಸ್ತೆಯ ಕಂಚಗಾರಗಲ್ಲಿ ಯಿಂದ ತಿಮ್ಮಸಾಗರ ಓಣಿಯ ಕ್ರಾಸ್ ವರೆಗೆ ತೆರೆದ ಚರಂಡಿಯ ಮೇಲೆ ಸ್ಲ್ಯಾಬ್ ಹಾಕುವ ಕಾಮಗಾರಿಗೆ ಹಿರಿಯ ಪೌರ ಕಾರ್ಮಿಕರಾದ ಶಾಂತವ್ವ ಹರಿಜನ ಭೂಮಿಪೂಜೆ ನೆರವೇರಿಸಿದರು.

ಸ್ಥಗಿತಗೊಂಡ ನೇಮಕಾತಿಗೆ ಆಗ್ರಹಿಸಿ ಭೀಮ ನಡಿಗೆ

• **ಧಾರವಾಡ:** ರಾಜ್ಯದಲ್ಲಿ ಸ್ಥಗಿತಗೊಂಡ ನೇಮಕಾತಿ ಪ್ರಕ್ರಿಯೆ ಪ್ರಾರಂಭಕ್ಕೆ ಆಗ್ರಹಿಸಿ ನಮ್ಮ ನಡೆ ನೇಮಕಾತಿ ಕಡೆ ಘೋಷದೊಂದಿಗೆ ಭೀಮ ನಡಿಗೆ ಹಮ್ಮಿಕೊಳ್ಳಲಾಗಿದೆ ಎಂದು ಕರ್ನಾಟಕ ವಿದ್ಯಾರ್ಥಿಗಳ ಸಂಘದ ರಾಜ್ಯ ಸಂಚಾಲಕ ಯಲ್ಲಪ್ಪ ಹೆಗಡೆ ಹೇಳಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿ, ಶ್ರೀನಗರದಿಂದ ಜಿಲ್ಲಾಧಿಕಾರಿ ಕಚೇರಿವರೆಗೂ ಸುಮಾರು 50 ಸಾವಿರ ಉದ್ಯೋಗ ಆಕಾಂಕ್ಷಿಗಳು ಪಾದಯಾತ್ರೆ ನಡೆಸಲಿದ್ದು, ಬಸವ-ಅಂಬೇಡ್ಕರ್ ತತ್ವದಡಿ ಶಾಂತಿಯುತ ಹೋರಾಟ ನಡೆಸಲಿದೆ ಎಂದರು.

ರಾಜ್ಯದ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ 2.48 ಲಕ್ಷ ಹುದ್ದೆಗಳ ಭರ್ತಿಗೆ ಕ್ರಮ ಕೈಗೊಳ್ಳಬೇಕು. ಅಲ್ಲದೇ ಕೆಪಿಎಸ್ಸಿ ಗೆಜೆಟೆಡ್ ಪ್ರೊಫೆಸರ್ 348 ಹುದ್ದೆಗಳ ಪರೀಕ್ಷೆಯಲ್ಲಿ ಅಕ್ರಮ ಮತ್ತು ಭ್ರಷ್ಟಾಚಾರ ನಡೆದಿದ್ದು, ಮರು ಪರೀಕ್ಷೆ ನಡೆಸುವಂತೆ ಆಗ್ರಹಿಸಿದರು. ಸಿಟಿಐ, ಪಿಡಿಒ ಮತ್ತು ತಾಲೂಕಾಧಿಕಾರಿ ಹುದ್ದೆಗಳ ನೇಮಕದಲ್ಲಿ ನಡೆದ ಅಕ್ರಮ ಸಿಬಿಐ ತನಿಖೆಗೆ ವಹಿಸಬೇಕು. ಶಿಸ್ತುಬದ್ಧ ನೇಮಕಾತಿಗೆ ವಾರ್ಷಿಕ ಕ್ಯಾಲೆಂಡರ್ ಹೊರಡಿಸಬೇಕು. ಕೆಇಎ ಮೂಲಕ ಪರೀಕ್ಷೆಗಳು ನಡೆಸಬೇಕು. ಶೀಘ್ರ 56 ಸಾವಿರ ಹುದ್ದೆಗಳ ನೇಮಕಾತಿ ಭರವಸೆ ನೀಡಿದ ಸರ್ಕಾರ, ಕೊಟ್ಟ ಮಾತು ತಪ್ಪಿದೆ. ನಮ್ಮ ಭೀಮ ನಡೆಗೆ ಸರ್ಕಾರ ಅವಕಾಶ ನೀಡದೆ, ನುಡಿದಂತೆ ನಡೆಯಬೇಕು. ಇಲ್ಲವಾದರೆ, ರಾಜ್ಯದಲ್ಲಿ ಭೀಮ ಕ್ರಾಂತಿ ತಪ್ಪಿದ್ದಲ್ಲ ಎಂದರು. ಸುದ್ದಿಗೋಷ್ಠಿಯಲ್ಲಿ ವಿವಿಧ ವಿದ್ಯಾರ್ಥಿ ಸಂಘಟನೆಗಳ ಮುಖಂಡರಾದ ಗುರುವಂತ ದೊಡ್ಡಮನಿ, ಭವಾನಿಶಂಕರ ಗೌಡ, ಅರುಣ ಕೆಸರಹಳ್ಳಿ, ಕಿರಣ ಗೌಡ, ನಾಗರಾಜ ಚಲವಾದಿ ಮಂಜುನಾಥ, ಚೇತನ ಪೂಜಾರ ಇದ್ದರು.



ಧಾರವಾಡ: ನಗರದ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದಲ್ಲಿ ತುಮಕೂರಿನ ಸಿದ್ಧಗಂಗಾಮಠದ ಶಿವಯೋಗಿ ಡಾ.ಶಿವಕುಮಾರ ಸ್ವಾಮೀಜಿಗಳ ಜಯಂತಿ ಆಚರಿಸಲಾಯಿತು. ಡಾ.ಸುವರ್ಣಾ ಬಿರಾದಾರ, ನಾಗರತ್ನಾ ಹಡಗಲಿ, ವಿಜಯಲಕ್ಷ್ಮೀ ಕಲ್ಯಾಣಶೆಟ್ಟರ, ಶಂಕರ ಕುಂಬಿ, ಸವಿತಾ ಅಮರಶೆಟ್ಟಿ, ಬಸವರಾಜ ಗೋಲಪ್ಪನವರ, ಮಹೇಶ ಬಿಳಿಹಾಳ, ವೀರೇಶ ಕೆಲಗೇರಿ, ಡಾ.ಪಾರ್ವತಿ ಹಾಲಬಾವಿ, ಸಂಧ್ಯಾ ಅಂಬಡಗಟ್ಟಿ, ಸುಧಾ ಕಬ್ಬೂರ, ಡಾ.ಲಕ್ಕಪ್ಪ ಬಿರಾದಾರ, ಶಿವಶರಣ ಕಲಬಶೆಟ್ಟರ ಇದ್ದರು.

ಡಾ.ಬಾಬು ಜಗಜೀವನ ರಾಂ ಜಯಂತಿ | ಮಲ್ಲಿಕಾರ್ಜುನ ಶ್ರೀ ಅಭಿಮತ

ಡಾ.ಜಗಜೀವನ ರಾಂ ನಿರ್ಧಾರ ಮಾದರಿ



• **ಧಾರವಾಡ:** ಯುದ್ಧದ ಸಮಯದಲ್ಲಿ ರಕ್ಷಣಾ ಸಚಿವರಾಗಿ ಡಾ.ಬಾಬು ಜಗಜೀವನ ರಾಮ್ ತೆಗೆದುಕೊಂಡ ನಿರ್ಧಾರಗಳು ಇಂದಿಗೂ ಮಾದರಿ ಎಂದು ಬೆಳಗಾವಿ ಜಿಲ್ಲೆಯ ಅಥಣಿ ಜನವಾಡದ ಅಲ್ಲಮಪ್ರಭು ಆಶ್ರಮದ ಮಲ್ಲಿಕಾರ್ಜುನ ಸ್ವಾಮೀಜಿ ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತಿ, ಸಮಾಜ ಕಲ್ಯಾಣ ಇಲಾಖೆ, ಮಹಾನಗರ ಪಾಲಿಕೆ ಸಹಯೋಗದಲ್ಲಿ ನಗರದ ಡಾ.ಬಿ.ಆರ್. ಅಂಬೇಡ್ಕರ್ ಭವನದಲ್ಲಿ ನಡೆದ ಮಾಜಿ ಉಪಪ್ರಧಾನಿ ಡಾ.ಬಾಬು ಜಗಜೀವನ ರಾಂ ಅವರ 119ನೇ ಜಯಂತಿಯಲ್ಲಿ ಮಾತನಾಡಿದರು. ಯುದ್ಧದ ಭೀತಿಯಿಂದ ಇಂದು ಜಗತ್ತು ತಲ್ಲಣಿಸಿದೆ. ಹೀಗಾಗಿ ಜಾಗತಿಕ ಶಾಂತಿ ಮುಖ್ಯ. ಡಾ.ಬಾಬು ಜಗಜೀವನ ರಾಂ ಸಮಾನತೆ ಮಂತ್ರವನ್ನು ಪಠಿಸಿದರು. ಅವರ ಹಸಿರು ಕ್ರಾಂತಿಯಿಂದ ಆಹಾರ ಸ್ವಾವಲಂಬನೆ ಸಾಧಿಸಿದ್ದೇವೆ ಎಂದರು.

ಶಿಕ್ಷಣ ಹಾಗೂ ಹೋರಾಟ ಜೀವನದ ಮುಖ್ಯ ಅಂಶಗಳು. ಡಾ. ಅಂಬೇಡ್ಕರ್ ರಚಿಸಿದ ಸಂವಿಧಾನದಡಿ ಸರ್ವ ಧರ್ಮಗಳು ಒಂದೇ ಎಂದು ಬದುಕುತ್ತಿರುವ ಏಕೈಕ ದೇಶ ಭಾರತ. ವಿವಿಧತೆಯಲ್ಲಿ ಏಕತೆ ಕಾಣುವ ಭಾರತ ಜಗತ್ತಿಗೆ ಮಾದರಿ ಎಂದರು. ಜಿಪಂ ಸಿಇಒ ಭುವನೇಶ ಪಾಟೀಲ ಮಾತನಾಡಿದರು.

» ಕಾರ್ಮಿಕರ ಹಕ್ಕುಗಳಿಗೆ ನಿರಂತರ ಹೋರಾಡಿದ್ದ ಡಾ.ಬಾಬು ಜಗಜೀವನ ರಾಂ

» ವಿಶೇಷವಾಗಿ ನ್ಯಾಯ ಮತ್ತು ಸಮಾನತೆ ಸ್ಥಾಪನೆಗೆ ಪ್ರಮುಖ ಪಾತ್ರ ವಹಿಸಿದ್ದ ಡಾ.ಬಾಬು ಜಗಜೀವನ ರಾಂ

» ಡಾ.ಬಾಬು ಜಗಜೀವನ ರಾಂ ಆದರ್ಶ ಮೈಗೂಡಿಸಿಕೊಳ್ಳಬೇಕು ಎಂದು ಹೇಳಿದ ಜಿಲ್ಲಾಧಿಕಾರಿ ಸ್ನೇಹಲ್ ಆರ್.

ವಕೀಲ ರಂಗದಮಯ್ಯ ಜೆ.ಸಿ.ಜನಕಲೋಟಿ ಉಪನ್ಯಾಸ ನೀಡಿದರು. ಪೊಲೀಸ್ ಅಧೀಕ್ಷಕ ಗುಂಜನ್ ಆರ್ಯ, ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ಜಗದೀಶ ಹೆಬ್ಬಳ್ಳಿ ಇದ್ದರು. ಇದಕ್ಕೂ ಮೊದಲು ಜಿಲ್ಲಾಧಿಕಾರಿ ಕಚೇರಿಯಿಂದ ಡಾ.ಅಂಬೇಡ್ಕರ್ ಭವನದವರಗೆ ಡಾ.ಜಗಜೀವನ ರಾಂರ ಭಾವಚಿತ್ರದ ಮೆರವಣಿಗೆ ನಡೆಯಿತು. ಎಡಿಸಿ ಗೀತಾ ಸಂವೀಧಾನ ಪೀಠಿಕೆ ಬೋಧಿಸಿದರು. ಪ್ರವೀಣ ಮಸಕಿ ನಿರೂಪಿಸಿದರು. ಎಂ.ಬಿ.ಸನ್ನೇರಿ ವಂದಿಸಿದರು.

ಬಾಬೂಜಿ ಸೇವೆ ಸ್ಮರಣೀಯ

• **ಹುಬ್ಬಳ್ಳಿ:** ಡಾ. ಬಾಬು ಜಗಜೀವನ ರಾಂ ಜಯಂತಿ ನಿಮಿತ್ತ ಇಲ್ಲಿಯ ಇಂದಿರಾ ಗಾಜಿನಮನೆ ಆವರಣದಲ್ಲಿ ಬಾಬೂಜಿ ಅವರ ಪ್ರತಿಮೆಗೆ ಕುಂದಗೋಳ ಶಾಸಕ ಎಂ.ಆರ್. ಪಾಟೀಲ ಮಾಲಾರ್ಪಣೆ ಮಾಡಿ ನಮನ ಸಲ್ಲಿಸಿದರು. ನಂತರ ಮಾತನಾಡಿದ ಅವರು, ಬಾಬೂಜಿ ಅವರ ದೇಶಕ್ಕಾಗಿ ಸಲ್ಲಿಸಿದ ಸೇವೆ ಅಮೋಘ. ಶೋಷಿತ ಸಮಾಜವನ್ನು ಮೇಲಕ್ಕೆತ್ತು ಕಾರ್ಯ ಮಾಡಿದರು. ತಮ್ಮ ಅಧಿಕಾರವನ್ನು ಎಂದಿಗೂ ಅವರು ದುರುಪಯೋಗ ಮಾಡಿಕೊಳ್ಳಲಿಲ್ಲ. ಅವರ ಮಾರ್ಗದಲ್ಲಿ ನಾವೆಲ್ಲರೂ ಸಾಗಬೇಕು ಎಂದರು. ಬಿಜೆಪಿ ಜಿಲ್ಲಾ ಎಸ್‌ಸಿ ಮೋರ್ಚಾ ಅಧ್ಯಕ್ಷ ಸಹದೇವ ಮಾಳಗಿ, ಗುರುಮೂರ್ತಿ ಬೆಂಗಳೂರು, ಮಂಜುನಾಥ ಕೊಂಡಪಲ್ಲಿ, ಸುರೇಶ ಕಲ್ಲಮ್ಮನವರ, ಪ್ರಕಾಶ ಹುಬ್ಬಳ್ಳಿ ಇತರರಿದ್ದರು.



ದೇವರಾಜ ದಾಡಿಬಾವಿ ಅಭಿಮತ

ಯುವಕರು ಕ್ರೀಡಾ ಆಸಕ್ತಿ ಬೆಳೆಸಿಕೊಳ್ಳಲಿ



• **ನವಲಗುಂದ:** ಬಿಜೆಪಿ ಮುಖಂಡ ದೇವರಾಜ ದಾಡಿಬಾವಿ ಅರ್ಪಿಸುವ ನವಲಗುಂದ ತಾಲೂಕು ಮೊರಬ ಜಿಲ್ಲಾ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಹಳ್ಳಿಗಳ ಯುವಕರಿಗಾಗಿ ಪ್ರಧಾನಿ ನರೇಂದ್ರ ಮೋದಿ ಅವರ ಹೆಸರಿನ ನಮೋ ಕ್ರಿಕೆಟ್ ಕಪ್ ಆಯೋಜನೆ ಮಾಡಿದ್ದು ಕಾರ್ಯಕ್ರಮದ ಸಾನಿಧ್ಯ ವೇ.ಮೂ ಆನಂದ ಸ್ವಾಮಿ ಹಿರೇಮಠ ವಹಿಸಿದ್ದರು.

ಪಂದ್ಯಾವಳಿ ಉದ್ಘಾಟನೆಯನ್ನು ನವಲಗುಂದ ಮಂಡಲ ಬಿಜೆಪಿ ಅಧ್ಯಕ್ಷ ಗಂಗಪ್ಪ ಮನಮಿ ನೆರವೇರಿಸಿದರು.

ಹಿರಿಯರಾದ ಶಿವರಾಯಪ್ಪ ಆಯಟ್ಟಿ, ಮಂಜುನಾಥ ಕಾಲಾವಾಡ, ವೀರಭದ್ರಪ್ಪ ಜಾಕುಜಿ (ನಿವೃತ್ತ ಶಿಕ್ಷಕರು), ಮುತ್ತಣ್ಣ ಚುಳಕಿ, ಮಹೇಶ ರೋಣದ, ಈಶ್ವರ ಜಾಲಿಹಾಳ, ಶ್ರೀಧರ ಪಟ್ಟಣಶೆಟ್ಟಿ, ಸುಭಾಸ ಕಲ್ಲಿ, ಬಸಣ್ಣ ಡಿಟಿಗಿ, ಪ್ರತೀಕ ಕುಂದಗೋಳ, ಜಿ.ಪಂ.ವ್ಯಾಪ್ತಿಯ ಕ್ರೀಡಾಭಿಮಾನಿಗಳು ಸ್ಪರ್ಧಾಳುಗಳು, ಮುಖಂಡರು ಉಪಸ್ಥಿತರಿದ್ದರು.

ಯುವಕರಿಗಾಗಿ ಕ್ರೀಡೆ

ಪ್ರಧಾನಿ ನರೇಂದ್ರ ಮೋದಿ ಹಾಗೂ ನಮ್ಮ ಭಾಗದ ಸಂಸದ ಪ್ರಹ್ಲಾದ ಜೋಶಿ ಅವರು ಗ್ರಾಮಾಂತರ ಯುವಕರಿಗಾಗಿ ಸಂಸದರ ಕ್ರೀಡಾ ಮಹೋತ್ಸವ ಮಾಡಿ ಯಶಸ್ವಿಯಾಗಿದ್ದು ಸ್ಮರಣೀಯ. ಈಗ ನವಲಗುಂದ ತಾಲೂಕಿನ ಎಲ್ಲಾ ಹಳ್ಳಿಗಳ ಯುವ ಪ್ರತಿಭೆಗಳಿಗಾಗಿ ನಮೋ ಕ್ರಿಕೆಟ್ ಆಯೋಜನೆ ಮಾಡಿದ್ದು ಇದರ ಸದುಪಯೋಗವನ್ನು ಎಲ್ಲಾ ಯುವಕರು ಪಡೆದುಕೊಂಡು ಯುವಕರು ಕ್ರೀಡಾ ಆಸಕ್ತಿ ಬೆಳೆಸಿಕೊಳ್ಳಬೇಕು ಎಂದು ಆಯೋಜಕ ದೇವರಾಜ ದಾಡಿಬಾವಿ ಹೇಳಿದರು.

ಡಾ. ಬಾಬು ಜಗಜೀವನ ರಾಂ ಜಯಂತಿ

• **ಕಲಘಟಗಿ:** ಅಮೇರಿಕ ದೇಶದಿಂದ ಗೋಧಿ ರಫ್ತು ಆಗುತ್ತಿರುವ ಸಂದರ್ಭದಲ್ಲಿ ಡಾ.ಬಾಬು ಜಗಜೀವನ ರಾಂ ಅವರು ನಮ್ಮ ದೇಶದಲ್ಲೇ ಆಹಾರ ಧಾನ್ಯ ಉತ್ಪಾದಿಸಿ ರೈತರು ಸ್ವಾವಲಂಬಿಯಾಗಿ ಬದುಕಲು ಕೃಷಿ ಆಧುನಿಕರಣ ಹಾಗೂ ಆಹಾರ ಭದ್ರತೆ ಕಾಯ್ದೆ ರೂಪಿಸಲು ಶ್ರಮಿಸಿದವರು ಎಂದು ತಹಶೀಲ್ದಾರ್ ಬಸವರಾಜ ಹೊಂಕಣದವರ ಹೇಳಿದರು.

ಪಟ್ಟಣದ ನೌಕರರ ಭವನದಲ್ಲಿ ತಾಲೂಕು ಆಡಳಿತ, ತಾಲೂಕು ಪಂಚಾಯತಿ ಹಾಗೂ ವಿವಿಧ ಇಲಾಖೆಗಳ ಆಶ್ರಯದಲ್ಲಿ ಸಮಾಜ ಕಲ್ಯಾಣ ಇಲಾಖೆಯಿಂದ ಭಾನುವಾರ ಡಾ. ಬಾಬು ಜಗಜೀವನ ರಾಂ ಅವರ 119ನೇ ಜಯಂತಿ ಅಂಗವಾಗಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಮಾತನಾಡಿದರು. ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಂಜುನಾಥಗೌಡ ಮುರಳ್ಳಿ ಮಾತನಾಡಿ, ಡಾ. ಜಗಜೀವನ ರಾಂ ಅವರು ಕಿರಿಯ ವಯಸ್ಸಿನಲ್ಲಿ ರಾಜಕೀಯ ಪ್ರವೇಶಿಸಿ ಹಿಂದುಳಿದ, ಬಡವರ, ಶೋಷಿತರಿಗೆ ಸಾಮಾಜಿಕ ನ್ಯಾಯ ಒದಗಿಸಿದವರು. ಕೃಷಿ ಸಚಿವರಾಗಿ ರೈತಪರ ಕೆಲಸ ನಿರ್ವಹಿಸಿದ್ದಾರೆ ಎಂದರು. ಬೆಳಗ್ಗೆ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಡಾ. ಬಾಬು ಜಗನಜೀವನ ರಾಂ ಅವರ ಭಾವಚಿತ್ರ ವಿವಿಧ ಕಾಲ ತಂಡಗಳೊಂದಿಗೆ ಮೆರವಣಿಗೆ ನಡೆಸಿದರು.

> ರಸಗೊಬ್ಬರ, ನದಿಗಳ ಮೂಲಕ ನೀರಾವರಿ ಸೌಲಭ್ಯ ಅಭಿವೃದ್ಧಿ ಪಡಿಸುವ ಮೂಲಕ ರೈತರು ಸ್ವಾವಲಂಬಿಯಾಗಿ ಬದುಕಲ ಅನುಕೂಲ ಕಲ್ಪಿಸಿದ್ದಾರೆ. ಅಂತಹ ಮಹಾನ್ ನಾಯಕರ ತತ್ವ ಆದರ್ಶ ಅಳವಡಿಸಿಕೊಂಡು ಎಲ್ಲರೂ ತಮ್ಮ ಮಕ್ಕಳಿಗೆ ದುಶ್ಚಟಗಳಿಂದ ದೂರಮಾಡಿ ವಿದ್ಯಾವಂತರನ್ನಾಗಿ ಮಾಡಿ.
>
> ■ ಸದಾಶಿವ ನಡುವಿನಕೇರಿ, ಧಾರವಾಡದ ಜೆಎಸ್‌ಎಸ್ ಕಾಲೇಜಿನ ಉಪನ್ಯಾಸಕ

ಎಸ್‌ಎಸ್ ಎಲ್ ಸಿ ಪರೀಕ್ಷೆಯಲ್ಲಿ ಉತ್ತಮ ಅಂಕ ಪಡೆದ ಸಮಾಜದ ವಿದ್ಯಾರ್ಥಿಗಳ ಸನ್ಮಾನಿಸಿದರು. ತಾಪಂ ಇಒ ಪರಶುರಾಮ ಸಾವಂತ, ಸೋಮಶೇಖರ್ ಬೆನ್ನೂರ, ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ಅನುಷಾ ಹಿರೇಮಠ, ಪ.ಪಂ ಮುಖ್ಯಾಧಿಕಾರಿ ಚಂದ್ರಶೇಖರ ಬಿ., ಮಹೇಶ ಅಲಗೂರ, ಮಾಲಾ ತುರೀಹಾಳ, ಶಿವಾನಂದ ಚಿಕ್ಕನರ್ತಿ, ಶಿವಾಜಿ ವಾಗ್ಮೋಡೆ , ಬಸವರಾಜ ಹರಿಜನ, ಯಲ್ಲಪ್ಪ ಮೇಲಿನಮನಿ, ನಾಗೇಶ ಇಟಗಿ, ಶಶಿಕುಮಾರ್ ಕಟ್ಟಿಮನಿ, ಹನುಮಂತ ಹರಿಜನ ಇದ್ದರು.



ರಸ್ತೆ ಅಗಲೀಕರಣ, ಡಾಂಬರೀಕರಣ ಕಾಮಗಾರಿ ಪ್ರಗತಿಯಲ್ಲಿ: ಶಾಸಕ ಕೋನರಡ್ಡಿ

• **ನವಲಗುಂದ:** ಕಡದಳ್ಳಿ ಗ್ರಾಮದ ಗ್ರಾಮ ದೇವತೆ 3ನೇ ವರ್ಷದ ವಾರ್ಷಿಕೋತ್ಸವ ಜಾತ್ರಾ ಕಾರ್ಯಕ್ರಮದಲ್ಲಿ ಗ್ರಾಮದ ಬಹುದಿನ ಬೇಡಿಕೆಯಾದ ನೂತನ ಮಾರುತಿ ದೇವಸ್ಥಾನ ಕಟ್ಟಡ ನಿರ್ಮಾಣ ಮಾಡಲು 20 ಲಕ್ಷ ರೂ. ಬಿಡುಗಡೆ ಮಾಡಿದ್ದು ಅದರ ಭೂಮಿಪೂಜೆಯನ್ನು ನೆರವೇರಿಸುತ್ತಿರುವದು ನನ್ನ ಪುಣ್ಯ ಎಂದು ಶಾಸಕ ಎನ್.ಎಚ್. ಕೋನರಡ್ಡಿ ಹೇಳಿದರು.

ಅವರು ಕಡದಳ್ಳಿ ಗ್ರಾಮದಲ್ಲಿ ಗ್ರಾಮ ದೇವತೆ 3ನೇ ವರ್ಷದ ಜಾತ್ರಾ ಮಹೋತ್ಸವ ಹಾಗೂ ನೂತನ ಹನುಮಂತ ದೇವರ ದೇವಸ್ಥಾನಕ್ಕೆ ಭೂಮಿಪೂಜೆ ನೆರವೇರಿಸಿ ಮಾತನಾಡಿದ ಅವರು, ಈಗಾಗಲೇ ತಡಹಾಳದಿಂದ ನಾಗನೂರ, ಗುಡಿಸಾಗರ ವರೆಗೆ 7 ಕೋಟಿ ರೂ. ವೆಚ್ಚದಲ್ಲಿ ರಸ್ತೆ ಅಗಲೀಕರಣ ಹಾಗೂ ಡಾಂಬರೀಕರಣ ಮಾಡುವ ಕಾಮಗಾರಿ ಪ್ರಗತಿಯಲ್ಲಿದೆ ಎಂದರು. ಈ ವೇಳೆ ಸೊಟಕನಾಳ ಗ್ರಾಮದ ಆತ್ಮಾನಂದ ಆಶ್ರಮದಲ್ಲಿ 10ನೇ ವಾರ್ಷಿಕೋತ್ಸವದ ಪ್ರಯುಕ್ತ ಜಗದ್ಗುರು ಸಮರ್ಥ ಶಿವಾನಂದ ಸ್ವಾಮೀಜಿ ಹಾಗೂ ಬಸವರಾಜ ಪಂಡಿತರು ಶ್ರೀಗಳ ಆಶೀರ್ವಾದ ಪಡೆದರು. ಕಾಂಗ್ರೆಸ್ ಮುಖಂಡರಾದ ಎ.ಡಿ. ಕುಲಕರ್ಣಿ, ಕಲ್ಲಪ್ಪ ಹುಬ್ಬಳ್ಳಿ, ಜೇಕರಡ್ಡಿ ಕರಮಳ್ಳಿ, ಕಲ್ಲಪ್ಪ ಕುಂಬಾರ, ನಿಂಗಪ್ಪ ಕರಮಳ್ಳಿ, ಲೋಕೇಶ ಕರಿಕಟ್ಟಿ, ನಿಂಗನಗೌಡ ಪಾಟೀಲ, ಸಿದ್ದಯ್ಯ ಹಿರೇಮಠ, ಈರಣ್ಣ ಪಾಟೀಲ, ಅಶೋಕ ಕೊಣ್ಣೂರ, ಬಸವರಡ್ಡಿ ರೂಗಿ, ಎನ್.ಬಿ. ಕಿರೆಸೂರ, ಆರ್.ಎಸ್. ಪಾಟೀಲ, ಶಿವಪುತ್ರಪ್ಪ ಆನಂದಿ, ಎಲ್.ಬಿ. ಪಾಟೀಲ, ಮೃತ್ಯುಂಜಯ ಹಿರೇಮಠ, ಶಿವಾನಂದ ಚಿಕ್ಕನರಗುಂದ, ಅಶೋಕ ಕರಮಳ್ಳಿ, ರುದ್ರೇಶ ಕುಂಬಾರ, ಮಲ್ಲಪ್ಪ ಸಂಕದ, ಚಿನ್ನಪ್ಪಗೌಡ ಹಿರೇಗೌಡ್ರ, ದ್ಯಾಮಣ್ಣ ಹಡಪದ, ಬಸಯ್ಯ ಹಿರೇಮಠ, ಗೌಸುಸಾಬ ಮಾಗಡಿ, ಬಸಪ್ಪ ಆನಂದಿ ಸೇರಿದಂತೆ ಮುಂತಾದವರಿದ್ದರು.



ಡಾ. ಬಾಬು ಜಗಜೀವನ ರಾಂ ಜಯಂತಿ



• **ಕುಂದಗೋಳ:** ಸಮ ಸಮಾಜದ ಹರಿಕಾರರಾಗಿ ದೇಶದಲ್ಲಿ ಆಹಾರ ಭದ್ರತೆ, ಸಮಾನತೆಗಾಗಿ ಕೃಷಿ, ರಕ್ಷಣಾ, ಕಾರ್ಮಿಕ ಸಚಿವರಾಗಿ ಡಾ. ಬಾಬು ಜಗಜೀವನ ರಾಂ ಅವರು ಮಹತ್ತರ ನಿರ್ಧಾರ ಕೈಗೊಂಡದಿದ್ದರು ಎಂದು ತಹಶೀಲ್ದಾರ್ ರಾಜು ಮಾವರಕರ ಹೇಳಿದರು.

ಅವರು ತಹಶೀಲ್ದಾರ್ ಕಚೇರಿ ಸಭಾಂಗಣದಲ್ಲಿ ಭಾನುವಾರ ನೆಡೆದ ಡಾ. ಬಾಬು ಜಗಜೀವನ ರಾಂ ಅವರ 119ನೇ ಜಯಂತಿ ಕಾರ್ಯಕ್ರಮದಲ್ಲಿ ಪೂಜೆ ಸಲ್ಲಿಸಿ ಮಾತನಾಡಿದರು. ಸುರೇಶ ಮಾಕಪ್ಪನವರ, ಬಸವರಾಜ ದೊಡ್ಡಮನಿ, ರಾಮಣ್ಣ ಪೂಜಾರ, ಹನಮಂತಪ್ಪ ಮೇಲಿನಮನಿ, ಬಸವರಾಜ ಗುಡೇನಕಟ್ಟಿ, ಈರಪ್ಪ ನಾಗನಾಯ್ಕರ, ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ಮೀನಾಕ್ಷಿ ಗುದಗಿಯವರ, ಮುತ್ತಪ್ಪ ಅಣ್ಣಿಗೇರಿ ಸೇರಿದಂತೆ ಮತ್ತಿತರರಿದ್ದರು.

ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಾಣಕ್ಕೆ ಚಾಲನೆ

• **ಕುಂದಗೋಳ:** ತಾಲೂಕಿನ ರೊಟ್ಟಿಗವಾಡ-ಯರಗುಪ್ಪಿ ಗ್ರಾಮಗಳನ್ನು ಸಂಪರ್ಕಿಸುವ ರಸ್ತೆಯಲ್ಲಿ ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಾಣ ಕಾಮಗಾರಿಗೆ ಶಾಸಕ ಎಂ.ಆರ್. ಪಾಟೀಲ ಇತ್ತೀಚೆಗೆ ಭೂಮಿಪೂಜೆ ನೆರವೇರಿಸಿ ಕಾಮಗಾರಿಗೆ ಚಾಲನೆ ನೀಡಿದರು. ಈ ವೇಳೆ ಮಾತನಾಡಿದ ಅವರು, ಸಂಸದ ಪ್ರಹ್ಲಾದ್ ಜೋಶಿ ಅವರ ಸಹಕಾರದಿಂದ ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ ಅಡಿಯಲ್ಲಿ 2 ಕೋಟಿ ರೂ. ಅನುದಾನ ಮಂಜೂರಾಗಿದ್ದು, ಕಾಮಗಾರಿಗೆ ಚಾಲನೆ ನೀಡಲಾಗಿದೆ. ಈ ಯೋಜನೆಯಿಂದ ರೊಟ್ಟಿಗವಾಡ, ಕೊಂಕಣ ಕುರಹಟ್ಟಿ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳ ಸಾರ್ವಜನಿಕರಿಗೆ, ವಿಶೇಷವಾಗಿ ರೈತರಿಗೆ ಹೆಚ್ಚಿನ ಅನುಕೂಲವಾಗಲಿದೆ ಎಂದರು. ಮುಖಂಡ ಬಾಬಣ್ಣ ಬೆಟಗೇರಿ, ಭಾಜಪಾ ತಾಲೂಕಾಧ್ಯಕ್ಷ ನಾಗನಗೌಡ ಸಾತ್ಮರ, ಡಿ.ವೈ. ಲಕ್ಕನಗೌಡ್ರ, ಪ್ರಕಾಶ ಕುಬಿಹಾಳ ಇದ್ದರು.



ಮಾರುತಿ ದೇವಸ್ಥಾನದ ರಥೋತ್ಸವ



• **ಕುಂದಗೋಳ:** ಪಟ್ಟಣದ ಕಾಳಿದಾಸ ನಗರದಲ್ಲಿರುವ ಮಾರುತಿ ದೇವಸ್ಥಾನದ ರಥೋತ್ಸವವು ವಿಜೃಂಭಣೆಯಿಂದ ಜರುಗಿತು.

ಪಟ್ಟಣದ ಶಿತಿಕಂಠೇಶ್ವರ ಶ್ರೀಗಳು, ಶಿವಾನಂದ ಮಠದ ಶ್ರೀಗಳು ಹಾಗೂ ಕಲ್ಯಾಣಪುರ ಮಠದ ಬಸವಣ್ಣಜ್ಜನವರು ವಿಶೇಷ ಪೂಜೆ ಸಲ್ಲಿಸುವ ಮೂಲಕ ಚಾಲನೆ ನೀಡಿದರು. ನಂತರ ಕುದುರೆಗಳ ಆಕರ್ಷಕ ಮೆರವಣಿಗೆ, ಡೊಳ್ಳು ಹಾಗೂ ವಿವಿಧ ವಾದ್ಯಮೇಳಗಳ ನಾದದೊಂದಿಗೆ ಕಾಳಿದಾಸ ನಗರದ ಪ್ರಮುಖ ಬೀದಿಗಳಲ್ಲಿ ರಥೋತ್ಸವ ಭವ್ಯವಾಗಿ ಸಂಚರಿಸಿದ ರಥಕ್ಕೆ ಭಕ್ತರು ಹೂವಿನ ಮಳೆ ಸುರಿದು ಭಕ್ತಿ ಅರ್ಪಿಸಿದರು. ಮುಖಂಡರಾದ ರಮೇಶ ಕೊಪ್ಪದ, ಸಿದ್ದಪ್ಪ ಇಂಗಳಲ್ಲಿ, ಲಕ್ಷ್ಮಣ ಚುಳಕಿ, ರಮೇಶ ಇಂಗಳಲ್ಲಿ, ರಾಮಣ್ಣ ಮುದೇಣ್ಣವರ, ಶಿವಪ್ಪ ಅಳಗೋಡಿ, ಮುದುಕಪ್ಪ ಬೆಳಗಲಿ, ಹನುಮಂತ ವಾರ್ಕರ, ಅರ್ಜುನ್ ತಳವಾರ್ ,ಅಜ್ಜಿ ಬಂಡಿವಾಡ, ಸಂತೋಷ ಕೋರಿ, ಮಲ್ಲಿಕಾರ್ಜುನ ಸೋಗಿ, ವಿರುಪಾಕ್ಷಿ ಕೋರಿಶೆಟ್ರು, ಈಶ್ವರ ಪೂಜಾರ ಸೇರಿದಂತೆ ಇತರರಿದ್ದರು.

ನೂತನ ಕಟ್ಟಡ ನಿರ್ಮಾಣಕ್ಕೆ ಅನುದಾನ ಜಮಾ

• **ಹುಬ್ಬಳ್ಳಿ:** ಪ್ರಸಿದ್ಧ ಬಂಡಿವಾಡ ಹನಮಂತ ದೇವರು ಕೇಳಿದ ವರವನ್ನು ಕರುಣಿಸುವ ಹುಬ್ಬಳ್ಳಿ ತಾಲೂಕಿನ ಬಂಡಿವಾಡ ಗ್ರಾಮದ ದೇವಸ್ಥಾನದ ನೂತನ ಕಟ್ಟಡ ನಿರ್ಮಾಣ ಮಾಡಲು 40 ಲಕ್ಷ ಅನುದಾನವನ್ನು ಜಿಲ್ಲಾಧಿಕಾರಿಗಳ ಖಾತೆಗೆ ಜಮೆ ಮಾಡಲಾಗಿದೆ ಎಂದು ನವಲಗುಂದ ವಿಧಾನಸಭಾ ಕ್ಷೇತ್ರದ ಶಾಸಕ ಎನ್.ಹೆಚ್. ಕೋನರಡ್ಡಿ ಹೇಳಿದರು.

ಹನುಮ ಜಯಂತಿಯ ಅಂಗವಾಗಿ ದೇವಸ್ಥಾನಕ್ಕೆ ತೆರಳಿ ಜಾತ್ರಾ ಮಹೋತ್ಸವದ ಅಂಗವಾಗಿ ದರ್ಶನ ಪಡೆದು ಮಾತನಾಡಿದ ಅವರು, ಸಾಕಷ್ಟು ಭಕ್ತರನ್ನು ಹೊಂದಿದ ಬಂಡಿವಾಡ ಗ್ರಾಮದ ಹನುಮಂತ ದೇವರ ದೇವಸ್ಥಾನವಾಗಿದ್ದು ನೂತನ ಕಟ್ಟಡ ಕಟ್ಟಲು ಭಕ್ತಾಧಿಗಳು ನಿರ್ಧರಿಸಿದ್ದು ಸಾಕಷ್ಟು ಭಕ್ತರು ದೇಣಿಗೆ ನೀಡುತ್ತಿದ್ದಾರೆ. ಈ ದೇವಸ್ಥಾನಕ್ಕೆ ಸರ್ಕಾರದಿಂದ 40 ಲಕ್ಷ ಅನುದಾನ ಮಂಜೂರು ಮಾಡಿಸಿದ್ದು ಇದೀಗ ಜಿಲ್ಲಾಧಿಕಾರಿಗಳ ಖಾತೆಗೆ ಅನುದಾನ ಜಮೆ ಮಾಡಲಾಗಿದೆ ಎಂದರು. ಅಶೋಕ ಯಡವಣ್ಣವರ, ಅಣ್ಣಪ್ಪ ಕುಲಕರ್ಣಿ, ಬಸವರಾಜ ಪಡೆಸೂರ, ಸ್ಯೆಯ್ಯದ ಬಾವಾಖಾನವರ, ಹನಮಂತ ಚುಂಗಿನ, ರಾಮಣ್ಣ ರಡ್ಡೇರ, ಸಿದ್ದರಾಮಜ್ಜ ಹಿರೇಮಠ, ರಮೇಶ ಅಳಗವಾಡಿ, ನಿಂಗಪ್ಪ ತಮ್ಮಣ್ಣವರ,ರಾಮಣ್ಣ ಗಾಣಿಗೇರ, ಡಾ: ತಾಜುದ್ದೀನ ಮುಲ್ಲಾನವರ, ಹನಮಂತಪ್ಪ ಗಾಣಿಗೇರ, ಮಲ್ಲಪ್ಪ ಗುರಿಕಾರ ಸೇರಿದಂತೆ ಮುಂತಾದವರಿದ್ದರು.



ಹನುಮ ಜಯಂತಿ ಸಂಭ್ರಮ



• **ಆಳ್ನಾವರ:** ವ್ಯಾಸರಾಜ ಪ್ರತಿಷ್ಠಾಪನೆ ಮಾಡಿರುವುದೆಂದು ಹೇಳಲಾಗುವ ಸಮೀಪದ ಬಾಲಗೇರಿ ಗ್ರಾಮದ ಹನುಮಾನ ದೇವಸ್ಥಾನವೂ ಸೇರಿದಂತೆ ಪಟ್ಟಣ ಹಾಗೂ ತಾಲೂಕಿನಾದ್ಯಂತ ಹನುಮನ ಜಯಂತ್ಯುತ್ಸವವನ್ನು ಶ್ರದ್ಧಾ ಭಕ್ತಿಯ ಜೊತೆಗೆ ಸಂಭ್ರಮದಿಂದ ನೆರವೇರಿಸಲಾಯಿತು.

ಸುರ್ಯೋದಯದ ಸಮಯದಲ್ಲಿ ಹನುಮನ ತೊಟ್ಟಿಲೋತ್ಸವ, ಹಾಡು, ಭಜನೆ, ಹನುಮಾನ್ ನಾಮಸ್ಮರಣೆ, ಸಂಕೀರ್ತನೆಯೊಂದಿಗೆ ಹನುಮನ ಅಭಿಷೇಕ ಹಾಗೂ ಪೂಜೆ ಜರುಗಿಸಲಾಯಿತು.

ಪಟ್ಟಣದ ರೇಲ್ವೆ ಕಾಲನಿ, ನೆಹರುನಗರ ದೇವಸ್ಥಾನ, ಪೊಲೀಸ್ ಠಾಣೆಯ ಮಂದಿರ, ಆರೋಗ್ಯ ಕೇಂದ್ರದ ಆವರಣ, ಬೆಣಚಿ ಬಾಲ ಮಾರುತಿ ಮಂದಿರ, ಕಾಶೆನಟ್ಟಿ ಬೆಟ್ಟದಲ್ಲಿರುವ ಗುಡಿ ಸೇರಿದಂತೆ ವಿವಿಧೆಡೆ ಹನುಮಾನ್ ಜಯಂತಿ ಅಂಗವಾಗಿ ದಿನವಿಡೀ ಧಾರ್ಮಿಕ ಕಾರ್ಯಗಳು ನಡೆದವು. ಸಾಕಷ್ಟು ಸಂಖ್ಯೆಯಲ್ಲಿ ಸೇರಿದ್ದ ಭಕ್ತಗಣ ಸಮೂಹದವರು ಪಾಲ್ಗೊಂಡು ಸೇವೆ ಸಲ್ಲಿಸಿದರು. ಹನುಮಾನ್ ಮೂರ್ತಿಗಳನ್ನು ವಿಶೇಷವಾಗಿ ಅಲಂಕರಿಸಲಾಗಿತ್ತು. ಪ್ರಸಾದ ವಿತರಣೆಯೂ ಜರುಗಿತು.

ಅನುಪಮ ಸಹಕಾರಿ ಪ್ರಶಸ್ತಿ ಪ್ರದಾನ

• **ಧಾರವಾಡ:** ನಗರದ ಕರ್ನಾಟಕ ವಿದ್ಯಾವರ್ಧಕ ಸಂಘದ ಸಭಾಂಗಣದಲ್ಲಿ ಪ್ರೊ. ಎಸ್.ಎಸ್.ದೇಸಾಯಿ ದತ್ತಿಯ ಅನುಪಮ ಸಹಕಾರಿ ಪ್ರಶಸ್ತಿ ಪ್ರದಾನ ಹಾಗೂ ಉತ್ತರ ಕರ್ನಾಟಕದ ಬೆಳವಣಿಗೆಯಲ್ಲಿ ಕೆಸಿಸಿ ಬ್ಯಾಂಕ್ ಪಾತ್ರದ ಉಪನ್ಯಾಸ ಜರುಗಿತು.

ಸಮಾರಂಭದಲ್ಲಿ ಪ್ರೊ. ಎಸ್. ಎಸ್.ದೇಸಾಯಿ ದತ್ತಿ ಅಂಗವಾಗಿ ಕೊಡಮಾಡುವ 2026ನೇ ಸಾಲಿನ ಅನುಪಮ ಸಹಕಾರಿ ಪ್ರಶಸ್ತಿಯನ್ನು ಸಹಕಾರಿ ಕ್ಷೇತ್ರದಲ್ಲಿ ಅತ್ಯಂತ ಸುದೀರ್ಘವಾದ ಸೇವೆ ಸಲ್ಲಿಸಿದ ಸಿ.ಎಸ್.ಪಾಟೀಲ ಅವರಿಗೆ ನೀಡಿ ಗೌರವಿಸಲಾಯಿತು. ಪ್ರಶಸ್ತಿ ಪ್ರದಾನಿಸಿದ ಕೆಸಿಸಿ ಬ್ಯಾಂಕಿನ ವಿಶ್ರಾಂತ ವ್ಯವಸ್ಥಾಪಕ ಎಸ್.ಜಿ.ಪಾಟೀಲ ಮಾತನಾಡಿ, 1905ರಲ್ಲಿ ಅಖಂಡ ಧಾರವಾಡ ಜಿಲ್ಲೆಯ ಕಣಗಿನಹಾಳ ಗ್ರಾಮದಲ್ಲಿ ಸಿದ್ದನಗೌಡ ಪಾಟೀಲ ಅವರಿಂದ ದೇಶದ ಮೊದಲ ಸಹಕಾರಿ ಸಂಘ ಸ್ಥಾಪಿಸಲ್ಪಟ್ಟಿತು ಎಂದರು. ಪ್ರಶಸ್ತಿ ಸ್ವೀಕರಿಸಿದ ಸಿ.ಎಸ್ .ಪಾಟೀಲ ಮಾತನಾಡಿ, ಒಂದು ಕಾಲದಲ್ಲಿ ಕೆಸಿಸಿ ಬ್ಯಾಂಕ್ ಆರ್ಥಿಕ ಮುಗ್ಗಟ್ಟಿಗೆ ಸಿಲುಕಿದಾಗ ಹೋರಾಟ ಮಾಡಿ ಸರ್ಕಾರದಿಂದ 68 ಕೋಟಿ ರೂ. ನೆರವು ಪಡೆದು ರೈತರ, ಠೇವಣಿದಾರರ ಹಿತರಕ್ಷಣ ಮಾಡಿದ್ದು ಸ್ಮರಿಸಿದರು. ಡಾ.ಮಲ್ಲಿಕಾರ್ಜುನ ಪಾಟೀಲ ಅಧ್ಯಕ್ಷತೆ ವಹಿಸಿದ್ದರು. ಸರೋಜಿನಿ ದೇಸಾಯಿ, ಶಂಕರ ಕುಂಬಿ, ಡಾ.ಸಂಜೀವ ಕುಲಕರ್ಣಿ, ಶಂಕರ ಹಲಗತ್ತಿ ಇದ್ದರು. ಶಿವಾನಂದ ಹೂಗಾರ ಪ್ರಾರ್ಥಿಸಿದರು. ಶಿವಾನಂದ ಭಾವಿಕಟ್ಟಿ ಸ್ವಾಗತಿಸಿದರು. ಸತೀಶ ತುರಮರಿ ನಿರೂಪಿಸಿದರು. ವೀರಣ್ಣ ಒಡ್ಡೀನ್ ವಂದಿಸಿದರು.



ಕಿರುಸುದ್ದಿ

ತಂಬಾಕು ಪದಾರ್ಥ ತ್ಯಜಿಸಿ



• **ಗದಗ:** ತಂಬಾಕು ಪದಾರ್ಥಗಳ ಸೇವನೆ ಮಾನವ ಆರೋಗ್ಯಕ್ಕೆ ಮಾರಕವಾಗಿದೆ. ಬೀಡಿ, ಸಿಗರೇಟ್ ಮುಂತಾದ ತಂಬಾಕು ಉತ್ಪನ್ನಗಳು ದೇಹದ ವಿವಿಧ ಅಂಗಾಂಗಗಳ ಮೇಲೆ ಗಂಭೀರ ಪರಿಣಾಮ ಬೀರುತ್ತವೆ ಎಂದು ಪ್ರಾಧ್ಯಾಪಕ ಡಾ.ಪ್ರವೀಣ ಪಲ್ಲೇದ ಹೇಳಿದರು. ಶರಣರ ಕೆಎಲ್‌ಇ ಸಂಸ್ಥೆಯ ಎಸ್.ಎ.ಮಾನ್ವಿ ಕಾನೂನು ಮಹಾವಿದ್ಯಾಲಯದಲ್ಲಿ ಯೂತ್ ರೆಡ್ ಕ್ರಾಸ್ ಘಟಕದ ವತಿಯಿಂದ ಆಯೋಜಿಸಿದ್ದ ಧೂಮಪಾನ ನಿವಾರಣೆ ಕುರಿತು ಜಾಗೃತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಕ್ಯಾನ್ಸರ್, ಹೃದಯ ರೋಗಗಳು, ಉಸಿರಾಟದ ಸಮಸ್ಯೆಗಳು ಸೇರಿದಂತೆ ಅನೇಕ ಅಪಾಯಕಾರಿ ರೋಗಗಳು ಉಂಟಾಗುತ್ತವೆ. ಇತ್ತೀಚಿನ ದಿನಗಳಲ್ಲಿ ಯುವಜನತೆ ತಂಬಾಕು ಪದಾರ್ಥಗಳಿಗೆ ಬಲಿಯಾಗುತ್ತಿರುವುದು ಆತಂಕಕಾರಿ ವಿಷಯವಾಗಿದೆ.

ಆರಂಭದಲ್ಲಿ ಹವ್ಯಾಸವಾಗಿ ಪ್ರಾರಂಭವಾದದ್ದು ಕ್ರಮೇಣ ವ್ಯಸನವಾಗಿ ಮಾರ್ಪಡುತ್ತದೆ. ಇದರಿಂದ ವ್ಯಕ್ತಿಯ ಆರೋಗ್ಯ ಮಾತ್ರವಲ್ಲದೆ ಕುಟುಂಬ ಹಾಗೂ ಸಮಾಜದ ಮೇಲೂ ಕೆಟ್ಟ ಪರಿಣಾಮ ಬೀರುತ್ತದೆ. ತಂಬಾಕು ವ್ಯಸನವನ್ನು ತ್ಯಜಿಸುವುದು ಸುಲಭವಲ್ಲ, ಆದರೆ ಅಸಾಧ್ಯವೂ ಅಲ್ಲ. ಮನೋಬಲ, ದೃಢ ಸಂಕಲ್ಪ ಮತ್ತು ಕುಟುಂಬದ ಬೆಂಬಲದಿಂದ ಈ ವ್ಯಸನದಿಂದ ಮುಕ್ತರಾಗಬಹುದು ಎಂದರು. ಪ್ರಾಚಾರ್ಯ ಡಾ.ಎಸ್.ಎಂ.ಹುಲ್ಲೂರ ಮಾತನಾಡಿದರು. ಯೂತ್ ರೆಡ್ ಕ್ರಾಸ್ ಘಟಕದ ಸಂಯೋಜಕ ಡಾ.ಸಿ.ಬಿ.ರಣಗಟ್ಟಿಮಠ ಸ್ವಾಗತಿಸಿದರು. ಉಪನ್ಯಾಸಕಿ ಡಾ.ಜ್ಯೋತಿ ಸಿ.ವಿ. ವಂದಿಸಿದರು.

ಅಂಗನವಾಡಿ ಕೇಂದ್ರ ಉದ್ಘಾಟನೆ



• **ಲಕ್ಷ್ಮೇಶ್ವರ:** ಪ್ರಾಥಮಿಕ ಹಂತದಲ್ಲಿ ಉತ್ತಮ ಶಿಕ್ಷಣ ಲಭಿಸಿದರೆ ಮಕ್ಕಳ ಬದುಕು, ಭವಿಷ್ಯ ಉತ್ತಮವಾಗಿ ರೂಪುಗೊಳ್ಳುತ್ತದೆ. ಅಂತಹ ಕಾರ್ಯವನ್ನು ಅಂಗನವಾಡಿ ಕೇಂದ್ರಗಳು ಉತ್ತಮ ರೀತಿಯಲ್ಲಿ ನಡೆಸಿಕೊಂಡು ಬಂದಿವೆ ಎಂದು ಸಿಡಿಪಿಒ ಮೃತ್ಯುಂಜಯ ಗುಡ್ಡದಾನ್ವೇರಿ ಹೇಳಿದರು. ಅವರು ಪಟ್ಟಣದ ಕೆಂಚಲಾಪುರ ಓಣಿಯಲ್ಲಿ ಬಹಳ ವರ್ಷಗಳಿಂದ ಶಿಥಿಲಗೊಂಡಿದ್ದ ಅಂಗನವಾಡಿ ಕೇಂದ್ರ ಸಂಖ್ಯೆ 246ಯ ಅಂಗನವಾಡಿ ಕೇಂದ್ರಕ್ಕೆ ಪಿಆರ್ ಇಡಿ ಯೋಜನೆಯಲ್ಲಿ ಅಂದಾಜು 2.50 ಲಕ್ಷ ರೂ. ವೆಚ್ಚದಲ್ಲಿ ಕಾಮಗಾರಿ ಕೈಗೊಂಡು ಮತ್ತೆ ಹೊಸ ರೂಪ ನೀಡಲಾಗಿರುವ ಅಂಗನವಾಡಿ ಕೇಂದ್ರವನ್ನು ಉದ್ಘಾಟಿಸಿ ಮಾತನಾಡಿದರು. ಅಂಗನವಾಡಿ ಮೇಲ್ವಿಚಾರಕಿ ನಂದಾ ನವಲೆ ಮಾತನಾಡಿದರು. ನಾಗರತ್ನಾ ಬುರಡಿ, ಹೇಮಣ್ಣ ಬುರಡಿ, ಗಿರಿಜವ್ವ ಅಂಬಲಿ, ಭಾಗ್ಯಶ್ರೀ ಎಲ್., ಮಂಜುಳಾ ಗುಂಜಳ, ಪ್ರಕಾಶ ಗುತ್ತಲ, ಈರಣ್ಣ ನಾಗಲೋಟಿ, ಪ್ರಬಣ್ಣ ಚಾವಡಿ, ಶಂಕ್ರಪ್ಪ ಬುರಡಿ, ಮಹಾಂತೇಶ ಜಾಲಗಾರ, ರವಿ ಗುಂಜಳ, ಕಾರ್ಯಕರ್ತೆಯರಾದ ನಿರ್ಮಲಾ ಪಶುಪತಿಹಾಳ, ವಿಜಯಲಕ್ಷ್ಮೀ ನವಲಗುಂದ, ಬಾಳವ್ವ ಭಜಂತ್ರಿ, ಸಹಾಯಕಿಯರಾದ ರಕ್ಷಿತಾ ಭಜಂತ್ರಿ, ಶೋಭಾ ಶಿರಹಟ್ಟಿ, ಪ್ರಮಿಳಾ ಬಾರಕೇರ, ಮುಂತಾದವರಿದ್ದರು. ವೀಣಾ ಹಿತ್ತಲಮನಿ ನಿರ್ವಹಿಸಿದರು.

ಮಹಾರಥೋತ್ಸವ



• **ನರಗುಂದ:** ಪಟ್ಟಣ ಸೇರಿದಂತೆ ತಾಲೂಕಿನ ಎಲ್ಲ ಗ್ರಾಮಗಳಲ್ಲಿ ಹನುಮ ಜಯಂತಿಯು ತೊಟ್ಟಿಲೋತ್ಸವದೊಂದಿಗೆ ಅತೀ ವಿಜೃಂಭಣೆಯಿಂದ ಆಚರಣೆಗೊಂಡಿತು. ಪಟ್ಟಣದ ಜಮಲಾಪೂರ ಹಾಗೂ ದಂಡಾಪೂರ ಪೇಠ ಮಾರುತೇಶ್ವರ ದೇವಸ್ಥಾನದಲ್ಲಿ ಮಹಾರಥೋತ್ಸವವು ಪುಣ್ಯಾರಣ್ಯ ಪತ್ರೀವನ ಮಠದ ಗುರು ಸಿದ್ಧವೀರ ಶಿವಾಚಾರ್ಯ ಸ್ವಾಮೀಜಿ ಸಮ್ಮುಖದಲ್ಲಿ ಜರುಗಿತು

ಎಲ್ಲ ಮಂದಿರಗಳಲ್ಲಿ ಮಹಾಪ್ರಸಾದವು ಜರುಗಿತು. ಮಂದಿರಗಳ ಸುತ್ತಮುತ್ತ ವಿದ್ಯುತ್ ದೀಪಗಳ ಅಲಂಕಾರ, ಕೇಸರಿ ಪರಪರಿಗಳು ಮತ್ತು ಭಗವಾಧ್ವಜಗಳು ರಾರಾಜಿಸಿದವು. ಭಕ್ತಸಮೂಹವು ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸಿದ್ದು ಕಂಡುಬಂತು.



ಗಜೇಂದ್ರಗಡ: ತಾಲೂಕಿನ ಕಟ್ಟಕಡೆಯ ಗ್ರಾಮವಾದ ಮ್ಯಾಕಲಝರಿ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಡಾ. ಬಾಬು ಜಗಜೀವನ ರಾಂ ಜಯಂತಿಯನ್ನು ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸುವ ಮೂಲಕ ಆಚರಣೆ ಮಾಡಲಾಯಿತು. ಬಳಿಕ ಮುಖ್ಯ ಶಿಕ್ಷಕ ಎ.ಕೆ.ಒಂಟಿ ಮಾತನಾಡಿ, ಯುವಜನತೆ ಡಾ. ಜಗಜೀವನ ರಾಂ ಅವರ ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು. ವಿ.ಆರ್.ರಗಂ, ನಂದಿನಿ ಕಟಗಿಯಾಲವರ ಸೇರಿದಂತೆ ಇತರರಿದ್ದರು.

ಡಾ.ಬಾಬು ಜಗಜೀವನ ರಾಂ ಜಯಂತಿ

• **ಮುಂಡರಗಿ:** ಡಾ.ಬಾಬು ಜಗಜೀವನ ರಾಂ ಅವರು ಶಿಕ್ಷಣ ಮತ್ತು ಪರಿಶ್ರಮವಿದ್ದರೆ ಸಾಧನೆ ಮಾಡಲು ಸಾಧ್ಯ ಎನ್ನುವ ಸಂದೇಶವನ್ನು ನೀಡಿದರು. ಕಾರ್ಮಿಕರ, ಶೋಷಿತ ವರ್ಗದ ಸುಧಾರಣೆಗೆ ಮತ್ತು ಅವರನ್ನು ಮುಖ್ಯವಾಹಿನಿಗೆ ತರುವ ಕೆಲಸ ಮಾಡಿದರು. ಆಹಾರ ಭದ್ರತೆಯ ಕೊರತೆ ನೀಗಿಸುವುದಕ್ಕೆ ಅವರು ಕೈಗೊಂಡ ಕ್ರಮಗಳ ಫಲವಾಗಿ ಭಾರತವು ಇಂದಿಗ ಬೇರೆಯ ದೇಶಕ್ಕೂ ಆಹಾರ ಉತ್ಪನ್ನಗಳನ್ನು ರಫ್ತು ಮಾಡುವಷ್ಟು ಬೆಳೆದಿದೆ ಎಂದು ತಹಶೀಲ್ದಾರ್ ಎರ್ರಿಸ್ವಾಮಿ ಪಿ.ಎಸ್. ಹೇಳಿದರು. ಪಟ್ಟಣದ ತಹಶೀಲ್ದಾರ್ ಕಾರ್ಯಾಲಯ ಸಭಾಭವನದಲ್ಲಿ ತಾಲೂಕು ಆಡಳಿತ, ತಾ.ಪಂ., ಸಮಾಜ ಕಲ್ಯಾಣ ಇಲಾಖೆ, ವಿವಿಧ ಸಂಘಟನೆಗಳ ಆಶ್ರಯದಲ್ಲಿ ಭಾನುವಾರ ಜರುಗಿದ ಡಾ.ಬಾಬು ಜಗಜೀವನ ರಾಂ ಅವರ 119ನೇ ಜಯಂತ್ಯುತ್ಸವ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ತಾಲೂಕು ಡಿಎಸ್‌ಎಸ್ ಸಂಚಾಲಕ ಸೋಮಣ್ಣ ಹೈತಾಪೂರ ಮಾತನಾಡಿ, ಡಾ.ಬಾಬು ಜಗಜೀವನ ರಾಂ ಅವರು ಅಸ್ಪೃಶ್ಯತೆ ನಿವಾರಣೆಗಾಗಿ, ಶೋಷಿತರ ಪರವಾಗಿ, ಸಾಮಾಜಿಕ ನ್ಯಾಯಕ್ಕಾಗಿ ಧ್ವನಿ ಎತ್ತಿದರು. ಎಲ್ಲ ಸಮಾಜದವರು ಸಮಾನತೆಯಿಂದ ಬಾಳಲು ಹೋರಾಡಿದರು ಎಂದರು. ಉದ್ಘಾಟಿಸಿದ ತಾ.ಪಂ. ಇಒ ವಿಶ್ವನಾಥ ಹೊಸಮನಿ, ಭೋವಿ ಸಮಾಜದ ತಾಲೂಕಾಧ್ಯಕ್ಷ ರಾಘವೇಂದ್ರ ನರೇಗಲ್ಲ, ಚಂದ್ರು ಪೂಜಾರ ಮಾತನಾಡಿದರು. ದುರುಗಪ್ಪ ಹರಿಜನ, ರಾಮಣ್ಣ ಕೋಳಿ, ಪ್ರೊ. ಎ.ವೈ. ನವಲಗುಂದ, ವಿ.ಎಸ್.ಗಟ್ಟಿ, ಲಕ್ಷ್ಮಣ ತಗಡಿನಮನಿ, ದ್ಯಾಮಣ್ಣ ವಾಲಿಕಾರ, ಬಸವರಾಜ ನವಲಗುಂದ, ಸುಶೀಲಾ ಭಲವಾದಿ, ವಿವಿಧ ಇಲಾಖೆ ಅಧಿಕಾರಿಗಳು ಇದ್ದರು. ಉದಯಕುಮಾರ ಯಲಿವಾಳ ಸ್ವಾಗತಿಸಿದರು. ಯಲ್ಲಪ್ಪ ನಾಗಮ್ಮನವರ ನಿರೂಪಿಸಿದರು. ಶ್ರೀಕಾಂತ ಅರಹುಣಸಿ ವಂದಿಸಿದರು.



ಮುಂಡರಗಿ: ಪಟ್ಟಣದ ತಹಶೀಲ್ದಾರ್ ಕಾರ್ಯಾಲಯ ಸಭಾಭವನದಲ್ಲಿ ತಾಲೂಕು ಆಡಳಿತ, ತಾ.ಪಂ., ಸಮಾಜ ಕಲ್ಯಾಣ ಇಲಾಖೆ, ವಿವಿಧ ಸಂಘಟನೆಗಳ ಆಶ್ರಯದಲ್ಲಿ ಭಾನುವಾರ ಜರುಗಿದ ಡಾ.ಬಾಬು ಜಗಜೀವನ ರಾಂ ಅವರ 119ನೇ ಜಯಂತ್ಯುತ್ಸವ ಕಾರ್ಯಕ್ರಮ ನಡೆಯಿತು.

ಅನೈತಿಕ ಚಟುವಟಿಕೆ ತಾಣವಾದ ಖಾಲಿ ನಿವೇಶನಗಳು, ಉದ್ಯಾನವನಗಳು

ಜನರಿಗೆ ರೋಗ ಹರಡುವ ಭೀತಿ



▸ **ಶಿವಲಿಂಗಯ್ಯ ಹೊತಗಿಮಠ**

• **ಲಕ್ಷ್ಮೇಶ್ವರ:** ಪಟ್ಟಣವು ಜಿಲ್ಲೆಯಲ್ಲಿ ದಿನದಿಂದ ದಿನಕ್ಕೆ ಬೆಳೆಯುತ್ತಿರುವುದರಿಂದ ದಿನನಿತ್ಯ ಸಾವಿರಾರು ಜನರು ಪಟ್ಟಣಕ್ಕೆ ಬರುತ್ತಾರೆ. ಇಲ್ಲಿ ಇರುವ ಖಾಲಿ ನಿವೇಶನಗಳು, ಉದ್ಯಾನವನಗಳು ನಿರ್ವಹಣೆ ಕೊರತೆಯಿಂದ ಮುಳ್ಳಿನ ಗಿಡ ಬೆಳೆದು ಅನೈತಿಕ ಚಟುವಟಿಕೆ ತಾಣವಾಗಿ ಮಾರ್ಪಾಡಾಗಿವೆ. ಜೊತೆಗೆ ಪಟ್ಟಣದ ಸೌಂದರ್ಯವನ್ನು ಹಾಳು ಮಾಡುತ್ತಿದ್ದು, ವಿಷಜಂತು ಪ್ರಾಣಿಗಳ ವಾಸಸ್ಥಾನ ತಾಣಗಳಾಗಿವೆ. ಹಂದಿಗಳು ಬೀದಿ ನಾಯಿಗಳ ಬೀಡು ಬಿಟ್ಟಿವೆ. ಸಾರ್ವಜನಿಕರು, ವ್ಯಾಪಾರಸ್ಥರು ಅಂಗಡಿಗಳಿಂದ ತಂದ ಪ್ಲಾಸ್ಟಿಕ್ ತ್ಯಾಜ್ಯ, ಕಸ ಇಲ್ಲಿಯೇ ತಂದು ಬಿಸಾಡುವುದರಿಂದ ಸೊಳ್ಳೆ, ನೊಣಗಳು ಹೆಚ್ಚಾಗಿ ಆಗಿದ್ದು ರೋಗ ರುಜಿನಗಳ ಭಯದಲ್ಲಿ ಜನರು ವಾಸಿಸುತ್ತಿದ್ದಾರೆ ಎಂದು ಸಾರ್ವಜನಿಕರು ಆರೋಪಿಸುತ್ತಿದ್ದಾರೆ.

- ಲಕ್ಷ್ಮೇಶ್ವರ ಪಟ್ಟಣದಲ್ಲಿ 18366 ಆಸ್ತಿ
- 8371 ಮನೆಗಳು
- 8844 ಖಾಲಿ ನಿವೇಶನ
- 672 ವಾಣಿಜ್ಯ 472
- ನಿರ್ಧಾರವಾಗದ 7 ಕೈಗಾರಿಕೆ ಆಸ್ತಿ

ದಿಗಂತ ವಿಶೇಷ

ಮನೆಯಲ್ಲಿ ವಾಸಿಸುವ ಜನರ ಮನೆಗಳಿಗೆ ಅಲ್ಲಿಂದ ವಿಷಜಂತು ಪ್ರಾಣಿಗಳು ದಿನನಿತ್ಯ ಬರುತ್ತಿದ್ದು, ಇದರಿಂದ ಮನೆಯಲ್ಲಿ ಜೀವನ ಸಾಗಿಸುವ ಜನರಿಗೆ ತೊಂದರೆ ಆಗಿದೆ.

ಈ ಬಗ್ಗೆ ಪುರಸಭೆಯವರು ಅನೇಕ ಬಾರಿ ಖಾಲಿ ನಿವೇಶನ ಮಾಲೀಕರಿಗೆ ತಿಳಿ ಹೇಳಿದರೂ ಖಾಲಿ ನಿವೇಶನ ಮಾಲೀಕರು ಸ್ವಚ್ಛತೆ ಕಡೆ ಗಮನ ಹರಿಸುತ್ತಿಲ್ಲ ಎಂದು ಪುರಸಭೆ ಅಧಿಕಾರಿಗಳು ತಿಳಿಸಿದ್ದಾರೆ.

ಸ್ವಚ್ಛತೆ ಬಗ್ಗೆ ಗಮನ ಹರಿಸಿ

ಮನೆ ಕಟ್ಟುವ ಸಲುವಾಗಿ ಬಂಡವಾಳ ಹೂಡುವ ಸಲುವಾಗಿ ಖಾಲಿ ನಿವೇಶನ ತೆಗೆದುಕೊಂಡಿರುತ್ತಾರೆ. ಆದರೆ ಅಲ್ಲಿ ಮನೆ ಕಟ್ಟದೆ ಜಾಗವನ್ನು ಖರೀದಿ ಮಾಡಿ ಬೇರೆ ಊರಲ್ಲಿ ವಾಸಿಸುತ್ತಿರುತ್ತಾರೆ. ಇತ್ತಕಡೆ ಗಮನ ಹರಿಸುವುದಿಲ್ಲ. ಆದರೆ ಕೆಲವರು ಮನೆ ನಿವೇಶನ ಉತಾರ ಟ್ಯಾಕ್ಸ್ ಕಟ್ಟಲು ಪುರಸಭೆ ಹೋದಾಗ ಅಲ್ಲಿಯ ಅಧಿಕಾರಿಗಳಿಗೆ ಸ್ವಚ್ಛತೆ ಇರುವ ಯಾವುದೋ ಒಂದು ನಿವೇಶನ ಜಾಗದ ಫೋಟೋ ತೋರಿಸಿ ಅಧಿಕಾರಿಗಳನ್ನು ಯಾಮಾರಿಸುತ್ತಾರೆ. ಹೀಗಾಗಿ ಅಧಿಕಾರಿಗಳು ಖುದ್ದು ಭೇಟಿ ಆಗಿ ಪರಿಶೀಲನೆ ಮಾಡಿ ಉತಾರ ಕೊಡಬೇಕು. ಸ್ವಚ್ಛತೆ ಬಗ್ಗೆ ಗಮನ ಕೊಡಬೇಕು ಎಂಬುದು ಪ್ರಜ್ಞಾವಂತ ನಾಗರಿಕರ ಒತ್ತಾಯವಾಗಿದೆ.

> ಖಾಸಗಿ ನಿವೇಶನ ಮಾಲೀಕರಿಗೆ ಪುರಸಭೆ ಅಧಿಕಾರಿಗಳು ನೋಟಿಸ್ ನೀಡಿ ಕ್ರಮ ಕೈಗೊಳ್ಳಬೇಕು. ಪುರಸಭೆ ವ್ಯಾಪ್ತಿಯಲ್ಲಿ ಬರುವ ಉದ್ಯಾನವನಗಳ ಬಗ್ಗೆ ಸ್ವಚ್ಛತೆಗೆ ಪುರಸಭೆಗೆ ಮುಂದಾಗಬೇಕು.
>
> ■ **ವಿಜಯ ಕುಂಬಾರ,** ಬಿಜೆಪಿ ನಗರ ಘಟಕ ಅಧ್ಯಕ್ಷ ಹಾಗೂ **ಪ್ರವೀಣ ಬೋಮಲೆ ,** ಬಿಜೆಪಿ ನಗರ ಘಟಕ ಪ್ರಧಾನ ಕಾರ್ಯದರ್ಶಿ

ನಿವೇಶನ ಸ್ವಚ್ಛತೆಗೆ ಮಾಲೀಕರಿಗೆ ನೋಟಿಸ್

ಈಗಾಗಲೇ ಪುರಸಭೆ ವ್ಯಾಪ್ತಿಯಲ್ಲಿ ಈ ಬಗ್ಗೆ ಜಾಗೃತಿ ಮೂಡಿಸಿದ್ದು, ಸಾರ್ವಜನಿಕರು ಹಲವು ಬಾರಿ ಮನವಿ ಸಲ್ಲಿಸಿದ್ದಾರೆ. ಕೆಲವು ಖಾಸಗಿ ನಿವೇಶನ ಸ್ವಚ್ಛತೆ ಗೊಳಿಸಿ ಅದಕ್ಕೆ ತಗಲುವ ವೆಚ್ಚವನ್ನು ಸಂಬಂಧಿಸಿದ ಆಸ್ತಿ ಮಾಲೀಕರ ಆಸ್ತಿಗೆ ಭೋಜಾ ಕೂಡಿಸಲಾಗಿದೆ. ಮುಂಬರುವ ದಿನಗಳಲ್ಲಿ ಬಾಕಿ ಇರುವ ಖಾಲಿ ನಿವೇಶನ ಸ್ವಚ್ಛತೆ ಗೊಳಿಸಲು ಮಾಲಕರಿಗೆ ನೋಟಿಸ್ ನೀಡಲಾಗುವುದು ಎಂದು ಪುರಸಭೆ ಮುಖ್ಯಾಧಿಕಾರಿ ಮಹಾಂತೇಶ ಭೀಳಗಿ ತಿಳಿಸಿದ್ದಾರೆ.

ಶರಣರ ತತ್ವ ಅಳವಡಿಸಿಕೊಳ್ಳಿ: ಹೊರಟ್ಟಿ

• **ಗದಗ:** ಈ ನಾಡು ಕಂಡ ಶ್ರೇಷ್ಠ ಮಠಾಧೀಶರಾಗಿದ್ದ ಸಿದ್ದಲಿಂಗ ಸ್ವಾಮೀಜಿ ನಿಜಕ್ಕೂ ಮಾದರಿ ವ್ಯಕ್ತಿತ್ವ ಹೊಂದಿದ್ದರು. ಅವರ ಜೊತೆ ಅವಿನಾಭಾವ ಸಂಬಂಧ ಇರಿಸಿಕೊಂಡಿದ್ದ ನಾನು ಅವರ ತತ್ವಗಳನ್ನು ಜೀವನದಲ್ಲಿ ಅಳವಡಿಸಿಕೊಂಡಿದ್ದೇನೆ ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಹೇಳಿದರು.

ನಗರದ ತೋಂಟದಾರ್ಯ ಮಠದ 2026ನೇ ಸಾಲಿನ ಜಾತ್ರಾ ಮಹೋತ್ಸವದ ಲಘುರಥೋತ್ಸವ ವೇದಿಕೆ ಕಾರ್ಯಕ್ರಮದಲ್ಲಿ ಸಂಮಾನ ಸ್ವೀಕರಿಸಿ ಮಾತನಾಡಿ, ಎಲ್ಲೆಡೆ ಹಿಂಸೆ, ಅನಾಚಾರ ಹೆಚ್ಚುತ್ತಿರುವ ಹಾಗೂ ಸಂಬಂಧಗಳಿಗೆ ಬೆಲೆ ಇಲ್ಲದಂತಾಗಿರುವ ಈ ಕಾಲದಲ್ಲಿ ಮಠಗಳ ಹಾಗೂ ಮಠಾಧೀಶರ ಪಾತ್ರ ಮಹತ್ವದ್ದಾಗಿದೆ. ಸಮಾಜದಲ್ಲಿ ಸುಶಿಕ್ಷಿತರ ಪ್ರಮಾಣ ಹೆಚ್ಚಾಗುತ್ತಿದ್ದರೂ ಸಹ ಅದೇ ಪ್ರಮಾಣದಲ್ಲಿ ಜಾತೀಯತೆಯೂ ಹೆಚ್ಚುತ್ತಿರುವುದು ವಿಷಾದಕರ ಸಂಗತಿ. 12ನೇ ಶತಮಾನದ ಬಸವಾದಿ ಶರಣರ ತತ್ವಗಳನ್ನು ಅಳವಡಿಸಿಕೊಂಡಾಗ ಜಾತಿಯ ಸಂಕೋಲೆಯಿಂದ ಹೊರಬರಲು ಸಾಧ್ಯವಾಗುತ್ತದೆ ಎಂದರು.

ಸಂಸದ ಬಸವರಾಜ ಬೊಮ್ಮಾಯಿ ಮಾತನಾಡಿ, ತೋಂಟದ ಸಿದ್ದಲಿಂಗ ಶ್ರೀಗಳ ನೆನಪು ಇಂದಿಗೂ ನನಗೆ ಚೈತನ್ಯದ ಚಿಲುಮೆಯಾಗಿದ್ದು, ಹುಟ್ಟಿದ ಮಗುವಿನ ಮುಗ್ಧತೆಯನ್ನು ಕೊನೆಯವರೆಗೂ ಕಾಪಿಟ್ಟುಕೊಂಡಿದ್ದ ಅಪರೂಪದ ಯತಿಗಳು ಅವರಾಗಿದ್ದರು. ಬದುಕಿನ ಸವಾಲುಗಳನ್ನು ಯಾವ ರೀತಿ ಎದುರಿಸಬೇಕು ಎನ್ನುವುದಕ್ಕೆ ಅವರು ಪ್ರೇರಣೆಯಾಗಿದ್ದಾರೆ ಎಂದರು.

ಬಾಗಲಕೋಟೆ ಟೀಕಿನಮಠದ ಮಲ್ಲಿಕಾರ್ಜುನ ಸ್ವಾಮೀಜಿ, ಸಂಡೂರ ಪ್ರಭುದೇವರ ವಿರಕ್ತಮಠದ ಪ್ರಭು ಸ್ವಾಮೀಜಿ, ಕೋಲಶಾಂತೇಶ್ವರ ಮಠದ ಶಾಂತಲಿಂಗ ದೇಶಿಕೇಂದ್ರ ಸ್ವಾಮೀಜಿ, ಬಾಚಿಗೊಂಡನಗಳ್ಳಿ ತೋಂಟದಾರ್ಯ ಶಾಖಾಮಠದ ಶಿವಮಹಾಂತ ಸ್ವಾಮೀಜಿ, ಆಳಂದದ ಕೋರಣೇಶ್ವರ ಸ್ವಾಮೀಜಿ, ಬಸವಬೆಳವಿಯ ಶರಣಬಸವದೇವರು ಸಮ್ಮುಖ ವಹಿಸಿದ್ದರು. ಧಾರವಾಡದ ರತಿಕಾ ನೃತ್ಯ ನಿಕೇತನ ಕಲಾವಿದರಾದ ನಾಗರತ್ನಾ ಹಡಗಲಿ ತಂಡದವರಿಂದ ವಚನ ನೃತ್ಯ ರೂಪಕ ಜರುಗಿತು. ಮಾಜಿ ಸಚಿವ ಎಸ್.ಎಸ್. ಪಾಟೀಲ, ವಿಧಾನ ಪರಿಷತ್ ಸದಸ್ಯ ಎಸ್.ವಿ. ಸಂಕನೂರ, ರಾಜು ಕುರಡಗಿ, ಕಿರಣ ಭೂಮಾ ಇದ್ದರು.



ನಾಯಕತ್ವ ಗುಣ ಬೆಳೆಸುವ ಎನ್‌ಎಸ್‌ಎಸ್: ಹಿರೇಮಠ

• **ಲಕ್ಷ್ಮೇಶ್ವರ:** ಪಟ್ಟಣದ ತಾಯಿ ಪಾರ್ವತಿ ಮಕ್ಕಳ ಬಳಗದ ಕಲಾ ಹಾಗೂ ವಾಣಿಜ್ಯ ಮಹಿಳಾ ಮಹಾವಿದ್ಯಾಲಯದಿಂದ ರಾಷ್ಟ್ರೀಯ ಸೇವಾ ಯೋಜನೆಯ (ಎನ್‌ಎಸ್‌ಎಸ್) ವಾರ್ಷಿಕ ಶಿಬಿರ ಸ್ಥಳ ಗುಲಗೊಂಜಿಕೊಪ್ಪದ ದುಂಡಿ ಬಸವೇಶ್ವರ ದೇವಸ್ಥಾನ ಆವರಣದಲ್ಲಿ ನಡೆಯಿತು.

ಅಧ್ಯಕ್ಷತೆವಹಿಸಿ ಮಾತನಾಡಿದ ಶಿಕ್ಷಕಿ ಮೈತ್ರಾದೇವಿ ಹಿರೇಮಠ, ಎನ್‌ಎಸ್‌ಎಸ್ ಶಿಬಿರ ನಾಯಕತ್ವ ಗುಣ ಬೆಳೆಸುವಲ್ಲಿ ಸಹಾಯಕಾರಿಯಾಗಲಿದೆ. ವಿದ್ಯಾರ್ಥಿಗಳಿಗೆ ಶ್ರಮದ ಮಹತ್ವ ತಿಳಿಸುತ್ತದೆ. ಇಂದಿನ ಮಹಿಳೆಯರು ದಿಟ್ಟತನ ತೋರಬೇಕು. ಅಂದಾಗ ಮಾತ್ರ ಆತ್ಮಬಲ ಗಟ್ಟಿಯಾಗುತ್ತದೆ. ಅಕ್ಕಮಹಾದೇವಿ ಸ್ತ್ರೀ ಸಮಾನತೆ ಎತ್ತಿ ತೋರಿಸಿದಳು. ಕನ್ನಡ ಸಾಹಿತ್ಯಕೆ ಮಹಿಳಾ ವಚನಗಾರ್ತಿಯರ ಕೊಡುಗೆ ಅಪಾರವಾದದ್ದು ಎಂದರು.

ತಾಲೂಕು ಕದಳಿ ಮಹಿಳಾ ವೇದಿಕೆ ಅಧ್ಯಕ್ಷೆ ನಿರ್ಮಲಾ ಅರಳಿ ಮಾತನಾಡಿ, ಅಕ್ಕಮಹಾದೇವಿ ಅವರ ವಚನಗಳನ್ನು ಮೈಗೂಡಿಸಿಕೊಂಡು ಅದರಂತೆ ನಡೆದಾಗ ಜೀವನ ಸಾರ್ಥಕವಾಗುತ್ತದೆ. ಮಹಿಳೆಯರು ಎಲ್ಲಾ ಕ್ಷೇತ್ರದಲ್ಲಿ ಮುಂದೆ ಬರಬೇಕು ವಚನಗಾರ್ತಿಯರು ಸಾಹಿತ್ಯ ಸಾಮಾಜಿಕ ಕೊಡುಗೆಯು ಕನ್ನಡ ಸಾಹಿತ್ಯವನ್ನು ಶ್ರೀಮಂತ ಗೊಳಿಸಿದೆ ಮಹಿಳೆಯರು ಕನ್ನಡ ಸಾಹಿತ್ಯಕ್ಕೆ ವಿಶೇಷ ಕೊಡುಗೆ ನೀಡಿದ್ದಾರೆ ಎಂದರು.

ಇನ್ನರ್ ವ್ಹೀಲ್ ಕ್ಲಬ್ ಸಂಸ್ಥಾಪಕ ಅಧ್ಯಕ್ಷೆ ಮಾಲಾದೇವಿ ದಂದರಗಿ ಮಾತನಾಡಿ, ಕನ್ನಡ ಸಾಹಿತ್ಯಕ್ಕೆ 2000 ಸಾವಿರ ವರ್ಷಗಳ ಇತಿಹಾಸವಿದ್ದು , ಇಂದಿಗೂ ಮಹಿಳಾ ವಚನಗಾರ್ತಿಯರನ್ನು ನೆನೆಸುತ್ತವೆ. ವಚನ ಸಾಹಿತ್ಯದಲ್ಲಿ ಜೀವನ ಮೌಲ್ಯಗಳು ಅಡಗಿವೆ ಎಂದರು.

ಅತಿಥಿಗಳಾಗಿ ಮಾತನಾಡಿದ ಪತ್ರಕರ್ತ ಶಿವಲಿಂಗಯ್ಯ ಹೊತಗಿಮಠ, ವಿದ್ಯಾರ್ಥಿಗಳು ಎನ್‌ಎಸ್‌ಎಸ್ ಶಿಬಿರದಲ್ಲಿ ಕಲಿತ ನಾಯಕತ್ವ ಗುಣಗಳನ್ನು ಮೈಗೂಡಿಸಿಕೊಳ್ಳಬೇಕು. ವಿದ್ಯಾರ್ಥಿ ದಿಸೆಯಲ್ಲಿಯೇ ಪ್ರತಿಯೊಬ್ಬರೂ ಪತ್ರಿಕೆ ಓದುವ ಹವ್ಯಾಸ ಬೆಳೆಸಿಕೊಳ್ಳಬೇಕು. ಪತ್ರಿಕೆ ಓದುವುದರಿಂದ ಜ್ಞಾನರ್ಜನೆ ಬೆಳೆಯುದರ ಜೊತೆಗೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಹಾಯ ಆಗುತ್ತದೆ. ಮೊಬೈಲ್ ಗೀಳಿನಿಂದ ಹೊರಬಂದು ವಿದ್ಯಾಭ್ಯಾಸದಲ್ಲಿ ಹೆಚ್ಚಿನ ಸಮಯ ಕೊಟ್ಟಾಗ ಅತ್ಯುನ್ನತ ಸಾಧನೆ ಮಾಡಲು ಸಹಕಾರಿಯಾಗುತ್ತದೆ ಎಂದರು.

ಗ್ರಾಪಂ ಮಾಜಿ ಉಪಾಧ್ಯಕ್ಷೆ ಸುಧಾ ಮಾದರ, ಪ್ರಾಚಾರ್ಯ ವಿಜಯಕುಮಾರ ಬಿಳಿಎಲೆ, ಎಸ್ ಎಸ್‌ಎಸ್ ಘಟಕ ಅಧಿಕಾರಿ ಪರಮೇಶ ತಡಹಾಳ, ಶರಣಬಸವ ಅಣ್ಣಿಗೇರಿ, ರೇವಂತ ಕ್ಷತ್ರಿಯ, ಪ್ರಕಾಶ ಹರ್ಲಾಪುರ, ಉಪನ್ಯಾಸಕರಾದ ರವಿಕುಮಾರ ನೀರಲಗಿ, ಸಂಗೀತಾ ಲಕ್ಕಣ್ಣವರ, ಮಮತಾ ನಡುವಿನಮನಿ, ಮಾಲಾಶ್ರೀ ಹುರಳಿಕುಪ್ಪಿ, ಶಭಾನಾ ಕಲಕುಟ್ರಿ, ಉಪನ್ಯಾಸಕರು, ಸಿಬ್ಬಂದಿ ಇದ್ದರು. ಮೇಘಾ ಪ್ರಾರ್ಥಿಸಿದರು. ಸವಿತಾ ಹಣಗಿ ಸ್ವಾಗತಿಸಿದರು.ನಿವೇದಿತಾ ಹುಲಕೋಟಿ, ಪ್ರತೀಕ್ಷಾ ಗೊಂದಕರ, ಪ್ರಗತಿ ಹುಬ್ಬಳ್ಳಿ ನಿರ್ವಹಿಸಿದರು.



ರಾಜ್ಯದ ಮುಂಗಡ ಪತ್ರದ ವಿಶ್ಲೇಷಣೆ, ಆರ್ಥಿಕ ಸಮೀಕ್ಷೆ 2026-27ರ ಉಪನ್ಯಾಸ

• **ಮುಂಡರಗಿ:** ಕ.ರಾ ಬೆಲ್ಲದ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ ಮತ್ತು ಅರ್ಥಶಾಸ್ತ್ರ ಸ್ನಾತಕೋತ್ತರ ಅಧ್ಯಯನ ವಿಭಾಗ ಮುಂಡರಗಿ ಮಹಾವಿದ್ಯಾಲಯದಲ್ಲಿ ಆಂತರಿಕ ಭರವಸೆ ಕೋಶ ಇದರ ಅಡಿಯಲ್ಲಿ ಅರ್ಥಶಾಸ್ತ್ರ ವಿಭಾಗದಿಂದ ಕರ್ನಾಟಕ ರಾಜ್ಯದ ಮುಂಗಡ ಪತ್ರದ ವಿಶ್ಲೇಷಣೆ ಮತ್ತು ಆರ್ಥಿಕ ಸಮೀಕ್ಷೆ 2026-27ರ ಒಂದು ದಿನದ ಉಪನ್ಯಾಸ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಈ ಕಾರ್ಯಕ್ರಮವನ್ನು ಶ್ರೀ ಜ.ಅ ವಿದ್ಯಾ ಸಮಿತಿಯ ಆಡಳಿತಾಧಿಕಾರಿ ಡಾ. ಬಿ.ಜಿ. ಜವಳಿ ಉದ್ಘಾಟಿಸಿ ಮಾತನಾಡಿ, ಮಾಜಿ ಪ್ರಧಾನಿ ಡಾ. ಮನಮೋಹನ್ ಸಿಂಗ್ ಅವರು ರೂಪಿಸಿದ 1991ರ ಹೊಸ ಆರ್ಥಿಕ ನೀತಿಯ ಬಗ್ಗೆ ವಿದ್ಯಾರ್ಥಿಗಳಿಗೆ ತಿಳಿಸಿದರು. ಹೂವಿನ ಹಡಗಲಿ ಜಿ.ಬಿ.ಆರ್ ಮಹಾವಿದ್ಯಾಲಯದ ಪ್ರಾಚಾರ್ಯ ಪ್ರೊ. ಎಸ್.ಎಸ್ ಪಾಟೀಲ ಉಪನ್ಯಾಸ ನೀಡಿ ಭಾರತದ ಮುಂಗಡ ಪತ್ರದ ಇತಿಹಾಸದ ಬಗ್ಗೆ ವಿದ್ಯಾರ್ಥಿಗಳಿಗೆ ತಿಳಿಸುವುದರ ಜೊತೆಗೆ ಸರ್ಕಾರಗಳು ಉಚಿತ ಯೋಜನೆಗಳಿಂದ ಸೋಮಾರಿಗಳನ್ನು ಸೃಷ್ಟಿಸುತ್ತದೆ ಉದ್ಯೋಗಿಗಳನಲ್ಲ, ಮುಂಗಡ ಪತ್ರಗಳು ದೇಶದ ಸಾಮಾಜಿಕ ಮತ್ತು ಮೂಲಭೂತ ಸೌಲಭ್ಯಗಳಿಗೆ ಆದ್ಯತೆ ನೀಡಬೇಕು ಹಾಗೂ ಮುಂಗಡ ಪತ್ರ ಮಂಡನೆ ಮಾಡುವಾಗ ಸಾಮಾಜಿಕ, ಆರ್ಥಿಕ ಮತ್ತು ಸಾಮಾಜಿಕ ಅಸಮತೋಲವನ್ನು ನಿವಾರಣೆಯಾಗುವಂತೆ ಯೋಜನೆಗಳನ್ನು ನೀಡಬೇಕೆಂದು ತಿಳಿಸಿದರು.

ಅಧ್ಯಕ್ಷತೆಯನ್ನು ಕಾಲೇಜಿನ ಉಪಾ ಕಾರ್ಯಾಧ್ಯಕ್ಷ ವಿ. ಎಫ್. ಗುಡದಪ್ಪನವರ ವಹಿಸಿ ಮಾತನಾಡಿ, ಆರ್ಥಿಕತೆಯಲ್ಲಿ ಬಲಿಷ್ಠ ರಾಷ್ಟ್ರವಾಗಬೇಕಾದರೆ ಭಾರತವು ಡಾಲರ್ ಪರಿಣಾಮ ಭಾರತದ ರೂಪಾಯಿ ಮೇಲೆ ಬೀಳಬಾರದು ಹಾಗೂ ದೇಶದ ರಕ್ಷಣೆಯು ದೇಶದ ಆರ್ಥಿಕತೆಯನ್ನು ನಿರ್ಧರಿಸುತ್ತದೆ ಎಂದರು. ಕಾಲೇಜಿನ ಪ್ರಾಧ್ಯಾಪಕರಾದ ಡಾ. ಕುಮಾರ ಜೆ., ಡಾ. ವನಜಾಕ್ಷಿ ಭರಮಗೌಡರ, ಕೋಟೆಪ್ಪ ಗುಂಡಿಕೇರಿ, ರಘುವೀರ ಕೊಂಚಿಗೇರಿ, ಎಸ್.ಜಿ. ಹಿರೇಮಠ, ಸಂಗೀತಾ ಮರಳಿ, ಕೆ.ಕೆ. ಉಳ್ಳಾಗಡ್ಡಿ, ಜ್ಯೋತಿಕಾ ಪಿ. ಭಾಗವಹಿಸಿದ್ದರು. ಪ್ರೊ. ಕೌಶಲ್ಯ ಜಮಾದರ ನಿರೂಪಿಸಿದರು. ವಿದ್ಯಾರ್ಥಿನಿ ಚೈತ್ರ ಜಮಾದರ ವಂದಿಸಿದರು. ಪ್ರಾಚಾರ್ಯ ಡಾ. ಸಂತೋಷ ಹಿರೇಮಠ ಸ್ವಾಗತಿಸದರು. ಅರ್ಥಶಾಸ್ತ್ರದ ಪ್ರಾಧ್ಯಾಪಕ ಡಾ. ಆರ್.ಎಚ್. ಜಂಗನವಾರಿ ಪ್ರಾಸ್ತಾವಿಸಿದರು.



ಸ್ಥಳೀಯ ಆಡಳಿತ ರಾಜ್ಯಕ್ಕೆ ಮಾದರಿಯಾಗಲಿ: ಡಿ.ಆರ್.ಪಾಟೀಲ

• **ಶಿರಹಟ್ಟಿ:** ಊರಿನ ಸಮಗ್ರ ಅಭಿವೃದ್ಧಿ ದೃಷ್ಟಿಕೋನ ಇಟ್ಟುಕೊಂಡು ಗ್ರಾಮ ಮತ್ತು ವಾರ್ಡ್ ಸಭೆಗಳು ಸರ್ಕಾರದಂತೆ ಪರಿಣಾಮಕಾರಿ ಆಡಳಿತ ನೀಡಬೇಕು ಎಂದು ರಾಜ್ಯ ವಿಕೇಂದ್ರಿಕರಣ ಮತ್ತು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಡಿ.ಆರ್.ಪಾಟೀಲ ಹೇಳಿದರು.

ಸ್ಥಳೀಯ ತಾಪಂ ಸಾಮರ್ಥ್ಯ ಸೌಧದಲ್ಲಿ ಮಹಿಳೆಯರೊಂದಿಗೆ ಸಂವಾದ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು. ನಮ್ಮ ಗ್ರಾಮ ಮತ್ತು ಪಟ್ಟಣದ ಅಭಿವೃದ್ಧಿ ಕೆಲಸ ಮತ್ತು ಜನಪರ ಕಲ್ಯಾಣ ಯೋಜನೆಗಳನ್ನು ಸ್ವತಃ ನಾವೇ ಸಿದ್ಧಪಡಿಸುವಂತಾಗಬೇಕು. ಸ್ಥಳೀಯ ಆಡಳಿತ ಜನರ ಆಸೆಯಂತೆ ಯೋಜನಾ ಪಟ್ಟಿಯನ್ನು ಅನುಷ್ಠಾನಕ್ಕೆ ತರುವ ಕಾರ್ಯ ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳು ಮಾಡಬೇಕು ಎಂದರು. ಮಹಿಳೆಯರು ಊರಿನ ಸಮಸ್ಯೆಗಳ ಕುರಿತು ಸಭೆ ನಡೆಸಿ, ರಾಜ್ಯಕ್ಕೆ ಮಾದರಿ ರೀತಿಯಲ್ಲಿ ಯೋಜನೆ ರೂಪಿಸಿ, ಸರ್ಕಾರದ ಗಮನಕ್ಕೆ ತಂದಲ್ಲಿ 2027-28ನೇ ಸಾಲಿನ ರಾಜ್ಯ ಬಜೆಟ್ ಅಳವಡಿಸಿಕೊಳ್ಳಲಾಗುವುದು. ಸಂವಿಧಾನ ಮತ್ತು ಕಾನೂನಿನಲ್ಲಿರುವ ಅಧಿಕಾರ ಜನಪ್ರತಿನಿಧಿಗಳಿಗೆ ಮತ್ತು ಅಧಿಕಾರಿಗಳಿಗೆ ಮಾತ್ರ ಹಸ್ತಾಂತರವಾಗಿದೆ ಹೊರತು ಜನಸಮಾನ್ಯರಿಗೆ ಪೂರ್ಣಪ್ರಮಾಣದ ಅಧಿಕಾರ ಹಸ್ತಾಂತರವಾಗಿಲ್ಲ, ಮುಂದೆ ಹೀಗಾಗಬಾರದು ಎಂಬ ದೃಷ್ಟಿಯಿಂದ ಮುಂಬರುವ ರಾಜ್ಯ 2027-28ರ ಯೋಜನೆ ಜನರ ಯೋಜನೆಯನ್ನಾಗಿ ರೂಪಿಸಲು ಮುಂಖ್ಯಮಂತ್ರಿಗಳು ಸಿದ್ದರಿದ್ದಾರೆ ಎಂದರು. ಗ್ರಾಮದ ಅಭಿವೃದ್ಧಿ, ಜನರ ಕಲ್ಯಾಣ, ದೇಶದ ಪ್ರಗತಿಗೆ ಹೊಂದುವಂತಹ ಯೋಜನೆ ರೂಪಗೊಳ್ಳಬೇಕು. ಸಂವಿಧಾನ ಮತ್ತು ಕಾನೂನು ಚೌಕಟ್ಟಿನಲ್ಲಿ ಅನುಷ್ಠಾನಕ್ಕೆ ತರುವ ಕೆಲಸ ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳದ್ದಾಗಬೇಕು. ಅದಕ್ಕಾಗಿ ತಾವುಗಳು ತಪ್ಪದೆ ಮನೆಗೆಲಸವನ್ನು ಬದಿಗೊತ್ತಿ ಪ್ರತಿ ಗ್ರಾಮ ಸಭೆ ಮತ್ತು ವಾರ್ಡ್ ಸಭೆಗಳಲ್ಲಿ ಭಾಗವಹಿಸಿ ತಮ್ಮ ಸಲಹೆ ಸೂಚನೆಗಳನ್ನು ಹಂಚಿಗೊಳ್ಳಿ, ಅಂದಾಗ ಮಾತ್ರ ಸಾಮಾನ್ಯರ ಅಪೇಕ್ಷೆ ಮತ್ತು ಅನಿಸಿಕೆಯಂತೆ 2027-28ರ ಯೋಜನೆ ಜನರ ಯೋಜನೆಯಾಗಿ ರೂಪತಾಳಲು ಸಾಧ್ಯವಾಗುತ್ತದೆ ಎಂದರು.

ಪಪಂ ಮುಖ್ಯಾಧಿಕಾರಿ ಸವೀತಾ ತಾಂಬ್ರೆ, ಸಿಡಿಪಿಒ ಮೃತ್ಯುಂಜಯ, ತಾಪಂ ಯೋಜನಾಧಿಕಾರಿ ಎಚ್.ಎ.ಕೊಂಡಿಕೊಪ್ಪ, ಪಪಂ ಮಾಜಿ ಅಧ್ಯಕ್ಷ ಹುಮಾಯೂನ ಮಾಗಡಿ ಇತರರಿದ್ದರು.



ಡಾ. ಬಾಬು ಜಗಜೀವನ ರಾಂ ಜಯಂತಿ



• **ಗಜೇಂದ್ರಗಡ:** ಸರ್ಕಾರಿ ನೌಕರರು ಡಾ. ಬಾಬು ಜಗಜೀವನ ರಾಂ ಅವರ ಪ್ರಾಮಾಣಿಕತೆ ಮತ್ತು ಶಿಸ್ತನ್ನು ಅಳವಡಿಸಿಕೊಂಡು ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಸರ್ಕಾರದ ಸೌಲಭ್ಯಗಳನ್ನು ತಲುಪಿಸಬೇಕು. ಬಾಬುಜೀ ದೇಶದ ಕೃಷಿ ಮತ್ತು ರಕ್ಷಣಾ ಕ್ಷೇತ್ರದಲ್ಲಿ ಕ್ರಾಂತಿಕಾರಿ ಬದಲಾವಣೆ ತಂದ ಮಹಾನ್ ನಾಯಕರು. ದಲಿತ ಮತ್ತು ಶೋಷಿತ ವರ್ಗಗಳ ಧ್ವನಿಯಾಗಿ ಅವರು ನೀಡಿದ ಕೊಡುಗೆ ನಮಗೆಲ್ಲರಿಗೂ ದಾರಿದೀಪವಾಗಿದೆ ಎಂದು ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಚಂದ್ರಶೇಖರ ಕಂದಕೂರ ಹೇಳಿದರು.


ಪಟ್ಟಣದ ತಾಲೂಕು ಪಂಚಾಯತಿ ಕಾರ್ಯಾಲಯದಲ್ಲಿ ಹಸಿರು ಕ್ರಾಂತಿಯ ಹರಿಕಾರ, ದೇಶದ ಮಾಜಿ ಉಪಪ್ರಧಾನಿ ಡಾ. ಬಾಬು ಜಗಜೀವನ್ ರಾಂ ಅವರ 119ನೇ ಜನ್ಮದಿನ ಆಚರಣೆಯಲ್ಲಿ ಭಾಗಿಯಾಗಿ ಮಾತನಾಡಿ, ಬಾಬುಜೀ ಅವರು ಕೇವಲ ಒಂದು ಸಮುದಾಯದ ನಾಯಕರಲ್ಲ, ಅವರು ದೇಶದ ಆಸ್ತಿ. ಆಹಾರ ಭದ್ರತೆ ಮತ್ತು ಸಾಮಾಜಿಕ ಸಮಾನತೆಗಾಗಿ ಅವರು ನೀಡಿದ ಕೊಡುಗೆ ಅನನ್ಯ ಎಂದರು.

ಕಾರ್ಯಕ್ರಮದಲ್ಲಿ ತಾಲೂಕು ಪಂಚಾಯತಿಯ ಲೆಕ್ಕಾಧಿಕಾರಿ ಡಾ.ಸಿ.ಬಿ.ಮಾಳಗಿ, ಸಿಬ್ಬಂದಿ ಬಸವರಾಜ ಇಟಗಿ, ಮಲ್ಲಿಕಾರ್ಜುನ ಸರಗಣಾಚಾರಿಮಠ, ಚನ್ನಮೋಹನ ಪಮ್ಮಾರ ಸೇರಿದಂತೆ ಅನೇಕರು ಇದ್ದರು.

ಸಮಾನತೆ ಹರಿಕಾರ ಡಾ.ಬಾಬು ಜಗಜೀವನರಾಂ

• **ಲಕ್ಷ್ಮೇಶ್ವರ:** ರಾಷ್ಟ್ರದ ಸೇವೆಗಾಗಿ ಬದುಕನ್ನೇ ಮೀಸಲಿಟ್ಟ ಹಸಿರು ಕ್ರಾಂತಿ ಮತ್ತು ಸಮಾನತೆಯ ಹರಿಕಾರ, ಉಪಪ್ರಧಾನಮಂತ್ರಿಗಳಾಗಿದ್ದ ಡಾ.ಬಾಬು ಜಗಜೀವನರಾಂ ಅವರ ಆದರ್ಶ, ಚಿಂತನೆಗಳು, ದೇಶ ಸೇವೆ ಸದಾ ಸ್ಮರಣೀಯ. ಅವರ ಶ್ರೇಷ್ಠ ವ್ಯಕ್ತಿತ್ವ ಹಾಗೂ ಜೀವನ ಚರಿತ್ರೆಯನ್ನು ತಿಳಿದು ಗೌರವದಿಂದ ಸ್ಮರಿಸುವುದು ಎಲ್ಲರ ಕರ್ತವ್ಯವಾಗಿದೆ ಎಂದು ಗ್ರೇಡ್-2 ತಹಶೀಲ್ದಾರ್ ಮಂಜುನಾಥ ಅಮಾಸಿ ಹೇಳಿದರು.

ಅವರು ಪಟ್ಟಣದ ತಹಶೀಲ್ದಾರ್ ಕಚೇರಿಯಲ್ಲಿ ಭಾನುವಾರ ಡಾ. ಬಾಬು ಜಗಜೀವನ ರಾಂ ಅವರ 119ನೇ ಜನ್ಮದಿನಾಚರಣೆ/ಸಮತಾ ದಿನ ಆಚರಣೆಯಲ್ಲಿ ಪಾಲ್ಗೊಂಡು ಮಾತನಾಡಿದರು. ಸಮಾಜದ ಮುಖಂಡರಾದ ಫಕೀರೇಶ ಮ್ಯಾಟಣ್ಣವರ ಮತ್ತು ಬಸವಣ್ಣೆಪ್ಪ ನಂದೆಣ್ಣವರ ಮಾತನಾಡಿದರು. ಸಮಾಜ ಕಲ್ಯಾಣ ಇಲಾಖೆ ಎಂ.ಎಸ್. ಸಂಕನೂರ, ಉಪತಹಶೀಲ್ದಾರ್ ಪ್ರಶಾಂತ ಕಿಮಾಯಿ, ಎಚ್.ಡಿ. ಸಂಜೀವಣ್ಣವರ, ಹನುಮಂತಪ್ಪ ನಂದೆಣ್ಣವರ, ಮಂಜಣ್ಣ ಹೂಗಾರ, ರಮೇಶ ಅಡಗಿಮನಿ, ಅನಿಲ ಮುಳಗುಂದ, ಫಕೀರೇಶ ನಂದೆಣ್ಣವರ, ಮಹಾಂತೇಶ ಮೂಶಪ್ಪನವರ, ಮನೋಹರ ಕರ್ಜಗಿ, ಮಹಾಂತೇಶ ಗುಡಿಸಲಮನಿ, ಮಲ್ಲೇಶ ಬಸವನಾಯ್ಕರ್, ಜಗದೀಶ ಹುಲಿಗೆಮ್ಮನವರ, ಬಸವರಾಜ ಹಿರೇಮನಿ, ಅಂಬರೀಷ ತೆಂಬದಮನಿ, ಮಾರ್ತಾಂಡಪ್ಪ ಪೆದ್ದರ, ತುಕ್ಕಪ್ಪ ಕಾರಬಾರಿ, ಫಕೀರೇಶ ಡಿ.ಬಿ., ಬಿ.ಎಸ್.ಹಡಪದ, ಕೆ.ಎಫ್.ತಳವಾರ, ಶೀಲಾ ಮಡಿವಾಳರ, ರೇಣುಕರಾಜ ಹರಿಜನ, ಸೋಮು ಯತ್ನಳ್ಳಿ, ಕರಿಯಪ್ಪ ಶಿರಹಟ್ಟಿ, ಸಿದ್ದಪ್ಪ ಕಳಸಣ್ಣವರ ಸೇರಿದಂತೆ ಇಲಾಖೆ ಸಿಬ್ಬಂದಿ, ಸಮಾಜ ಬಾಂಧವರು ಇದ್ದರು.



ಡಾ. ಬಾಬು ಜಗಜೀವನ ರಾಂ ಆದರ್ಶ ಪಾಲಿಸಿ



• **ಗದಗ:** ದೇಶದ ಹಸಿರುಕ್ರಾಂತಿ ಹರಿಕಾರ, ಮಾಜಿ ಉಪಪ್ರಧಾನಿ ಡಾ. ಬಾಬು ಜಗಜೀವನ ರಾಂ 119ನೇ ಜಯಂತ್ಯುತ್ಸವವನ್ನು ಭಾನುವಾರ ಜಿಲ್ಲಾಡಳಿತ ಭವನದಲ್ಲಿ ಆಚರಿಸಲಾಯಿತು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಸಮಾಜ ಕಲ್ಯಾಣ ಇಲಾಖೆ, ನಗರಸಭೆ ಗದಗ - ಬೆಟಗೇರಿ, ಜಿಲ್ಲೆಯ ದಲಿತಪರ ಹಾಗೂ ವಿವಿಧ ಸಂಘಟನೆಗಳ ಸಹಯೋಗದಲ್ಲಿ ಜರುಗಿದ ಡಾ. ಬಾಬು ಜಗಜೀವನ ರಾಂ ಜಯಂತಿಯಲ್ಲಿ ಅವರ ಭಾವಚಿತ್ರಕ್ಕೆ ಅಪರ ಜಿಲ್ಲಾಧಿಕಾರಿ ಡಾ.ದುರಗೇಶ್ ಕೆ.ಆರ್. ಪುಷ್ಪನಮನ ಸಲ್ಲಿಸಿದರು. ನಂತರ ಮಾತನಾಡಿದ ಅವರು, ನಾವೆಲ್ಲರೂ ಡಾ. ಬಾಬು ಜಗಜೀವನ ರಾಂ ಅವರ ಆದರ್ಶಗಳನ್ನು ನಮ್ಮ ದೈನಂದಿನ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಏ.14ರಂದು ದೇಶದ ಹಸಿರುಕ್ರಾಂತಿ ಹರಿಕಾರ, ಮಾಜಿ ಉಪಪ್ರಧಾನಿ ಡಾ. ಬಾಬು ಜಗಜೀವನ ರಾಂ ಹಾಗೂ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಬೇಡ್ಕರ್ ಅವರುಗಳ ಜಯಂತಿಯನ್ನು ವಿವಿಧ ಇಲಾಖೆ ಮತ್ತು ಸಂಘಟನೆಗಳ ಸಹಯೋಗದಲ್ಲಿ ಅದ್ದೂರಿಯಾಗಿ ಮಾಡಲಾಗುತ್ತಿದೆ ಎಂದರು. ಎಸ್. ಎನ್. ಬಳ್ಳಾರಿ, ಡಿ.ಜಿ. ಜೋಗಣ್ಣನವರ, ಸತೀಶ್ ಹೂಲಿ, ಬೇಲೂರ, ಪ್ರವೀಣ ಸೂಡಿ, ಡಿವೈಎಸ್‌ಪಿ ಮುರ್ತುಜಾ ಖಾದ್ರಿ, ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ಸಿ.ಆರ್. ಮುಂಡರಗಿ, ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕಿ ಡಾ. ನಂದಾ ಹಣಬರಟ್ಟಿ, ಜಿಲ್ಲಾ ವಾರ್ತಾಧಿಕಾರಿ ವಸಂತ ಮಡ್ಲೂರ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಉಪನಿರ್ದೇಶಕ ಆರ್ .ಎಸ್. ರಡಿ, ಪಶು ಸಂಗೋಪನಾ ಇಲಾಖೆ ಉಪನಿರ್ದೇಶಕ ಡಾ. ಎಚ್ ಬಿ ಹುಲಗಣ್ಣವರ, ಇದ್ದರು.

ಏ.14ಕ್ಕೆ ಮಹನೀಯರ ಭಾವಚಿತ್ರ ಮೆರವಣಿಗೆ

• **ಗಜೇಂದ್ರಗಡ:** ತಾಲೂಕಿನ ಎಲ್ಲಾ ಇಲಾಖೆಗಳಲ್ಲಿ ಏ.14ರಂದು ಡಾ. ಬಿ.ಆರ್. ಅಂಬೇಡ್ಕರ್ ಅವರ ಜಯಂತಿಯನ್ನು ಕಡ್ಡಾಯವಾಗಿ ಆಚರಣೆ ಮಾಡಬೇಕು ಎಂದು ಪ್ರಭಾರಿ ತಹಶೀಲ್ದಾರ್ ನಾಗರಾಜ ಕೆ. ಹೇಳಿದರು.

ಪಟ್ಟಣದ ಪುರಸಭೆ ಕಾರ್ಯಾಲಯದ ಸಭಾಭವನದಲ್ಲಿ ಹಮ್ಮಿಕೊಂಡಿದ್ದ ಡಾ. ಬಾಬು ಜಗಜೀವನ ರಾಂ ಹಾಗೂ ಡಾ. ಅಂಬೇಡ್ಕರ್ ಜಯಂತಿಯ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದರು. ಏ.14ರಂದು ಇಬ್ಬರೂ ಮಹನೀಯರ ಭಾವಚಿತ್ರಗಳ ಮೆರವಣಿಗೆ ಮಾಡಲಾಗುವುದು. ಶಾಲೆ, ಕಾಲೇಜ್ ಹಾಗೂ ವಸತಿ ನಿಲಯದ ವಿದ್ಯಾರ್ಥಿಗಳನ್ನು ಕರೆತರಬೇಕು. ಮೆರವಣಿಗೆಯಲ್ಲಿ ಮೆರಗು ನೀಡಲು ಕಲಾ ತಂಡಗಳನ್ನು ಕರೆಸಬೇಕು. ಎಲ್ಲ ಸಮಾಜದ ಒಬ್ಬೊಬ್ಬ ಹಿರಿಯರನ್ನು ಕರೆದು ಒಂದೊಂದು ಉಸ್ತುವಾರಿ ನೀಡಬೇಕು. ಉಪನ್ಯಾಸ ಕಾರ್ಯಕ್ರಮ ಆಯೋಜನೆ ಮಾಡಬೇಕು ಎಂಬ ಸಲಹೆಗಳು ಕೇಳಿ ಬಂದವು.

ತಾಪಂ ಕಾರ್ಯ ನಿರ್ವಾಹಕ ಅಧಿಕಾರಿ ಚಂದ್ರಶೇಖರ ಕಂದಕೂರ, ಪುರಸಭೆ ಮುಖ್ಯಾಧಿಕಾರಿ ಬಸವರಾಜ ಬಳಗಾನೂರ, ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ಗೀತಾ ಆಲೂರು, ಪಿಎಸ್‌ಐ ಪ್ರಕಾಶ್ ಡಿ., ಬಿಇಒ ಅರ್ಜುನ ಕಾಂಬೋಗಿ ಇತರರಿದ್ದರು. ಅಂಬೇಡ್ಕರ್ ವೃತ್ತ, ಪುತ್ಥಳಿ ನಿರ್ಮಾಣಕ್ಕೆ ಆಗ್ರಹ ಸಭೆಯಲ್ಲಿ ಸಮಾಜದ ವಿವಿಧ ಮುಖಂಡರು ಮಾತನಾಡಿ, ಪಟ್ಟಣದಲ್ಲಿ ಅಂಬೇಡ್ಕರ್ ವೃತ್ತದಲ್ಲಿ ಅವರ ಪುತ್ಥಳಿ ನಿರ್ಮಾಣ ಮಾಡಬೇಕು ಎಂದು ಒತ್ತಾಯಿಸಿದರು. ಈ ಕುರಿತು ಪ್ರತಿಕ್ರಯಿಸಿದ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ಗೀತಾ ಆಲೂರ, ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು.





ಸೂಪರ್ ಕಿಂಗ್ಸ್‌ಗೆ 251 ರನ್ ಗುರಿ | ಒಂದೇ ಪಂದ್ಯ 19 ಸಿಕ್ಸರ್

ಚೆನ್ನೈಗೆ ಡೆವಿಡ್ ಪಂಚ್

ಬೆಂಗಳೂರು: ಇನ್ನಿಂಗ್ಸ್ ಉದ್ದಕ್ಕೂ ಸಿಕ್ಸರ್‌ಗಳ ಸುರಿಮಳೆಗೈದ ಆರ್‌ಸಿಬಿ ಬ್ಯಾಟಿಂಗ್ ಪಡೆ ಐಪಿಎಲ್‌ನ ತಮ್ಮ ಎರಡನೇ ಪಂದ್ಯದಲ್ಲಿ ಚೆನ್ನೈ ವಿರುದ್ಧ ಮೂರನೇ ಅತಿ ಹೆಚ್ಚು ಸ್ಕೋರ್ ಮಾಡಿತು.

ಮೊದಲಿಗೆ ಕೊಹ್ಲಿ, ನಂತರ ಪಡಿಕ್ಕಲ್, ಕೊನೆಯಲ್ಲಿ ಪಾಟಿದಾರ್ ಮತ್ತು ಡೆತ್ ಓವರ್‌ಗಳಲ್ಲಿ ಡೆವಿಡ್? ಹೀಗೆ ಬಂದ ಬ್ಯಾಟರ್‌ಗಳು ಚೆನ್ನೈ ತಂಡವನ್ನು ದಂಡಿಸುತ್ತಿದ್ದರೆ ಚೆನ್ನೈ ನೋಡುತ್ತಾ ನಿಂತಿತು. ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಬೆಂಗಳೂರು ಬರೋಬ್ಬರಿ 250 ರನ್ ಚಚ್ಚಿತು. ಚೆನ್ನೈ ಕೇವಲ 3 ವಿಕೆಟ್ ಪಡೆಯಿತು.

ಆರ್‌ಸಿಬಿ 19 ಸಿಕ್ಸರ್‌ಗಳನ್ನು ಬಾರಿಸಿತು. ಇದರಲ್ಲಿ ಡೆವಿಡ್ 8 ಬಾರಿಸಿದರೆ ಪಾಟಿದಾರ್ 6 ಸಿಕ್ಸರ್‌ಗಳನ್ನು ಬಾರಿಸಿದರು. ಆರ್‌ಸಿಬಿ ತನ್ನ ಮೂರನೇ ಅತಿ ಹೆಚ್ಚು ರನ್ ಬಾರಿಸಿದೆ.

ದಂಡಿಸಿದ ದಾಂಡಿಗರು: ಟಾಸ್ ಸೋಲಿನೊಂದಿಗೆ ಬ್ಯಾಟಿಂಗ್‌ಗಿಳಿದ ಬೆಂಗಳೂರು ನಿರೀಕ್ಷಿತ ಆರಂಭ ಪಡೆಯಲಿಲ್ಲ. ಮೊದಲನೇ ಬೌಂಡರಿ ಗಳಿಸಲು 20 ಎಸೆತ ಎದುರಿಸಿತು. ಅದಕ್ಕೂ ಹೆಚ್ಚಾಗಿ ಮೊದಲ ಓವರ್‌ನಲ್ಲೇ ಕೊಹ್ಲಿ ರನೌಟ್‌ನಿಂದ ಪಾರಾದರು. ಎರಡನೇ ಓವರ್‌ನಲ್ಲಿ ದುಬೆಯಿಂದ ಜೀವದಾನ ಪಡೆದರು. ಆದಾಗ್ಯೂ ಅವರ ಬ್ಯಾಟ್‌ನಿಂದ ಬಂದಿದ್ದು 28 ರನ್ ಮಾತ್ರ! ಇತ್ತ ಸೆಟ್ ಆಗುವ ಔಪಚಾರಿಕತೆಗೆ ಬಿದ್ದ ಸಾಲ್ಟ್, ಬಿರುಸಿನ ಬ್ಯಾಟಿಂಗ್‌ಗೆ ಮುಂದಾಗಲೇ ಇಲ್ಲ. ಮೂರನೇ ಕ್ರಮಾಂಕದಲ್ಲಿ ಬಂದ ಪಡಿಕ್ಕಲ್ ಸಿಂಗಲ್-ಟುಡಿಗಳ ಮುಲಾಜಿಗೆ ಬಿದ್ದರು. ಪವರ್‌ಪ್ಲೇನಲ್ಲಿ ಆರ್‌ಸಿಬಿ 51 ರನ್ ಗಳಿಸಿತು.

ಪವರ್‌ಪ್ಲೇ ಮುಗಿದನಂತರ ಪಡಿಕ್ಕಲ್ ಹಾಗೂ ಸಾಲ್ಟ್ ಕೊಂಚ ಹೊತ್ತು ಉತ್ತಮ ಬ್ಯಾಟಿಂಗ್ ಮಾಡಿದರು. ಈ ಜೋಡಿ 56 ರನ್ ಗಳಿಸಿತು. ಸೆಟ್ ಆಗಿದ್ದ ಸಾಲ್ಟ್ ಸ್ಫೋಟಕ ಬ್ಯಾಟಿಂಗ್‌ಗೆ ಮುಂದಾಗುತ್ತಿದ್ದಂತೆ 46 ಗಳಿಸಿದ್ದಾಗ ಕ್ಯಾಚ್ ಆದರು. ಅವರ ಇನ್ನಿಂಗ್ಸ್‌ನಲ್ಲಿ 2 ಸಿಕ್ಸ್ ಮತ್ತು 3 ಫೋರ್‌ಗಳು ಸೇರಿವೆ.

ರಜತ್-ಪಡಿಕ್ಕಲ್ ಅಬ್ಬರ: ಸ್ಲಾಗ್ ಓವರ್‌ಗಳಲ್ಲಿ ಒಂದಾದ ಪಡಿಕ್ಕಲ್ ಮತ್ತು ಪಾಟಿದಾರ್ ಸ್ಫೋಟಕ ಬ್ಯಾಟಿಂಗ್ ಶುರು ಮಾಡಿದರು. ಮೊದಲಿನಿಂದಲೂ ವಿಕೆಟ್ ಬಿದ್ದ ಒತ್ತಡ ಎದುರಿಸುತ್ತಿದೆ ಅನ್ನಿಸಲೇ ಇಲ್ಲ. ಮೈದಾನದ ಪ್ರತಿ ದಿಕ್ಕಿಲ್ಲೂ ಚಚ್ಚಿದ ಈ ಜೋಡಿ ಸರಸರನೇ ರನ್ ಗಳಿಸಿತು. ಕೇವಲ 17 ಬಾಲ್‌ಗಳಲ್ಲೇ 50 ರನ್ ನಿರ್ಮಿಸಿತು. ಇನ್ನೇನು ಸೆಟ್ ಆದರು, ಒಂದು ಹಂತದಲ್ಲಿ ಮುನ್ನಡೆಯಲ್ಲಿದ್ದ ಚೆನ್ನೈ ತಂಡ ಸಂಕಷ್ಟಕ್ಕೆ ಸಿಲುಕಿಕೊಂಡಿತು ಅನ್ನುವಷ್ಟರಲ್ಲಿ 15ನೇ ಓವರ್ ಬೌಲಿಂಗ್ ಮಾಡಲು ಬಂದ ಜಿಮ್ಮಿ ಓವರ್‌ಟನ್ ಮೊದಲ ಬಾಲ್ ಅನ್ನೇ ಆಡಲಾಗದ ಯಾರ್ಕರ್ ಎಸೆದರು. ಪಡಿಕ್ಕಲ್ ಪೆವಿಲಿಯನ್ ಹಾದಿ ಹಿಡಿದರು.

ಮತ್ತೆ ಪಡಿಕ್ಕಲ್ ಪರಾಕ್ರಮ: ಚಿನ್ನಸ್ವಾಮಿ ಕ್ರೀಡಾಂಗಣಕ್ಕೆ ಬಂದಿದ್ದ ಅಭಿಮಾನಿಗಳನ್ನು ಪಡಿಕ್ಕಲ್ ರಂಜಿಸಿದರು. ಕಳೆದ ಪಂದ್ಯದಲ್ಲೂ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಅರ್ಧಶತಕ ಬಾರಿಸಿದ್ದ ಅವರು ಈ ಪಂದ್ಯದಲ್ಲೂ 50 ರನ್ ಬಾರಿಸಿದರು. ಈ ಇನ್ನಿಂಗ್ಸ್‌ನಲ್ಲಿ5 ಬೌಂಡರಿ ಮತ್ತು 2 ಸಿಕ್ಸರ್‌ಗಳು ಸೇರಿವೆ.

ಪಾಟಿದಾರ್ ಬಿರುಸಿನಾಟ: ಮಧ್ಯಮ ಕ್ರಮಾಂಕದಲ್ಲಿ ಬಂದ ಪಾಟಿದಾರ್ ಈ ಬಾರಿ ಸ್ಕೋರ್ ಹಿಗ್ಗಿಸುವ ಜವಾಬ್ದಾರಿ ನಂದೆಂದರು. ಮೊದಲನೇ ಎಸೆತದಿಂದಲೂ ಅವರು ಸ್ಫೋಟಕ ಬ್ಯಾಟಿಂಗ್‌ಗೆ ಯತ್ನಿಸಿದರು. ಗಗನದೆತ್ತರ ಸಿಕ್ಸರ್ ಬಾರಿಸುತ್ತಾ, ಚಾಣಾಕ್ಷ್ಯ ಮತ್ತು ಕ್ಲಾಸಿಕ್ ಬೌಂಡರಿಗಳನ್ನು ಬಾರಿಸುತ್ತಾ 50 ರನ್ ಪೂರೈಸಿದರು. ಅವರಿಗೆ ಟೀಮ್ ಡೆವಿಡ್ ಸಾಥ್ ಸಿಕ್ಕಿತು. ಸ್ವಲ್ಪ ಸಮಯದ ನಂತರ ಅವರೂ ಸ್ಫೋಟಕ ಬ್ಯಾಟಿಂಗ್ ಶುರು ಮಾಡಿದರು. ಒಟ್ಟು 19 ಎಸೆತ ಎದುರಿಸಿದ ಅವರು ಔಟಾಗದೆ 48 ರನ್ ಗಳಿಸಿದರು.



ಚಿತ್ರ: ಮೋಹನ್ ಕುಮಾರ್ ಬಿ. ಎನ್.



ರಾಹುಲ್ ದ್ರಾವಿಡ್, ಅನಿಲ್ ಕುಂಬ್ಳೆ ಎಂಡ್ ಅನಾವರಣ

ಪಂದ್ಯಕ್ಕೂ ಮುನ್ನ ಕ್ರಿಕೆಟ್ ಗೋಡೆ, ಕನ್ನಡಿಗ ರಾಹುಲ್ ದ್ರಾವಿಡ್ ಹಾಗೂ ಜಂಬೋ ಖ್ಯಾತಿಯ ಅನಿಲ್ ಕುಂಬ್ಳೆ ಎಂಡ್‌ಗಳ ಅನಾವರಣ ಮಾಡಲಾಯಿತು. ಕ್ರೀಡಾಂಗಣದ ಎರಡೂ ಪೆವಿಲಿಯನ್ ಎಂಡ್‌ಗಳಿಗೂ ಒಬ್ಬೊಬ್ಬರ ಹೆಸರನ್ನು ಇಡಲಾಗಿದೆ. ಟಾಸಿಗೂ ಮುನ್ನವೇ ದ್ರಾವಿಡ್, ಕುಂಬ್ಳೆ, ಕೆಎಸ್‌ಸಿಎ ಅಧ್ಯಕ್ಷ ವೆಂಕಟೇಶ್ ಪ್ರಸಾದ್ ಸೇರಿದಂತೆ ವಿವಿಧ ಗಣ್ಯರ ಉಪಸ್ಥಿತಿಯಲ್ಲಿ ಅನಾವರಣ ಕಾರ್ಯಕ್ರಮ ಮಾಡಲಾಯಿತು.

ಸಿಕ್ಸರ್‌ಗಳ ಸುರಿಮಳೆಗೈದ ಡೆವಿಡ್

ಇನ್ನು ಡೆತ್ ಓವರ್‌ಗಳಲ್ಲಿ ಸಿಕ್ಸರ್‌ಗಳ ಸುರಿಮಳೆಗೈದ ಟೀಮ್ ಡೆವಿಡ್ ತಂಡದ ಮೊತ್ತ ಹಿಗ್ಗಿಸಿದ್ದಲ್ಲದೆ, ಚೆನ್ನೈ ಸೂಪರ್ ಕಿಂಗ್ಸ್ ತಂಡದ ಯೋಜನೆಗಳನ್ನೆಲ್ಲಾ ಮುರಿದು ಹಾಕಿದರು. ಬಂದ ಬೌಲರ್‌ಗಳನ್ನೆಲ್ಲಾ ದಂಡಿಸಿದರು. ಗಗನದೆತ್ತದ ಸಿಕ್ಸರ್‌ಗಳನ್ನು ಬಾರಿಸಿದರು. ಇನ್ನಿಂಗ್ಸ್‌ನಲ್ಲಿ 25 ಬಾಲ್ ಎದುರಿಸಿದರು. ಅದರಲ್ಲಿ 8 ಸಿಕ್ಸರ್‌ಗಳು! ಒಟ್ಟು 75 ರನ್ ಗಳಿಸಿದ ಅವರು 250 ರನ್ ಗಡಿ ದಾಟಿಸಿದರು. ಪಾಟಿದಾರ್ ಔಟಾಗದೆ 48 ರನ್ ಗಳಿಸಿದರು.

ಲಖನೌ ಸೂಪರ್‌ಗೆ ಮೊದಲ ಗೆಲುವು | ಹೈದರಾಬಾದ್‌ಗೆ ನಿರಾಸೆ

ಪಂತ್ ತಾಳ್ಮೆಯಾಟಕ್ಕೆ ಜಯ

ಹೈದರಾಬಾದ್: ಮೊಹಮ್ಮದ್ ಶಮಿ ಸೇರಿದಂತೆ ತಂಡದ ವೇಗಿಗಳ ಮಾರಕ ಬೌಲಿಂಗ್ ದಾಳಿ ಹಾಗೂ ರಿಷಭ್ ಪಂತ್ ಅವರ ಸಮಯೋಚಿತ ಬ್ಯಾಟಿಂಗ್ ಪರಿಣಾಮ ಲಖನೌ ಸೂಪರ್ ಜೇಂಟ್ಸ್ ತಂಡ ಪ್ರತಿಷ್ಠಿತ ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯ ಹೈದರಾಬಾದ್ ವಿರುದ್ಧದ ಪಂದ್ಯದಲ್ಲಿ 5 ವಿಕೆಟ್‌ಗಳಿಂದ ಗೆಲುವು ಸಾಧಿಸಿದೆ.

ಹೈದರಾಬಾದ್‌ನ ರಾಜೀವ್ ಗಾಂಧಿ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಸೂಪರ್ ವಿಕೆಂಡ್‌ನ ಮೊದಲ ಪಂದ್ಯದಲ್ಲಿ ಎದುರಾಗಿದ್ದ ಹೈದರಾಬಾದ್ ಬ್ಯಾಟಿಂಗ್‌ನಲ್ಲಿ ವೈಫಲ್ಯ ಕಂಡಿತು. ನಂತರ ಬೌಲಿಂಗ್ ವೇಳೆ ಒತ್ತಡ ಹೇರಲು ಪ್ರಯತ್ನಿಸಿದರೂ ಗೆಲ್ಲಲು ಬೇಕಾದ ಆವೇಗ ಪಡೆಯದೇ ಸೋಲೊಪ್ಪಿಕೊಂಡಿತು.

ಟಾಸ್ ಗೆದ್ದ ರಿಷಭ್ ಪಂತ್ ಬೌಲಿಂಗ್ ಆಯ್ಕೆ ಮಾಡಿಕೊಂಡರು. ಮೊಹಮ್ಮದ್ ಶಮಿ, ಪ್ರಿನ್ಸ್ ಯಾದವ್ ಹಾಗೂ ದಿಗ್ವೇಶ್ ರಾಥಿ ಆರಂಭಿಕ ಓವರ್‌ಗಳಲ್ಲಿ ಕರಾರುವಾಕ್ ದಾಳಿ ಸಂಘಟಿಸಿದರು. ಪರಿಣಾಮ ಹೈದರಾಬಾದ್ 20 ಓವರ್‌ಗಳಲ್ಲಿ9 ವಿಕೆಟ್ ನಷ್ಟಕ್ಕೆ 156 ರನ್‌ಗಳಿಸಿತು. ತಂಡದ ಪರ ಹೆನ್ರಿಚ್ ಕ್ಲಾಸೆನ್ 62, ನಿತಿಶ್ ರೆಡ್ಡಿ 56 ರನ್ ಗಳಿಸಿದರು. ಲಖನೌ ಪರ ಶಮಿ, ಆವೇಶ್ ಹಾಗೂ ಪ್ರಿನ್ಸ್ ತಲಾ 2 ವಿಕೆಟ್ ಪಡೆದುಕೊಂಡರು.

ಗುರಿ ಬೆನ್ನತ್ತಿದ ಲಖನೌ 19.5 ಓವರ್‌ಗಳಲ್ಲಿ 160 ರನ್ ಗಳಿಸಿ ಗುರಿ ಮುಟ್ಟಿತು. ತಂಡದ ಪರ ನಾಯಕ ರಿಷಭ್ ಪಂತ್ ಅಜೇಯ 68 ರನ್ ಗಳಿಸಿದರೆ, ಮಾರ್ಕ್ರಂ 45 ರನ್‌ಗಳಿಸಿದರು. ಹೈದರಾಬಾದ್ ಪರ ಹರ್ಷ 2 ವಿಕೆಟ್ ಪಡೆದುಕೊಂಡರು.

ಪಂತ್ ಕೊನೆಯವರೆಗೂ ತಾಳ್ಮೆ ಕಳೆದುಕೊಳ್ಳದೆ ಬ್ಯಾಟಿಂಗ್ ಮಾಡಿ ಪಂದ್ಯ ಗೆಲ್ಲಿಸಿ ಹೀರೋ ಅನ್ನಿಸಿಕೊಂಡರು. ಮಾರ್ಕ್ರಂ ಕೂಡ ಸ್ಫೋಟಕ ಬ್ಯಾಟಿಂಗ್ ಮಾಡಿ ಗೆಲುವಿನ ರೂವಾರಿ ಎನಿಸಿಕೊಂಡರು. ಬೌಲಿಂಗ್ ವೇಳೆ ಮೊಹಮ್ಮದ್ ಶಮಿ 18 ಬಾಲ್ ಡಾಟ್ ಮಾಡಿ ದಿನದಾಟದ ಪ್ರಮುಖ ಆಕರ್ಷಣೆಯಾಗಿದ್ದರು. ಹೈದರಾಬಾದ್ ಪರ ರೆಡ್ಡಿ ಮತ್ತು ಕ್ಲಾಸೆನ್ ಸ್ಫೋಟಕ ಬ್ಯಾಟಿಂಗ್ ಮಾಡಿ ಹೋರಾಡಿದರು.

ಪಂತ್ ಮಿಂಚಿನಾಟ: ಗುರಿ ಬೆನ್ನತ್ತುವಾಗ ಲಖನೌ ಉತ್ತಮ ಆರಂಬವೇ ಪಡೆಯಿತು. ಮೊದಲಿಗೆ ಮಾರ್ಷ್ ಹಾಗೂ ಮಾರ್ಕ್ರಂ ಉತ್ತಮ ಜೊತೆಯಾಟ ನಿರ್ಮಿಸುವತ್ತ ಸಾಗುತ್ತಿದ್ದರು. ಸೆಟ್ ಆಗುವ ಮುಲಾಜಿಗೆ ಬಿದ್ದ ಮಾರ್ಷ್ ಸೆಟ್ ಆಗುವುದರೊಳಗೆ ವಿಕೆಟ್ ಒಪ್ಪಿಸಿದರು. ಮೂರನೇ ಕ್ರಮಾಂಕದಲ್ಲಿ ಬ್ಯಾಟಿಂಗ್‌ಗಿಳಿದ ರಿಷಭ್ ಪಂತ್ ತಮ್ಮ ಸ್ವಾಭಾವಿಕ ಆಟ ಬಿಟ್ಟು ನಿಧಾನವಾಗಿ ಇನ್ನಿಂಗ್ಸ್ ಕಟ್ಟಿದರು. ಮಾರ್ಕ್ರಂ ಔಪಚಾರಿಕತೆ ಮುಗಿಸಿಕೊಂಡ ನಂತರ ಸಿಕ್ಸರ್‌ಗಳನ್ನು ಬಾರಿಸುತ್ತಾ ಮಿಂಚಿದರು. ಮಾರ್ಕ್ರಂ ಔಟಾದರು. ಕೆಳಕ್ರಮಾಂಕದಲ್ಲಿ ಯಾರೊಬ್ಬರೂ ಹೇಳಿಕೊಳ್ಳುವ ಬ್ಯಾಟಿಂಗ್ ಮಾಡಲಿಲ್ಲ. ಸ್ಲಾಗ್ ಓವರ್‌ಗಳಲ್ಲಿ ಎರಡು ವಿಕೆಟ್ ಪಡೆದ ಹೈದರಾಬಾದ್ ಒತ್ತಡ ಹೇರಲೆತ್ನಿಸಿತು. ಆದರೆ ಪಂದ್ಯ ಬಹುತೇಕ ಕೈತಪ್ಪಿತ್ತು. ಉಳಿದ ರನ್‌ಗಳನ್ನು ಪಂತ್ ಬಾರಿಸಿದರು. ಕೊನೆಯ ಓವರ್‌ನಲ್ಲಿ 9 ರನ್ ಬೇಕಿದ್ದಾಗ 3 ಬೌಂಡರಿಗಳನ್ನು ಬಾರಿಸಿದ ಪಂತ್ ತಾಳ್ಮೆಯಿಂದ ಪಂದ್ಯ ಗೆಲ್ಲಿಸಿದವರಾದರು.



ಸಂಕ್ಷಿಪ್ತ ಸ್ಕೋರ್

- ಹೈದರಾಬಾದ್: 20 ಓವರ್‌ಗಳಲ್ಲಿ 156/9: ಕ್ಲಾಸೆನ್ 62, ರೆಡ್ಡಿ; ಶಮಿ 9/2, ಪ್ರಿನ್ಸ್ 34/2
- ಲಖನೌ: 19.5 ಓವರ್‌ಗಳಲ್ಲಿ 160/5: ಪಂತ್ 68★, ಮಾರ್ಕ್ರಂ 45; ಹರ್ಷ 16/2

ಕ್ಲಾಸೆನ್-ರೆಡ್ಡಿ ಆಸರೆ

ಬ್ಯಾಟಿಂಗ್ ಆಹ್ವಾನ ಪಡೆದಿದ್ದ ಹೈದರಾಬಾದ್ ಶಮಿಯ ಕರಾರುವಕ್ ಬೌಲಿಂಗ್ ದಾಳಿಗೆ ತತ್ತರಿಸಿತು. ಆರಂಭದಲ್ಲಿ 26 ರನ್‌ಗಳಿಗೆ 2 ವಿಕೆಟ್ ಕಳೆದುಕೊಂಡಿತ್ತು. ಇದಾದ ಬಳಿಕ ಒಂದಾದ ರೆಡ್ಡಿ ಮತ್ತು ಕ್ಲಾಸೆನ್ ದೊಡ್ಡ ಜೊತೆಯಾಟ ನಿರ್ಮಿಸಿದರು. ಒಂದು ಹಂತದಲ್ಲಿ ಸೆಟ್ ಆಗಿ ಒತ್ತಡ ನೀಗಿಸುವ ಔಪಚಾರಿಕತೆ ಮುಗಿಸಿಕೊಂಡ ನಂತರ ಇಬ್ಬರೂ ದಂಡಿಸಲಾರಂಭಿಸಿದರು. 10 ಓವರ್‌ಗಳಲ್ಲಿ 50 ರನ್ ದಾಟದ ಹೈದರಾಬಾದ್ 140 ದಾಟಿತು. ರೆಡ್ಡಿ, ಕ್ಲಾಸೆನ್ ವಿಕೆಟ್ ಒಪ್ಪಿಸಿದ ನಂತರ ಕೊನೆಯಲ್ಲಿ ಹೈದರಾಬಾದ್ 5 ವಿಕೆಟ್‌ಗಳನ್ನು ಕಳೆದುಕೊಂಡಿಯಿತು. ರೆಡ್ಡಿ 56, ಕ್ಲಾಸೆನ್ 62 ರನ್ ಗಳಿಸಿದರು.



ಕಿರುಸುದ್ದಿ

ಪ್ರಾಯೋಜಕತ್ವಕ್ಕೆ ಸಂಸ್ಥೆ ಅನುಮತಿ ಕಡ್ಡಾಯ

ಹೊಸದಿಲ್ಲಿ: ಭಾರತೀಯರ ಅಥ್ಲೀಟ್‌ಗಳು ವೈಯಕ್ತಿಕ ಪ್ರಾಯೋಜಕತ್ವ ಪಡೆಯುವ ಮುನ್ನ ದೇಶಿ ಅಥ್ಲೆಟಿಕ್ಸ್ ಸಂಸ್ಥೆಯ ಅನುಮತಿ ಪಡೆಯಬೇಕೆಂದು ತಿಳಿಸಲಾಗಿದೆ. ಭಾರತೀಯ ಅಥ್ಲೆಟಿಕ್ಸ್ ಕ್ರೀಡಾಪಟುಗಳಿಗೆ ಈಗಿನಿಂದ ಹೊಸ ನಿಯಮ ಜಾರಿಯಾಗಿದೆ. ಇತ್ತೀಚೆಗೆ ಹೊರಡಿಸಿದ ಪ್ರಕಟಣೆಯಲ್ಲಿ ಎಎಫ್‌ಐ, ಕ್ರೀಡಾಪಟುಗಳು ಮತ್ತು ಪ್ರಾಯೋಜಕರ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು, ಯಾವುದೇ ಸ್ಪಾನ್ಸರ್ ಅಥವಾ ಮೂರನೇ ವ್ಯಕ್ತಿಯೊಂದಿಗೆ ಒಪ್ಪಂದಕ್ಕೆ ಸೇರುವ ಮೊದಲು ಎಎಫ್‌ಐ ಅನುಮತಿ ಪಡೆಯಬೇಕು ಎಂದು ತಿಳಿಸಿದೆ.ಇದಲ್ಲದೆ, ಕ್ರೀಡಾಪಟು ಅಗತ್ಯ ಅನುಮತಿ ಪಡೆದಿರುವುದನ್ನು ಎಎಫ್‌ಐಯಿಂದ ದೃಢೀಕರಿಸಿದ ನಂತರವೇ ಪ್ರಾಯೋಜಕರು ಒಪ್ಪಂದ ಪ್ರಕ್ರಿಯೆಯನ್ನು ಮುಂದುವರಿಸಬೇಕು. ವಿನಂತಿ ಬಂದ ದಿನಾಂಕದಿಂದ ಮೂರು ದಿನಗಳ ಒಳಗೆ ಎಎಫ್‌ಐ ದೃಢೀಕರಣ ನೀಡುತ್ತದೆ ಎಂದು ಹೇಳಲಾಗಿದೆ. ಸೂಚನೆಯನ್ನು ಎಲ್ಲಾ ರಾಜ್ಯ ಘಟಕಗಳು, ಮುಖ್ಯ ಕೋಚ್ ರಾಧಿಕೃಷ್ಣನ್ ನಾಯರ್, ರಿಲಯನ್ಸ್ ಫೌಂಡೇಶನ್ ಯೂತ್ ಸ್ಪೋರ್ಟ್ಸ್, ಜೆಎಸ್‌ಡಬ್ಲ್ಯು ಸ್ಪೋರ್ಟ್ಸ್, ಒಎನ್‌ಜಿಸಿ ಸ್ಪೋರ್ಟ್ಸ್, ಗೋ ಸ್ಪೋರ್ಟ್ಸ್ ಫೌಂಡೇಶನ್, ಒಲಿಂಪಿಕ್ ಗೋಲ್ಡ್ ಕ್ವೆಸ್ಟ್ ಸೇರಿದಂತೆ ಇತರ ಪ್ರಾಯೋಜಕರಿಗೂ ಕಳುಹಿಸಲಾಗಿದೆ.

» ಎಲ್ಲಾ ರಾಜ್ಯ ಹಾಗೂ ವಿಭಾಗದ ಸಂಸ್ಥೆಗಳಿಗೆ ಅನ್ವಯ

ಕ್ಯಾಂಡಿಡೇಟ್ಸ್ ಚೆಸ್ | ಪ್ರಜ್ಞಾನಂದ ಪಂದ್ಯ ಡ್ರಾ

ಚೆಸ್: ದಿವ್ಯಾ, ವೈಶಾಲಿಗೆ ಜಯ





ಹೊಸದಿಲ್ಲಿ: ಜಯದ ಹುಡುಕಾಟದಲ್ಲಿದ್ದ ಭಾರತೀಯ ಗ್ರ್ಯಾಂಡ್‌ಮಾಸ್ಟರ್‌ಗಳು ಕ್ಯಾಂಡಿಡೇಟ್ಸ್ ಚೆಸ್ ಪಂದ್ಯಾವಳಿಯಲ್ಲಿ ಗೆಲುವಿನ ನಗೆ ಬೀರಿದರು. ವಿಶ್ವಕಪ್ ವಿಜೇತೆ ದಿವ್ಯಾ ದೇಶಮುಖ್ ಮತ್ತು ಭರವಸೆಯ ಗ್ರ್ಯಾಂಡ್‌ಮಾಸ್ಟರ್ ಆರ್. ವೈಶಾಲಿ ತಮ್ಮ ಮೊದಲ ಜಯಗಳನ್ನು ಸಾಧಿಸಿದರು. ಈ ಗೆಲುವಿನ ಮೂಲಕ ವೈಶಾಲಿ ಈಗ ಸಂಯುಕ್ತ ದ್ವಿತೀಯ ಸ್ಥಾನಕ್ಕೆ ಏರಿದ್ದು, ಗೆಲುವಿನ ಆಸೆ ಜೀವಂತವಾಗಿರಿಸಿದ್ದಾರೆ.

ಬಿಬಿಸಾರಾ ಮಾಡಿದ ಕೆಲವು ತಪ್ಪುಗಳನ್ನು ಸದುಪಯೋಗಪಡಿಸಿಕೊಂಡ ದಿವ್ಯ, 46ನೇ ನಡೆಯಲ್ಲಿ ಕ್ಯೂಎಫ್-4 ಆಡಿದರು. ಕ್ಯಾಟ್ರೆನಾ ಲ್ಯಾಗ್ನೊ ಅವರನ್ನು ಎದುರಿಸಿದ್ದ ಆರ್. ವೈಶಾಲಿ ಚಾಣಾಕ್ಷ ಪ್ರದರ್ಶನದೊಂದಿಗೆ ಪಂದ್ಯವನ್ನು ಗೆದ್ದುಕೊಂಡರು. ನಂತರ ಅವರು ನಿರಂತರವಾಗಿ ರಾಜನ ಮೇಲೆ ದಾಳಿ ನಡೆಸಿ ಜಯ ಸಾಧಿಸಿದರು. ಮಹಿಳಾ ವಿಭಾಗದಲ್ಲಿ ಅನ್ನಾ ಮುಝಿಚುಕ್, ಝು ಜಿನರ್ ಅವರನ್ನು ಸೋಲಿಸಿ ಅಗ್ರಸ್ಥಾನವನ್ನು ಕಾಯ್ದುಕೊಂಡರು.

ಇನ್ನೊಂದು ಪಂದ್ಯದಲ್ಲಿ ಆರ್ ಪ್ರಜ್ಞಾನಂದ ಹಾಗೂ ಹಿಕಾರು ನಕಾಮುರಾ ಡ್ರಾ ಮಾಡಿಕೊಂಡರು. ನಕಾಮುರಾ ಕ್ವೀನ್ ಪಾನ್ ಆರಂಭವನ್ನು ಆಯ್ಕೆ ಮಾಡಿಕೊಂಡರೆ, ಪ್ರಜ್ಞಾನಂದ ಸ್ಥಿರ ಆಟದೊಂದಿಗೆ ಎದುರಾಳಿ ಯೋಜನೆಗಳನ್ನು ವಿಫಲಗೊಳಿಸಿದರು. ಇಬ್ಬರೂ ಆಳವಾದ ತಯಾರಿಯನ್ನು ತೋರಿದರೂ ನಿರ್ಣಾಯಕ ಮುನ್ನಡೆ ಯಾರಿಗೂ ಸಿಗದೆ ಪಂದ್ಯ ಡ್ರಾಗೆ ಅಂತ್ಯವಾಯಿತು. ಕೊನೆಯ ಪಂದ್ಯದಲ್ಲಿ ಅನೀಶ್ ಗಿರಿ ಮತ್ತು ಮಥಿಯಾಸ್ ಬ್ಲೂಬಾಮ್ ಕೂಡ ಡ್ರಾ ಮಾಡಿಕೊಂಡರು.

ಅಗ್ರಸ್ಥಾನದಲ್ಲೇ ಉಳಿದ ಸಿಂದಾರೊವ್: ತಮ್ಮ ಸ್ವಾಭಾವಿಕ ಆಟ ಮುಂದುವರಿಸಿರುವ ಉಜ್ಬೇಕಿಸ್ತಾನದ ಗ್ರ್ಯಾಂಡ್‌ಮಾಸ್ಟರ್ ಜವೊಖಿರ್ ಸಿಂದಾರೊವ್ ಸೈಪ್ರಸ್‌ನಲ್ಲಿ ನಡೆಯುತ್ತಿರುವ ಫೈಡೆ ಕ್ಯಾಂಡಿಡೇಟ್ಸ್ ಟೂರ್ನಿಯಲ್ಲಿ ಪಾರುಪತ್ಯ ಮುಂದುವರಿಸಿದ್ದಾರೆ. ಆರನೇ ಸುತ್ತಿನಲ್ಲಿ ಚೀನಾದ ವೇಯಿ ಯಿಯನ್ನು ಮಣಿಸಿದ ಸಿಂದಾರೊವ್, ಆರು ಪಂದ್ಯಗಳಿಂದ 5.5 ಅಂಕಗಳೊಂದಿಗೆ ಅಗ್ರಸ್ಥಾನದಲ್ಲಿದ್ದಾರೆ.

ಆಟದ ಆರಂಭದಲ್ಲೇ ಪಾನ್ ರಚನೆ ಹಾನಿಗೊಳಗಾದರೂ, ಸಿಂದಾರೊವ್ ಶೀಘ್ರದಲ್ಲೇ ಓಪನ್ ಜಿ-ಫೈಲ್ ಅನ್ನು ಹಿಡಿದು ಚುರುಕಾದ ಆಟ ಪ್ರದರ್ಶಿಸಿದರು. ಎದುರಾಳಿ ವೇಯಿ ಯಿ ಹೆಚ್-4 ಮತ್ತು ಕಿಂಗ್‌ಸೈಡ್ ದಾಳಿಗಳ ಮೂಲಕ ಒತ್ತಡ ಸೃಷ್ಟಿಸಲು ಪ್ರಯತ್ನಿಸಿದರೂ, ಸಿಂದಾರೊವ್ ಆರ್‌ಜಿ-8 ಮೂಲಕ ಪ್ರತಿಕ್ರಿಯಿಸಿ ಕ್ವೀನ್‌ಸೈಡ್ ವಿಸ್ತರಣೆ ಮಾಡಿದರು. ವೇಯಿಯ ಸಂಯೋಜನೆಯನ್ನು ದುರ್ಬಲಗೊಳಿಸಿದರು. ಮಧ್ಯಭಾಗದ ಆಟದಲ್ಲಿ ಅವರ ರಾಣಿ ಮತ್ತು ಬಿಷಪ್ ಹಾಗೂ ಕಿಂಗ್‌ಸೈಡ್ ಚೌಕಗಳ ಮೇಲೆ ಒತ್ತಡ ತಂದು ಪ್ರಾಬಲ್ಯ ಸಾಧಿಸಿದವು.

ಪಂಜಾಬ್‌ಗೆ ಹ್ಯಾಟ್ರಿಕ್ ಗೆಲುವಿನ ಹಂಬಲ

ಕೋಲ್ಕತ್ತಾ: ಸೋಲಿನ ಸರಪಳಿಯಲ್ಲಿ ಸಿಲುಕಿಕೊಂಡಿರುವ ಕೋಲ್ಕತ್ತಾ ನೈಟ್ ರೈಡರ್ಸ್ ಹಾಗೂ ಗೆಲುವಿನ ವಿಶ್ವಾಸ ಹೊತ್ತಿರುವ ಪಂಜಾಬ್ ಕಿಂಗ್ಸ್ ತಂಡಗಳು ಸೋಮವಾರದ ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯ ಪಂದ್ಯದಲ್ಲಿ ಮುಖಾಮುಖಿಯಾಗಲಿವೆ.

ಶ್ರೇಯಸ್ ಅಯ್ಯರ್ ನೇತೃತ್ವದಲ್ಲಿ ಕಳೆದ ಆವೃತ್ತಿಯಿಂದಲೂ ಅತ್ಯುತ್ತಮ ಪ್ರದರ್ಶನ ನೀಡಿರುವ ಪಂಜಾಬ್ ತನ್ನ ಕೊನೆಯ ಪಂದ್ಯದಲ್ಲಿ ಚೆನ್ನೈ ತಂಡವನ್ನು ಸೋಲಿಸಿದೆ. ಇತ್ತ ಕೆಕೆಆರ್ ಆಡಿರುವ ಎರಡೂ ಪಂದ್ಯಗಳಲ್ಲಿ ಸೋತಿದೆ. ಐಪಿಎಲ್ ಶುರುವಾಗಿ ವಾರವಷ್ಟೇ ಕಳೆದರೂ ಪಂದ್ಯಾವಳಿಯಲ್ಲಿ ಅಂಕಪಟ್ಟಿಯ ಪೈಪೋಟಿ ಶುರುವಾದಂತಿದ್ದು, ಪಂಜಾಬ್ ಪೈಪೋಟಿಯಲ್ಲಿದೆ. ಬಲಿಷ್ಠ ಬೌಲಿಂಗ್ ಮತ್ತು ಸಮತೋಲಿತ ಬ್ಯಾಟಿಂಗ್ ವಿಭಾಗ ಹೊಂದಿರುವ ಪಂಜಾಬ್ ಸವಾಲಿಗೆ ಸಿದ್ಧವಾದರೆ ಇತ್ತ ಬ್ಯಾಟಿಂಗ್ ಪಡೆಯನ್ನು ಹೊಂದಿದ್ದರೂ ಬೌಲಿಂಗ್‌ನಲ್ಲಿ ಭಾರೀ ಹಿನ್ನಡೆ ಅನುಭವಿಸುತ್ತಿದೆ.

ಆತ್ಮವಿಶ್ವಾಸದಲ್ಲಿ ಪಂಜಾಬ್: ಎರಡು ಗೆಲುವಿನ ವಿಶ್ವಾಸದಲ್ಲಿ ಪಂಜಾಬ್ ಕಿಂಗ್ಸ್ ಕಾಣಿಸಿಕೊಂಡಿದೆ. ಬಲಿಷ್ಠ ಬೌಲಿಂಗ್ ಪಡೆಯೊಂದಿಗೆ ಬ್ಯಾಟಿಂಗ್‌ನಲ್ಲೂ ಅದ್ಭುತ ಆಟಗಾರರನ್ನು ಪಂಜಾಬ್ ಹೊಂದಿದೆ. ಕಳೆದ ಪಂದ್ಯದಲ್ಲಿ ಕುಸಿತ ಅನುಭವಿಸಿದ್ದರೂ ಕೂಪರ್ ಕೊನೊಲಿ ಉತ್ತಮ ಬ್ಯಾಟಿಂಗ್‌ನೊಂದಿಗೆ ಪಂದ್ಯ ಗೆಲ್ಲಿಸಿದ್ದಾರೆ. ಪ್ರಭಸಿಮ್ರನ್ ಸಿಂಗ್, ಶ್ರೇಯಸ್ ಅಯ್ಯರ್ ಲಯದಲ್ಲಿದ್ದಾರೆ. ಆದಾಗ್ಯೂ ಪ್ರಿಯಾಂಶ್ ಆರ್ಯ, ವಧೇರಾ ಅಂಥವರು ಲಯಕ್ಕೆ ಬರಬೇಕಿದೆ. ಬೌಲಿಂಗ್‌ನಲ್ಲಿ ವಿವಿಧ ಆಟಗಾರರು ಭರವಸೆ ಹೆಚ್ಚಿಸಿದ್ದಾರೆ.

ಕೆಕೆಆರ್‌ಗೆ ಗೆಲುವಿನ ತವಕ: ಇನ್ನು ಕೆಕೆಆರ್ ಬ್ಯಾಟಿಂಗ್‌ನಲ್ಲಿ ಉತ್ತಮ ಪ್ರದರ್ಶನ ನೀಡಿದರೂ ಬೌಲಿಂಗ್‌ನಲ್ಲಿ ಹಿನ್ನಡೆ ಅನುಭವಿಸುತ್ತಿದೆ. ತಂಡದಲ್ಲಿ ಗಾಯದಿಂದಾಗಿ ವಿವಿಧ ಆಟಗಾರರು ಆಡುತ್ತಿಲ್ಲ. ಅದರಲ್ಲೂ ಬೌಲಿಂಗ್ ವಿಭಾಗದವರೆ ಗೈರಾಗಿರುವುದು ತಂಡಕ್ಕೆ ಹೊಡೆತ ಬಿದ್ದಿದೆ. ಅಲೆನ್ ಉತ್ತಮ ಲಯದಲ್ಲಿದ್ದಾರೆ. ರಹಾನೆ, ಅಂಗ್ರಿಶ್ ಕೂಡ ಸ್ಫೋಟಕ ಬ್ಯಾಟಿಂಗ್ ಮಾಡಿದ್ದಾರೆ. ರಿಂಕು ಸಿಂಗ್, ನರೈನ್ ಕೂಡ ಬ್ಯಾಟಿಂಗ್ ಮಾಡಬಲ್ಲರು. ಬೌಲಿಂಗ್‌ನಲ್ಲಿ ವೈಭವ್ ದುಬಾರಿಯಾಗಿದ್ದಾರೆ. ಸ್ಪಿನ್ನರ್‌ಗಳಾದ ವರುಣ್ ಮತ್ತು ನರೈನ್ ಹೆಚ್ಚಿನ ವಿಕೆಟ್‌ಗಳನ್ನು ಕಿತ್ತಿಲ್ಲ.

ಪಂದ್ಯದ ವಿವರ

- ಯಾವಾಗ?: ಸೋಮವಾರ
- ಎಲ್ಲಿ: ಈಡನ್ ಗಾರ್ಡನ್ಸ್, ಕೋಲ್ಕತ್ತಾ
- ಸಮಯ: ಸಂಜೆ 7:30
- ಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೋ ಹಾಟ್‌ಸ್ಟಾರ್



ಪಿಚ್: ಕೋಲ್ಕತ್ತಾದ ಈಡನ್ ಗಾರ್ಡನ್ಸ್ ಕ್ರೀಡಾಂಗಣದಲ್ಲಿ ಪಂದ್ಯ ನಡೆಯಲಿದೆ. ಈ ಹಿಂದೆ ನಡೆದಿರುವ ಪಂದ್ಯಗಳಲ್ಲಿ ಮಿಶ್ರ ಫಲ ಸಿಕ್ಕಿದೆ. ಬ್ಯಾಟರ್‌ಗಳಿಗೆ ಉತ್ತಮ ಅವಕಾಶವಿದ್ದರೂ ದೊಡ್ಡ ಸ್ಕೋರ್ ಕಲೆ ಹಾಕಲಾಗಲ್ಲ. ಎರಡನೇ ಇನ್ನಿಂಗ್ಸ್‌ನಲ್ಲಿ ಇಬ್ಬನಿ ಕಾಟವೂ ಇರಲಿದೆ.

ಉದ್ದ ಜಿಗಿತ: ಮುರಳಿ, ಅಂಸಿ ಚಾಂಪಿಯನ್ಸ್

ಹೊಸದಿಲ್ಲಿ: ಭಾರತೀಯ ಅಥ್ಲೆಟಿಕ್ಸ್ ಸರಣಿ-1ರ ಉದ್ದ ಜಿಗಿತ ಸ್ಪರ್ಧೆಯಲ್ಲಿ ದೇಶಿ ಸ್ಟಾರ್‌ಗಳಾದ ಮುರಳಿ ಶ್ರೀಶಂಕರ ಮತ್ತು ಆಂಸಿ ಸೋಜನ್ ಕ್ರಮವಾಗಿ ಪುರುಷ ಮತ್ತು ಮಹಿಳಾ ವಿಭಾಗಗಳಲ್ಲಿ ಚಾಂಪಿಯನ್ ಪಟ್ಟಗಳನ್ನು ತಮ್ಮದಾಗಿಸಿಕೊಂಡರು. 2022ರ ಏಷ್ಯನ್ ಗೇಮ್ಸ್ ಬೆಳ್ಳಿ ಪದಕ ವಿಜೇತ ಮುರಳಿ ಶ್ರೀಶಂಕರ ಉತ್ತಮ ಪ್ರದರ್ಶನ ನೀಡಿದರು. ಆರು ಪ್ರಯತ್ನಗಳಲ್ಲಿ ಐದು ಬಾರಿ ಎಂಟು ಮೀಟರ್ ಗಡಿ ದಾಟಿದರು. ಮೂರನೇ ಪ್ರಯತ್ನದಲ್ಲಿ 8.13 ಮೀಟರ್ ಜಿಗಿದು ಸ್ಪರ್ಧೆಯಲ್ಲಿ ಸ್ಪಷ್ಟ ಮುನ್ನಡೆ ಸಾಧಿಸಿದರು. ಬಿಹಾರದ ಸನ್ನಿ ಕುಮಾರ್ 7.90 ಮೀಟರ್ ಜಿಗಿದು ಎರಡನೇ ಸ್ಥಾನ ಪಡೆದರು.

ಮಹಿಳೆಯರ ವಿಭಾಗ: ಮಹಿಳಾ ವಿಭಾಗದಲ್ಲಿ ರಿಲಯನ್ಸ್ ತಂಡದ ಆಂಸಿ ಸೋಜನ್ ಸಂಪೂರ್ಣ ಪ್ರಾಬಲ್ಯ ತೋರಿದರು. ಮೊದಲ ಪ್ರಯತ್ನದಲ್ಲೇ 6.54 ಮೀಟರ್ ಜಿಗಿದು ಮುನ್ನಡೆ ಸಾಧಿಸಿದರು. ಆದರೆ 2025ರ ಏಷ್ಯನ್ ಚಾಂಪಿಯನ್‌ಷಿಪ್ ಕಂಚಿನ ಪದಕ ವಿಜೇತೆ ಶೈಲಿ ಸಿಂಗ್ ನಿರೀಕ್ಷಿತ ಮಟ್ಟದ ಪ್ರದರ್ಶನ ನೀಡಲಿಲ್ಲ. ಶೈಲಿ ಮೊದಲ ಪ್ರಯತ್ನದಲ್ಲಿ 6.52 ಮೀಟರ್ ಜಿಗಿದರೂ, ನಂತರದ ನಾಲ್ಕು ಪ್ರಯತ್ನಗಳಲ್ಲಿ ಫೌಲ್ ಮಾಡಿದರು. ಪಕ್ಕದಿಂದ ಕೋಚ್ ಅಂಜು ಬಾಬಿ ಜಾರ್ಜ್ ಸಲಹೆ ಹಾಗೂ ಪ್ರೋತ್ಸಾಹ ನೀಡಿದರೂ, ಕೊನೆಯ ಪ್ರಯತ್ನದಲ್ಲಿ ಸರಿಯಾದ ಟೇಕ್-ಆಫ್ ಸಾಧಿಸಲು ವಿಫಲರಾದ ಶೈಲಿ ಕೇವಲ 4.99 ಮೀಟರ್ ಮಾತ್ರ ಜಿಗಿದು ನಿರಾಶೆ ಮೂಡಿಸಿದರು.

» ಭಾರತೀಯ ಅಥ್ಲೆಟಿಕ್ಸ್ ಸರಣಿಯಲ್ಲಿ ಕಮಾಲ್

ರಾಜಸ್ಥಾನಕ್ಕೆ 6 ರನ್‌ಗಳ ರೋಚಕ ಗೆಲುವು

ಅಹಮದಾಬಾದ್: ಕೊನೆಯ ಓವರ್‌ನಲ್ಲಿ ಮುಕ್ತಾಯಗೊಂಡ ರೋಮಾಂಚನಕಾರಿ ಪಂದ್ಯವನ್ನು ರಾಜಸ್ಥಾನ ರಾಯಲ್ಸ್ ತಂಡ 6 ರನ್‌ಗಳಿಂದ ಗೆಲುವುಸಾಧಿಸಿತು. ಅನಿರೀಕ್ಷಿತಪ್ರದರ್ಶನನೀಡಿದತುಷಾರ್ ದೇಶಪಾಂಡೆಕೊನೆಯ ಓವರ್‌ನಲ್ಲಿ ಗುಜರಾತ್ ತಂಡಕ್ಕೆ ಕಡಿವಾಣ ಹಾಕಿ ಗೆಲ್ಲಿಸಿದರು. ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ್ದ ರಾಜಸ್ಥಾನ ರಾಯಲ್ಸ್ 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 210 ರನ್ ಗಳಿಸಿತ್ತು. ತಂಡದ ಪರ ಜೈಸ್ವಾಲ್ 55, ವೈಭೌವ್ 31 ಮತ್ತು ಜುರೇಲ್ 75 ರನ್‌ಗಳಿಸಿದ್ದರು. ರಬಾಡ 2 ವಿಕೆಟ್ ಕಿತ್ತಿದ್ದರು. ಗುರಿ ಬೆನ್ನತ್ತಿದ ಗುಜರಾತ್ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 204 ರನ್ ಗಳಿಸಿತು. ಸುದರ್ಶನ್ 73 ರನ್ ಗಳಿಸಿ ಹೋರಾಟ ನಡೆಸಿದರು. ರಬಾಡ ಹೋಪ್ ಉಳಿಸಿದ್ದಾದರೂ ಪಂದ್ಯವನ್ನು ಗೆಲ್ಲಿಸಲಾಗಲಿಲ್ಲ. ರವಿ ಬಿಷ್ಣೋಯ್ 4 ವಿಕೆಟ್ ಕಿತ್ತರು. ಜುರೇಲ್, ಸುದರ್ಶನ್ ತಮ್ಮ ಭರ್ಜರಿ ಬ್ಯಾಟಿಂಗ್‌ನೊಂದಿಗೆ ಪಂದ್ಯದ ಕೇಂದ್ರಬಿಂದುವಾಗಿದ್ದರು. ರಾಜಸ್ಥಾನ ಪರ ರವಿ ಬಿಷ್ಣೋಯ್ 4 ವಿಕೆಟ್ ಕಿತ್ತು ಹೀರೋ ಅನ್ನಿಸಿಕೊಂಡರು. ಕೊನೆಯ 2 ಓವರ್‌ಗಳಲ್ಲಿ ಕರಾರುವಾಕ್ ದಾಳಿ ಸಂಘಟಿಸಿದ ದೇಶಪಾಂಡೆ ಹಾಗೂ ಆರ್ಚರ್ ಗೆಲುವಿನ ರೂವಾರಿ ಎನಿಸಿಕೊಂಡರು.

ರೋಚಕ ಅಂತ್ಯ: ಗುರಿ ಬೆನ್ನತ್ತುವಾಗ ಗುಜರಾತ್ ಸುದರ್ಶನ್ ಅವರ ಸ್ಫೋಟಕ ಬ್ಯಾಟಿಂಗ್ ಆಸರೆ ಪಡೆಯಿತು. ಆರಂಭದಿಂದಲೂ ತಮ್ಮ ಆಕ್ರಮಣಕಾರಿ ಬ್ಯಾಟಿಂಗ್ ಶೈಲಿಯೊಂದಿಗೆ ಮಿಂಚಿದ ಅವರು, ಪಂದ್ಯವನ್ನು ತಂದುಕೊಟ್ಟರು. ಮಧ್ಯಮ ಕ್ರಮಾಂಕದಲ್ಲಿ ಹೆಚ್ಚಿನ ಕೊಡುಗೆ ಯಾರಿಂದಲೂ ಬರಲಿಲ್ಲ. ಸುದರ್ಶನ್ 73ಕ್ಕೆ ವಿಕೆಟ್ ಒಪ್ಪಿಸಿದರು. ಕೊನೆಯ ನಾಲ್ಕು ಓವರ್‌ಗಳಲ್ಲಿ 30 ರನ್ ಬೇಕಿತ್ತು. ರಾಶಿದ್ ಖಾನ್ ಮತ್ತು ರಬಾಡ ಸ್ಫೋಟಕ ಸಿಕ್ಸರ್‌ಗಳೊಂದಿಗೆ ಪಂದ್ಯ ಹೊಳ್ಳಿಸಿದರು. 2 ಓವರ್‌ಗಳಲ್ಲಿ 15 ರನ್ ಬೇಕಿತ್ತು. ದಾಳಿಗಿಳಿದ ಆರ್ಚರ್ 4 ರನ್ ಮಾತ್ರ ನೀಡಿದರು. ಕೊನೆಯ ಓವರ್‌ನಲ್ಲಿ 11 ರನ್ ಬೇಕಿತ್ತು. ದೇಶಪಾಂಡೆ ಅಲ್ಲಿ ರಶೀದ್ ಖಾನ್ ವಿಕೆಟ್ ಪಡೆದಿದ್ದಲ್ಲದೆ 4 ರನ್ ಮಾತ್ರ ನೀಡಿ ಪಂದ್ಯ ಗೆಲ್ಲಿಸಿದರು.




ಸಂಕ್ಷಿಪ್ತ ಸ್ಕೋರ್

- ರಾಜಸ್ಥಾನ 20 ಓವರ್‌ಗಳಲ್ಲಿ 210/6; ಜುರೇಲ್ 75, ಜೈಸ್ವಾಲ್ 55; ರಬಾಡ 42/2
- ಗುಜರಾತ್ 20 ಓವರ್‌ಗಳಲ್ಲಿ 204/8; ಸುದರ್ಶನ್ 73, ಬಟ್ಲರ್ 26; ಬಿಷ್ಣೋಯ್ 41/4

ಪದಬಂಧ 5945

» ರಾಜಾ ಸಂಗಮೇಶ ಹಿರೇಮಠ



ಎಡದಿಂದ ಬಲಕ್ಕೆ
2.ನೀರಿನಲ್ಲಿ ಮುಳುಗದಂತೆ ಮಾಡು (3)
5.ಮಹಾಜನರು ಸಲ್ಲಿಸಿದ ಪಂಚನಾಮೆ (4)
6.ಶಾರೀರಿಕ ವ್ಯಾಯಾಮವಿಲ್ಲಿ ತಿರುಗಿದೆ (4)
7.ನಿರ್ದಿಷ್ಟ ಗಡಿಗಳೊಳಗಿನ ಭೂಭಾಗ (2)
8.ಚರ್ಮದ ಊದುಚೀಲವಿದು (2)
10.ಕಪಟಧ್ಯಾನಕ್ಕೆ ಹೆಸರಾದ ಪಕ್ಷಿ ತಿರುಗಿದೆ (2)
12.ಶಿವನನ್ನು ಪ್ರಾರ್ಥಿಸಿ ಪತಿಯನ್ನು ಪಡೆದವಳು (2)
13.ಹರನ ನಡುವೆ ಸೈನ್ಯದ ಅಧಿಕಾರಿಯಿದ್ದಾನೆ (4)
15.ಸ್ಥಿರವಾದ ಉದ್ದೇಶ-ಧ್ಯೇಯವಿದು (4)
16.ನೆನಪು ಮಾಡಿಕೊಳ್ಳುವಿಕೆ ತಿರುಗಿದೆ (3)

ಮೇಲಿನಿಂದ ಕೆಳಕ್ಕೆ
1.ಲೌಕಿಕ ವಿಷಯಗಳ ಬಂಧನ (4)
2.ದೇವರ ವಿಗ್ರಹವನ್ನಿಟ್ಟು ಎಳೆಯುವ ರಥ (2)
3.ತಿರುಗು-ಪ್ರದಕ್ಷಿಣೆ ಹಾಕು (2)
4.ಮೋತಿಯ ನಡುವೆ ವಂಚಕಿಯಿದ್ದಾಳೆ (4)
7.ತತ್ವೋಪದೇಶ ಮಾಡುವವನು (3)
9.ಈಶ ದಿಶೆಯ ಒಡೆಯ-ಇಂದ್ರ (3)
11.ವೈಜಯಂತಿಯ ಇನ್ನೊಂದು ಹೆಸರು (4)
12.ಆಸೆ-ಕ್ರಿಯೆಗೆ ಸಂಬಂಧಿಸಿದ ಸ್ವಭಾವವಿದು (4)
14.ದೇವತೆಯಿಲ್ಲಿ ತಲೆಕೆಳಗಾಗಿದ್ದಾನೆ (2)
15.ಹೂವು-ಹಣ್ಣುಗಳ ಗೊಂಚಲು (2)

5944 ಉತ್ತರ

ಎಡದಿಂದ ಬಲಕ್ಕೆ:
1.ಪುಲ್ಲಶರ 3.ಬಿಗಿಮೊಗ
5.ಪಟಕ 6.ಮಿಣುಕು
8.ವಿವರ್ಣ 10.ಆಶಯ
11.ಶಕಲ 15.ಮಾಧವ
16.ನವಧಾನ್ಯ
17.ಲೇಸುಗಾರ

ಮೇಲಿನಿಂದ ಕೆಳಕ್ಕೆ :
1.ಪುರೋಗಾಮಿ 2.ರಪಣ
3.ಬಿಕರಿ 4.ಗಜಕರ್ಣ
7.ಶರಣು 9.ವಣಿಕ
10.ಆಯುರ್ಮಾನ
12.ಶಸ್ತ್ರಾಗಾರ
13.ಸಾಮಾನ್ಯ 14.ಲೇವಡಿ

ಕಿರುಸುದ್ದಿ

ಯಕ್ಷಗಾನ ಕಲಾವಿದರಿಗೆ ಸನ್ಮಾನ



◆ **ಸಿದ್ದಾಪುರ:** ತಾಲೂಕಿನ ಹಾರ್ಸಿಕಟ್ಟಾ ಸಮೀಪದ ವಡಗೇರಿಯ ಭಾಸ್ಕರ ಗೌಡ ಅವರ ಮನೆಯಂಗಳದಲ್ಲಿ ಕ್ಷೇತ್ರ ಸಿಗಂದೂರು ಯಕ್ಷಗಾನ ಮೇಳದವರಿಂದ ನಡೆದ ಹರಕೆ ಯಕ್ಷಗಾನ ಬಯಲಾಟದ ಸಂದರ್ಭದಲ್ಲಿ ಯಕ್ಷಗಾನ ಕಲಾವಿದರಾದ ಉದಯ ಹೆಗಡೆ ಕಡಬಾಳ ಹಾಗೂ ನರಸಿಂಹ ಚಿಟ್ಟಾಣಿ ಅವರನ್ನು ಮಂಗಳವಾರ ಸನ್ಮಾನಿಸಿ ಗೌರವಿಸಲಾಯಿತು. ಟಿಎಸ್‌ಎಸ್ ನಿರ್ದೇಶಕ ರವೀಂದ್ರ ಹೆಗಡೆ ಹಿರೇಕೈ ಅಧ್ಯಕ್ಷತೆವಹಿಸಿದ್ದರು. ಪತ್ರಕರ್ತ ನಾಗರಾಜ ಮತ್ತಿಗಾರ, ಹಾರ್ಸಿಕಟ್ಟಾ ವಿಎಸ್‌ಎಸ್ ನಿರ್ದೇಶಕ ಅನಂತ ಹೆಗಡೆ ಹೊಸಗದ್ದೆ, ನಾಟಿವೈದ್ಯ ಕೆ.ಟಿ.ಗೌಡ ಮಾದಲಮನೆ, ವರ್ತಕ ಶ್ರೀಕಾಂತ ಶಾನಭಾಗ, ಈರಾ ಗೌಡ, ಹಾರ್ಸಿಕಟ್ಟಾ ವಿಎಸ್‌ಎಸ್‌ನ ಮುಖ್ಯಕಾರ್ಯನಿರ್ವಾಹಕ ದಿನೇಶ ಹೆಗಡೆ ಚಳ್ಳೆಹದ್ದ, ಯಕ್ಷಗಾನ ಸಂಘಟಕ ವಿ.ಆರ್.ಗೌಡ ಹೇರೂರು, ಭಾಸ್ಕರ ಗೌಡ ವಡಗೇರಿ ಇತರರಿದ್ದರು. ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ರಮೇಶ ಹೆಗಡೆ ಹಾರ್ಸಿಮನೆ ಪ್ರಾಸ್ತಾವಿಕ ಮಾತನಾಡಿದರು. ಗುರುಮೂರ್ತಿ ಶಾನಭಾಗ ಹಾರ್ಸಿಕಟ್ಟಾ ಸನ್ಮಾನ ಪತ್ರ ವಾಚಿಸಿದರು. ಸೋವಿನಕೊಪ್ಪ ಗ್ರಾಪಂ ಕಾರ್ಯದರ್ಶಿ ಆರ್.ಬಿ.ಗೌಡ ಹೊಸ್ಕೊಪ್ಪ ಕಾರ್ಯಕ್ರಮ ನಿರೂಪಿಸಿದರು. ನಂತರ ಕ್ಷೇತ್ರ ಸಿಗಂದೂರು ಯಕ್ಷಗಾನ ಮೇಳದವರಿಂದ ವಸಂತಗಾನ ಹಾಗೂ ಮೀನಾಕ್ಷಿ ಕಲ್ಯಾಣ ಯಕ್ಷಗಾನ ಪ್ರದರ್ಶನಗೊಂಡಿತು. ಅತಿಥಿ ಕಲಾವಿದರಾಗಿ ಪರಮೇಶ್ವರ ನಾಯ್ಕ ಕಾನಗೋಡ ಹಾಗೂ ವೆಂಕಟಗಿರಿ ಹೆಗಡೆ ಹಾರ್ಸಿಮನೆ ಪಾಲ್ಗೊಂಡಿದ್ದರು.

ಮರಳು ಅಕ್ರಮ ಸಾಗಾಟ: ವಶ

◆ **ಹಾವೇರಿ:** ಪರವಾನಗಿ ಪಡೆದುಕೊಳ್ಳದೇ ನದಿ ಪಾತ್ರದಲ್ಲಿ ಅಕ್ರಮವಾಗಿ ಮರಳು ಸಾಗಾಟ ಮಾಡುತ್ತಿದ್ದ ಟ್ರ್ಯಾಕ್ಟರ್‌ನ್ನು ಗುತ್ತಲ ಠಾಣೆಯ ಪೊಲೀಸರು ವಶಪಡಿಸಿಕೊಂಡಿರುವ ಘಟನೆ ನಡೆದಿದೆ. ತಾಲೂಕಿನ ಹರಳಹಳ್ಳಿ ಗ್ರಾಮದ ತುಂಗಭದ್ರಾ ನದಿ ಪಾತ್ರದಲ್ಲಿ ಕಳ್ಳತನದಿಂದ ಮರಳನ್ನು ತುಂಬಿಕೊಂಡು ಗುತ್ತಲ ಹೊಂಡದ ಹತ್ತಿರ ಟ್ರ್ಯಾಕ್ಟರ್‌ನಲ್ಲಿ ಸಾಗಾಟ ಮಾಡುತ್ತಿದ್ದಾಗ ಸಿಕ್ಕಿಬಿದ್ದಿದ್ದಾರೆ. ಟ್ರ್ಯಾಕ್ಟರ್ ಚಾಲಕ ವಾಹನ ಬಿಟ್ಟು ಪರಾರಿಯಾಗಿದ್ದು, ಚಾಲಕ ಮತ್ತು ಮಾಲಕನ ವಿರುದ್ಧ ದೂರು ದಾಖಲಿಸಲಾಗಿದೆ. ಗುತ್ತಲ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವ್ಯಕ್ತಿ ಅನುಮಾನಾಸ್ಪದ ಸಾವು

◆ **ಹಾವೇರಿ:** ಬಹಿರ್ದೆಸೆಗೆಂದು ಕಬ್ಬಿನ ಗದ್ದೆಗೆ ತೆರಳಿದ್ದ ವ್ಯಕ್ತಿಯೊಬ್ಬರು ಅನುಮಾನಾಸ್ಪದವಾಗಿ ಸಾವನ್ನಪ್ಪಿರುವ ಘಟನೆ ಶಿಗ್ಗಾವಿ ತಾಲೂಕು ಚಂದಾಪುರ ಗ್ರಾಮದಲ್ಲಿ ನಡೆದಿದೆ. ಹಾನಗಲ್ ತಾಲೂಕು ಗುರುರಾಯಪಟ್ಟಣ ನಿವಾಸಿ ನಾಗಪ್ಪ ಪುಟ್ಟಪ್ಪ ಲಮಾಣಿ (38) ಮೃತಪಟ್ಟಿರುವ ವ್ಯಕ್ತಿ ಎಂದು ಗುರುತಿಸಲಾಗಿದೆ. ಈತ ಚಂದಾಪುರ ತಾಂಡಾ ಬಳಿಯ ನಿಂಗಪ್ಪ ಕುಂಬಾರ ಎಂಬುವವರ ಕಬ್ಬಿನ ಗದ್ದೆಗೆ ಬಹಿರ್ದೆಸೆಗೆಂದು ಹೋದಾಗ ಮೃತಪಟ್ಟಿದ್ದಾನೆ. ಮೃತರ ಸಾವಿನಲ್ಲಿ ಅನುಮಾನವಿದ್ದು, ಮುಂದಿನ ಕಾನೂನು ಕ್ರಮ ಕೈಗೊಳ್ಳುವಂತೆ ಮೃತನ ಸಂಬಂಧ್ಯಾಮಣ್ಣ ಲಮಾಣಿ ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ. ಬಂಕಾಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಯುವಕ ಆತ್ಮಹತ್ಯೆ

◆ **ಹಾವೇರಿ:** ಯುವಕನೋರ್ವ ತನ್ನಷ್ಟಕ್ಕೆ ತಾನೇ ಮಾನಸಿಕ ಖಿನ್ನತೆಗೆ ಒಳಗಾಗಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಇಲ್ಲಿಯ ಮುಲ್ಲಾನಕೇರಿಯ ಸಿದ್ದರಾಮೇಶ್ವರ ಪ್ರೌಢ ಶಾಲೆಯ ಆವರಣದಲ್ಲಿ ನಡೆದಿದೆ. ಮುಲ್ಲಾನಕೇರಿ ನಿವಾಸಿ ಸುನೀಲ ಬಸವರಾಜ ನವಲಗುಂದ (22) ಮೃತ ಯುವಕ. ಈತ ಮದ್ಯ ವ್ಯಸನಿಯಾಗಿದ್ದು, ತನ್ನಷ್ಟಕ್ಕೆ ತಾನೇ ಮಾನಸಿಕ ಮಾಡಿಕೊಂಡು ಮುಲ್ಲಾನಕೇರಿ ಸಿದ್ದರಾಮೇಶ್ವರ ಪ್ರೌಢ ಶಾಲಾ ಆವರಣದಲ್ಲಿ ಸಾಗುವಾನಿ ಮರದ ಟೊಂಗೆಗೆ ಹಗ್ಗದಿಂದ ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾಗಿದ್ದಾರೆ ಎಂದು ಮೃತನ ಸಹೋದರ ಯಲ್ಲಪ್ಪ ನವಲಗುಂದ ಪೊಲೀಸರ ದೂರಿನಲ್ಲಿ ತಿಳಿಸಿದ್ದಾರೆ. ಹಾವೇರಿ ಶಹರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಕಾರವಾರ: ಜಿಲ್ಲಾಧಿಕಾರಿ ಸಭಾಂಗಣದಲ್ಲಿ ಜಿಲ್ಲಾ ಮಟ್ಟದ ಅಧಿಕಾರಿಗಳು ಹಾಗೂ ವಿವಿಧ ಇಲಾಖೆಯ ಸಾರ್ವಜನಿಕ ಮಾಹಿತಿ ಅಽಕಾರಿಗಳಿಗೆ ಆಯೋಜಿಸಿದ್ದ ಮಾಹಿತಿ ಹಕ್ಕು ಕಾಯ್ದೆ ಕುರಿತು ಜಾಗೃತಿ ಕಾರ್ಯಗಾರ ಹಾಗೂ ಸಂವಾದ ಕಾರ್ಯಕ್ರಮದಲ್ಲಿ ರಾಜ್ಯ ಮಾಹಿತಿ ಆಯೋಗದ ಆಯುಕ್ತ ಡಾ. ಹರೀಶ್ ಕುಮಾರ್ ಮಾತನಾಡಿದರು.

ನಿಗದಿತ ಅವಧಿಯೊಳಗೆ ಅಗತ್ಯ ಮಾಹಿತಿ ಒದಗಿಸಿ

◆ **ಕಾರವಾರ:** ಮಾಹಿತಿ ಹಕ್ಕು ಕಾಯಿದೆ 2005 ರಡಿ ಮಾಹಿತಿ ಕೋರಿ ಸಾರ್ವಜನಿಕರು ಸಲ್ಲಿಸುವ ಅರ್ಜಿಗಳಿಗೆ ನಿಗಧಿತ ಅವಧಿಯೊಳಗೆ ಅಗತ್ಯ ಮಾಹಿತಿ ಒದಗಿಸುವುದು ಎಲ್ಲಾ ಇಲಾಖೆಗಳ ಮಾಹಿತಿ ಅಧಿಕಾರಿಗಳ ಕಡ್ಡಾಯ ಜವಾಬ್ದಾರಿಯಾಗಿದೆ ಎಂದು ರಾಜ್ಯ ಮಾಹಿತಿ ಆಯೋಗದ ಆಯುಕ್ತ ಡಾ. ಹರೀಶ್ ಕುಮಾರ್ ತಿಳಿಸಿದರು.

ಅವರು ಜಿಲ್ಲಾಧಿಕಾರಿ ಸಭಾಂಗಣದಲ್ಲಿ ಜಿಲ್ಲಾ ಮಟ್ಟದ ಅಧಿಕಾರಿಗಳು ಹಾಗೂ ವಿವಿಧ ಇಲಾಖೆಯ ಸಾರ್ವಜನಿಕ ಮಾಹಿತಿ ಅಽಕಾರಿಗಳಿಗೆ ಆಯೋಜಿಸಿದ್ದ ಮಾಹಿತಿ ಹಕ್ಕು ಕಾಯ್ದೆ ಕುರಿತು ಜಾಗೃತಿ ಕಾರ್ಯಗಾರ ಹಾಗೂ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದರು.

ಮಾಹಿತಿ ಹಕ್ಕು ಕಾಯಿದೆಯು ಸಾರ್ವಜನಿಕ ಆಡಳಿತ ವ್ಯವಸ್ಥೆಯಲ್ಲಿ ಪಾರದರ್ಶಕತೆ ಮತ್ತು ಕಾನೂನಾತ್ಮಕವಾಗಿ ಸಾರ್ವಜನಿಕ ಕೆಲಸಗಳನ್ನು ಮಾಡಲು ಸಹಕಾರಿಯಾಗಿದ್ದು, ಇದು ಸಾರ್ವಜನಿಕರ ಕುಂದುಕೊರತೆಗಳನ್ನು ನಿವಾರಣೆ ಮಾಡುವ ಕಾಯಿದೆಯಾಗಿ ಬದಲಾಗಿದೆ ಹಾಗೂ ಈ ಕಾಯಿದೆಯ ಅಧಿಕಾರಿಗಳು ಪ್ರಾಮಾಣಿಕವಾಗಿ ಮತ್ತು ತಪ್ಪುಗಳನ್ನು ಮಾಡದಂತೆ ಕೆಲಸ ನಿರ್ವಹಿಸಲು ಸಹಕಾರಿಯಾಗಿದೆ ಎಂದರು.

ಜಿಲ್ಲಾಧಿಕಾರಿ ಕೆ.ಲಕ್ಷ್ಮೀಪ್ರಿಯಾ ಮಾತನಾಡಿದರು. ಮಾಹಿತಿ ಆಯುಕ್ತ ನಾರಾಯಣ ಚನ್ನಾಳ, ಜಿ.ಪಂ. ಸಿಇಒ ಡಾ.ದಿಲೀಷ್ ಶಶಿ, ಹೆಚ್ಚುವರಿ ಪೊಲೀಸ್ ಅಧೀಕ್ಷಕ ಕೃಷ್ಣಮೂರ್ತಿ, ಅಪರ ಜಿಲ್ಲಾಧಿಕಾರಿ ಸಾಜಿದ್ ಮುಲ್ಲಾ ಹಾಗೂ ಜಿಲ್ಲೆಯ ಎಲ್ಲಾ ಇಲಾಖೆಗಳ ಸಾರ್ವಜನಿಕ ಮಾಹಿತಿ ಅಧಿಕಾರಿಗಳು ಇದ್ದರು.



ಸಿದ್ದಾಪುರ: ತಾಲೂಕಿನ ವಾಜಗದ್ದೆಯ ದುರ್ಗಾವಿನಾಯಕ ಸಭಾಭವನದಲ್ಲಿ ರಂಗಸೌಗಂಧ ಮೂರುದಿನಗಳ ಕಾಲ ಹುಲಿಮನೆ ಸೀತಾರಾಮಶಾಸ್ತ್ರಿಗಳ ಸ್ಮರಣೆಯಲ್ಲಿ ಆಯೋಜಿಸಿದ್ದ ಜಿಲ್ಲಾ ರಂಗೋತ್ಸವ ಸಮಾರೋಪ ಸಮಾರಂಭದಲ್ಲಿ ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷ, ಕಿರುತೆರೆ, ಸಿನೆಮಾ ಕಲಾವಿದ ಡಾ. ಕೆ.ವಿ.ನಾಗರಾಜಮೂರ್ತಿ ಮಾತನಾಡಿದರು.

ಸಮಾಜದ ಶ್ರೇಯೋಭಿವೃದ್ಧಿಗೆ ಶ್ರಮಿಸಿದ ಜಗಜೀವನರಾಂ

ಡಾ.ಬಾಬು ಜಗಜೀವನರಾಂ 119ನೇ ಜಯಂತಿ

◆ **ಹಾವೇರಿ:** ದೇಶದ ಅನುಭವಿ ರಾಜಕಾರಣಿ ಡಾ.ಬಾಬು ಜಗಜೀವನರಾಂ ಅವರು ಇಂದಿನ ರಾಜಕಾರಣಿಗಳಿಗೆ ಮಾದರಿಯಾಗಿದ್ದು, ನಮ್ಮ ಸಮಾಜದ ಜೊತೆಗೆ ಎಲ್ಲ ಸಮಾಜದವರ ಶ್ರೇಯೋಭಿವೃದ್ಧಿಗಾಗಿ ನಿರಂತರ ಸೇವೆ ಸಲ್ಲಿಸಿದ್ದಾರೆ. ಅವರ ಜೀವನ ಆದರ್ಶ ಪಾಲಿಸೋಣ ಎಂದು ರಾಜ್ಯ ಎಸ್ಸಿ ಎಸ್ಟಿ, ಹಿಂದುಳಿದ ವರ್ಗ, ಅಲ್ಪಸಂಖ್ಯಾತರ ಕಲ್ಯಾಣ ಸಮಿತಿಯ ಅಧ್ಯಕ್ಷ ಉಡಚಪ್ಪ ಮಾಳಗಿ ಹೇಳಿದರು.

ನಗರದ ಪ್ರವಾಸಿ ಮಂದಿರದಲ್ಲಿ ಹಸಿರು ಕ್ರಾಂತಿ ಹರಿಕಾರ, ಮಾಜಿ ಉಪ ಪ್ರಧಾನಿ ಡಾ.ಬಾಬು ಜಗಜೀವನರಾಂ 119ನೇ ಜಯಂತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಡಾ.ಬಾಬು ಜಗಜೀವನರಾಂ ಅವರು ಸರಳ ಸಜ್ಜನಿಕೆಗೆ ಹೆಸರುವಾಸಿಯಾಗಿ ದೇಶದ ಜನತೆಗೆ ಹಸಿರು ಕ್ರಾಂತಿ ಮಾಡುವ ಮೂಲಕ ಪ್ರಗತಿಗೆ



ಸಹಕಾರ ನೀಡಿದ್ದಾರೆ. ತಮ್ಮ ಅನುಭವದಿಂದ ದೇಶ ಮಹೋನ್ನತ ಗೌರವ ಸ್ಥಾನಮಾನ ಪಡೆದಿರುವುದು ನಮ್ಮೆಲ್ಲರಿಗೂ ಹೆಮ್ಮೆಯ ಸಂಗತಿ. ದೇಶಕ್ಕಾಗಿ ಹಗಲಿರುಳು ಶ್ರಮವಹಿಸಿ ಎಲ್ಲಾ ಜನಾಂಗದ ಜನರ ಹಾಗೂ ಕಾರ್ಮಿಕರ ಆಶಾಕಿರಣ ಆಗಿದ್ದು, ಅವರ ಬದುಕಿನ ಆದರ್ಶಗಳನ್ನು ಪಾಲಿಸಲು ಮುಂದಾಗಬೇಕಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಡಿಎಸ್‌ಎಸ್ ಜಿಲ್ಲಾ ಸಂಚಾಲಕ ಮಾಲತೇಶ ಯಲ್ಲಾಪುರ, ಕಲ್ಯಾಣ ಸಮಿತಿ ಜಿಲ್ಲಾಧ್ಯಕ್ಷ ಮಂಜಪ್ಪ ಮರೋಳ, ಬಿಎಸ್ಪಿ ಪಕ್ಷದ ಜಿಲ್ಲಾಧ್ಯಕ್ಷ ಎಂ.ಕೆ ಮಖಬೂಲ್, ಮಹಿಳಾ ಘಟಕದ ಕಾರ್ಯಾಧ್ಯಕ್ಷೆ ನೀಲಮ್ಮ ಪೂಜಾರ, ಹಾನಗಲ್ ತಾಲೂಕಾಧ್ಯಕ್ಷ ಜಗದೀಶ ಹರಿಜನ, ಶಂಭುಲಿಂಗಪ್ಪ ನಿಂಗಪ್ಪನವರ, ಹೊನ್ನಪ್ಪ ಮಾಳಗಿ, ಬಸವರಾಜ ದೇವರಮನಿ, ವಿಶ್ವನಾಥ ನಾಗಮ್ಮನವರ, ಮಂಜುನಾಥ ಹರಿಜನ, ಮಹೇಶಪ್ಪ ಹರಿಜನ, ಹನುಮಂತಪ್ಪ ಶಾಕಾರ, ತರುಣ ಮಾಳಗಿ ಸೇರಿದಂತೆ ಅನೇಕ ಮುಖಂಡರು ಪಾಲ್ಗೊಂಡಿದ್ದರು.



ಸಿದ್ದಾಪುರ: ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ಬಿಸಿ ಟ್ರಸ್ಟ್ ಸಿದ್ದಾಪುರ ಯೋಜನಾ ಕಚೇರಿ ವ್ಯಾಪ್ತಿಯ 50 ವಾತ್ಸಲ್ಯ ಫಲಾನುಭವಿಗಳಿಗೆ ಮಾತೃಶ್ರೀ ಹೇಮಾವತಿ ಅಮ್ಮನವರ ಹುಟ್ಟು ಹಬ್ಬದ ಪ್ರಯುಕ್ತ ಹಣ್ಣು ಹಂಪಲುಗಳನ್ನು ವಿತರಿಸಿ ಮಾಸಾಶನ ಪಲಾನುಭವಿಗಳ ಯೋಗಕ್ಷೇಮ ವಿಚಾರಿಸಲಾಯಿತು. ತಾಲೂಕಿನ ಯೋಜನಾಧಿಕಾರಿಗಳಾದ ಗಿರೀಶ ಜಿ.ಪಿ., ವಲಯಗಳ ಮೇಲ್ವಿಚಾರಕರು, ಕೃಷಿ ಮೇಲ್ವಿಚಾರಕರು, ಜ್ಞಾನವಿಕಾಸ ಸಮನ್ವಯಾಧಿಕಾರಿಗಳು ಹಾಗೂ ಫಲಾನುಭವಿಗಳಿಗೆ ಸಂಬಂಧಿಸಿದ ಸೇವಾ ಪ್ರತಿನಿಧಿಗಳು ಉಪಸ್ಥಿತರಿದ್ದರು.

ಮಹಿಳೆಯರ ಬದುಕಿಗೆ ಅಕ್ಕ ಮಹಾದೇವಿ ಆದರ್ಶ

◆ **ಹಾವೇರಿ:** ಚಿತ್ತಶುದ್ಧಿ, ಅಚಲ ನಿಷ್ಠೆ ಹಾಗೂ ನಿಷ್ಕಲ್ಮಶವಾದ ಮನಸ್ಸಿನ ಮೂಲಕ ಅನುಭವ ಮಂಟಪದ ಮುಕುಟ ಮಣಿಯಾಗಿದ್ದ ಅಕ್ಕ ಮಹಾದೇವಿ ಸ್ತ್ರೀಕುಲಕ್ಕೆ ಸ್ಫೂರ್ತಿ, ಪ್ರೇರಣೆಯಾಗಿದ್ದಾರೆ. ಹೃದಯದಲ್ಲಿ ಕಲ್ಮಶವಿಟ್ಟುಕೊಂಡು ಮಾಡುವ ಪೂಜೆ ನಿರರ್ಥಕ ಎಂಬುದು ಅವರ ನಿಲುವಾಗಿತ್ತು ಎಂದು ಹೊಸಮಠದ ಬಸವ ಶಾಂತಲಿಂಗ ಸ್ವಾಮೀಜಿ ಹೇಳಿದರು.

ಹೊಸಮಠದ ಬಸವ ಕೇಂದ್ರ, ಅಕ್ಕನ ಬಳಗದ ವತಿಯಿಂದ ಶ್ರೀ ಮಠದಲ್ಲಿ ಜರುಗಿದ ಶರಣಸಂಗಮ ಹಾಗೂ ಅಕ್ಕಮಹಾದೇವಿ ಜಯಂತಿ ಕಾರ್ಯಕ್ರಮದಲ್ಲಿ ಸಾನ್ನಿಧ್ಯ ವಹಿಸಿ ಮಾತನಾಡಿದ ಅವರು, ಅಕ್ಕಮಹಾದೇವಿ ಸಂಸಾರ, ಬಟ್ಟೆ ಮತ್ತು ಲೌಕಿಕ ಬಂಧನವನ್ನು ತ್ಯಜಿಸಿ, ನಿಸರ್ಗದ ಮಧ್ಯೆ ಬೆಳೆದವಳು. ಅರಮನೆಯ ವೈಭವ ತಿರಸ್ಕರಿಸಿ ನಿರಾಕಾರ ಹಾಗೂ ನಿಸರ್ಗದತ್ತ ಚನ್ನಮಲ್ಲಿಕಾರ್ಜುನ, ನನ್ನ ಪತಿ ಎಂದು ಭಾವಿಸಿದಳು. ಆಧ್ಯಾತ್ಮಿಕ ಜೀವನ ಅರಿತು ಸಂಸ್ಕಾರದ ಹಾದಿಯಲ್ಲಿ ಸಾಗಿ ಬಂದವಳು. ಅವಳ ನಡೆ ಮತ್ತು ನುಡಿ ಆಕೆಯ ವಚನಗಳಲ್ಲಿ ಕಾಣಿಸುತ್ತದೆ. ಅಂತಹ ದಿಟ್ಟ ಹೆಜ್ಜೆ ಇಟ್ಟ ಅಕ್ಕಮಹಾದೇವಿ ಇಡೀ ಜಗತ್ತಿಗೆ ಅಕ್ಕನ ಸ್ಥಾನ ತುಂಬಿದವಳು ಎಂದರು.

ಸಾವಿತ್ರಿಬಾಯಿ ಫುಲೆ ಶಿಕ್ಷಕಿಯರ ಸಂಘದ ಜಿಲ್ಲಾಧ್ಯಕ್ಷೆ ಡಾ.ಗೀತಾ ಸುತ್ತಕೋಟಿ ಮಾತನಾಡಿ, ವೈರಾಗ್ಯನಿ ಅಕ್ಕಮಹಾದೇವಿ ತತ್ವಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು.

ನಿಸರ್ಗ ಚಿಕಿತ್ಸಕಿ ಕೃಷ್ಣವೇಣಿ ಮಾತನಾಡಿ, ಮನುಷ್ಯನ ಬದುಕಿನ ಗೊಂದಲಗಳನ್ನು ನಿವಾರಿಸುವ ಜೊತೆಗೆ ಆರೋಗ್ಯಕ್ಕೆ ಸಮಯ ಮೀಸಲಿಡಬೇಕು. ಧ್ಯಾನಕ್ಕೆ ಸಮಯ ಮಿಸಲಿಡಬೇಕು, ಆಗ ಮಾತ್ರ ಸದೃಢ ಆರೋಗ್ಯ ನಮ್ಮದಾಗಬಹುದು ಎಂದರು.

ಇದೇ ಸಂದರ್ಭದಲ್ಲಿ ಪಲ್ಲಕ್ಕಿಯಲ್ಲಿ ಅಲಂಕೃತ ಅಕ್ಕಮಹಾದೇವಿ ಹಾಗೂ ಬಸವಣ್ಣನವರ ಭಾವಚಿತ್ರಗಳಿಗೆ ವಿಶೇಷ ಪೂಜೆ ಸಲ್ಲಿಸಲಾಯಿತು. ಶಿವಬಸವ್ವ ಲಕ್ಕಣ್ಣನವರ, ನಾಗರತ್ನಾ ಲಕ್ಕಣ್ಣನವರ, ಅಕ್ಕಮಹಾದೇವಿ ಹಾನಗಲ್ಲ ಹಾಗೂ ಮಮತಾ ನಂದಿಹಳ್ಳಿ ವಚನ ಗಾಯನ ಪ್ರಸ್ತುತ ಪಡಿಸಿದರು. ರಜನಿ ಮಡಿವಾಳ ಭರತ ನಾಟ್ಯ ಪ್ರದರ್ಶಿಸಿದರು.

ಈ ವೇಳೆ ರೇಖಾ ಯಡ್ರಾಮಿ, ಕಮಲಾ ಬುಕ್ಕಶೆಟ್ಟಿ, ಶಾಂತಕ್ಕ ಶಿರೂರ, ಭಾರತಿ ಪಾಟೀಲ, ಗಿರಿಜಮ್ಮ ಮುಗದೂರ, ರಾಜೇಶ್ವರಿ ಹೆಸರೂರ, ಮಮತಾ ಮಠದ, ಸುಜ್ಞಾನಿದೇವಿ ಮಠದ, ಶೋಭಾ ಮೇವುಂಡಿಮಠ, ಚೈತ್ರಾ ಶೆಟ್ಟರ್, ಪವಿತ್ರಾ ರಾಜನಾಳಕರ, ಮಂಗಳಾ ಶೆಟ್ಟರ್, ರೂಪಾ ಸೋಬಾನಿ, ಲಲಿತಾ ಮಿರ್ಜಿ, ಶಶಿಕಲಾ ಬೈಲಣ್ಣನವರ, ಪಾರ್ವತಿ ತುಪ್ಪದ ಉಪಸ್ಥಿತರಿದ್ದರು. ಲಲಿತಾ ಹಿರೇಮಠ ಕಾರ್ಯಕ್ರಮ ನಿರ್ವಹಿಸಿದರು.



ದಲಿತರ ಹಕ್ಕು ಪ್ರತಿಪಾದಿಸಿದ ಬಾಬುಜಿ

◆ **ಶಿಗ್ಗಾವಿ:** ಶೋಷಿತರ ಪರವಾಗಿ ಹೋರಾಡಿದ ಮಹಾನ್ ನಾಯಕರಾದ ಡಾ. ಬಾಬು ಜಗಜೀವನರಾಂ ಅವರು ದಲಿತರ ಹಕ್ಕುಗಳಿಗಾಗಿ ಪ್ರತಿಪಾದಿಸಿದವರಾಗಿದ್ದಾರೆ ಎಂದು ತಹಶೀಲ್ದಾರ್ ಯಲ್ಲಪ್ಪ ಗೋಣೆಣ್ಣವರ ಹೇಳಿದರು.

ಪಟ್ಟಣದ ಡಾ. ಬಾಬು ಜಗಜೀವನರಾಂ ಸಭಾಭವನದಲ್ಲಿ ತಾಲೂಕಾಡಳಿತದಿಂದ ಹಮ್ಮಿಕೊಂಡ ಡಾ. ಬಾಬು ಜಗಜೀವನರಾಂ ಅವರ 119 ನೇ ಜನ್ಮ ದಿನಾಚರಣೆಯಲ್ಲಿ ಮಾತನಾಡಿದರು.

ಚುನಾಯಿತ ಸಂಸ್ಥೆಗಳು ಮತ್ತು ಸರ್ಕಾರಿ ಸೇವೆಗಳಲ್ಲಿ ಜಾತಿಯ ಆಧಾರದ ಮೇಲೆ ಸಕಾರಾತ್ಮಕ ಕ್ರಮಕ್ಕಾಗಿ ವಾದಿಸಿದವರಾಗಿದ್ದು, ಸತತವಾಗಿ 30 ವರ್ಷಗಳ ಕಾಲ ಕೇಂದ್ರ ಶಾಸಕಾಂಗದ ಸದಸ್ಯರಾಗಿದ್ದರು, ಭಾರತದಲ್ಲಿ ಅತಿ ಹೆಚ್ಚು ಕಾಲ ಸೇವೆ ಸಲ್ಲಿಸಿದ ಕ್ಯಾಬಿನೆಟ್ ಸಚಿವ ಎಂಬ ದಾಖಲೆಯನ್ನು ಡಾ.ಬಾಬು ಜಗಜೀವನರಾಂ ಅವರು ಹೊಂದಿದ್ದಾರೆ ಎಂದರು.

ಕ್ಷೇತ್ರ ಶಿಕ್ಷಣಾಧಿಕಾರಿ ಎಂ.ಬಿ.ಅಂಬಿಗೇರ ಮಾತನಾಡಿ, ಮಾಜಿ ಉಪಪ್ರಧಾನಿ ಬಾಬು ಜಗಜೀವನರಾಂ ಅವರು ಶೋಷಿತರ ಹಕ್ಕಿಗಾಗಿ ಹೋರಾಡಿದವರು, ಹಸಿರು ಕ್ರಾಂತಿಯ ಹರಿಕಾರ. ಆಹಾರ ಉತ್ಪಾದನೆ ಹೆಚ್ಚಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ರು, ಕೃಷಿ, ರಕ್ಷಣಾ ಸಚಿವರಾಗಿ ಸೇವೆ ಸಲ್ಲಿಸಿದ್ದಾರೆ, ಅವರ ಸೇವೆ ಸ್ಮರಣೀಯವಾದದು. ಅವರ ಜೀವನ ಚರಿತ್ರೆ ಯುವ ಪೀಳಿಗೆಗೆ ತಲುಪಿಸುವ ಕಾರ್ಯ ನಡೆಯಬೇಕು ಎಂದರು.

ತಾಪಂ ಕಾರ್ಯನಿರ್ವಾಹಕಾಧಿಕಾರಿ ಮಂಜುನಾಥ ಸಾಳೋಂಕೆ, ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದಶಕಿ ಸರಸ್ವತಿ ಗಜಕೋಶ, ಪುರಸಭೆ ಮುಖ್ಯಾಧಿಕಾರಿ ಮಲ್ಲೇಶ ಎಚ್, ಬಿಸಿಎಂ ಇಲಾಖೆಯ ಅಧಿಕಾರಿ ಮಹೇಶ್ವರ ಕೇಸರಿ, ಮುಖಂಡರಾದ ಶಿವಾನಂದ ಮ್ಯಾಗೇರಿ, ಕರಿಯಪ್ಪ ಕಟ್ಟಿಮನಿ, ಡಾ. ಮಲ್ಲೇಶಪ್ಪ ಹರಿಜನ, ಹನುಮಂತಪ್ಪ ಬಂಡಿವಡ್ಡರ, ಪ್ರಮೋದ್ ಛಲವಾದಿ, ಶರೀಫ ಮಾಕಾಪೂರ, ಮಂಜುನಾಥ ಹುರಳಿಕೊಪ್ಪಿ, ಬಸವರಾಜ ಜೇಕಿನಕಟ್ಟಿ, ಸುರೇಶ ಹರಿಜನ ಸೇರಿದಂತೆ ದಲಿತ ಮುಖಂಡರು, ವಿವಿಧ ವಸತಿ ಶಾಲೆಗಳ ಅಧಿಕಾರಿಗಳು ಹಾಗೂ ತಾಲೂಕಾಡಳಿತದ ಸಿಬ್ಬಂದಿ ಇದ್ದರು.



ಚಾಲುಕ್ಯ ದೊರೆ ಇಮ್ಮಡಿ ಪುಲಕೇಶಿ ಜನ್ಮ ದಿನಾಚರಣೆ

◆ **ರಾಣೇಬೆನ್ನೂರ:** ಕ್ರಿ.ಶ 618ರಲ್ಲಿ ಉತ್ತರದ ಹರ್ಷವರ್ಧನನು ದಕ್ಷಿಣದಲ್ಲಿ ಸಾಮ್ರಾಜ್ಯ ವಿಸ್ತರಿಸಲು ಯತ್ನಿಸಿದಾಗ ಚಾಲುಕ್ಯ ದೊರೆ ಇಮ್ಮಡಿ ಪುಲಕೇಶಿ ನರ್ಮದಾ ನದಿ ತೀರದಲ್ಲಿ ಸೋಲಿಸಿ ದಕ್ಷಿಣ ಪಥೇಶ್ವರ ಎಂಬ ಬಿರುದು ಪಡೆದ ದಿನವನ್ನು ಇಮ್ಮಡಿ ಪುಲಕೇಶಿ ಮಹಾರಾಜರ ವೀರ ಪರಾಕ್ರಮ ಸ್ಮರಣೆಯ ದಿನವನ್ನು ಕನ್ನಡಿಗರ ವಿಜಯ ದಿನವಾಗಿದೆ ಎಂದು ಪ್ರೊ.ಎ ಶಂಕರ ನಾಯ್ಕ ಹೇಳಿದರು.

ನಗರದ ಬಿ.ಎ.ಜೆ.ಎಸ್.ಎಸ್ ಬಿ.ಇಡಿ ಕಾಲೇಜಿನಲ್ಲಿ ಮಹಾರಾಜ ಇಮ್ಮಡಿ ಪುಲಕೇಶಿರವರ ಜನ್ಮ



ದಿನಾಚರಣೆಯಲ್ಲಿ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಮಾತನಾಡಿದ ಅವರು, ಉತ್ತರ ಭಾರತದ ಸಾಮ್ರಾಟ ಹರ್ಷವರ್ಧನನ್ನು ಸೋಲಿಸಿ ಅಜೇಯನಾಗಿ ಹೊರಹೊಮ್ಮಿದ ಇಮ್ಮಡಿ ಪುಲಕೇಶಿ ಮಹರಾಜರ ಸಾಧನೆಗಳನ್ನು ಹಾಗೂ ನಮ್ಮ ಕನ್ನಡಿಗರ ಶೌರ್ಯದ ಪ್ರತೀಕವನ್ನು ಸ್ಮರಿಸುವುದು ಹಾಗೂ ಅವರ ಆದರ್ಶಗಳನ್ನು ಅಳವಡಿಸಿಕೊಳ್ಳುವುದು ನಮ್ಮೆಲ್ಲರ ಆದ್ಯ ಕರ್ತವ್ಯ ಎಂದರು.

ಎನ್.ಎಸ್.ಎಸ್ ಕಾರ್ಯಕ್ರಮಾಧಿಕಾರಿ ಪ್ರೊ. ಪರಶುರಾಮ ಪವಾರ ಮಾತನಾಡಿ, ಚಾಲುಕ್ಯ ಚಕ್ರೇಶ್ವರ ಇಮ್ಮಡಿ ಪುಲಕೇಶಿ ಮಹಾರಾಜರರು ಕ್ರಿ.ಶ 618 ರಲ್ಲಿ ನರ್ಮದಾ ನದಿಯ ದಡದಲ್ಲಿ ನಡೆದ ಯುದ್ದದ ಚಿತ್ರವನ್ನು ವಿವರಿಸಿದರು.

ಪ್ರೊ. ಶಿವಕುಮಾರ ಬಿಸಲಳ್ಳಿ, ಡಾ. ರಾಜೀವ ಕೆ.ಎಂ, ಪ್ರೊ. ಅಶೋಕ ಬಣಕಾರ, ಮುತ್ತು ನಾಯಕ್, ಯುವರಾಜ, ಸುನೀಲ ತಳವಾರ, ಮುತ್ತುರಾಜ ಸಿದ್ದಣ್ಣನವರ, ನಿಕೇತನ ಕಮ್ಮಾರ, ಪವನ ಕುಮಾರ ಲಮಾಣಿ, ದೇವಿಕಾ ಚೌಟಗಿ, ಲಕ್ಷ್ಮೀ ಹಣಚಿಕ್ಕಿ ಮತ್ತು ಬೋಧಕ, ಬೋಧಕೇತರ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಇದ್ದರು.

ದುರ್ಗಾದೇವಿ, ಕಾಳಿಕಾದೇವಿ ಜಾತ್ರಾ ಮಹೋತ್ಸವ ನಾಳೆ

◆ **ಶಿಗ್ಗಾವಿ:** ತಾಲೂಕಿನ ಮುದ್ದಿನಕೊಪ್ಪ ಗ್ರಾಮದಲ್ಲಿ ಏ. 7ರಿಂದ 12ರ ವರೆಗೆ ದುರ್ಗಾದೇವಿ, ಕಾಳಿಕಾದೇವಿ ಜಾತ್ರಾ ಮಹೋತ್ಸವದ ಅಂಗವಾಗಿ ವಿವಿಧ ಧಾರ್ಮಿಕ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಏ. 7 ರಂದು ಮಂಗಳವಾರ ದುರ್ಗಾ ದೇವಿ ಹಾಗೂ ಕಾಳಿಕಾದೇವಿ ಮೂರ್ತಿ ಪ್ರತಿಷ್ಠಾಪನೆ ಮತ್ತು ಹೋಮ ಹವನ ಪೂಜಾ ವಿಧಿ ವಿಧಾನಗಳು ಜರುಗಲಿದ್ದು ಏ.8ರಂದು ಮಧ್ಯಾಹ್ನ 3 ಘಂಟೆಗೆ ದೇವಿಯವರ ಭವ್ಯ ಮೆರವಣಿಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಕಲ ವಾದ್ಯ ವೈಭವಗಳೊಂದಿಗೆ ಪೂರ್ಣಕುಂಭ ಕಳಸದೊಂದಿಗೆ ಸಂಜೆ 6 ಗಂಟೆಗೆ ಜಾತ್ರಾ ಗದ್ದಿಗೆ ತಲುಪಲಿದೆ.

ಏ. 9ರಂದು ಬೆಳಗ್ಗೆಯಿಂದ ಸಂಜೆಯವರೆಗೆ ದುರ್ಗಾದೇವಿ ಕಾಳಿಕಾದೇವಿ ಅವರಿಗೆ ಉಡಿ ತುಂಬುವ, ಹಣ್ಣುಕಾಯಿ ಸೇವೆ ಹಾಗೂ ಹರಕೆ ಸೇವೆ ನೆರವೇರಲಿದೆ, ಏ.10ರಂದು ಬೆಳಗ್ಗೆ 7 ಗಂಟೆಗೆ ಲೋಕ ಕಲ್ಯಾಣಾರ್ಥವಾಗಿ ಮಹಾ ಚಂಡಿಕಾಯಾಗ ಕಾರ್ಯ ಜರುಗಲಿದೆ.



ಏ. 11ರಂದು ಸಂಜೆ 6 ಘಂಟೆಗೆ ಧರ್ಮಸಭೆ ಜರಗಲಿದೆ, ಏ.12 ರಂದು ಮಧ್ಯಾಹ್ನ 3 ಗಂಟೆಗೆ ದುರ್ಗಾದೇವಿ ಹಾಗೂ ಕಾಳಿಕಾದೇವಿಯವರ ಜಾತ್ರಾ ಗದ್ದುಗೆಯಿಂದ ವಾದ್ಯಗಳೊಂದಿಗೆ ಮೆರವಣಿಗೆ ಮುಖಾಂತರ ಪಾದಗಟ್ಟಿ ತಲುಪಲಿದೆ.

ಏ. 23ರಂದು ದಿವಸ ದುರ್ಗಾದೇವಿ, ಕಾಳಿಕಾದೇವಿಯವರಪುನಃಪ್ರತಿಷ್ಠಾಪನೆಗೊಳ್ಳಲಿದೆ ಜೊತೆಗೆ ಈ ಒಂದು ಜಾತ್ರಾ ಮಹೋತ್ಸವ ಕಾರ್ಯಕ್ರಮಕ್ಕೆ ಜಿಲ್ಲೆ ಹಾಗೂ ರಾಜ್ಯದ ವಿವಿಧ ಗಣ್ಯರು ಹಾಗೂ ಧಾರ್ಮಿಕ ಕಾರ್ಯಕ್ರಮದಲ್ಲಿ ಮಠಾಧೀಶರು ಭಾಗವಹಿಸಲಿದ್ದಾರೆ ಎಂದು ಜಾತ್ರಾ ಸಮೀತಿಯ ವ್ಯವಸ್ಥಾಪಕರು ಪ್ರಕಟಣೆಗೆ ತಿಳಿಸಿದ್ದಾರೆ.

ಡಾ.ಬಾಬು ಜಗಜೀವನರಾಂ ಜಯಂತಿ



◆ **ಹಾನಗಲ್ಲ:** ಶಾಸಕ ಶ್ರೀನಿವಾಸ ಮಾನೆ ಅವರ ಇಲ್ಲಿನ ಜನಸಂಪರ್ಕ ಕಚೇರಿಯಲ್ಲಿ ಭಾನುವಾರ ಹಸಿರುಕ್ರಾಂತಿ ಹರಿಕಾರ, ಮಾಜಿ ಉಪಪ್ರಧಾನಿ ಡಾ.ಬಾಬು ಜಗಜೀವನರಾಂ ಜಯಂತಿ ಆಚರಿಸಲಾಯಿತು.

ಈ ಸಂದರ್ಭದಲ್ಲಿ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಹನುಮಂತಪ್ಪ ಮರಗಡಿ, ಡಾ.ಬಾಬು ಜಗಜೀವನರಾಂ ಅವರು ಸಾಮಾಜಿಕ ನ್ಯಾಯ, ಸಮಾನತೆ ಮತ್ತು ಹಿಂದುಳಿದ ವರ್ಗಗಳ ಹಕ್ಕುಗಳಿಗಾಗಿ ಹೋರಾಡಿದ ಮಹಾನ್ ನಾಯಕ. ಅವರು ಆದರ್ಶಗಳು ಎಂದೆಂದಿಗೂ ದಾರಿದೀಪವಾಗಿವೆ. ತಮ್ಮ ಜೀವನಪೂರ್ತಿ ಅಸಮಾನತೆ, ಅಸ್ಪೃಶ್ಯತೆಯ ನಿವಾರಣೆಗೆ ಶ್ರಮಿಸಿದ್ದು, ಶಿಕ್ಷಣ ಮತ್ತು ಸಮಾನ ಅವಕಾಶಗಳ ಮಹತ್ವವನ್ನು ಒತ್ತಿ ಹೇಳಿದ್ದಾರೆ. ಇಂದಿನ ಯುವ ಸಮೂಹ ಅವರ ಜೀವನದಿಂದ ಪ್ರೇರಣೆ ಪಡೆದು ಸಮಾಜದಲ್ಲಿ ಸಕಾರಾತ್ಮಕ ಬದಲಾವಣೆ ತರಲು ಮುಂದಾಗಬೇಕಿದೆ ಎಂದರು.

ಪುರಸಭೆ ಮಾಜಿ ಉಪಾಧ್ಯಕ್ಷ ಮಹೇಶ ಪವಾಡಿ, ಮುಖಂಡರಾದ ಗುರುರಾಜ್ ನಿಂಗೋಜಿ, ಆದರ್ಶ ಶೆಟ್ಟಿ, ರವಿ ದೇಶಪಾಂಡೆ, ಮುನ್ನಾ ನಾಯ್ಕ, ಉಮೇಶ ಮಾಳಗಿ, ಮೇಕಾಜಿ ಕಲಾಲ, ಪ್ರಕಾಶ ಬಣಕಾರ, ಮಾರುತಿ ಹಂಜಗಿ, ನೌಶಾದ ರಾಣೇಬೆನ್ನೂರು, ಮೌನೇಶ ಕಲಾಲ, ಖಂಡೋಜಿ ಬೋಸ್ಲೆ, ಮರ್ದಾನಸಾಬ ಬಡಗಿ ಸೇರಿದಂತೆ ಪೌರಕಾರ್ಮಿಕರು, ಮುಖಂಡರು ಇದ್ದರು.

ಆರೋಗ್ಯ, ಸ್ವಚ್ಛತೆಗೆ ಆದ್ಯತೆ ನೀಡಿ: ಪಟಗಾರ

◆ **ಕಾರವಾರ:** ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಹಾಗೂ ಆಹಾರ ಸುರಕ್ಷತಾ ತರಬೇತಿ ಪ್ರಮಾಣ ಪತ್ರ ಕೇಂದ್ರದ ವತಿಯಿಂದ ಗೋಕರ್ಣದ ಆಹಾರ ವಹಿವಾಟುದಾರರಿಗೆ ಮೊದಲ ಹಂತದ ಒಂದು ದಿನದ ಆಹಾರ ಸುರಕ್ಷತಾ ತರಬೇತಿ ಮತ್ತು ಪ್ರಮಾಣಪತ್ರ ಕಾರ್ಯಕ್ರಮವು ಗೋಕರ್ಣದ ವೀರಶೈವ ಮಠ ಸಭಾಭವನದಲ್ಲಿ ಶನಿವಾರ ನಡೆಯಿತು.

ಗೋಕರ್ಣ ಪಂಚಾಯತ ಅಭಿವೃದ್ಧಿ ಅಧಿಕಾರಿ ವ್ಹಿ.ಎ ಪಟಗಾರ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ಸಮಾಜದಲ್ಲಿ ಆರೋಗ್ಯ ಹಾಗೂ ಸ್ವಚ್ಚತೆಗಳನ್ನು ತಾವು ಹೆಚ್ಚಿನ ರೀತಿಯಲ್ಲಿ ಅಳವಡಿಸಿಕೊಳ್ಳಲು ಸೂಚಿಸಿದರು.

ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ದಿನೇಶ ನಾಯ್ಕ ಮಾತನಾಡಿ, ಆಹಾರೋದ್ಯಮಿಗಳಿಗೆ ಆಹಾರದ ಗುಣಮಟ್ಟದ ಜೊತೆ ಶುಚಿತ್ವ ಹಾಗೂ ಪರಿಸರ ನೈರ್ಮಲ್ಯತೆ ಬಗ್ಗೆ ಹೆಚ್ಚಿನ ನಿಗಾ ವಹಿಸುವಂತೆ ಹಾಗೂ ಈ ತರಬೇತಿ ಕಾರ್ಯಕ್ರಮದ ಮಹತ್ವವನ್ನು ತಾಲೂಕಿನ ಎಲ್ಲ ಆಹಾರ ವಹಿವಾಟುದಾರರು ತಮ್ಮಲ್ಲಿ ಅಳವಡಿಸಿಕೊಂಡು ಕಾರ್ಯ ನಿರ್ವಹಿಸುವಂತೆ ಸಲಹೆ ನೀಡಿದರು.

ನಿವೃತ್ತ ಆಹಾರ ಸುರಕ್ಷತಾ ಅಧಿಕಾರಿ ಹಾಗೂ ಸಲಹೆಗಾರ ಅರುಣ ಕಾಶಿಭಟ್ಟ, ಆರೋಗ್ಯ ನಿರೀಕ್ಷಣಾಧಿಕಾರಿ ಮಹಾಂತೇಶ ಹೂಗಾರ, ಉತ್ತರ ಕನ್ನಡ ಜಿಲ್ಲಾ ಸಂಯೋಜಕ ಮನೋಜ ನಾಯಕ ಮಾತನಾಡಿದರು.

ಆಹಾರ ಸುರಕ್ಷತಾ ತರಬೇತಿ ಪ್ರಮಾಣ ಪತ್ರ ಕೇಂದ್ರದ ರಾಜ್ಯಾಧ್ಯಕ್ಷ ರಾಘವೇಂದ್ರ ಶೆಟ್ಟಿ ಹಾಗೂ ದೀಪಾ ಶಂಕರಿ, ತರಬೇತಿದಾರರು, ಆಹಾರ ಸುರಕ್ಷತಾ ತರಬೇತಿ ಪ್ರಮಾಣ ಪತ್ರ ಕೇಂದ್ರ, ಭಾರತ ಸರಕಾರ ಇವರು ಎಲ್ಲಾ ವಹಿವಾಟುದಾರರಿಗೆ ವಹಿವಾಟುಗಳ ನಿರ್ವಹಣೆ, ಸುರಕ್ಷತಾ ಕ್ರಮ, ಶುಚಿತ್ವ, ಕಲಬೆರಕೆ, ಅನಾವಶ್ಯಕ ಖರ್ಚು ನಿಯಂತ್ರಣ ಮತ್ತು ಕಡ್ಡಾಯ ಪ್ರಮಾಣ ಪತ್ರದ ಮಹತ್ವದ ಕುರಿತು ಮಾಹಿತಿ ಹಾಗೂ ತರಬೇತಿ ನೀಡಿದರು. ಕಾರ್ಯಕ್ರಮ ನಿರ್ವಹಿಸಿದ ಗೋಕರ್ಣ ವಿಭಾಗ ಸಂಯೋಜಕ ಕೃಷ್ಣಮೂರ್ತಿ ನಾಯಕ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು.

ವಿವಿಧ ಬೇಡಿಕೆ ಈಡೇರಿಕೆಗೆ ಒತ್ತಾಯ



◆ **ಹಾನಗಲ್ಲ:** ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿನ ಪ್ರಾಥಮಿಕ ಆರೋಗ್ಯ ಸುರಕ್ಷಾಧಿಕಾರಿಗಳ (ಕಿರಿಯ ಆರೋಗ್ಯ ಸಹಾಯಕಿಯರು) ವಿವಿಧ ನ್ಯಾಯಯುತ ಬೇಡಿಕೆಗಳ ಬಗ್ಗೆ ಸರ್ಕಾರದ ಗಮನ ಸೆಳೆಯುವಂತೆ ಇಲ್ಲಿ ಸುರಕ್ಷಾಧಿಕಾರಿಗಳ ಸಂಘದ ಪದಾಧಿಕಾರಿಗಳು ಶಾಸಕ ಶ್ರೀನಿವಾಸ ಮಾನೆ ಅವರಿಗೆ ಮನವಿ ಸಲ್ಲಿಸಿದರು.

ವಿಳಂಬಕ್ಕೆ ಅವಕಾಶ ನೀಡದೇ ಪದೋನ್ನತಿ ನೀಡಬೇಕು, ಸಿ ಮತ್ತು ಆರ್ ನಿಯಮಗಳನ್ನು ತಿದ್ದುಪಡಿ ಮಾಡಬೇಕು, ಖಾಲಿ ಹುದ್ದೆಗಳ ಭರ್ತಿಗೆ ಕ್ರಮ ಕೈಗೊಳ್ಳಬೇಕು, ಕೆಎಂಎಸ್ ಕ್ಷೇತ್ರ ಮಟ್ಟದಲ್ಲಿ ಕಾರ್ಯ ನಿರ್ವಹಿಸುತ್ತಿರುವುದರಿಂದ ಪ್ರತಿಯೊಂದು ಕ್ಷೇತ್ರ, ಪ್ರಭಾರ ಕ್ಷೇತ್ರಗಳನ್ನು ಒಳಗೊಂಡಂತೆ ಮ್ಯಾಪಿಂಗ್ ಮಾಡಲು ಅವಕಾಶ ನೀಡಬೇಕು, ತರಬೇತಿ ಕೇಂದ್ರಗಳನ್ನು ಪುನರ್ ಸ್ಥಾಪಿಸಬೇಕು, ಟ್ಯಾಬ್‌ಗಳನ್ನು ವಿತರಿಸಬೇಕು, ಜನಸಂಖ್ಯೆಗೆ ಅನುಗುಣವಾಗಿ ಉಪ ಕೇಂದ್ರಗಳ ಸ್ಥಾಪನೆಗೆ ಕ್ರಮ ಕೈಗೊಳ್ಳಬೇಕು, ಸೇವಾನಿರತರಿಗೆ ನರ್ಸಿಂಗ್ ಆಫೀಸರ್ ತರಬೇತಿಗೆ ಎನ್‌ಒಸಿ ನೀಡಿ ಹೆಚ್ಚಿನ ವಿದ್ಯಾಭ್ಯಾಸಕ್ಕೆ ಅವಕಾಶ ನೀಡಬೇಕು ಎಂದು ಮನವಿಯಲ್ಲಿ ತಿಳಿಸಲಾಗಿದೆ.

ಮನವಿ ಸ್ವೀಕರಿಸಿದ ಶಾಸಕ ಮಾನೆ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸಲು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಚಿವರ ಗಮನ ಸೆಳೆಯುವ ಭರವಸೆ ನೀಡಿದರು. ಪ್ರಾಥಮಿಕ ಆರೋಗ್ಯ ಸುರಕ್ಷಾಧಿಕಾರಿಗಳ ಸಂಘದ ಜಿಲ್ಲೆ ಮತ್ತು ತಾಲೂಕಾ ಘಟಕದ ಪದಾಧಿಕಾರಿಗಳು ಇದ್ದರು.

ಶರಸೇತು ಬಂಧ ಯಕಗಾನ ಪ್ರದರ್ಶನ

◆ **ಸಿದ್ದಾಪುರ:** ತಾಲೂಕಿನ ಬೇಡ್ಕಣಿಯ ಕೋಟೆ ಆಂಜನೇಯ ದೇವಾಲಯದಲ್ಲಿ ಹನುಮ ಜಯಂತಿ ಪ್ರಯುಕ್ತ ಹೆಗ್ಗರಣಿಯ ವೀರ ಮಾರುತಿ ಕದಂಬೇಶ್ವರ ಯಕ್ಷಗಾನ ಮಂಡಳಿಯ ಹಾಗೂ ಅತಿಥಿ ಕಲಾವಿದರಿಂದ ಏರ್ಪಡಿಸಲಾದ ಯಕ್ಷಗಾನ ಸೇರಿದ್ದ ಪ್ರೇಕ್ಷಕರನ್ನು ರಂಜಿಸಿತು.

'ಶರಸೇತು ಬಂಧ' ಆಖ್ಯಾನದಲ್ಲಿ ಜನಾರ್ಧನ ಹೊನ್ನಾವರ (ಹನುಮಂತ), ಲಕ್ಷ್ಮೀ ನಾರಾಯಣ ಹೆಗಡೆ ಶಿರಗುಣಿ (ಅರ್ಜುನ), ವೆಂಕಟ್ರಮಣ ಹೆಗಡೆ ಮಾದನಕಳ್ (ಬ್ರಾಹ್ಮಣ), ಮಾನ್ವಿತಾ (ರಾಮರೂಪ) ಪಾತ್ರಗಳನ್ನು ನಿರ್ವಹಿಸಿದರು.

ಲವಕುಶ ಆಖ್ಯಾನದಲ್ಲಿ ನಾಟ್ಯಾಚಾರ್ಯ ಶಂಕರ ಭಟ್ಟ ಸಿದ್ದಾಪುರ (ಶತ್ರುಘ್ನ), ವಿನಾಯಕ ನಾಯ್ಕ ಹಳ್ಳಿಬೈಲ್ (ಲವ), ಮಾರ್ಷಲ್ ಮೂರೂರು (ಕುಶ), ವೆಂಕಟ್ರಮಣ ಹೆಗಡೆ ಮಾದನಕಳ್ (ಮಾಣಿ), ರಘುಪತಿ ನಾಯ್ಕ ಹೆಗ್ಗರಣಿ (ರಾಮ), ರಾಜು ನಿಡಗೋಡ (ಸೀತೆ) ಅವರುಗಳು ತಮ್ಮ ಕಲಾ ಪ್ರತಿಭೆಯಿಂದ ರಂಜಿಸಿದರು. ಹಿಮ್ಮೇಳದಲ್ಲಿ ಭಾಗವತರಾಗಿ ದಿನೇಶ ಭಟ್ಟ ಯಲ್ಲಾಪುರ, ತಿಮ್ಮಣ್ಣ ಗಾಣಗದ್ದೆ, ಮದ್ದಳೆ ವಾದಕರಾಗಿ ವಿಠ್ಠಲ ಪೂಜಾರಿ ಮಂಚಿಕೇರಿ ಚಂಡೆವಾದಕರಾಗಿ ಮಂಜೈಯ ಜೈನ್ ಅರಲಗೋಡ ಉತ್ತಮ ಸಾತ್ ನೀಡಿದರು.

ಕಿರುಸುದ್ದಿ

ರಾಜ್ಯದಲ್ಲಿ ಅಭಿವೃದ್ಧಿ ಶೂನ್ಯ

ಬಾಗಲಕೋಟೆ: ರಾಜ್ಯದಲ್ಲಿ ಅಭಿವೃದ್ಧಿ ಇಲ್ಲ ಇದರ ಜತೆಗೆ ಈಗ ಉಪಚುನಾವಣೆ ನಡೆಯುತ್ತಿರುವ ಬಾಗಲಕೋಟೆಯಲ್ಲಿಯೂ ಮೂರು ವರ್ಷದಲ್ಲಿ ಅಭಿವೃದ್ಧಿ ಶೂನ್ಯವಾಗಿದ್ದರಿಂದ ಸರ್ಕಾರದ ಹಣವನ್ನು ತಂದು ಹಂಚಿಕೆ ಮಾಡಿ ಚುನಾವಣೆಯನ್ನು ಗೆಲ್ಲಲು ಸರ್ಕಾರದ ಮಂತ್ರಿಗಳು, ಮುಖ್ಯಮಂತ್ರಿಗಳು ಮುಂದಾಗಿದ್ದಾರೆ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಆಕ್ರೋಶ ವ್ಯಕ್ತಪಡಿಸಿದರು. ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠವರ ವಿರುದ್ಧ ಕರಪತ್ರ ಹಂಚಿದ್ದ ಕಾಂಗ್ರೆಸ್ ಕಾರ್ಯಕರ್ತರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಚುನಾವಣಾಧಿಕಾರಿಗಳಿಗೆ ಮನವಿ ಸಲ್ಲಿಸಿದ ಬಳಿಕ ಅವರು ಮಾಧ್ಯಮದವರೊಂದಿಗೆ ಮಾತನಾಡಿದರು.

ಕರಪತ್ರ ಹಂಚಿಕೆ ಮಾಡುವವರು ಕೇಸರಿ ಶಾಲು ಹಾಕಿಕೊಂಡು ವಿದ್ಯಾರ್ಥಿಗಳಿಗೆ ಭಯ ಹುಟ್ಟಿಸುವ ಕೆಲಸ ಮಾಡಿದ್ದಾರೆ. ಕಾಂಗ್ರೆಸ್ ಪಕ್ಷದವರಿಗೆ ನಾಚಿಕೆಯಾಗಬೇಕು. ಸೋಲಿನ ಭಯದಿಂದ ಕಾಂಗ್ರೆಸ್ ನಾಯಕರು ಈ ದಾರಿಯನ್ನು ತುಳಿದಿದ್ದಾರೆ. ಅಭಿವೃದ್ಧಿ ಮಾಡಿದ್ದರೆ ಮುಖ್ಯಮಂತ್ರಿಯವರು ಐದು ದಿನ ಬಾಗಲಕೋಟೆಯಲ್ಲಿ ಇರುವುದು ಅವಶ್ಯಕತೆ ಇರಲಿಲ್ಲ ಎಂದು ಹೇಳಿದರು.

ಟ್ರ್ಯಾಕ್ಟರ್ ಪಲ್ಟಿ: ಓರ್ವ ಸಾವು

ಹಿರೇಬಾಗೇವಾಡಿ: ಟ್ರ್ಯಾಕ್ಟರ್ ಪಲ್ಟಿಯಾಗಿ ಚಾಲಕ ಸ್ಥಳದಲ್ಲೇ ಮೃತಪಟ್ಟು ಇನ್ನೋರ್ವ ಗಾಯಗೊಂಡ ಘಟನೆ ಸಮೀಪದ ಬಡಾಲ ಅಂಕಲಗಿಯ ಜಮೀನಿನಲ್ಲಿ ಸಂಭವಿಸಿದೆ. ಬಡಸ್ ಕೆಎಚ್ ಗ್ರಾಮದ ಟ್ರ್ಯಾಕ್ಟರ್ ಚಾಲಕ



ಮಾರುತಿ ರುದ್ರಪ್ಪ ಅಲಾಬದಿ (24) ಮೃತ. ಈತ ಟ್ರ್ಯಾಕ್ಟರನ್ನು ಅತಿ ವೇಗ ಮತ್ತು ನಿಷ್ಕಾಳಜಿಯಿಂದ ನಡೆಸಿಕೊಂಡು ಬಂದು ಪಲ್ಟಿ ಹೊಡೆಸಿದ್ದಾನೆ. ಟ್ರ್ಯಾಕ್ಟರ್ ನಲ್ಲಿದ್ದ ಬಡಾಲ ಅಂಕಲಗಿ ಗ್ರಾಮದ ಬಸಪ್ಪ ಸಣ್ಣಮಲ್ಲಪ್ಪ ಕುಡುಚಿ (52) ಇವರಿಗೆ ಗಾಯಗಳಾಗಿವೆ. ಹಿರೇಬಾಗೇವಾಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಭೀಕರ ಅಪಘಾತ: ಓರ್ವ ಸಾವು

ಕುಮಟಾ: ಪಟ್ಟಣದ ಗಿಬ್ ಸರ್ಕಲ್ ಸಮೀಪದ ರಾಷ್ಟ್ರೀಯ ಹೆದ್ದಾರಿಯಲ್ಲಿ ಬೈಕ್ ಹಾಗೂ ಲಾರಿನಡುವೆ ಸಂಭವಿಸಿದ ಭೀಕರ ಅಪಘಾತದಲ್ಲಿ ಬೈಕ್‌ಸವಾರ ಸ್ಥಳದಲ್ಲೇ ಸಾವನ್ನಪ್ಪಿದ ಧಾರುಣ ಘಟನೆ ನಡೆದಿದೆ. ಸುಬ್ರಮಣ್ಯ ಭೀರಪ್ಪ ಅಂಬಿಗ (35) ಮೃತ ದುರ್ದೈವಿ. ಬೈಕ್‌ನಲ್ಲಿದ್ದ ಇನ್ನೋರ್ವ ಸವಾರ ಭಗೀರಥ ಮಹಾದೇವ ಅಂಬಿಗ ಎಂಬಾತ ಗಂಭೀರ ಗಾಯಗೊಂಡಿದ್ದಾನೆ. ಇಬ್ಬರೂ ಹೆಗಡೆ ಗ್ರಾಮದ ನಿವಾಸಿಗಳು ಎನ್ನಲಾಗಿದೆ. ಮೀನುಗಾರಿಕಾ ಬಲೆ ಖರೀದಿಗಾಗಿ ಬೈಕಿನಲ್ಲಿ ಇಬ್ಬರು ಮಲ್ಲೆಗೆ ಕಡೆಗೆ ತೆರಳುತ್ತಿದ್ದಾಗ ಹಿಂಬದಿಯಿಂದ ಬಂದ ಲಾರಿ ಬೈಕ್‌ಗೆ ಡಿಕ್ಕಿ ಹೊಡೆದಿದೆ. ಪರಿಣಾಮವಾಗಿ ಓರ್ವ ಸ್ಥಳದಲ್ಲೇ ಸಾವನ್ನಪ್ಪಿದ್ದು, ಇನ್ನೋರ್ವ ಗಂಭೀರವಾಗಿ ಗಾಯಗೊಂಡಿದ್ದಾನೆ.

ನಾಲೆಯಲ್ಲಿ ನವಜಾತ ಶಿಶುವಿನ ಮೃತದೇಹ ಪತ್ತೆ

ಮುನಿರಾಬಾದ್: ಶಿವಪುರ ಗ್ರಾಮದ ತುಂಗಭದ್ರಾ ಎಡದಂಡೆ ಕಾಲುವೆಯ ಕಿರು ನಾಲೆಯಲ್ಲಿ ಶನಿವಾರ ಮಧ್ಯಾಹ್ನ 2 ಗಂಟೆಯ ಸುಮಾರಿಗೆ ಕಾಲುವೆಯ ನೀರಿನಲ್ಲಿ ಶಿಶುವಿನ ಮೃತದೇಹ ತೇಲಿ ಬಂದ ಘಟನೆ ತಡವಾಗಿ ಬೆಳಕಿಗೆ ಬಂದಿದೆ. ಶಿವಪುರ ಗ್ರಾಮದ ವ್ಯಾಪ್ತಿಯಲ್ಲಿ ಹರಿಯುವ ಕಿರು ನಾಲೆಯಲ್ಲಿ ಶಿಶುವಿನ ಶವ ಪತ್ತೆಯಾಗಿದ್ದು, ಇದನ್ನು ಕಂಡ ಸ್ಥಳೀಯರಲ್ಲಿ ಆತಂಕ ಮತ್ತು ಅನುಮಾನಗಳು ಮನೆ ಮಾಡಿವೆ.

ಯಾರೋ ಕಿಡಿಗೇಡಿಗಳು ಶಿಶುವನ್ನು ನೀರಿನಲ್ಲಿ ಎಸೆದಿರಬಹುದು ಎಂಬ ಶಂಕೆ ವ್ಯಕ್ತವಾಗಿದೆ. ಕೂಡಲೇ ಗ್ರಾಮಸ್ಥರು, ನೀರಿನಿಂದ ಮೃತದೇಹವನ್ನು ಹೊರತೆಗೆದು ನಾಲೆಯ ಪಕ್ಕದಲ್ಲೇ ಅಂತ್ಯಸಂಸ್ಕಾರ ನೆರವೇರಿಸಿದ್ದಾರೆ ಎಂದು ತಿಳಿದುಬಂದಿದೆ. ಗ್ರಾಮದಲ್ಲಿ ಇಂತಹದೊಂದು ಅಮಾನವೀಯ ಘಟನೆ ನಡೆದರೂ ಸಹ ಸ್ಥಳೀಯ ಆರೋಗ್ಯ ಇಲಾಖೆಯ ಅಧಿಕಾರಿಗಳು ಯಾವುದೇ ಕ್ರಮ ಕೈಗೊಳ್ಳದಿರುವುದು ಸಾರ್ವಜನಿಕರ ಕೆಂಗಣ್ಣಿಗೆ ಗುರಿಯಾಗಿದೆ. ನವಜಾತ ಶಿಶುವಿನ ಸಾವು ಮತ್ತು ಪತ್ತೆಯಾದ ಸಂದರ್ಭದ ಬಗ್ಗೆ ತನಿಖೆ ನಡೆಸಬೇಕಾದ ಅಧಿಕಾರಿಗಳು ಮೌನಕ್ಕೆ ಶರಣಾಗಿದ್ದಾರೆ. ಇಂತಹ ಘಟನೆಗಳು ಮರುಕಳಿಸುತ್ತಿದ್ದರೂ ಇಲಾಖೆ ಮಾತ್ರ ಕ್ಯಾರೆ ಎನ್ನುತ್ತಿಲ್ಲ ಎಂದು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಈ ಕಿರು ನಾಲೆ ಗ್ರಾಮದ ಮಧ್ಯೆಯೇ ಹರಿಯುತ್ತಿರುವುದರಿಂದ ಗ್ರಾಮಸ್ಥರಲ್ಲಿ ನಾನಾ ರೀತಿಯ ಅನುಮಾನಗಳು ವ್ಯಕ್ತವಾಗುತ್ತಿವೆ. ಸಂಬಂಧಪಟ್ಟ ಪೊಲೀಸ್ ಇಲಾಖೆ ಹಾಗೂ ಉನ್ನತ ಆರೋಗ್ಯ ಅಧಿಕಾರಿಗಳು ಈ ಕೂಡಲೇ ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲಿಸಿ ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ.

ಯಡಿಯೂರಪ್ಪ, ಕುಮಾರಸ್ವಾಮಿ ಜಂಟಿ ಪ್ರಚಾರ | ಕಾಂಗ್ರೆಸ್ ವಿರುದ್ಧ ವಾಗ್ದಾಳಿ

ಬಿಜೆಪಿ-ಜೆಡಿಎಸ್ ಶಕ್ತಿ ಪ್ರದರ್ಶನ

ಬಾಗಲಕೋಟೆ: ಉಪಚುನಾವಣೆ ಹಿನ್ನೆಲೆಯಲ್ಲಿ ರಾಂಪೂರ ಗ್ರಾಮದಲ್ಲಿ ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠರ ಪರವಾಗಿ ಬಿಜೆಪಿ ಹಾಗೂ ಜೆಡಿಎಸ್ ನಾಯಕರು ಸಾರ್ವಜನಿಕ ಸಭೆಯಲ್ಲಿ ಮತಯಾಚನೆ ನಡೆಸಿದರು.

ಸಭೆಯಲ್ಲಿ ಮಾತನಾಡಿದ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು, ಚರಂತಿಮಠರು ಭಾರೀ ಬಹುಮತದಿಂದ ಗೆಲುವು ಸಾಧಿಸಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಹಣ, ಹೆಂಡ ಮತ್ತು ಜಾತಿ ಆಧಾರಿತ ರಾಜಕಾರಣಕ್ಕೆ ಜನರು ತಲೆಬಾಗುವುದಿಲ್ಲ; ಬದಲಾವಣೆಯ ಪರ ಜನರು ತೀರ್ಮಾನಿಸಿದ್ದಾರೆ ಎಂದರು. ಕಾಂಗ್ರೆಸ್ ಸರ್ಕಾರ ಹಲವು ಜನಪರ ಯೋಜನೆಗಳನ್ನು ನಿಲ್ಲಿಸಿದೆ ಎಂದು ಆರೋಪಿಸಿದ ಅವರು, ಭಾಗ್ಯಲಕ್ಷ್ಮಿ ಸೇರಿದಂತೆ ವಿವಿಧ ಯೋಜನೆಗಳ ಬಗ್ಗೆ ಪ್ರಶ್ನೆ ಎತ್ತಿದರು.

ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಅವರು, ಕಾಂಗ್ರೆಸ್ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿ, ಯುವಕರಿಗೆ ನೀಡಬೇಕಾದ ಸಹಾಯಧನ ಸೇರಿದಂತೆ ಹಲವಾರು ಭರವಸೆಗಳು ಈಡೇರಿಲ್ಲ ಎಂದು ಆರೋಪಿಸಿದರು.

ಕೇಂದ್ರ ಸಚಿವ ಕುಮಾರಸ್ವಾಮಿ ಅವರು, ಸಿಎಂ ಸಿದ್ದರಾಮಯ್ಯ ಅಕ್ಕಿ ರಾಮಯ್ಯನವರಲ್ಲ, ಸುಳ್ಳರಾಮಯ್ಯನೂ ಅಲ್ಲ, ಕಳ್ಳರಾಮಯ್ಯನವರಾಗಿದ್ದಾರೆ ಎಂದು ವಾಗ್ದಾಳಿ ನಡೆಸಿದರು.

ಬಡವರಿಗೆ ಉಚಿತ ಐದು ಕೆಜಿ ಅಕ್ಕಿ ಕೊಡುತ್ತಿರುವುದು ಕೇಂದ್ರ ಸರಕಾರದ್ದು, ನಾನು ಯಡಿಯೂರಪ್ಪನವರು ಕೂಡಿಕೊಂಡು ಸರಕಾರ



ನಡೆಸುವಾಗ ಗ್ರಾಮೀಣ ಪ್ರದೇಶದಲ್ಲಿ ಜನರಿಗೆ ಸಾಕಷ್ಟು ಕೆಲಸಗಳನ್ನು ಮಾಡಿದ್ದೇವೆ. ಅಂತಹದ್ದೇ ಸರಕಾರ ಬರಲು ಈ ಚುನಾವಣೆ ವೇದಿಕೆಯಾಗಲಿದೆ ಎಂದರು.

ಸಂಸದ ಬಸವರಾಜ ಬೊಮ್ಮಾಯಿ ಅವರು, ಕ್ಷೇತ್ರದ ಅಭಿವೃದ್ಧಿಗಾಗಿ ಚರಂತಿಮಠರನ್ನು ಮತ್ತೆ ಗೆಲ್ಲಿಸುವಂತೆ ಮನವಿ ಮಾಡಿದರು. ಬಾಗಲಕೋಟೆ ಹಾಗೂ ಬಾದಾಮಿ ಪ್ರದೇಶಗಳ ಅಭಿವೃದ್ಧಿ ವಿಚಾರದಲ್ಲಿ ಕಾಂಗ್ರೆಸ್ ವಿರುದ್ಧ ಟೀಕೆ ವ್ಯಕ್ತಪಡಿಸಿದರು.

ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ ಅವರು, ಚುನಾವಣೆಯನ್ನು ದಿಕ್ಕುತಪ್ಪಿಸುವ ಪ್ರಯತ್ನಗಳು ನಡೆಯುತ್ತಿವೆ ಎಂದು ಆರೋಪಿಸಿ, ಕಾರ್ಯಕರ್ತರು ಮತ್ತು ಜನರ ಬೆಂಬಲದಿಂದ ಹೆಚ್ಚಿನ ಮತಗಳಿಂದ ಗೆಲ್ಲಿಸುವಂತೆ ಮನವಿ ಮಾಡಿದರು.

ಬಿಜೆಪಿ ಮುಖಂಡ ರಮೇಶ ಕತ್ತಿ ಮಾತನಾಡಿದರು. ಸಭೆಯಲ್ಲಿ ಗಾಲಿ ಜನಾರ್ದನ ರೆಡ್ಡಿ, ಗೋವಿಂದ ಕಾರಜೋಳ, ಜಗದೀಶ್ ಶೆಟ್ಟರ್, ಪಿ.ಸಿ. ಗದ್ದಿಗೌಡರ, ಸಿ.ಸಿ. ಪಾಟೀಲ್, ರಮೇಶ ಕತ್ತಿ,ಎ.ಎಸ್. ಪಾಟೀಲ್ ನಡಹಳ್ಳಿ ಸೇರಿದಂತೆ ಹಲವು ನಾಯಕರು ಉಪಸ್ಥಿತರಿದ್ದರು.

> **ಗ್ಯಾರಂಟಿ ಯೋಜನೆಗಳು ಜನರಿಗೆ ನಿಜವಾದ ಪ್ರಯೋಜನ ತಂದಿವೆಯೇ ಎಂಬುದನ್ನು ಪರಿಶೀಲಿಸುವ ಅಗತ್ಯವಿದೆ. ಶಿಕ್ಷಣ ಕ್ಷೇತ್ರದಲ್ಲಿ ಚರಂತಿಮಠರ ಕೊಡುಗೆ ಗಮನಾರ್ಹವಾಗಿದೆ. ನಿರುದ್ಯೋಗ ಸಮಸ್ಯೆಗೆ ಸಮರ್ಪಕ ಪರಿಹಾರ ದೊರಕಿಲ್ಲ.**
> ■ **ಎಚ್.ಡಿ. ಕುಮಾರಸ್ವಾಮಿ,** ಮಾಜಿ ಮುಖ್ಯಮಂತ್ರಿ ಹಾಗೂ ಕೇಂದ್ರ ಸಚಿವ

> **ಇಲ್ಲಿ ಸೇರಿದ ಜನಸಂಖ್ಯೆ ನೋಡಿದರೆ ಬಾಗಲಕೋಟೆಯಲ್ಲಿ ದೊಡ್ಡ ಬದಲಾವಣೆ ಗಾಳಿ ಬೀಸುತ್ತಿದೆ. ನಾನು ಬಾಗಲಕೋಟೆಯಲ್ಲಿದ್ದೇನೋ ಅಥವಾ ಶಿಕಾರಿಪುರದಲ್ಲಿದ್ದೇನೋ ಅನಿಸುತ್ತಿದೆ. ನಂಬಿಕೆ ದ್ರೋಹಿ ಕಾಂಗ್ರೆಸ್‌ಗೆ ಬುದ್ಧಿ ಕಲಿಸೋಣ.**
> ■ **ಬಿ.ಎಸ್.ಯಡಿಯೂರಪ್ಪ,** ಮಾಜಿ ಮುಖ್ಯಮಂತ್ರಿ

ಆಲಮಟ್ಟಿ ಅಣೆಕಟ್ಟು ನಿರ್ಮಾಣದಲ್ಲಿ ಕಾಂಗ್ರೆಸ್ ಕೊಡುಗೆ ಅಪಾರ: ಪಾಟೀಲ

ಬಾಗಲಕೋಟೆ: ಆಲಮಟ್ಟಿ ಅಣೆಕಟ್ಟಿನಿಂದ 1962 ರಲ್ಲಿ ಆರಂಭವಾದ ಕೃಷ್ಣಾ ಮೇಲ್ದಂಡೆ ಯೋಜನೆ ಈ ಮಟ್ಟಕ್ಕೆ ಬೆಳೆಯಲು ಕಾಂಗ್ರೆಸ್ ಕೊಡುಗೆ ಅಪಾರವಾಗಿದೆ. 519.00 ಮೀಟರ್‌ವರೆಗೆ 122 ಟಿಎಂಸಿ ನೀರು ಸಂಗ್ರಹಿಸುವಲ್ಲಿ ಕಾಂಗ್ರೆಸ್ ಸರ್ಕಾರದ ಶ್ರಮ ಅಡಗಿದೆ. ಈ ವಿಷಯದಲ್ಲಿ ಬಿಜೆಪಿಗೆ ಯಾವುದೇ ನೈತಿಕತೆ ಇಲ್ಲ ಎಂದು ಕಾನೂನು ಸಚಿವ ಎಚ್.ಕೆ.ಪಾಟೀಲ ಹೇಳಿದರು.

ನಗರದ ಕಾಂಗ್ರೆಸ್ ಕಚೇರಿಯಲ್ಲಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಿಜೆಪಿ ನಾಯಕರ ಆರೋಪದಲ್ಲಿ ಹುರುಳಿಲ್ಲ, 1999 ವರೆಗೆ ಬಹುಪಾಲು ಆಡಳಿತ ನಡೆಸಿದ ಕಾಂಗ್ರೆಸ್, ಇನ್ನೂಳಿದ ಸರ್ಕಾರಗಳು ಬಾರಾ ಕಮಾನ್ ನಂತಿದ್ದ ಆಲಮಟ್ಟಿ ಅಣೆಕಟ್ಟು ಎತ್ತರ ಹೆಚ್ಚಿಸಿ ಗೇಟ್ ಅಳವಡಿಸಿದ್ದು ನಮ್ಮ ಸರ್ಕಾರ. ಇವರ ಕೊಡುಗೆ ಏನು ಅಂತ ಪ್ರಶ್ನಿಸಿದರು.

1975 ರಿಂದ 1999 ವರೆಗೆ 14500 ಕೋಟಿ ರೂ. ಖರ್ಚು ಮಾಡಲಾಗಿದೆ. ಈ ಪೈಕಿ 8200 ಕೋಟಿ ರೂ. ಎಸ್.ಎಂ.ಕೃಷ್ಣಾ ಮುಖ್ಯಮಂತ್ರಿ ಇದ್ದಾಗ ನಾನು ನೀರಾವರಿ ಸಚಿವನಾಗಿ ನೀಡಿದ್ದೇನೆ. ಕೃಷ್ಣಾ ನ್ಯಾಯಾಧೀಕರಣವು ಹೊಸ ತೀರ್ಪು ಪ್ರಕಟಿಸಿತು. 13 ವರ್ಷ ಕಳೆದರು ಇಂದಿಗೂ ಕೇಂದ್ರದ ಬಿಜೆಪಿ ಸರ್ಕಾರ ಗೆಜೆಟ್ ನೋಟಿಫಿಕೇಶನ್ ಹೊರಡಿಸುತ್ತಿಲ್ಲ, 2050 ವರ್ಷಕ್ಕೆ ಇದು ಅಂತ್ಯಗೊಳ್ಳಲಿದೆ. ವಿಷಯ ಹೀಗೆ ಇರುವಾಗ ಬಿಜೆಪಿ ಪಾತ್ರ ಏನಿದೆ ಅಂತ ಅಂಕಿ ಅಂಶಗಳ ಸಮೇತ ಬಿಚ್ಚಿಟ್ಟರು.

ಕೃಷ್ಣಾ ಮೇಲ್ದಂಡೆ ಯೋಜನೆಯಿಂದ 57000 ಹೆಕ್ಟೇರ್ ಪ್ರದೇಶ ನೀರಾವರಿಗೊಳ್ಳಬೇಕು. 2.55 ಲಕ್ಷ ಹೆಕ್ಟೇರ್ 2002 ರಲ್ಲಿಯೇ ನೀರಾವರಿ ಮಾಡಿದ್ದೇವೆ. ಈಗ ನಮ್ಮ ಕಾಂಗ್ರೆಸ್ ಸರ್ಕಾರ ಕೃ.ಮೇ. ಮೂರನೇ ಹಂತದ ಭೂ ಸ್ವಾಧೀನಕ್ಕೆ ನೀರಾವರಿಗೆ 40 ಲಕ್ಷ ರೂ., ಒಣ ಬೇಸಾಯ 30 ಲಕ್ಷ ರೂ. ಒಪ್ಪಿತ ದರ ಘೋಷಣೆ ಮಾಡಿ ಈಗಾಗಲೇ ಹಂಚಿಕೆ ಮಾಡುತ್ತಿದ್ದೇವೆ ಎಂದರು.



> **ಕಳೆದ ಮೂರು ವರ್ಷಗಳಿಂದ ಕೇಂದ್ರದ ಬಿಜೆಪಿ ಸರ್ಕಾರ ಜಿಎಸ್‌ಟಿ ಪರಿಹಾರ ನೀಡಿಲ್ಲ, ಬರದ ಪರಿಹಾರ ಪಡೆಯಲು ಸುಪ್ರೀಂ ಕೋರ್ಟ ಮೆಟ್ಟಿಲು ಪರಿಸ್ಥಿತಿ ನಿರ್ಮಾಣ ಮಾಡಿದರು.**
> ■ **ಎಚ್.ಕೆ.ಪಾಟೀಲ,** ಸಚಿವ

ರಾಜ್ಯದ ಜನರ ಮೇಲೆ ಸಾಲದ ಹೊರೆ

ಬಾಗಲಕೋಟೆ: ರಾಜ್ಯದ ಆರ್ಥಿಕ ಪರಿಸ್ಥಿತಿ ದಿವಾಳಿಯಾಗಿದೆ. ಅದನ್ನು ಬಿಟ್ಟು ಕೇಂದ್ರ ಸರ್ಕಾರ ಸಾಲ ಮಾಡಿದೆ ಎಂದು ಹೇಳುತ್ತಾರೆ. ಗ್ಯಾರಂಟಿ ಯೋಜನೆಗಳನ್ನು ಕೊಟ್ಟಿರುವ ಹಣಕ್ಕಿಂತ ಹೆಚ್ಚಿನ ಸಾಲವನ್ನು ರಾಜ್ಯದ ಜನರ ಮೇಲೆ ಹೊರಿಸಿದ್ದಾರೆ ಎಂದು ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಹೇಳಿದರು.

ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ ಪರ ಪ್ರಚಾರಕ್ಕೆ ಆಗಮಿಸಿದ ಸಂದರ್ಭದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು,

2018ರಲ್ಲಿ ಬಾದಾಮಿಯಲ್ಲಿ ಸ್ವಲ್ಪ ಮತಗಳ ಅಂತರದಿಂದ ಗೆದ್ದಿದ್ದೀರಿ.

ಆ ವೇಳೆ ಬಾದಾಮಿಯನ್ನು ದತ್ತು ಪಡೆಯುತ್ತೇನೆ ಎಂದು ಹೇಳಿದ್ದು ನೆನಪಿದೆ. ಎಷ್ಟರ ಮಟ್ಟಿಗೆ ಆ ಕ್ಷೇತ್ರವನ್ನು ಅಭಿವೃದ್ಧಿ ಮಾಡಿದ್ದೀರಿ ಎಂಬುದನ್ನು ಜನರಿಗೆ ತಿಳಿಸಬೇಕು ಎಂದರು.

2018ರಲ್ಲಿ ಕಾಂಗ್ರೆಸ್-ಜೆಡಿಎಸ್ ಸಮ್ಮಿಶ್ರ ಸರ್ಕಾರ ನಡೆಸಬೇಕಾಯಿತು ಕಾಂಗ್ರೆಸ್ ಒತ್ತಡದಿಂದಲೇ ಆ ಸರ್ಕಾರ ನಡೆಯಿತು. ನಂತರ ಸರಕಾರ ಬಿತ್ತು. ಈಗ ಮೂರು ವರ್ಷದಿಂದ ನೀವೇ ಸಿಎಂ ಆಗಿದ್ದೀರಿ. ಬಾದಾಮಿ ಕ್ಷೇತ್ರದ ಜನರಿಗೆ ಕೊಟ್ಟ ಮಾತು ಉಳಿಸಿಕೊಳ್ಳಲು ಏಕೆ ಸಾಧ್ಯವಾಗಿಲ್ಲ ಜನರಿಗೆ



ತಿಳಿಸಿ ಎಂದರು.

2014ರಲ್ಲಿ ಕಾಂಗ್ರೆಸ್‌ನವರು ರೈತರ ಸಾಲಮನ್ನಾ ಮಾಡಿದರು. ಅದು 2018ರ ಸಮ್ಮಿಶ್ರ ಸರಕಾರದ ತಲೆ ಮೇಲೆ ಬಿತ್ತು. ನೀವು ಲಘುವಾಗಿ ವಿಪಕ್ಷಗಳ ಮಾತುಗಳಿಗೆ ಪ್ರತಿಕ್ರಿಯೆ ಕೊಡ್ತಿರಿ. ನಾವು ನಿಮ್ಮಷ್ಟು ಬುದ್ಧಿವಂತರಲ್ಲ, ಕೇಂದ್ರ ಸರ್ಕಾರವನ್ನು ಪ್ರತಿನಿತ್ಯ ಟೀಕೆ ಮಾಡ್ತೀರಿ ತಲಾ ಆದಾಯದಲ್ಲಿ ಕರ್ನಾಟಕ ಎರಡನೇ ಸ್ಥಾನದಲ್ಲಿ ಇದೆ ಎಂದು ಹೇಳುತ್ತೀರಿ. ಪ್ರತಿ ಕುಟುಂಬದ ತಲಾ ಆದಾಯ ಹೆಚ್ಚಾಗಿದೆ ಎಂದು ಹೇಳುತ್ತಿರಿ ಹಾಗಿದ್ದರೆ ಈ ಗ್ಯಾರಂಟಿ ಯೋಜನೆಗಳ ಅವಶ್ಯಕತೆ ಏನಿದೆ? ನಿಮ್ಮಲ್ಲಿಯೇ ದ್ವಂದ್ವ ನಿಲುವುಗಳಿವೆ ಎಂದು ಕುಮಾರಸ್ವಾಮಿ ವಾಗ್ದಾಳಿ ನಡೆಸಿದರು.

ಹಣಮಂತ ಮಾವಿನಮರದ, ಬಂಡೆಪ್ಪ ಕಾಶಾಂಪುರ, ಭೋಸರಾಜು, ಅಲ್ಕೋಡ ಹಣಮಂತ ಪತ್ರಿಕಾಗೋಷ್ಠಿಯಲ್ಲಿದ್ದರು.

ಎನ್‌ಎಸ್‌ಯುಐನ ಏಳು ಜನರ ಮೇಲೆ ಪ್ರಕರಣ ದಾಖಲು

ಬಾಗಲಕೋಟೆ: ನವನಗರ ಕುಮಾರೇಶ್ವರ ಕ್ಯಾಂಪಸ್‌ನಲ್ಲಿ ಕರಪತ್ರವನ್ನು ಹಿಡಿದುಕೊಂಡು ಬಿಜೆಪಿ ಪಕ್ಷದ ವಿರುದ್ಧ ಚುನಾವಣಾ ವಿಭಾಗದಿಂದ ಅನುಮತಿ ಪಡೆದುಕೊಳ್ಳದೇ ಪ್ರಚಾರ ಮಾಡುತ್ತಿದ್ದ ಏಳು ಜನರ ಮೇಲೆ ನವನಗರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ನವನಗರದ ಕುಮಾರ ಆಸ್ಪತ್ರೆಯ ಕ್ಯಾಂಪಸ್‌ದಲ್ಲಿ ಎನ್.ಎಸ್.ಯು.ಐ ಘಟಕದವರು ಅಲ್ಲಿರುವ ವಿದ್ಯಾರ್ಥಿಗಳಿಗೆ ಪಾಂಪ್ಲೇಟ್ ನೀಡಿ ಬಿಜೆಪಿ ಪಕ್ಷದ ವೀರಣ್ಣ ಚರಂತಿಮಠ ಹಾಗೂ ಬಿಜೆಪಿ ಪಕ್ಷದ ವಿರುದ್ಧವಾಗಿ ಪ್ರಚಾರ ಮಾಡಿದ ಬಗ್ಗೆ ಚುನಾವಣಾ ವೀಕ್ಷಕರು ಗಮನಕ್ಕೆ ಬಂದಿದ್ದು ಇದರ ಹಿನ್ನಲೆಯಲ್ಲಿ ಏಳು ಜನರ ಮೇಲೆ ಪ್ರಕರಣ ದಾಖಲಿಸಲಾಗಿದೆ.

ಬಿಜೆಪಿ ಅಭ್ಯರ್ಥಿ ವಿರುದ್ಧ ಅನುಮತಿ ಇಲ್ಲದೇ ಪ್ರಚಾರ

ಬಳ್ಳಾರಿ ಜಿಲ್ಲೆಯ ತಿಪ್ಪೇಸ್ವಾಮಿ ಪಾಂಡುರಂಗಪ್ಪ ಗಚ್ಚಿನಮನಿ (29), ಕೊಪ್ಪಳ ಜಿಲ್ಲೆಯ ಇಂದರಗಿಯ ಮಹೇಶ ಅಮರೇಶ ಬೋವಿ (21), ಬಾಗಲಕೋಟೆ ಜಿಲ್ಲೆಯ ಬೀಳಗಿಯ ವಿಜಯ ಕುಮಾರ ಶೇಖರ ಶಿರೂರ(29), ಬಳ್ಳಾರಿಯ ಶ್ರೀನಿವಾಸ ಚಿದಾನಂದ (22), ಬಳ್ಳಾರಿಯ ಅಬ್ದುಲ್ಲಶೀಂ ಅಬ್ದುಲಹಮೀದ ವಯಾ (24) ಹೊಸಪೇಟೆಯ ಸಂದೀಪ ಶ್ರೀನಿವಾಸಲೂ(26) ಇವರ ಮೇಲೆ ಪ್ರಕರಣ ದಾಖಲಿಸಲಾಗಿದೆ.

ಇವರೆಲ್ಲರೂ ಸೇರಿಕೊಂಡು ಶಿಕ್ಷಣ ಸಂಸ್ಥೆಯಾದ ನವನಗರ ಕುಮಾರೇಶ್ವರ ಮೇಡಿಕಲ್ ಕಾಲೇಜ ಹಾಗೂ ಆಸ್ಪತ್ರೆಯ ಕ್ಯಾಂಪಸ್ ಆವರಣದಲ್ಲಿ ಬಿಜೆಪಿ ಪಕ್ಷದ ವಿರುದ್ಧವಾಗಿ ಪ್ರಚಾರಮಾಡುವ ಮುಂಚಿತವಾಗಿ ಸದರಿಯವರು ಯಾವುದೇ ಪೂರ್ವಾನುಮತಿ ಪಡೆದುಕೊಳ್ಳದೇ ಶಿಕ್ಷಣ ಸಂಸ್ಥೆಯಲ್ಲಿ ಬಿಜೆಪಿ ಪಕ್ಷದ ವಿರುದ್ಧವಾಗಿ ಪ್ರಚಾರ ಮಾಡಿದ್ದರು.

ಬಾಗಲಕೋಟ ವಿಧಾನ ಸಭಾ ಉಪ ಚುನಾವಣೆಯ ಯಾವುದೇ ಪೂರ್ವಾನುಮತಿ ಪಡೆದುಕೊಳ್ಳದೇ ಎಲ್ಲರೂ ಕೂಡಿಕೊಂಡು ನವನಗರ ಕುಮಾರೇಶ್ವರ ಮೇಡಿಕಲ್ ಕಾಲೇಜ ಹಾಗೂ ಆಸ್ಪತ್ರೆಯ ಕ್ಯಾಂಪಸ್ ಆವರಣದಲ್ಲಿ ಬಿಜೆಪಿ ಪಕ್ಷದ ವಿರುದ್ಧವಾಗಿ ಪ್ರಚಾರ ಮಾಡಿ ಉಪ ಚುನಾವಣೆಯ ಮಾದರಿಯ ನೀತಿ ಸಂಹಿತೆಯನ್ನು ಉಲ್ಲಂಘಿಸಿದ್ದರಿಂದ ಏಳು ಜನರ ಮೇಲೆ ಕೇಸ್ ದಾಖಲಿಸಿಕೊಳ್ಳಲಾಗಿದೆ.

ಹುಬ್ಬಳ್ಳಿಯಲ್ಲಿ ಮತ್ತೊಂದು ಲವ್ ಜಿಹಾದ್ ಪ್ರಕರಣ

ಹುಬ್ಬಳ್ಳಿ: ಜಿಮ್‌ನಲ್ಲಿ ಲವ್ ಜಿಹಾದ್‌ಗೆ ಯತ್ನಿಸಿದ ಆರೋಪ ಪ್ರಕರಣದ ಬೆನ್ನಲ್ಲೇ ಅದೇ ರೀತಿ ಮುಸ್ಲಿಂ ಯುವಕ ಹಿಂದು ಯುವತಿಯೊಬ್ಬಳ ಮೇಲೆ ಲೈಂಗಿಕ ದೌರ್ಜನ್ಯ ವೆಸಗಿ ಬೆದರಿಕೆ ಹಾಕಿದ ದೂರವೊಂದು ಭಾನುವಾರ ಕೇಶ್ವಾಪುರ ಪೊಲೀಸ್ ಠಾಣೆಯಲ್ಲಿ ದಾಖಲಾಗಿದೆ. ಕೇಶ್ವಾಪುರ ಪೊಲೀಸರು ಆರೋಪಿಯನ್ನು ಬಂಧಿಸಿ ನ್ಯಾಯಾಲಯಕ್ಕೆ ಒಪ್ಪಿಸಿದ್ದಾರೆ.

ಇಲ್ಲಿಯ ಕಮರಿಪೇಟ ನಿವಾಸಿ ಮುಫೀಜ್ ಮಿಯಾನವರ(23) ಎಂಬಾತ ಬಂಧಿತ ಆರೋಪಿ. ಯುವತಿಗೆ ಹಾಗೂ ಆರೋಪಿ ಮುಫೀಜ್ ಕಳೆದ ಐದು ವರ್ಷದ ಹಿಂದೆ ಕಾರ್ಯಕ್ರಮವೊಂದರಲ್ಲಿ ಪರಿಚಯನಾಗಿದ್ದಾನೆ. ನಂತರ ಅವಳೊಂದಿಗೆ ಸಲುಗೆ ಬೆಳೆಸಿ ಅವಳೊಂದಿಗೆ ಸುತ್ತಾಡಿದ್ದಾನೆ. ಒಂದು ದಿನ ಅವಳನ್ನು ಗದಗ ರಸ್ತೆ ಮೇಲ್ಸೇತುವೆ ಹತ್ತಿರ ಕರೆದುಕೊಂಡು ಹೋಗಿ ಲೈಂಗಿಕ ದೌರ್ಜನ್ಯ ವೆಸಗಿದಲ್ಲದೇ ಹವಲು ಫೋಟೋ ಹಾಗೂ ವಿಡಿಯೋ ಗಳನ್ನು ಮೊಬೈಲ್ ನಲ್ಲಿ ಸೆರೆಹಿಡಿದಿದ್ದಾನೆ. ಅವುಗಳನ್ನು ಇಟ್ಟುಕೊಂಡು ಬೆರಿಕೆಹಾಕಿ 2025 ನವೆಂಬರ್ ನಲ್ಲಿ ಮನೆಗೆ ಕರೆದು ಲೈಂಗಿಕ ದೌರ್ಜನ್ಯ ವೆಸಗಿದ್ದಾನೆ. ಈ ವಿಚಾರ ಯಾರ ಮುಂದೆ ಹೇಳಿದರೆ ನಿಮ್ಮ ಪಾಲಕರನ್ನು ಜೀವ ಸಹಿತ ಬಿಡಲ್ಲ ಎಂದು ಬೆದರಿಕೆ ಹಾಕಿದ್ದಾನೆ ಎಂದು ದೂರಿನಲ್ಲಿ ಯುವತಿ ದೂರಿನಲ್ಲಿ ತಿಳಿಸಿದ್ದಾಳೆ.

ಯುವತಿ ವಿಡಿಯೋ ವೈರಲ್: ಮುಸ್ಲಿಂ ಯುವಕ ಮುಫೀಜ್ ಎಂ ಬಾತ ಯುವತಿಗೆ ಯಾವ ರೀತಿ ವಂಚಿಸಿದ್ದಾನೆ ಎಂಬ ವಿಡಿಯೋ ವೊಂದು ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ. ಮುಸ್ಲಿಂ ಯುವತಿಯಿಂದ ಆರೋಪಿ ಕಾಲೇಜ್ ಸಮಾರಂಭದಲ್ಲಿ ಪರಿಚಿತನಾಗಿದ್ದಾನೆ. ಆ ಮೇಲೆ ನನ್ನೊಂದಿಗೆ ಸಲುಗೆ ಬೆಳೆಸಿ, ಪ್ರೀತಿ ಪ್ರೇಮದ ನಾಟವಾಡಿದ. ಮೊದಲಿಗೆ ಆತನ ತಾನು ಮುಸ್ಲಿಂ ಎಂದು ಸಹ ಹೇಳಿದಿಲ್ಲ, ಬಳಿಕ ನನಗೆ ಆತ ಮುಸ್ಲಿಂ ಎಂಬುವುದು ಗೊತ್ತಾಗಿದೆ. ನಮ್ಮ ಮನೆಯವರು ನನಗೆ ಈ ಬಗ್ಗೆ ಮನವರಿಕೆ ಮಾಡಿದರು. ಈ ಹಿನ್ನೆಲೆ ನಾನು ಅವನಿಂದ ದೂರವಾದೆ. ಆತನ ನನ್ನ ಹಲವು ಫೋಟೋ ಹಾಗೂ ವಿಡಿಯೋ ಗಳನ್ನು ತೆಗೆದಿಟ್ಟುಕೊಂಡಿದ್ದಾನೆ. ಅವನ ಲ್ಯಾಪ್ಟಾಪ್ ಹಾಗೂ ಪೆಡ್ರೈವ್ ನಲ್ಲಿ ಇಟ್ಟುಕೊಂಡಿದ್ದು, ನನಗೆ ಹಾಗೂ ನಮ್ಮ ಪಾಲಕರಿಗೆ ಬೆದರಿಕೆ ಹಾಕುತ್ತಿದ್ದಾನೆ ಎಂದು ಯುವತಿ ವಿಡಿಯೋದಲ್ಲಿ ಅಳಲು ತೋಡಿಕೊಂಡಿದ್ದಾಳೆ. ಆರೋಪಿಯುವ ಸಹ ಸಮೀರ್ ಮುಲ್ಲಾ ಅವರ ಮಸಲ್ ಪ್ಯಾಕ್ಟರಿ ಜಿಮ್ ಗೆ ಹೋಗುತ್ತಿದ್ದ ಎಂದು ಸಾರ್ವಜನಿಕರು ಆರೋಪ ಮಾಡಿದ್ದಾರೆ.

> **ಯುವಕನೊಬ್ಬ ಯುವತಿ ಮೇಲೆ ಲೈಂಗಿಕ ದೌರ್ಜನ್ಯ ವೆಸಗಿದ ಪ್ರಕರಣವೊಂದು ಶನಿವಾರ ಕೇಶ್ವಾಪುರ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದು, ಆರೋಪಿ ಬಂಧಿಸಿ ನ್ಯಾಯಾಲಯಕ್ಕೆ ಒಪ್ಪಿಸಲಾಗಿದೆ. ದೂರಿನ ಆಧಾರದ ಮೇಲೆ ತನಿಖೆ ನಡೆಸಲಾಗುತ್ತಿದೆ. ತಪ್ಪಿತಸ್ಥರನ್ನು ಕಠಿಣ ಶಿಕ್ಷೆಗೆ ಒಳಪಡಿಸಲಾಗುವುದು.**
> ■ **ಎನ್. ಶಶಿಕುಮಾರ,** ಆಯುಕ್ತ ಹುಬ್ಬಳ್ಳಿ ಧಾರವಾಡ ಕಮಿಷನರೇಟ್

ಜನರಿಗೆ ಟೋಪಿ ಹಾಕಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಸರ್ಕಾರ

ರಾಜ್ಯ ಸರ್ಕಾರ ಆರ್ಥಿಕವಾಗಿ ದಿವಾಳಿ: ಪ್ರಹ್ಲಾದ ಜೋಶಿ

ಬಾಗಲಕೋಟೆ: ಮುಡಾ, ವಾಲ್ಮೀಕಿ ಹಗರಣ ಸೇರಿದಂತೆ ಸರ್ಕಾರ ಆಡಳಿತ ಭ್ರಷ್ಟಾಚಾರದಲ್ಲಿ ಮುಳಗಿದೆ. ರಾಜ್ಯ ಸರ್ಕಾರ ಆರ್ಥಿಕವಾಗಿ ದಿವಾಳಿಯಾಗಿದೆ. ಜನರಿಗೆ ಹೇಳಿದ ಯೋಜನೆಗಳನ್ನು ಸರಿಯಾಗಿ ಕೊಡದೆ ಜನರಿಗೆ ಟೋಪಿ ಹಾಕುವ ಕೆಲಸ ಮಾಡಿದೆ. ಅಗತ್ಯ ವಸ್ತುಗಳ ಬೆಲೆ ಏರಿಕೆ, ಇಂಧನ ಬೆಲೆ ಏರಿಕೆ ಮಾಡುವ ಮೂಲಕ ಇದೊಂದು ದರೋಡೆಕೋರರ ಸರ್ಕಾರವಾಗಿದೆ ಎಂದು ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಖಾರವಾಗಿ ಹೇಳಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾಂಗ್ರೆಸ್ ಪಕ್ಷದಿಂದ ರಾಜ್ಯದಲ್ಲಿ ಅಭಿವೃದ್ಧಿ ಇಲ್ಲ ಬರೀ ದರೋಡೆ ನಡೆಯುತ್ತಿದೆ. ಎಲ್ಲೆಲ್ಲಿ ಕಾಂಗ್ರೆಸ್ ಪಕ್ಷದ ಸರ್ಕಾರವಿದೆ ಅಲ್ಲಿ ನಕ್ಸಲ್, ಭಯೋತ್ಪಾದನೆ ಬೆಳೆಸುವುದು, ಮತೀಯ ಗಲಭೆ, ಮತಾಂದತೆಯನ್ನು ಬೆಳೆಸಲಾಗುತ್ತದೆ ಎಂದು ಹೇಳಿದರು.



ಕಾಂಗ್ರೆಸ್ ಪಕ್ಷ ಯೋಜನೆಗಳನ್ನು ಹೇಳಿ ಜನರಿಗೆ ಟೋಪಿ ಹಾಕುವ ಸರ್ಕಾರವಾಗಿದೆ. ಕೇಂದ್ರ ಸರ್ಕಾರದ ಅನ್ನಭಾಗ್ಯ ಯೋಜನೆ ಜಾರಿ ಮಾಡಿದರೆ ರಾಜ್ಯ ಸರ್ಕಾರ ಪತ್ರಿಕೆಯಲ್ಲಿ ಜಾಹೀರಾತು ನೀಡಿ ನಾವೇ ಅನ್ನಭಾಗ್ಯ ಅಕ್ಕಿ ಕೊಡುತ್ತೇವೆ ಎಂದು ಪ್ರಚಾರ ಪಡೆದುಕೊಳ್ಳುತ್ತಿದ್ದಾರೆ. ಇವರ ಖಾತೆಯಿಂದ ಒಂದು ಕಾಳ ಅಕ್ಕಿಯನ್ನು ಜನರಿಗೆ ಕೊಡಲು ಆಗಿಲ್ಲ, ಜನರಿಗೆ ಸುಳ್ಳು ಹೇಳಿ ಅಧಿಕಾರಕ್ಕೆ ಬಂದಿರುವ ಕಾಂಗ್ರೆಸ್ ಸರ್ಕಾರಕ್ಕೆ ಈ ಎರಡೂ ಉಪಚುನಾವಣೆಯಲ್ಲಿ ಮತದಾರರು ಶಾಕ್ ಟ್ರೀಟಮೆಂಟ್ ನೀಡಲಿದ್ದಾರೆ ಎಂದು ತಿಳಿಸಿದರು.

ಮುಖ್ಯಮಂತ್ರಿಯಾಗಿ ಐದು ದಿನ ಚುನಾವಣೆಗಾಗಿ ಪ್ರಚಾರಕ್ಕೆ ಇರುವುದನ್ನು ನೋಡಿದರೆ ಅವರಿಗೆ ಸೋಲಿನ ಭಯ ಶುರುವಾಗಿದೆ ಎಂದರು.

ಪೆಟ್ರೋಲ್, ಡಿಸೇಲ್ ಬೆಲೆ ಏರಿಕೆ ಮಾಡಿರುವುದು, ತುಷ್ಟೀಕರಣ ನೀತಿ ಅನುಸರಿಸುತ್ತಿರುವುದು, ರಾಜ್ಯದ ನೀರಾವರಿ ಯೋಜನೆ ನಿರ್ಲಕ್ಷ್ಯ ಮಾಡಿರುವುದು, ಮುಸ್ಲಿಂ ಸಮುದಾಯಕ್ಕೆ ಗುತ್ತಿಗೆ ಕೆಲಸದಲ್ಲಿ ಮೀಸಲಾತಿ ಕಲ್ಪಿಸಿರುವುದಕ್ಕಾಗಿ ಜನ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಬೇಕಾ ಎಂದು ಪ್ರಶ್ನಿಸಿದರು.

ಶಾಸಕ ಜಗದೀಶ ಗುಡಗುಂಟಿ, ಜನಾರ್ದನ ರೆಡ್ಡಿ, ವಿಧಾನ ಪರಿಷತ್ ಸದಸ್ಯ ಪಿ.ಎಚ್.ಪೂಜಾರ, ಮಾಜಿ ಶಾಸಕ ಬಿ.ಶ್ರೀರಾಮುಲು, , ಮಾಜಿ ಶಾಸಕ ಎಸ್.ಕೆ.ಬೆಳ್ಳುಬ್ಬಿ, ಜಿಲ್ಲಾಧ್ಯಕ್ಷ ಶಾಂತಗೌಡ ಪಾಟೀಲ ಪತ್ರಿಕಾಗೋಷ್ಠಿಯಲ್ಲಿದ್ದರು.

> **ರಾಜ್ಯದಲ್ಲಿ ಗ್ಯಾರಂಟಿ ಯೋಜನೆಯಾದ ಯುವಕರಿಗೆ ಯುವನಿಧಿ ಯೋಜನೆಗೆ ಸಿದ್ದರಾಮಯ್ಯ ಈ ಬಾರಿಯ ಬಜೆಟ್‌ದಲ್ಲಿ ಒಂದು ರೂಪಾಯಿಯೂ ಮೀಸಲಿಟ್ಟಿಲ್ಲ, ಕೇಂದ್ರ ಸರ್ಕಾರ ನಾಲ್ಕು ವರ್ಷದಲ್ಲಿ 11ಲಕ್ಷ ಜನರಿಗೆ ಉದ್ಯೋಗವನ್ನು ನೀಡಿದೆ. ರಾಜ್ಯ ಸರ್ಕಾರ ಒಂದು ಹುದ್ದೆಯನ್ನು ಭರ್ತಿ ಮಾಡುತ್ತಿಲ್ಲ.**
> ■ **ಪ್ರಹ್ಲಾದ ಜೋಶಿ,** ಕೇಂದ್ರ ಸಚಿವ

ಸುಮೇರು ಅಭಿನಂದನಾ ಗ್ರಂಥ ಬಿಡುಗಡೆ

ಡಾ.ಅಜಿತ ಪ್ರಸಾದ ಆಡಳಿತ ಮಾದರಿ: ಸಭಾಪತಿ ಬಸವರಾಜ ಹೊರಟ್ಟಿ

ಧಾರವಾಡ: ನಗರದ ಜನತಾ ಶಿಕ್ಷಣ ಸಮಿತಿ ಸನ್ನಿಧಿ ಕಲಾಕ್ಷೇತ್ರದಲ್ಲಿ ಭಾನುವಾರ ಜೆಎಸ್ಸೆಸ್ ಸಂಸ್ಥೆಯ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸುತ್ತಿರುವ ಸಂಸ್ಥೆಯ ಕಾರ್ಯದರ್ಶಿ ಡಾ.ಅಜಿತ ಪ್ರಸಾದ ಅವರಿಗೆ 75 ವರ್ಷ ತುಂಬಿದ ಹಿನ್ನಲೆ ಅಭಿನಂದಿಸಲಾಯಿತು.

ಶಿಕ್ಷಣ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸುತ್ತಿರುವ ಡಾ.ಅಜಿತ ಹಾಗೂ ವಾಣಿ ಪ್ರಸಾದ ದಂಪತಿ ಅಲಂಕೃತ ತೆರೆದ ಸಾರೋಟದಲ್ಲಿ ಕುಳ್ಳಿರಿಸಿ, ವಾದ್ಯಗಳೊಂದಿಗೆ ಸಂಸ್ಥೆಯ ಮುಖ್ಯ ದ್ವಾರದಿಂದ ಮೆರವಣಿಗೆ ಮೂಲಕ ಸನ್ನಿಧಿ ಕ್ಷೇತ್ರದ ವೇದಿಕೆಗೆ ಕರೆತರಲಾಯಿತು.

ಸನ್ಮಾನ-ಗೌರವ: ಶೈಕ್ಷಣಿಕ ಮತ್ತು ಸಾಮಾಜಿಕ ಕ್ಷೇತ್ರದಲ್ಲಿ ಡಾ. ಅಜಿತ ಪ್ರಸಾದ ಅವರ ಅನುಪಮ ಸೇವೆ ಪರಿಗಣಿಸಿ, ಸಭಾಪತಿ ಬಸವರಾಜ ಹೊರಟ್ಟಿ, ಶಾಸಕರಾದ ಅರವಿಂದ ಬೆಲ್ಲದ, ಎನ್.ಎಚ್.ಕೋನರೆಡ್ಡಿ ಮೈಸೂರು ಪೇಟಾ ತೊಡಿಸಿ, ಸ್ಮರಣಿಕೆ ನೀಡಿ ಗೌರವಿಸಿದರು.

ರಾಷ್ಟ್ರಮಟ್ಟದ ಸಂಸ್ಥೆ: 'ಸುಮೇರು' ಅಭಿನಂದನಾ ಗ್ರಂಥ ಬಿಡುಗಡೆ ಮಾಡಿದ ಸಭಾಪತಿ



ಬಸವರಾಜ ಹೊರಟ್ಟಿ, ಶೈಕ್ಷಣಿಕ ಭೂಪಟದಲ್ಲಿ ಜನತಾ ಶಿಕ್ಷಣ ಸಂಸ್ಥೆ ರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಂಡಿದೆ. ಇದರ ಶ್ರೇಯಸ್ಸು ಡಾ.ಪ್ರಸಾದ ಅವರಿಗೆ ಸಲ್ಲುತ್ತದೆ ಎಂದರು.

ಇತರರಿಗೂ ಮಾದರಿ: ಲಕ್ಷಾಂತರ ವಿದ್ಯಾರ್ಥಿಗಳಿಗೆ ಜ್ಞಾನದ ಹಸಿವು ನೀಗಿಸುವ ಸಂಸ್ಥೆಯ ಜವಾಬ್ದಾರಿ ಡಾ.ವಜ್ರಕುಮಾರ ಅವರ ಬಳಿಕ ಹೊತ್ತ ಡಾ.ಅಜಿತ ಪ್ರಸಾದ ಅವರು ಸಂಸ್ಥೆ ಮುನ್ನಡೆಸಲು ತೋರಿದ ಧೈರ್ಯ, ಛಲ, ತಾಳ್ಮೆ ಸಮಯ ಪ್ರಜ್ಞೆ ಮಾದರಿ ಎಂದು ಹೇಳಿದರು.

ಸೇವೆಗೆ ಪ್ರಶಂಸೆ: ಶಿಕ್ಷಣ ಸಂಸ್ಥೆ ಕಟ್ಟುವುದು ಸುಲಭವಲ್ಲ, ಅದನ್ನು ಮುನ್ನಡೆಸುವುದು ಸವಾಲಾಗಿದೆ. 53 ವರ್ಷ ಸುದೀರ್ಘ ಸೇವೆ ಸಲ್ಲಿಸಿದ ಡಾ.ಅಜಿತ ಪ್ರಸಾದ ಅವರು ಶಿಸ್ತು ಮತ್ತು ಪ್ರಾಮಾಣಿಕ ಸೇವೆಯ ಮೂಲಕ ಸಂಸ್ಥೆಯನ್ನು ಉನ್ನತ ಮಟ್ಟಕ್ಕೆ ಬೆಳೆಸಿರುವುದು ಪ್ರಶಂಸಿಸಿದರು.

ಆಡಳಿತಗಾರರಿಗೂ ಸ್ಫೂರ್ತಿ: ಶಾಸಕ ಎನ್.ಎಚ್.ಕೋನರೆಡ್ಡಿ ಮಾತನಾಡಿ, ಡಾ.ಅಜಿತ ಪ್ರಸಾದ ಮೃದು ಸ್ವಭಾವದ ವ್ಯಕ್ತಿ. ಸದಾ ಹಸನ್ಮುಖಿಗಳಾಗಿ ಸಂಸ್ಥೆ ಮುನ್ನಡೆಸುವ ಅವರ ಕಾರ್ಯವೈಖರಿಯು ಭವಿಷ್ಯದ ತಲೆಮಾರಿನ ಆಡಳಿತಗಾರರಿಗೂ ಸ್ಫೂರ್ತಿಯಾಗಲಿದೆ ಎಂದು ಶುಭ ಹಾರೈಸಿದರು.

ಅಪರೂಪದ ವ್ಯಕ್ತಿಗಳು: ಮೇಯರ್ ಜ್ಯೋತಿ ಪಾಟೀಲ ಮಾತನಾಡಿ, ಸನ್ಮಾನ ಕೇವಲ ವ್ಯಕ್ತಿಗೆ ನೀಡುವ ಗೌರವವಲ್ಲ, ಅವರು ಮಾಡಿದ ನಿರಂತರ ಕೆಲಸಕ್ಕೆ ಸಲ್ಲುವ ಪ್ರತಿಫಲ. ಡಾ.ಅಜಿತ ಪ್ರಸಾದರು ಪ್ರಚಾರ ಬಯಸದೆ, ಕೆಲಸ ಮಾಡಿದ ಅಪರೂಪದ ವ್ಯಕ್ತಿ ಎಂದು ಬಣ್ಣಿಸಿದರು.

ಜವಾಬ್ದಾರಿ ಹೆಚ್ಚಿಸಿದ ಗೌರವ: ಸನ್ಮಾನ ಸ್ವೀಕರಿಸಿದ ಡಾ.ಅಜಿತ ಪ್ರಸಾದ, ಸಂಸ್ಥೆಯೊಂದಿಗೆ ತಮ್ಮ 53 ವರ್ಷಗಳ ಸುದೀರ್ಘ ಪಯಣದ ನೆನಪು ಮೆಲಕು ಹಾಕಿ, ಈ ಮಟ್ಟಕ್ಕೆ ಬೆಳೆಯಲು ಪೂಜ್ಯ ಡಾ.ವೀರೇಂದ್ರ ಹೆಗ್ಗಡೆ ಹಾಗೂ ವಜ್ರಕುಮಾರ ಅವರೇ ಕಾರಣ ಎಂದು ಸ್ಮರಣೆ ಮಾಡಿದರು.

ಈ ಸನ್ಮಾನ ಕೇವಲ ಅಜಿತ ಪ್ರಸಾದ್ ವ್ಯಕ್ತಿಗೆ ಸಲ್ಲಿದ್ದಲ್ಲ, ಸಂಸ್ಥೆಯ ಏಳ್ಗೆಗಾಗಿ ಹಗಲಿರುಳು ದುಡಿಯುವ ನೂರಾರು ಶಿಕ್ಷಕರು, ಸಿಬ್ಬಂದಿಗಳ ಶ್ರಮಕ್ಕೆ ಸಂದಿರುವ ಗೌರವ.

ಈ ಅಭಿನಂದನಾ ಸನ್ಮಾನವು ತಮ್ಮ ಜವಾಬ್ದಾರಿಯನ್ನು ಹೆಚ್ಚಿಸಿದ್ದಾಗಿ ಹೇಳಿದರು.

ಸಾನ್ನಿಧ್ಯ ವಹಿಸಿದ್ದ ಅಥಣಿ ಮೊಟಗಿ ಮಠದ ಚನ್ನಬಸವ ಸ್ವಾಮೀಜಿ, ಧಾರವಾಡ ಮುರುಘಾಮಠದ ಮಲ್ಲಿಕಾರ್ಜುನ ಸ್ವಾಮೀಜಿ ಆಶೀರ್ವಚನ ನುಡಿದರು. ಮಾಜಿ ಸಂಸದ ಐ.ಜಿ.ಸನದಿ, ಕೃಷಿವಿವಿಯ ಕುಲಪತಿ ಡಾ. ಪಿ.ಎಲ್.ಪಾಟೀಲ ಮಾತನಾಡಿದರು.

ಎಸ್ಡಿಎಂಸೊಸೈಟಿ ಕಾರ್ಯದರ್ಶಿ ವಿ.ಜೀವಂದರಕುಮಾರ್, ಜೆಎಸ್ಸೆಸ್ ಆಡಳಿತಾಧಿಕಾರಿ ಅರಿಹಂತ ಪ್ರಸಾದ, ಕಸಾಪ ಅಧ್ಯಕ್ಷ ಚಂದ್ರಕಾಂತ ಬೆಲ್ಲದ, ಮಹಾವೀರ ಉಪಾಧ್ಯೆ, ಡಾ.ಸೂರಜ್ ಜೈನ್, ಜಿನ್ನಪ್ಪ ಕುಂದಗೋಳ ಇದ್ದರು.

> **ಜೆಎಸ್ಸೆಸ್ ಸಂಸ್ಥೆಯನ್ನು ಉತ್ತರ ಕರ್ನಾಟಕದ ಆಕ್ಸಫರ್ಡ್ ಎಂಬಂತೆ ಬೆಳೆಸಿದ ಡಾ.ಅಜಿತ ಪ್ರಸಾದ ಅವರ ಸುದೀರ್ಘ ಅನುಭವ ಮತ್ತು ಮಾರ್ಗದರ್ಶನ ಶಿಕ್ಷಣ ಕ್ಷೇತ್ರಕ್ಕೆ ಇನ್ನಷ್ಟು ಕಾಲ ಬೇಕಾಗಿದೆ. ಅವರ ಯಶೋಗಾಥೆ ಶೈಕ್ಷಣಿಕ ಸಂಸ್ಥೆಗಳ ಆಡಳಿತಗಾರರಿಗೆ ಮಾದರಿ.**
> ■ **ಅರವಿಂದ ಬೆಲ್ಲದ,** ಶಾಸಕರು

ಹರಕೆ ತೀರಿಸಲು ಹೋದ ವಿದ್ಯಾರ್ಥಿಗಳು ಮಸಣಕ್ಕೆ

ಕಲಬುರಗಿ: ಜಿಲ್ಲೆಯ ಅಫಜಲಪುರ ತಾಲೂಕಿನ ಮಣ್ಣೂರು ಗ್ರಾಮದಲ್ಲಿ ದುರಂತ ಘಟನೆಯೊಂದು ಸಂಭವಿಸಿದ್ದು,ಭೀಮಾ ನದಿಯಲ್ಲಿ ಈಜಲು ತೆರಳಿದ್ದ ಇಬ್ಬರು ವಿದ್ಯಾರ್ಥಿಗಳು ನೀರು ಪಾಲಾಗಿದ್ದಾರೆ.



ಮೃತರನ್ನು ಪುಂಡಲಿಕ್ ಮೂಲಿಮನಿ (17) ಮತ್ತು ಮಹೇಶ್ (16) ಎಂದು ಗುರುತಿಸಲಾಗಿದೆ. ಇವರಿಬ್ಬರೂ ಅಫಜಲಪುರ ತಾಲೂಕಿನ ಗೌರ್ (ಕೆ) ಗ್ರಾಮದ ನಿವಾಸಿಗಳಾಗಿದ್ದಾರೆ.

ಮಾಹಿತಿ ಪ್ರಕಾರ,ವಿದ್ಯಾರ್ಥಿಗಳ ಕುಟುಂಬಸ್ಥರು ಹರಕೆ ತೀರಿಸಲು ಮಣ್ಣೂರಿನ ಯಲ್ಲಮ್ಮ ದೇವಾಲಯಕ್ಕೆ ಬಂದಿದ್ದರು.ಈ ವೇಳೆ ಪುಂಡಲಿಕ್ ಮತ್ತು ಮಹೇಶ್ ಅವರು ಸಮೀಪದಲ್ಲಿರುವ ಭೀಮಾ ನದಿಯಲ್ಲಿ ಈಜಲು ತೆರಳಿದ್ದಾರೆ.ಆದರೆ,ನದಿಯಲ್ಲಿ ಒಳಹರಿವು ಹೆಚ್ಚಾಗಿದ್ದ ಹಿನ್ನೆಲೆ ಇಬ್ಬರೂ ನೀರಿನಲ್ಲಿ ಮುಳುಗಿ ಸಾವನ್ನಪ್ಪಿದ್ದಾರೆ.

ಘಟನೆಯ ಮಾಹಿತಿ ತಿಳಿದ ತಕ್ಷಣ ಸ್ಥಳಕ್ಕೆ ಧಾವಿಸಿದ ಸ್ಥಳೀಯರು ಹಾಗೂ ಪೊಲೀಸರು ಶೋಧ ಕಾರ್ಯ ನಡೆಸಿ ಮೃತದೇಹಗಳನ್ನು ಹೊರತೆಗೆದಿದ್ದಾರೆ. ನಂತರ ಮರಣೋತ್ತರ ಪರೀಕ್ಷೆ ನಡೆಸಿ ಶವಗಳನ್ನು ಕುಟುಂಬಸ್ಥರಿಗೆ ಹಸ್ತಾಂತರಿಸಲಾಗಿದ್ದು,ಈ ಕುರಿತು ಅಫಜಲಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು,ತನಿಖೆ ಮುಂದುವರಿದಿದೆ. ದುರ್ಘಟನೆಯಿಂದ ಸ್ಥಳೀಯರಲ್ಲಿ ದುಃಖದ ವಾತಾವರಣವನ್ನು ಮೂಡಿಸಿದೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M/s Elegant Offset Printers, Pvt.Ltd, Plot no 33/1& 15/1(eastern part) MT Sagar Industrial Estate, Hubballi -580030, Published at Joshi Chambers, 2nd Floor, Near R.M.Joshi Petrol pump, Lamington Road, Hubballi-580020, Ph: 0836-2350942, Editor: P.S.Prakash, Group Editor: Vinayak S. Bhat

ಕಿರುಸುದ್ದಿ

ರಂಗಭೂಮಿ ದಿನಾಚರಣೆ ಇಂದು

ಬೆಳಗಾವಿ : ಇಲ್ಲಿಯ ರಂಗಸೃಷ್ಟಿ ಸಂಘಟನೆಯಿಂದ ರಂಗಭೂಮಿ ದಿನಾಚರಣೆ ಕಾರ್ಯಕ್ರಮ ಏ.6ರಂದು ಆಯೋಜಿಸಲಾಗಿದೆ. ಸೋಮವಾರ ಸಂಜೆ 5.30ಕ್ಕೆ ಕನ್ನಡ ಸಾಹಿತ್ಯ ಭವನದಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಹಿರಿಯ ರಂಗಕರ್ಮಿ ನಿರ್ಮಲಾ ಪ್ರಕಾಶ ಅವರಿಗೆ ರಂಗಸೃಷ್ಟಿಯ ಈ ವರ್ಷದ ರಂಗಗೌರವ ಪ್ರದಾನ ಮಾಡಲಾಗುವುದು. ಹಿರಿಯ ಸಾಹಿತಿ ಎಲ್.ಎಸ್. ಶಾಸ್ತ್ರಿ ಮುಖ್ಯ ಅತಿಥಿಗಳಾಗಿ ಆಗಮಿಸುವರು. ರಂಗಸೃಷ್ಟಿಯ ಅಧ್ಯಕ್ಷ ರಮೇಶ ಜಂಗಲ್ ಅಧ್ಯಕ್ಷತೆವಹಿಸುವರು. ಕಾರ್ಯಕ್ರಮಕ್ಕೆ ಆಸಕ್ತರು ಆಗಮಿಸಬೇಕೆಂದು ಕೋರಲಾಗಿದೆ.

ಸಕ್ರೆಮ್ಮ ದೇವಿ ಜಾತ್ರಾ ಮಹೋತ್ಸವ ನಾಳೆ

ಯಮಕನಮರಡಿ: ಹುಕ್ಕೇರಿ ತಾಲೂಕಿನ ಗುಡ್ಡಗಾಡು ಪ್ರದೇಶವಾದ ಇಸ್ಲಾಂಪುರ ಗ್ರಾಮದ ಹೊರವಲಯದಲ್ಲಿ ಇರುವ ಸಕ್ರಮ್ಮದೇವಿ ಜಾತ್ರೆಯು ಪ್ರತಿ 10 ವರ್ಷಕ್ಕೊಮ್ಮೆ ಜರುಗಲಿದ್ದು, ಏ.7ರಂದು ಅತಿ ವಿಜೃಂಭಣೆಯಿಂದ ಜರುಗಲಿದೆ ಎಂದು ಯಾತ್ರಾ ಕಮಿಟಿ ತಿಳಿಸಿದೆ. ಈ ಕುರಿತು ಒಂದು ಕಿರು ಲೇಖನ ಅತಿ ಪೂರ್ವದಲ್ಲಿ ಆದಿಶಕ್ತಿ ಶ್ರೀ ಬನಶಂಕರಿ ದೇವಿಯು ಅರಣ್ಯ ಸಂಚರಿಸಿ ಗ್ರಾಮದ ಹೊರ ವಲಯದಲ್ಲಿ ವಿಶ್ರಾಂತಿಗಾಗಿ ಶ್ರೀ ಬನಶಂಕರಿ ದೇವಿಯು ಈ ಸ್ಥಳದಲ್ಲಿ ತಂಗಿದ್ದಳೆಂದು ಹಿರಿಯರು ಹೇಳುತ್ತಾರೆ. ಇದೇ ಸ್ಥಳದಲ್ಲಿ ಗ್ರಾಮಸ್ಥರು ಒಂದು ದೇವಸ್ಥಾನ ನಿರ್ಮಿಸಿ ಶಕ್ತಿ ದೇವಿಯ ಮೂರ್ತಿಯನ್ನು ಪ್ರತಿಷ್ಠಾಪನೆ ಮಾಡಿ ಸಕ್ರಮ ಎಂದು ನಾಮಕರಣದಿಂದ ಕರೆಯಲ್ಪಡುತ್ತಿರುವ ದೇವಸ್ಥಾನವೇ ಸಕ್ರಮ ದೇವಸ್ಥಾನ ಈ ದೇವಸ್ಥಾನದ ಸುತ್ತಮುತ್ತಲು ಆಗಿನ ಕಾಲದಲ್ಲಿ ಭವ್ಯಾರಣ್ಯ ಇತ್ತು ಎಂದು ಕೆಲ ಜನರು ಹೇಳುತ್ತಾರೆ. ಇದರಿಂದಾಗಿ ಗ್ರಾಮಸ್ಥರು ಅಪಾರ ಭಕ್ತಿ ಶ್ರದ್ದೆಯಿಂದ ಶ್ರೀದೇವಿಯ ಜಾತ್ರೆಯನ್ನು ಆಚರಿಸುತ್ತಾ ಬಂದಿರುವುದೊಂದು ಪ್ರತೀತಿ.

ಪಿಯುಸಿ ಪರೀಕ್ಷೆ: ವಿದ್ಯಾರ್ಥಿಗಳ ಸಾಧನೆ



ಯಮಕನಮರಡಿ: ಸ್ಥಳೀಯ ಸರ್ಕಾರಿ ಪದವಿ ಪೂರ್ವ ಮಹಾವಿದ್ಯಾಲಯ 202526ನೇ ಸಾಲಿನ ಪಿಯುಸಿ ಪ್ರಥಮ ವಾರ್ಷಿಕ ಪರೀಕ್ಷೆಯಲ್ಲಿ ಕಲಾ ವಿಭಾಗದಲ್ಲಿ ಅಕ್ಷತಾ ಪಾಟೀಲ್ 582/600 ಫಲಿತಾಂಶ ಶೇ. 97% ಪ್ರಥಮ ಸ್ಥಾನ, ವಾಣಿಜ್ಯ ವಿಭಾಗದಲ್ಲಿ ಕಾಶವ್ವ ಜೋಡಟ್ಟಿ 569/600 ದ್ವಿತೀಯ ಸ್ಥಾನ ಫಲಿತಾಂಶ ಶೇ. 94, ಕಲಾವಿಭಾಗದ ಸಹನಾ ನಂದಗಾವಿ 568/600 ತೃತೀಯ ಸ್ಥಾನ ಫಲಿತಾಂಶ ಶೇ94. ಜಾಯಿನಾ ಚೌದ್ರಿ ವಿಜ್ಞಾನ ವಿಭಾಗ 568/600 ತೃತೀಯ ಸ್ಥಾನ ಫಲಿತಾಂಶ ಶೇ.94 ವಿದ್ಯಾರ್ಥಿಗಳು ಪಡೆದುಕೊಂಡಿದ್ದು, ಈ ವಿದ್ಯಾರ್ಥಿಗಳಿಗೆ ಕಾಲೇಜು ಅಭಿವೃದ್ಧಿ ಸಮಿತಿಯ ಅಧ್ಯಕ್ಷರು, ಉಪಾಧ್ಯಕ್ಷರು, ಸರ್ವ ಸದಸ್ಯರು, ಪ್ರಾಚಾರ್ಯರು, ಉಪನ್ಯಾಸಕರು, ಸಿಬ್ಬಂದಿ ವರ್ಗ ಅಭಿನಂದಿಸಿದ್ದಾರೆ.

ಮಹಾಪ್ರಸಾದ ಆಯೋಜನೆ

ಬೆಳಗಾವಿ: ಇಲ್ಲಿನ ಶಹಾಪುರದ ಕಚೇರಿ ಗಲ್ಲಿ, ಮಹಾತ್ಮಾ ಫೂಲೆ ರಸ್ತೆಯಲ್ಲಿರುವ ಸಂಕಟ ವಿಮೋಚನ ಹನುಮಾನ ಮಂದಿರದಲ್ಲಿ ಮಾರುತಿ ಜಯಂತಿ ಸಮಾರೋಪದ ಹಿನ್ನೆಲೆ ಮಹಾಪುಸಾದವನ್ನು ಆಯೋಜಿಸಲಾಗಿತ್ತು. ಹನುಮಾನ ಜಯಂತಿಯ ದಿನದಿಂದ ಶನಿವಾರದ ರಾತ್ರಿ ವೇಳೆ ವರೆಗೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಡೆದವು. ಶನಿವಾರ ಸಂಜೆ ಮಹಾಪ್ರಸಾದದೊಂದಿಗೆ ಪ್ರಸ್ತುತ ವರ್ಷದ ಹನುಮಾನ ಜಯಂತ್ಯೋತ್ಸವ ಕಾರ್ಯಕ್ರಮ ಸಮಾರೋಪಗೊಂಡಿತು. ಶಹಾಪುರದ ಕಚೇರಿ ಗಲ್ಲಿಯಲ್ಲಿ 1991ರಲ್ಲಿ ಶ್ರೀ ಮಾರುತಿ ಮಂದಿರ ಸ್ಥಾಪನೆಯಾಯಿತು. ಕಾಲಾನಂತರ ಭಕ್ತರ ಸಹಯೋಗದಲ್ಲಿ ಬೃಹತ್ ಮಂದಿರ ನಿರ್ಮಾಣವಾಗಿದ್ದು, ಪ್ರತಿ ಹನುಮಾನ ಜಯಂತಿಯಲ್ಲಿ ವಿವಿಧ ಧಾರ್ಮಿಕ ಕಾರ್ಯಕ್ರಮ ಮತ್ತು ಮಹಾಪ್ರಸಾದವನ್ನು ಆಯೋಜಿಸಲಾಗುತ್ತದೆ. ಪ್ರತಿವರ್ಷ ಸುಮಾರು 5 ಸಾವಿರ ಭಕ್ತರು ಮಹಾಪುಸಾದವನ್ನು ಸ್ವೀಕರಿಸುತ್ತಾರೆಂದು ಪ್ರವೀಣ್ ಚತುರ್ ತಿಳಿಸಿದರು. ಮಹಾಪ್ರಸಾದವನ್ನು ಯಶಸ್ವಿಗೊಳಿಸಲು ಶಿವ ಸಮ್ರಾಟ್ ಯುವಕ ಮಂಡಳ ಸೇರಿದಂತೆ ಸ್ಥಳೀಯ ಭಕ್ತರು ಶ್ರಮವಹಿಸಿದರು. ಮಂದಿರದ ಆವರಣದಲ್ಲಿ ಭಕ್ತಾದಿಗಳಿಗೆ ಯಾವುದೇ ತೊಂದರೆಯಾಗದಂತೆ ವ್ಯವಸ್ಥೆ ಮಾಡಲಾಗಿತ್ತು. ಹನುಮ ನಾಮ ಸ್ಮರಣೆಯೊಂದಿಗೆ ಇಡೀ ಶಹಾಪುರ ಭಾಗದಲ್ಲಿ ಆಧ್ಯಾತ್ಮಿಕ ಕಳೆ ಮನೆ ಮಾದಿತ್ತು, ಭಕ್ತರು ಭಕ್ತಿಭಾವದಿಂದ ಮಾರುತಿಯ ದರ್ಶನ ಪಡೆದು ಪುನೀತರಾದರು.



ವಿಜಯಪುರ: ಬಾಗಲಕೋಟೆ ಮತಕ್ಷೇತ್ರದ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಉಮೇಶ ಮೇಟಿ ಪರವಾಗಿ ವಿಜಯಪುರ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಲೋಣಿ ನೇತೃತ್ವದಲ್ಲಿ ಪ್ರಚಾರ ನಡೆಸಿದರು. ಜಿಲ್ಲಾ ಕಾಂಗ್ರೆಸ್ ಸಮಿತಿ ಪ್ರಧಾನ ಕಾರ್ಯದರ್ಶಿ ಎಂ.ಎಂ. ಮುಲ್ಲಾ, ದೇಸು ಚವ್ಹಾಣ ಇದ್ದರು.

ಗುರುಗಳಿಗೆ ಗೌರವ ನೀಡಿ: ಶ್ರೀಗಳು

ಕೊಕಟನೂರ: ಶಿಕ್ಷಣ ಕಲಿತು ಎಷ್ಟೇ ದೊಡ್ಡವರಾದರೂ ಹೆತ್ತವರನ್ನು ವೃದ್ದಾಶ್ರಮಕ್ಕೆ ಕಳುಹಿಸದೇ ತಮ್ಮ ಹತ್ತಿರ ಇಟ್ಟುಕೊಳ್ಳಬೇಕು. ಹಾಗೆ ಕಲಿಸಿದ ಗುರುಗಳನ್ನು ಕಂಡರೆ ಗೌರವದಿಂದ ಮಾತನಾಡಿಸಬೇಕು ಎಂದು ಅಥಣಿ ಶೆಟ್ಟರಮಠದ ಮರುಳಸಿದ್ಧ ಸ್ವಾಮೀಜಿ ಹೇಳಿದರು. ಕೊಕಟನೂರ ಗ್ರಾಮದ ಸರ್ಕಾರಿ ಕನ್ನಡ ಶಾಲೆಯಲ್ಲಿ 1981 ರಿಂದ 1991ರವರೆಗಿನ 10ನೇ ತರಗತಿ ವಿದ್ಯಾರ್ಥಿಗಳು ಭಾನುವಾರ ಹಮ್ಮಿಕೊಂಡ ಸ್ನೇಹ ಸಮ್ಮಿಲನ ಹಾಗೂ ಗುರುವಂದನಾ ಕಾರ್ಯಕ್ರಮದಲ್ಲಿ ಮಾತನಾಡಿ, ಜೀವನದಲ್ಲಿ ಆತ್ಮೀಯತೆಗಿಂತ ದೊಡ್ಡದು ಯಾವುದು ಇಲ್ಲ. 40 ವರ್ಷಗಳ ಬಳಿಕ ಸ್ನೇಹಿತರು ಗುರುಗಳು ಸೇರಿ ಈ ಕಾರ್ಯಕ್ರಮ ಆಚರಿಸುತ್ತಿರುವುದು ಉತ್ತಮ ಬೆಳವಣಿಗೆ ಎಂದರು. ಕೆಪಿಸಿಸಿ ಸದಸ್ಯ ಶ್ಯಾಮರಾವ ಪೂಜಾರಿ ಹ. ಮಾತನಾಡಿ, ಗುರುಗಳು ಕೊಟ್ಟ ಚಾಟಿ ಏಟು ತಿದ್ದಿ ಬುದ್ಧಿ ಹೇಳಿದ ಆ ದಿನಗಳು ನಮಗಿಂದು ಸುಸಂಸ್ಕೃತ ವ್ಯಕ್ತಿಯನ್ನಾಗಿ ರೂಪಿಸಲು ಸಹಕಾರಿಯಾಗಿದೆ ಎಂದರು. ರೂಪಾ ದೇಸಾಯಿ ಸಂಗಡಿಗರು ಪ್ರಾರ್ಥಿಸಿದರು. ಶಿಕ್ಷಕರಾದ ಶಶಿಕಾಂತ ಕುಲಕರ್ಣಿ , ಎಂ.ಆರ್. ಹಲಗಿ, ಪಿ.ವಿ.ಜಾಧವ, ಭಾರತಿ ಯಲಬಳ್ಳಿ, ಎಂ.ಎಚ್. ಜಮಖಂಡಿ ಗುರುಗಳನ್ನು ಸತ್ಕರಿಸಿ ಗೌರವಿಸಿದರು. ಪಾರೀಸ್ ಯಲಿಗೌಡರ್, ಮಾಜಿ ಜಿಪಂ ಸದಸ್ಯ ಸಿದ್ದಪ್ಪ ಮುದಕನವರ. ಎಸ್.ಎಲ್. ಸವದಿ, ಶಿವಗೌಡ ನೇಮಗೌಡ, ಶಿವಗೌಡ ನೇಮಗೌಡ, ವಿಶಾಲ ದೇಸಾಯಿ, ಗುರುಮೂರ್ತಯ್ಯ ಕಾಡದೇವರಮಠ, ಎಲ್.ಬಿ. ಲಮಾಣಿ, ಶ್ರೀಶಯಲ ಶರಣ, ಭೀಮಸೇನ ಪಾಟಣಕರ, ಪರುಶುರಾಮ ಚವ್ಹಾಣ, ಸಾರಾಮತಿ ದಡ್ಡಿ, ನಿಲಮ್ಮ ಪೂಜಾರಿ, ಚಂಪಾ ಪನಸಾರ, ಶಾಂತಾ ಮಗರ, ಕಸ್ತೂರಿ ಕುಂಬಾರ ಇದ್ದರು. ಜಯಶ್ರೀ ಮಂಟೂರ ಸ್ವಾಗತಿಸಿ, ಕುಮಾರ್ ನಾವಿ ನಿರೂಪಿಸಿ, ಯಶೋಧಕ ಮಗರ ವಂದಿಸಿದರ.



ಕೊಕಟನೂರ: ಗ್ರಾಮದಲ್ಲಿ 1981 ರಿಂದ 1991ರವರೆಗಿನ 10ನೇ ತರಗತಿ ವಿದ್ಯಾರ್ಥಿಗಳು ಹಮ್ಮಿಕೊಂಡ ಸ್ನೇಹ ಸಮ್ಮಿಲನ ಹಾಗೂ ಗುರುವಂದನಾ ಕಾರ್ಯಕ್ರಮವನ್ನು ಜಿಪಂ ಸದಸ್ಯ ಸಿದ್ಧಪ್ಪ ಮುದಕಣ್ಣವರ ಉದ್ಘಾಟಿಸಿದರು.

ಡಾ.ಬಾಬು ಜಗಜೀವನ ರಾಂ ಜಯಂತ್ಯುತ್ಸವ। ಡಾ. ಸಂಜೀವ ಅಭಿಮತ

ಆಹಾರ ಭದ್ರತೆಗೆ ಬಾಬೂಜಿ ಶ್ರಮ

ಬೆಳಗಾವಿ: ಇತಿಹಾಸ ಮಹಾನ್ ವ್ಯಕ್ತಿಗಳನ್ನ ನೇಮಿಸುತ್ತದೆ ಆದರೆ ಸಮಯ ಕೆಲವೇ ಕೆಲವು ವ್ಯಕ್ತಿಗಳನ್ನು ನೆನಪಿಸುತ್ತದೆ. ಅಂತಹವರಲ್ಲಿ ಡಾ. ಬಾಬು ಜಗಜೀವನ್ ರಾಂ ಒಬ್ಬರು ಎಂದು ಡಾ. ಸಂಜೀವ ಕೆ. ತಳವಾರ ಹೇಳಿದರು.

ಭಾನುವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತಿ, ಮಹಾನಗರಪಾಲಿಕೆಯ ಹಾಗೂ ಸಮಾಜ ಕಲ್ಯಾಣ ಇಲಾಖೆ ಸಹಯೋಗದಲ್ಲಿ ಸಂಗಮೇಶ್ವರ ನಗರದ ಡಾ. ಬಾಬು ಜಗಜೀವನ್ ರಾಮ್ ಉದ್ಯಾನವನದಲ್ಲಿ ನಡೆದ ಹಸಿರುಕ್ರಾಂತಿ ಹರಿಕಾರ ಡಾ. ಬಾಬು ಜಗಜೀವನ್ ರಾಂ ಜಯಂತಿ ಉತ್ಸವ ಕಾರ್ಯಕ್ರಮದಲ್ಲಿ ಮಾತನಾಡಿ, ಸಮಾನತೆ ಸಮಾಜದ ಅಡಿಪಾಯ ಎಂದು ಹೇಳಿ ಅದಕ್ಕೆ ಶ್ರಮಿಸಿ, ಕಾರ್ಮಿಕರ ಹಿತವೇ ದೇಶದ ಹಿತ ಎಂದು ಹೇಳಿದರು.

ಆಹಾರ ಭದ್ರತೆ ದೇಶದ ಭದ್ರತೆ ಎಂದು ಸಂದೇಶ ನೀಡಿ ಹಗಲಿರುಳು ದುಡಿದ ಧೀಮಂತ ನಾಯಕ ಡಾ. ಬಾಬು ಜಗಜೀವನ್ ರಾಂ. ಸಮಾಜದಲ್ಲಿನ ಅನಿಷ್ಟ ಪದ್ದತಿಯನ್ನು ಹೋಗಲಾಡಿಸಲು ಉಪ ಪ್ರಧಾನಿಯಾದರೂ, ಜಾತಿ ಆಧಾರಿತವಾದಶುಲ್ಕವನ್ನು ವಿರೋಧಿಸಿ ಅರ್ಹತೆ ಆಧಾರದ ಮೇಲೆ ಶುಲ್ಕ ನೀಡಿ ಎಂದ ಮಹನೀಯರು ಡಾ. ಬಾಬು



ಜಗಜೀವನ್ ರಾಂ ಅವರು ಎಂದರು.

ಸಂವಿಧಾನ ಸರಿಯಾದ ರೀತಿಯಲ್ಲಿ ಜಾರಿಯಾಗಬೇಕು. ಸಂದರ್ಭಗಳಿಂದ ಸೋಲದೆ ಆ ಸಮಯವನ್ನೇ ನಿಮ್ಮ ಅವಕಾಶವಾಗಿ ಮಾಡಿಕೊಳ್ಳಿ ಎಂದು ಎಲ್ಲ ಜನರಿಗೆ ತಿಳಿ ಹೇಳಿದ ಡಾ.ಬಾಬು ಜಗಜೀವನ್ ರಾಮ ಅವರ ಜೀವನ, ಆದರ್ಶಗಳನ್ನು ಎಲ್ಲರೂ ಅರಿತುಕೊಳ್ಳಬೇಕು ಎಂದರು.

ಪೊಲೀಸ್ ಆಯುಕ್ತ ಭೂಷಣ್ ಗುಲಾಬರಾವ್ ಬೊರಸೆ ಮಾತನಾಡಿ, ಜಗಜೀವನರಾಮ್ ಎಲ್ಲಾಯುವಕರಿಗೆ ಸ್ಫೂರ್ತಿಯಾಗಲಿ ಎಲ್ಲರೂ ನನ್ನವರು, ಸಮಾನತೆ, ಸಮಭಾವ ಎಂಬ ಭಾವನೆ ಇಂದ ನಾವು ಬದುಕಬೇಕು ಎಂದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ. ರಾಮರಾಜನ್ ಮಾತನಾಡಿ, ದೇಶ ಕಂಡ ಅಪ್ರತಿಮ ನಾಯಕರಲ್ಲಿ ಜಗಜೀವನ್ ರಾಂ ಅವರು ಒಬ್ಬರು, ಕಾರ್ಮಿಕರಿಗೆ ಅನೇಕ ಕಾನೂನುಗಳನ್ನೂ ಜಾರಿಗೆ ತಂದರು, ಸಮಸ್ಯೆ ಹೇಳುವರು ನಾಯಕರಲ್ಲ ಸಮಸ್ಯೆಗಳನ್ನು ಪರಿಹರಿಸುವ ವ್ಯಕ್ತಿಗಳು ನಾಯಕರಾಗುತ್ತಾರೆ. ಬಾಬು ಜಗಜೀವನ ರಾಂ ಟಾಸ್ಕ್ ಮಾಸ್ಟರ್ ದೇಶದ ಪ್ರತಿ ಸಮಸ್ಯೆ ಪರಿಹರಿಸುವವರಲ್ಲಿ ನಿಂತವರು ಎಂದು ಹೇಳಿದರು.

ಭಾವಚಿತ್ರದ ಮೆರವಣಿಗೆ: ಜಿಲ್ಲಾಧಿಕಾರಿಗಳ ಕಚೇರಿ ಆವರಣದಲ್ಲಿ ಡಾ.ಬಾಬುಜಗಜೀವನ್ ರಾಂ ಅವರ ಭಾವಚಿತ್ರಕ್ಕೆ ಉಪವಿಭಾಗಾಧಿಕಾರಿ ಶ್ರವಣ ನಾಯಕ, ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್.ಬಿ.ಬಸರಗಿ, ಡಿ.ಸಿ.ಪಿ.ಶ್ರವಣ ನಾಯಕ ಅವರುಗಳು ಪುಷ್ಪಾರ್ಚನೆ ಮಾಡುವ ಮೂಲಕ ಮೆರವಣಿಗೆಗೆ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ರಾಮನಗೌಡ ಕನ್ನೊಳ್ಳಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಉಪನಿರ್ದೇಶಕಿ ವಿದ್ಯಾವತಿ ಭಜಂತ್ರಿ, ಮಹಾದೇವ ಭಜಂತ್ರಿ, ಸಮಾಜದ ಮುಖಂಡರಾದ ಮಲ್ಲೇಶ ಚೌಗಲಾ, ಮಹಾದೇವ ತಳವಾರ, ಭಾವಕಣ್ಣ ಭಂಗ್ಯಾಗೋಳ, ಕರೆಪ್ಪ ಗುಡ್ಡೆನ್ನವರ, ಸಿದ್ರಾಯಿ ಮೇತ್ರಿ, ಲಕ್ಷ್ಮಣ್ ಲಗಮಪ್ಪಗೋಳ, ಬಸವರಾಜ ಅರವಳ್ಳಿ, ಮಹಾದೇವ ಪೋಲ್, ಬಸವರಾಜ ರಾಯವಾಗೋಲ್, ಸುಧೀರ ಚೌಗಲೆ, ಸಂದೀಪ ಕೋಲಕಾರ, ಹೀರಲಾಲ್ ಚೌಹಾಣ್, ಜೀವನ್ ಕುರಾನೆ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಮೆರವಣಿಗೆಯು ವಿವಿಧ ಜಾನಪದ ಕಲಾತಂಡಗಳೊಂದಿಗೆ ಜಿಲ್ಲಾಧಿಕಾರಿಗಳ ಕಚೇರಿಯಿಂದ ಪ್ರಾರಂಭಗೊಂಡು ಸಂಗಮೇಶ್ವರ ನಗರದಲ್ಲಿನ ಡಾ.ಬಾಬು ಜಗಜೀವನರಾಮ್ ಉದ್ಯಾನವನಕ್ಕೆ ಬಂದು ಮುಕ್ತಾಯಗೊಂಡಿತು.

ಡಾ.ಬಾಬು ಜಗಜೀವನರಾಂ ದೇಶದ ಹಸಿರು ಕ್ರಾಂತಿಯ ಹರಿಕಾರ

ಯರಗಟ್ಟಿ: ಅಧಿಕಾರ ಮತ್ತು ಐಶ್ವರ್ಯದಿಂದ ಗಳಿಸಲಾಗದ ಕೀರ್ತಿಯನ್ನು ಸೇವೆ, ತ್ಯಾಗದಿಂದ ಸಂಪಾದಿಸಬಹುದು ಎನ್ನುವ ಸಂದೇಶ ಸಾರಿದ ಹೆಗ್ಗಳಿಕೆ ಡಾ.ಬಾಬು ಜಗಜೀವನರಾಂ ಅವರಿಗೆ ಸಲ್ಲುತ್ತದೆ ಎಂದು ತಹಶೀಲ್ದಾರ ಎಂ.ವ್ಹಿ. ಗುಂಡಪ್ಪಗೋಳ ಹೇಳಿದರು.

ತಾಲೂಕಾ ಆಡಳಿತ ಪಟ್ಟಣ ಪಂಚಾಯತಿ ಹಾಗೂ ಸಮಾಜಕಲ್ಯಾಣ ಇಲಾಖೆ ಸಹಯೋಗದಲ್ಲಿ ಭಾನುವಾರ ಜನತಾ ಕಾಲೋನಿಯ ಬಾಬು ಜಗಜೀವನರಾಮ ಭವನದಲ್ಲಿ ಆಯೋಜಿಸಿದ್ದ ಮಾಜಿ ಉಪ ಪ್ರಧಾನಿ ದಿ.ಬಾಬು ಜಗಜೀವನರಾಂ ಅವರ 119ನೇ ಜನ್ಮ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿ, ಸಮಾಜ ಸುಧಾರಣೆ ಹಾಗೂ ಎಲ್ಲರೂ ಸಮಾನವಾಗಿ ಜೀವನ ನಡೆಸಬೇಕು ಎನ್ನುವ ಮಹತ್ವಾಕಾಂಕ್ಷೆಯನ್ನು ಅವರು ಹೊಂದಿದ್ದರು. ಕಾರ್ಮಿಕರ ಏಳಿಗೆಯನ್ನು ಸದಾ ಬಯಸುತ್ತಿದ್ದರು. ದೇಶದ ಜನರು ಅಹಾರ ಕೊರತೆ ಅನುಭವಿಸುತ್ತಿರುವುದನ್ನು ಕಂಡು ಹಸಿರುಕ್ರಾಂತಿ ಪ್ರಾರಂಭಿಸಿನೆರವಾದರು ಎಂದು ತಿಳಿಸಿದರು. ಇಂತಹ ಮಹಾನ್ ನಾಯಕರ ಕೊಡುಗೆ, ತತ್ವಾದರ್ಶಗಳನ್ನು ಯುವಜನತೆ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಬಸವೇಶ್ವರ ಪ್ರೌಢ ಶಾಲೆಯ ಶಿಕ್ಷಕ ಡಾ. ಕುಮಾರ ದಾಸರ ಮಾತನಾಡಿ, ಬಾಬು ಜಗಜೀವನರಾಂ ಅವರು ದೇಶ ಕಂಡ ಮಹಾನ್ ಸ್ವಾತಂತ್ರ್ಯ ಹೋರಾಟಗಾರ ಹಾಗೂ ದಕ್ಷ ಆಡಳಿತಗಾರರಾಗಿದ್ದರು. ಹಸಿರು ಕ್ರಾಂತಿಯ ಹರಿಕಾರರಾಗಿ ಜನಸಾಮಾನ್ಯರು ಎಂದಿಗೂ ಮರೆಯದ ವ್ಯಕ್ತಿತ್ವವನ್ನು ಹೊಂದಿದ್ದರು. ಬಡವರು, ದೀನ-ದಲಿತರ ಕಣ್ಣೀರು ಒರೆಸಿದ ಶ್ರೇಷ್ಠ ವ್ಯಕ್ತಿತ್ವದವರಾಗಿದ್ದರು ಎಂದರು.

ಈ ವೇಳೆ ಪ. ಪಂ. ಮುಖ್ಯಾಧಿಕಾರಿ ಮಹೇಶ ಭಜಂತ್ರಿ, ಪಶು ವೈದ್ಯಾಧಿಕಾರಿ ಎಂ ವ್ಹಿ ಪಾಟೀಲ, ಪಿಎ ಎಲ್ ಬಿ ಮಾಳಿ, ಪಪಂ ಸದಸ್ಯ ಸಲಿಂಬೇಗ ಜಮಾದಾರ, ಭಾಸ್ಕರ ಹಿರೇಮೆತ್ರಿ, ಸಂತೋಷ ಚನ್ನಮೆತ್ರಿ, ಲಕ್ಕಪ್ಪ ಹುಣಶೀಕಟ್ಟಿ, ಲಕ್ಕಪ್ಪ ಜಗದಾರ, ಸುರೇಶ ಭಜಂತ್ರಿ, ರಫೀಕ ಡಿಕೆ, ಪುಂಡಲೀಕ ತಳವಾರ, ಮಹಾಂತೇಶ ಚನ್ನಮೇತ್ರಿ, ಅರುಣ ನೀಲಪ್ಪನವರ, ಯಲ್ಲಪ್ಪ ಪಟ್ಟಪನ್ನವರ, ಲಂಕೇಶ ಮೇತ್ರಿ, ಸುರೇಶ ತಮ್ಮಣ್ಣವರ, ಹನಮಂತ ನರೇರ, ಯಲ್ಲಪ್ಪ ಹೊಸಮನಿ, ಬೀಮಶೆಪ್ಪ ಮುಡೆನ್ನವರ ಸೇರಿದಂತೆ ಸಮಾಜದ ಹಿರಿಯರು ಹಾಗೂ ತಾಲೂಕಾ ಆಡಳಿತ ಮತ್ತು ಪಟ್ಟಣ ಪಂಚಾಯಿತಿ ಸಿಬ್ಬಂದಿ ವರ್ಗದವರು ಇದ್ದರು.



ಪ್ರಬಂಧ ಸ್ಪರ್ಧೆ: 227 ವಿದ್ಯಾರ್ಥಿಗಳು ಭಾಗಿ

ಸಂಕೇಶ್ವರ: ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ 135 ನೇ ಜಯಂತಿಯ ನಿಮಿತ್ತವಾಗಿ ಸಂಕೇಶ್ವರದ ಡಾ.ಬಿ.ಆರ್. ಅಂಬೇಡ್ಕರ್ ವೃತ್ತ ಭೀಮ ನಗರ ಹಾಗೂ ಶ್ರೀಮತಿ ಗೋದಾಬಾಯಿ ಗೋವಿಂದಕರನಿಂಗಮೆಮೊರಿಯಲ್ ಫೌಂಡೇಷನ್ ವತಿಯಿಂದ ಡಾ.ಬಿ.ಆರ್. ಅಂಬೇಡ್ಕರ್ ಅವರ ಬದುಕು ಮತ್ತು ಸಾಧನೆಗಳ ಪರಿಚಯದ ಕುರಿತು ಪ್ರಬಂಧ ಸ್ಪರ್ಧೆಯನ್ನು ಪಟ್ಟಣದ ಗೌತಮ ಕನ್ನಡ ಮಾಧ್ಯಮ ಶಾಲೆಯಲ್ಲಿ ಏರ್ಪಡಿಸಲಾಗಿತ್ತು.

ಪಟ್ಟಣದ ಭೀಮನಗರದಲ್ಲಿನ ಗೌತಮ ಕನ್ನಡ ಮಾಧ್ಯಮ ಶಾಲೆಯಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಅವರ ಕುರಿತು ಪ್ರಬಂಧ ಸ್ಪರ್ಧೆಗಳು ಜರುಗಿದವು.

ಈ ಪ್ರಬಂಧ ಸ್ಪರ್ಧೆಯಲ್ಲಿ ಹುಕ್ಕೇರಿ ತಾಲೂಕು ಸೇರಿದಂತೆ ಗಳತಗಾ, ಬೋರಗಾವ್, ಚಿಕ್ಕೋಡಿ, ಹಾರೋಗೇರಿ, ನಂದಗಡ ಖಾನಾಪೂರದ ಕರಿಕಟ್ಟಿ ಗ್ರಾಮದಿಂದ ಹಾಗೂ ಗಡಹಿಂಗ್ಲಜ್ ತಾಲೂಕಿನ ಹಿಟ್ನಿ ಗ್ರಾಮದಿಂದ ಅನೇಕ ಕಡೆಯಿಂದ ಕನ್ನಡ, ಮರಾಠಿ, ಇಂಗ್ಲಿಷ್ ವಿಭಾಗದ ಪ್ರಾಥಮಿಕ ಹಾಗೂ ಪ್ರೌಢ ಶಾಲೆಯ ಒಟ್ಟು 277 ವಿದ್ಯಾರ್ಥಿಗಳು ಪ್ರಬಂಧ ಸ್ಪರ್ಧೆಯಲ್ಲಿ ಭಾಗವಹಿಸಿದರು. ಶ್ರೀಮತಿ ಗೋದಾಬಾಯಿ ಗೋವಿಂದ ಕರನಿಂಗ ಮೆಮೊರಿಯಲ್ ಫೌಂಡೇಷನ್ ಮಾರ್ಗದರ್ಶಕ ನವೀನ ಗಂಗರೆಡ್ಡಿ ಮಾತನಾಡಿ, ವಿದ್ಯಾರ್ಥಿಗಳು ಅಂಬೇಡ್ಕರರ ಜೀವನ ಚರಿತ್ರೆಯನ್ನು ಅಧ್ಯಯನ ಮಾಡಬೇಕು. ಅವರ ಹೋರಾಟದ ಜೀವನ ವಿಧಾನವನ್ನು ಮೈಗೂಡಿಸಿಕೊಳ್ಳಬೇಕು ಎನ್ನುವ ಉದ್ದೇಶದಿಂದ ಪ್ರಬಂಧ ಸ್ಪರ್ಧೆ ಏರ್ಪಡಿಸಲಾಗಿದೆ ಎಂದರು.

ದಲಿತ ಮುಖಂಡ ವಿನಾಯಕ ಮಳನಾಯಿ ಮಾತನಾಡಿ, ಡಾ.ಬಿ.ಆರ್. ಅಂಬೇಡ್ಕರ್ ಅವರ ಚಿಂತನೆ- ಭೋದನೆಯು ಯುವಜನರಿಗೆ ತಿಳಿಸುವ ಉದ್ದೇಶದಿಂದ ಕಳೆದ 5 ವರ್ಷಗಳಿಂದ ಶ್ರೀಮತಿ ಗೋದಾಬಾಯಿ ಗೋವಿಂದ ಕರನಿಂಗ ಮೆಮೊರಿಯಲ್ ಫೌಂಡೇಷನ್ ಅವರ ಆಶ್ರಯದಲ್ಲಿ ಈ ಕಾರ್ಯಕ್ರಮ ಜರುಗುತ್ತಿದ್ದು, ಬರುವ ಏ.12ರಂದು ವಿಜೇತರಿಗೆ ಫೌಂಡೇಷನ್ ವತಿಯಿಂದ ನಗದು ಬಹುಮಾನ ಹಾಗೂ ಮೊಮೆಂಟೋ ವಿತರಿಸಲಾಗುವುದು ಎಂದರು.

ಈ ವೇಳೆ ಶ್ರೀಮತಿ ಗೋದಾಬಾಯಿ ಗೋವಿಂದ ಕರನಿಂಗ ಮೆಮೊರಿಯಲ್ ಫೌಂಡೇಷನ್ ಉಪಾಧ್ಯಕ್ಷೆ ತಾರಾ ಕರನಿಂಗ, ಕರ್ನಾಟಕ ರಾಜ್ಯ ಸರಕಾರಿ ನೌಕರರ ಸಂಘ ಚಿಕ್ಕೋಡಿ, ಜಿಲ್ಲಾ ಕಾರ್ಯದರ್ಶಿಗಳಾದ ನಾಗರಾಜ ಕರನಿಂಗ, ಶಂಕರ ಕರನಿಂಗ, ಪ್ರವೀಣ ಕರನಿಂಗ, ಅಮಿತ ಮಾಳಗೆ, ಅಪ್ಪಾಸಾಹೇಬ್ ದೊಡ್ಡಲಿಂಗ, ರಾಘವೇಂದ್ರ ಜಯಕರ, ಬಸವಂತ ಸತ್ಯನಾಯಿಕ, ಸುನೀಲ ಖಾತೆದಾರ ಸೇರಿದಂತೆ ಅನೇಕರು ಹಾಜರಿದ್ದರು.



ಬಾಬೂಜಿ ಕೊಡುಗೆ ಅಪಾರ: ಶಾಸಕ ಜಾರಕಿಹೊಳಿ

ಮೂಡಲಗಿ: ತುಳಿತಕ್ಕೊಳಗಾದ ಸಮಾಜಗಳ ನ್ಯಾಯಯುತ ಹಕ್ಕುಗಳಿಗಾಗಿ ಹೋರಾಡಿದ ಮಹಾನ್ ನಾಯಕ ಬಾಬು ಜಗಜೀವನ್ ರಾಂ ಎಂದು ಶಾಸಕ ಬಾಲಚಂದ್ರ ಜಾರಕಿಹೊಳಿ ಹೇಳಿದರು.

ತಾಲೂಕಿನ ಅರಭಾವಿ ಪಟ್ಟಣ ಪಂಚಾಯತದಿಂದ ಹಮ್ಮಿಕೊಂಡ ಡಾ. ಬಾಬು ಜಗ ಜೀವನರಾಂ ಅವರ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿ, ಜಗ ಜೀವನರಾಂ ಅವರು ಸುಮಾರು ಮೂರು ದಶಕಗಳ ಕಾಲ ಕೇಂದ್ರದಲ್ಲಿ ಸಚಿವರಾಗಿ, ಉಪ- ಪ್ರಧಾನಿಯಾಗಿ ತಮ್ಮ ಸೇವೆಯನ್ನು ಸಲ್ಲಿಸಿದ್ದರೆಂದು ತಿಳಿಸಿದರು.

ಬಾಬು ಜಗಜೀವನರಾಂ ಅವರು ಸಾಮಾಜಿಕ ಸಮಾನತೆ, ಸಾಮಾಜಿಕ ನ್ಯಾಯದ ಕುರಿತು ಜನ ಜಾಗೃತಿ ಮೂಡಿಸಿದ್ದರು. ಕೇಂದ್ರದ ಕೃಷಿ ಸಚಿವರಾಗಿ ಆಹಾರ ಧಾನ್ಯಗಳ ಉತ್ಪಾದನೆಯಲ್ಲಿ



ನಮ ದೇಶವು ಸ್ವಾವಲಂಬಿ ದೇಶವಾಗಲು ಅಪಾರವಾಗಿ ಶ್ರಮಿಸಿದ್ದರು. ಇದಕ್ಕಾಗಿಯೇ ಇವರನ್ನು ಹಸಿರು ಕ್ರಾಂತಿಯ ಹರಿಕಾರರು ಎಂದು ಕರೆಯಲಾಗುತ್ತಿದೆ ಎಂದರು.

ಭಾರತಕ್ಕೆ ಸಂವಿಧಾನದ ಕೊಡುಗೆ ಕೊಟ್ಟ ಡಾ. ಬಾಬಾಸಾಹೇಬ ಅಂಬೇಡ್ಕರ್ ಮತ್ತು ಶೋಷಿತರ ಧ್ವನಿಯಾಗಿದ್ದ ಬಾಬು ಜಗಜೀವನ ರಾಂ ಅವರು ಭಾರತವು ಪ್ರಜ್ವಲಿಸಲು ಅನನ್ಯ ಕೊಡುಗೆ ನೀಡಿದ್ದರು ಎಂದು ಅವರುಗಳ ಹೋರಾಟಗಳನ್ನು ಮೆಲುಕು ಹಾಕಿದರು. ಶಾಸಕ ಬಾಲಚಂದ್ರ ಜಾರಕಿಹೊಳಿಯವರು ಡಾ. ಬಾಬು ಜಗಜೀವನರಾಂ ಅವರ ಭಾವಚಿತ್ರಕ್ಕೆ ಪೂಜೆಯನ್ನು ಸಲ್ಲಿಸಿದರು.

ಬೆಳಗಾವಿ ಜಿಲ್ಲಾ (ಗ್ರಾ) ಬಿಜೆಪಿ ಅಧ್ಯಕ್ಷ ಸುಭಾಸ ಪಾಟೀಲ, ಬೆಮುಲ್ ನಿರ್ದೇಶಕ ಬಸವರಾಜ ಮಾಳೆದವರ, ಪ್ರಮುಖರಾದ ಶಂಕರ ಬಿಲಕುಂದಿ, ನಿಂಗಪ್ಪ ಇಳಿಗೇರ, ಮುತ್ತೆಪ್ಪ ಜಲ್ಲಿ, ಭೀಮಶಿ ಮಾಳೆದವರ, ರಮೇಶ ಮಾದರ, ರಮೇಶ ಸಂಪಗಾಂವಿ, ಅಡಿವೆಪ್ಪ ಬಿಲಕುಂದಿ, ಕೃಷ್ಣಾ ಬಂಡಿವಡ್ಡರ, ಪ.ಪಂ. ಮುಖ್ಯಾಧಿಕಾರಿ ವಿನಾಯಕ ಬಬಲೇಶ್ವರ, ಶಿವು ದೊಡಗೋಣಿ ಮುಂತಾದವರು ಉಪಸ್ಥಿತರಿದ್ದರು.

ಬಾಬು ಜಗಜೀವನರಾಂ ಕೊಡುಗೆ ಅಪಾರ

ಗೋಕಾಕ: ಶೋಷಿತರ ಏಳ್ಗೆಗಾಗಿ ಶ್ರಮಮಿಸುತ್ತಾ ದೇಶಕ್ಕೆ ಹಲವಾರು ಕೊಡುಗೆಗಳನ್ನು ಹಸಿರು ಕ್ರಾಂತಿ ಹರಿಕಾರ ಮಾಜಿ ಉಪ ಪ್ರಧಾನಿ ಡಾ.ಬಾಬು ಜಗಜೀವನರಾಮ್ ಅವರು ನೀಡಿದ್ದಾರೆ ಎಂದು ತಾಪಂ ಅಧಿಕಾರಿ ಪರಶುರಾಮ ಗಸ್ತೆ ಹೇಳಿದರು.

ಭಾನುವಾರ ನಗರದ ತಾಲೂಕು ಪಂಚಾಯತಿ ಸಭಾಂಗಣದಲ್ಲಿ ತಾಲೂಕು ಆಡಳಿತ, ತಾಲೂಕು ಪಂಚಾಯತಿ, ನಗರಸಭೆ ಹಾಗೂ ಸಮಾಜ ಕಲ್ಯಾಣ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡ ಡಾ.ಬಾಬು ಜಗಜೀವನರಾಮ್ ರವರ 119ನೇ ಜನ್ಮ ದಿನಾಚರಣೆ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಆರ್ಥಿಕ, ಸಾಮಾಜಿಕವಾಗಿ, ದುರ್ಬಲವಾದರವನ್ನು ಸಮಾಜದ ಮುಂಚೂಣಿಗೆ ತರುವಲ್ಲಿ ಪ್ರಮುಖ ಪಾತ್ರವಹಿಸಿದ್ದರು. ದೇಶದ ಆಹಾರ ಸಮಸ್ಯೆಯನ್ನು ಪರಿಸರಿ ಹಸಿರು ಕ್ರಾಂತಿ ಹರಿಕಾರರಾದವರು. ಪತ್ರಿದಿನ, ಪ್ರತಿಕ್ಷಣ ಡಾ.ಬಾಬು ಜಗಜೀವನರಾಮ ಅವರಆದರ್ಶಗಳನ್ನು ನಾವು ನಮ್ಮ ಜೀವನದಲ್ಲಿ ಅಳವಡಿಸಿಕೊಂಡು ಶೋಷಿತರ ಧ್ವನಿಯಾಗಬೇಕು ಎಂದು ಹೇಳಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ತಹಶೀಲ್ದಾರ ಡಾ.ಮೋಹನ ಭಸ್ಮೆ ವಹಿಸಿದ್ದರು.

ಶ್ರೀ ಲಕ್ಷ್ಮಣರಾವ ಜಾರಕಿಹೊಳಿ ಪದವಿಪೂರ್ವ ಮಹಾವಿದ್ಯಾಲಯದ ಉಪನ್ಯಾಸಕ ವ್ಹಿ.ಬಿ.ಕಣೆಲ್ದಾರ ಉಪನ್ಯಾಸ ನೀಡಿದರು.



ಈ ಸಂದರ್ಭದಲ್ಲಿ ಪೌರಾಯುಕ್ತ ರವಿ ರಂಗಸುಭೆ, ಸಮಾಜ ಕಲ್ಯಾಣ ಅಧಿಕಾರಿ ಎ.ಬಿ.ಮಲಬನ್ನವರ, ಸಿಡಿಪಿಓ ಡಾ ಡಿ.ಎಸ್.ಕೂಡವಕ್ಕಲಿಗ, ಬಿಇಓ ಜಿ.ಬಿ.ಬಳಗಾರ, ಹಿಂದುಳಿದ ವರ್ಗಗಳ ಕಲ್ಯಾಣ ಅಧಿಕಾರಿ ಪ್ರಮೀಳಾ ಬೀದರಿ, ತೋಟಗಾರಿಕೆ ಅಧಿಕಾರಿ ಎಂ.ಎಲ್ ಜನ್ಮಟ್ಟಿ, ಮುಖಂಡರುಗಳಾದ ಓಂಕಾರ ಬಂಡಿವಡ್ಡರ, ಅಜಿತ್ ಹರಿಜನ, ಗೋವಿಂದ ಕಳ್ಳಿಮನಿ, ವೀರಭದ್ರಪ್ಪ ಮ್ಯೆಲನ್ನವರ, ಸುಂದರವ್ವ ಕಟ್ಟಿಮನಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಹಿಂದುಳಿದವರ ಅಭಿವೃದ್ಧಿಗೆ ಬಾಬೂಜಿ ಶ್ರಮ

ರಾಮದುರ್ಗ: ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದ ಜನಾಂಗದ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸಿದವರಲ್ಲಿ ಪ್ರಮುಖರಾಗಿ ಕಾರ್ಯನಿರ್ವಹಿಸಿದ ಡಾ. ಬಾಬು ಜಗಜೀವನ್‌ರಾಂ ಜೀವನ ಎಲ್ಲರಿಗೂ ಆದರ್ಶವಾಗಿದೆ ಎಂದು ತಹಶೀಲ್ದಾರ ಪ್ರಕಾಶ ಹೊಳೆಪ್ಪಗೋಳ ಹೇಳಿದರು.

ಭಾನುವಾರ ಪಟ್ಟಣದ ತಾಪಂ ಸಭಾ ಭವನದಲ್ಲಿ ತಾಲೂಕಾ ಆಡಳಿತ ಆಯೋಜಿಸಿದ್ದಡಾ. ಬಾಬು ಜಗಜೀವನ್ ರಾಮ್ ಜಯಂತಿ ಕಾರ್ಯಕ್ರಮದಲ್ಲಿ ಬಾಬು ಜಗಜೀವನ್ ರಾಮ್‌ರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಮಾತನಾಡಿ, ದೇಶದ ಉಪಪ್ರಧಾನಿಗಳಾಗಿ ರೈತರಿಗಾಗಿ ಹಲವಾರು ಯೋಜನೆಗಳನ್ನು ಅನುಷ್ಠಾನ ಮಾಡಿದ್ದರಿಂದ ಅವರನ್ನು ಹಸಿರು ಕ್ರಾಂತಿಯ ಹರಿಕಾರರೆಂದು ಕರೆಯುತ್ತಾರೆಂದು ಹೇಳಿದರು.

ತಾಪಂ ಇಒ ಬಸವರಾಜ ಐನಾಪೂರ ಮಾತನಾಡಿ, ಸುದೀರ್ಘ ರಾಜಕೀಯ ಜೀವನ ಕಳೆದ ಡಾ. ಬಾಬು ಜಗಜೀವನ್



ರಾಮ್ ಅವರ ಆದರ್ಶ ಜೀವನ ತಮ್ಮ ಮಕ್ಕಳ ಬದುಕಲ್ಲಿ ಮೂಡಿಬರಬೇಕು. ಬಹುತೇಕ ಇಲಾಖೆಗಳ ಸಚಿವರಾಗಿದ್ದ ಜಗಜೀವನ್‌ರಾಮ್‌ರು ವಿವಿಧ ಇಲಾಖೆಗಳ ಎಲ್ಲ ಸ್ಥರಗಳನ್ನು ಬಲ್ಲವರಾಗಿದ್ದರು ಎಂದು ಹೇಳಿದರು. ಕ್ಷೇತ್ರ ಶಿಕ್ಷಣಾಧಿಕಾರಿ ಸುರೇಂದ್ರ ಕಾಂಬಳೆ ಮಾತನಾಡಿ, ಮಹಾನ್ ವ್ಯಕ್ತಿಗಳ ಜನ್ಮ ದಿನಾಚರಣೆಗಳು ಕೇವಲ ಕಾಟಾಚಾರದ ಆಚರಣೆಗಳಾಗಿರದೇ ಮಹಾನ್ ವ್ಯಕ್ತಿಗಳ ತತ್ವ ಸಿದ್ಧಾಂತಗಳನ್ನು ತಮ್ಮ ಮಕ್ಕಳಲ್ಲಿ ಬೆಳೆಸಿಕೊಳ್ಳಲು ಯತ್ನಿಸಬೇಕು. ಮಕ್ಕಳಲ್ಲಿ ವೈಚಾರಿಕತೆ, ವೈಜ್ಞಾನಿಕ ಮನೋಭಾವ, ಮಾನವೀಯತೆ ಮತ್ತು ಸುಧಾರಣೆ ಕ್ರಮಗಳಿಂದ ಸಮಾಜದಲ್ಲಿ ಅಭಿವೃದ್ಧಿ ಕಾಣಬಹುದಾಗಿದೆ. ಈ ನಿಟ್ಟಿನಲ್ಲಿ ದಲಿತರು ಚಿಂತನೆ ನಡೆಸಬೇಕಿದೆ ಎಂದರು.

ಸ್ಥಳೀಯ ಐ.ಎಸ್. ಯಾದವಾಡ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಇತಿಹಾಸ ಉಪನ್ಯಾಸಕ ಡಾ. ಎ.ಬಿ. ವಗ್ಗರ ಮಾತನಾಡಿ, ವಿವಿಧತೆಯಲ್ಲಿ ಏಕತೆಯನ್ನು ಬಯಸುವ ಮಹಾನ್ ನಾಯಕರನ್ನು ಒಂದು ಜಾತಿಯ ನಾಯಕ ಎಂದು ಬಿಂಬಿಸುತ್ತಿರುವುದು ವಿಷಾದದ ಸಂಗತಿಯಾಗಿದೆ. ಮಹಾನ್ ವ್ಯಕ್ತಿಗಳ ಸ್ಮರಣೆಯಿಂದ ಮಕ್ಕಳಿಗೆ ಸ್ಫೂರ್ತಿಯಾಗಲಿದೆ ಎಂದರು. ಸಮಾಜದಲ್ಲಿಯ ಅಸ್ಪೃಶ್ಯ ವಿದ್ಯಾರ್ಥಿಗಳ ಸಂಘಟನೆ ಮಾಡಿ ಸಮಾಜದ ಪಿಡುಗಾಗಿದ್ದ ಜಾತಿ ಪದ್ಧತಿ ವಿರೋಧಿಸಲು ಹೋರಾಟ ಮಾಡಿದ್ದರು. ಮೇಲ್ವರ್ಗದವರ ದಮನಕಾರಿ ನೀತಿಯನ್ನು ರಾಜಕೀಯವಾಗಿ ಬೆಳೆದು ವಿರೋಧಿಸಿದ್ದರು ಎಂದರು. ಜಗಜೀವನ್ ರಾಮ್ ಅವರು ರಾಜಕೀಯ ಶಕ್ತಿಯೇ ಮೇಲು ಎಂದು ನಂಬಿದ್ದರು. ದಲಿತರು ರಾಜಕೀಯವಾಗಿ ಬೆಳೆದರೆ ಎಂಥಹ ಕಠಿಣ ಪರಿಸ್ಥಿತಿಗಳನ್ನು ಸುಲಭವಾಗಿ ಸರಳೀಕರಿಸಬಹುದಾಗಿದೆ ಎಂದು ಹೇಳುತ್ತಿದ್ದರು ಎಂದು ತಿಳಿಸಿದರು.

ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ಹನಮಂತ ವಕ್ಕುಂದ, ಸಿಪಿಐ ವಿನಾಯಕ ಬಡಿಗೇರ ವೇದಿಕೆ ಮೇಲಿದ್ದರು. ಮೇಲ್ವಿಚಾರಕ ಚಿನಿವಾಲರ ಸ್ವಾಗತಿಸಿದರು. ಶಿಕ್ಷಕ ರಮೇಶ ಮೇತ್ರಿ ಕಾರ್ಯಕ್ರಮ ನಿರೂಪಿಸಿದರು. ಎಸ್.ಎಸ್. ಕಡೋಲ ವಂದಿಸಿದರು.

ಏ.10ರಂದು ರಾಜ್ಯಮಟ್ಟದ ಸಮಾವೇಶ

ಬೆಳಗಾವಿ : ಕೆಪಿಎಸ್ ಮ್ಯಾಗ್ನೆಟ್ ಯೋಜನೆ ಹೆಸರಲ್ಲಿ 40,000 ಸರ್ಕಾರಿ ಶಾಲೆಗಳನ್ನು ಮುಚ್ಚುತ್ತಿರುವುದರ ವಿರುದ್ಧ ಏ.10 ರಂದು ಬೆಂಗಳೂರಿನ ಫ್ರೀಡಂ ಪಾರ್ಕಿನಲ್ಲಿ ನಡೆಯಲಿರುವ ರಾಜ್ಯಮಟ್ಟದ ಬೃಹತ್ ಜನ ಸಮಾವೇಶಕ್ಕೆ ಬೆಳಗಾವಿಯ ವಿವಿಧ ಹಳ್ಳಿಗಳಲ್ಲಿ ಭರದಿಂದ ತಯಾರಿ ನಡೆದಿದೆ. ತಾಲೂಕಿನಲ್ಲಿರುವ ಹೊನ್ನಿಹಾಳ, ಕುಟ್ಟಲವಾಡಿ, ಬಾಳಗಮಟ್ಟಿ, ಮಲ್ಲಹೊಳಿ, ಹಾಲಬಾವಿ ತಲ್ಲೂರು, ಕಜಗಲ್ ಮಾಡಮಗೇರಿ ಸೇರಿದಂತೆ ಅನೇಕ ಗ್ರಾಮಗಳಲ್ಲಿ ಈಗಾಗಲೇ ಎಐಡಿಎಸ್‌ಒ ನೇತೃತ್ವದಲ್ಲಿ ಸಭೆ ನಡೆಸಿರುವ ಗ್ರಾಮಸ್ಥರು ಮನೆ-ಮನೆಗೆ ತೆರಳಿ ಪೋಷಕರನ್ನು ಹೋರಾಟಕ್ಕೆ ಸಜ್ಜುಗೊಳಿಸುತ್ತಿದ್ದಾರೆ.

ಬೆಳಗಾವಿಯಲ್ಲಿ ನಡೆದ ಚಳಿಗಾಲದ ಅಧಿವೇಶನದಿಂದ ಆರಂಭಗೊಂಡು ಕಳೆದ 4 ತಿಂಗಳಿನಿಂದ ಕೆಪಿಎಸ್ ಮ್ಯಾಗ್ನೆಟ್



ಯೋಜನೆ ವಿರುದ್ಧ ಜನ ಹೋರಾಟ ನಡೆದಿದೆ. ಎಐಡಿಎಸ್‌ಒ ನೇತೃತ್ವದಲ್ಲಿ ಹಳ್ಳಿ-ಹಳ್ಳಿಗಳಲ್ಲಿ ಪೋಷಕರು ಹಾಗೂ ಗ್ರಾಮಸ್ಥರು ಸಾರ್ವಜನಿಕ ಶಿಕ್ಷಣ ಉಳಿಸಿ ಹೋರಾಟ ಸಮಿತಿಗಳನ್ನು ರಚಿಸಿಕೊಂಡು ನಮ್ಮೂರ ಶಾಲೆ ಮುಚ್ಚಲು ಬಿಡುವುದಿಲ್ಲ ಎಂದು ಒಕ್ಕೊರಲಿನಿಂದ ಧ್ವನಿಯೆತ್ತಿದ್ದಾರೆ. ಜಿಲ್ಲೆಯ ಹಾಗೂ ನಾಡಿನ ಹೆಸರಾಂತ ಸಾಹಿತಿಗಳು, ಶಿಕ್ಷಣ ತಜ್ಞರು ಹಾಗೂ ಶಿಕ್ಷಣ ಪ್ರೇಮಿಗಳು ಬಡಮಕ್ಕಳನ್ನು ಶಿಕ್ಷಣದಿಂದ ಶಾಶ್ವತವಾಗಿ ದೂರ ತಳ್ಳುವ ರಾಜ್ಯ ಕಾಂಗ್ರೆಸ್ ಸರ್ಕಾರದ ನಿರ್ಧಾರವನ್ನು ಖಂಡಿಸಿದ್ದಾರೆ.

ನಾಡಿನ ಜನತೆಯ ತೀವ್ರ ವಿರೋಧದ ನಡುವೆಯೂ ಸರ್ಕಾರ ಶಾಲೆಗಳನ್ನು ಮುಚ್ಚುವ ಕೆಲಸವನ್ನು ಮುಂದುವರಿಸಿದೆ. ಸರ್ಕಾರವು ಈಗಾಗಲೇ ಯಾವ-ಯಾವ ಶಾಲೆಗಳನ್ನು ವಿಲೀನಗೊಳಿಸಬೇಕೆಂದು ಮ್ಯಾಪಿಂಗ್ ನಡೆಸಿದೆ. ಅಧಿಕಾರಿಗಳಿಂದ ಮ್ಯಾಗ್ನೆಟ್ ಶಾಲೆಯ ಸಮೀಕ್ಷೆ ಮಾಡಿಸಲಾಗುತ್ತಿದೆ. ವಿಲೀನಗೊಳ್ಳುವ ಶಾಲೆಗಳ ಮುಖ್ಯಶಿಕ್ಷಕರಿಗೆ ಮೌಖಿಕವಾಗಿ ಆದೇಶ ನೀಡಲಾಗಿದೆ. ಏ.8 ಮತ್ತು 9 ರಂದು ನಡೆಯಲಿರುವ ಪೋಷಕರ ಸಭೆಗಳಲ್ಲಿ , ಮುಂದಿನ ಶೈಕ್ಷಣಿಕ ವರ್ಷದಲ್ಲಿ ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸುವಂತೆ ಒತ್ತಾಯಿಸಲು ಶಾಲೆಗಳಿಗೆ ನೋಟಿಸ್ ನೀಡಲಾಗಿದೆ.

ಸರ್ಕಾರದ ಈ ಕಡು ಜನವಿರೋಧಿ ಮತ್ತು ನಿರಂಕುಶ ನಡೆಯ ವಿರುದ್ಧ ಹೋರಾಟವನ್ನು ತೀವ್ರಗೊಳಿಸಲು ಎಐಡಿಎಸ್‌ಒ ಹಾಗೂ ಸಾರ್ವಜನಿಕ ಶಿಕ್ಷಣ ಉಳಿಸಿ ಸಮಿತಿಗಳು ನಿರ್ಧರಿಸಿದೆ.

ಈ ನಿಟ್ಟಿನಲ್ಲಿ ರಾಜ್ಯಮಟ್ಟದ ಜನ ಸಮಾವೇಶವನ್ನು ಏ.10ರಂದು ರಾಜಧಾನಿ ಬೆಂಗಳೂರಿನ ಫ್ರೀಡಂ ಪಾರ್ಕಿನಲ್ಲಿ ಆಯೋಜಿಸಲಾಗಿದೆ. ರಾಜ್ಯದ ಹಳ್ಳಿ-ಹಳ್ಳಿಗಳಿಂದ ಪೋಷಕರು ಹಾಗೂ ವಿದ್ಯಾರ್ಥಿಗಳು ಹೋರಾಟದಲ್ಲಿ ಭಾಗಿಯಾಗಲಿದ್ದಾರೆ.

ಈ ಹೋರಾಟದಲ್ಲಿ ಸಾಹಿತಿಗಳು, ವಿವಿಧ ಸಂಘಟನೆಗಳ ಹೋರಾಟಗಾರು, ವಿದ್ಯಾರ್ಥಿಗಳು, ಪೋಷಕರು ಸೇರಿದಂತೆ ರಾಜ್ಯದ ವಿವಿಧ ಭಾಗಗಳಿಂದ ಸಾರ್ವಜನಿಕರು ಭಾಗಿಯಾಗಲಿದ್ದಾರೆ.

ಕಿರುಸುದ್ದಿ

ಜಗಜೀವನರಾಂ ಜೀವನದ ಬಗ್ಗೆ ಅರಿಯಿರಿ

ರಾಯಬಾಗ: ಶೋಷಿತರ ನಾಯಕ ಡಾ.ಬಾಬು ಜಗಜೀವನರಾಂ ರವರ ಹೋರಾಟದ ಜೀವನದ ಬಗ್ಗೆ ಪ್ರತಿಯೊಬ್ಬರು ಅರಿತುಕೊಂಡು, ಅವರು ಹಾಕಿಕೊಟ್ಟಿರುವ ಮಾರ್ಗದರ್ಶನದಲ್ಲಿ ಮುನ್ನಡೆಯಬೇಕೆಂದು ಸಮಾಜ ಸೇವಕ ಕಾಡೇಶ ಐಹೊಳೆ ಹೇಳಿದರು.

ಭಾನುವಾರ ಪಟ್ಟಣದ ಡಾ.ಬಾಬು ಜಗಜೀವನರಾಂ ಭವನದಲ್ಲಿ ತಾಲೂಕು ಆಡಳಿತ ಮತ್ತು ಸಮಾಜ ಕಲ್ಯಾಣ ಇಲಾಖೆ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಡಾ.ಬಾಬು ಜಗಜೀವನರಾಂ ರವರ 119ನೇ ಜಯಂತಿ ಉತ್ಸವ ಸಮಾರಂಭದ ವೇದಿಕೆ ಕಾರ್ಯಕ್ರಮದಲ್ಲಿ ಮಾತನಾಡಿ,ಇಂದಿನ ಯುವ ಜನಾಂಗ ಡಾ.ಅಂಬೇಡ್ಕರ ಮತ್ತು ಡಾ.ಬಾಬು ಜಗಜೀವನರಾಮ್ ರವರ ಚಿಂತನೆಗಳನ್ನು ಅಧ್ಯಯನ ಮಾಡಬೇಕೆಂದು ಕರೆ ನೀಡಿದರು. ಸಿಪಿಐ ಎಂ.ಎಂ.ಡಪ್ಪಿನ ಮಾತನಾಡಿದರು. ಸಮಾಜ ಕಲ್ಯಾಣ ಇಲಾಖೆ ಗ್ರೇಡ್-1 ಸಹಾಯಕ ನಿರ್ದೇಶಕ ವಿ.ಎಸ್.ಚಂದರಗಿ ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. ತಹಶೀಲ್ದಾರ ಮಹಾದೇವ ಸನಮುರಿ ಅಧ್ಯಕ್ಷತೆ ವಹಿಸಿದ್ದರು. ಬೆಳಿಗ್ಗೆ ಪಟ್ಟಣದ ಮಾತಂಗಿ ದೇವಸ್ಥಾನ ಹತ್ತಿರ ಶಾಸಕ ಡಿ.ಎಂ. ಐಹೊಳೆಯವರು ಡಾ.ಬಾಬು ಜಗಜೀವನರಾಮ್ ರವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ಮೆರವಣಿಗೆಗೆ ಚಾಲನೆ ನೀಡಿದರು.

ಕಾರ್ಯಕ್ರಮದಲ್ಲಿ ಪ.ಪಂ.ಮುಖ್ಯಾಧಿಕಾರಿ ಎಸ್.ಆರ್.ಮಾಂಗ, ಡಾ. ಎಸ್.ಎಂ.ಪಾಟೀಲ, ಪರಮಾನಂದ ಮಂಗಸೂಳಿ, ಎಸ್.ವೈ.ಸನಮನಿ, ಎಮ್.ಆರ್.ಪಾಟೀಲ, ಡಾ.ಎಂ.ಬಿ.ಪಾಟೀಲ, ಎಚ್.ಎಲ್.ಪೂಜಾರಿ, ಬಸವರಾಜ ಕಾಂಬಳೆ, ಎಂ.ಪಿ.ಜೇರಗ್ಯಾಳ, ಕಲ್ಪನಾ ಕಾಂಬಳೆ, ಭಾರತಿ ಕಾಂಬಳೆ, ಶಿವಾನಂದ ಐಹೊಳೆ, ಮಹೇಶ ಕರಮಡಿ, ಬಸವರಾಜ ಸನದಿ, ಲಕ್ಕಪ್ಪ ಪೂಜಾರಿ, ಅಪ್ಪಾಸಾಹೇಬ ಕೆಂಗೆನ್ನವರ, ಸುರೇಶ ಐಹೊಳೆ, ಮಹೇಶ ಐಹೊಳೆ, ಸಂಜೀವ ಮೈಶಾಳೆ, ದೀಲಿಪ ಪಾಯನ್ನವರ ಸೇರಿ ಅನೇಕರು ಇದ್ದರು. ದೈಹಿಕ ಶಿಕ್ಷಣ ಪರಿವೀಕ್ಷಕ ಮಾಹಾವೀರ ಜೇರಗ್ಯಾಳ ನಿರೂಪಿಸಿದರು, ಅಂಬರೀಶ ಕಾಂಬಳೆ ವಂದಿಸಿದರು.

ಕುಂದಾನಗರಿಯಲ್ಲಿ ಬಸವ ಜಯಂತಿ ಸಂಭ್ರಮಕ್ಕೆ ಸಿದ್ಧತೆ

ಬೆಳಗಾವಿ: ವಿಶ್ವಗುರು ಬಸವಣ್ಣನವರ ಜಯಂತಿಯನ್ನು ಈ ಬಾರಿ ಅತ್ಯಂತ ವಿಜೃಂಭಣೆಯಿಂದ ಆಚರಿಸಲು ಬೆಳಗಾವಿಯ ಬಸವ ಜಯಂತಿ ಉತ್ಸವ ಸಮಿತಿ ಸನ್ನದ್ಧವಾಗಿದೆ. ಉತ್ಸವದ ಅಂಗವಾಗಿ ಹಮ್ಮಿಕೊಳ್ಳಲಿರುವ ಬೃಹತ್ ಮೆರವಣಿಗೆ ಹಾಗೂ ವಿವಿಧ ಕಾರ್ಯಕ್ರಮಗಳ ಕುರಿತು ಚರ್ಚಿಸಲು ನಗರದಲ್ಲಿ ಪೂರ್ವಭಾವಿ ಸಭೆ ಆಯೋಜಿಸಿದೆ. ಬೆಳಗಾವಿಯ ಬಸವ ಜಯಂತಿ ಉತ್ಸವ ಸಮಿತಿ ಕಣಬರಗಿ ರಸ್ತೆಯ ಬಸವ ಮಂಟಪದಲ್ಲಿ ಮಹತ್ವದ ಸಭೆ ಆಯೋಜಿಸಲಾಗಿದೆ. ಈ ಸಭೆಯಲ್ಲಿ ಏ.19ರಂದು ನಡೆಯಲಿರುವ ಬೃಹತ್ ಬೈಕ್ ರ್‍ಯಾಲಿ ಮತ್ತು ಬಸವೇಶ್ವರ ಮೂರ್ತಿಯ ಮೆರವಣಿಗೆ ಹಾಗೂ ಏ.26ರಂದು ಹಮ್ಮಿಕೊಳ್ಳಲಿರುವ ವಿಶ್ವಗುರುಗಳ ಭಾವಚಿತ್ರದ ಭವ್ಯ ಮೆರವಣಿಗೆಯ ರೂಪುರೇಷೆಗಳ ಬಗ್ಗೆ ಸಮಾಲೋಚನೆ ನಡೆಸಲಾಗುವುದು. ಸಮಿತಿಯ ಸಂಚಾಲಕರಾದ ಬಸವರಾಜ್ ರೊಟ್ಟಿ ಅವರು ಈ ಬಗ್ಗೆ ಮಾಹಿತಿ ನೀಡಿದ್ದು, ಉತ್ಸವವನ್ನು ಯಶಸ್ವಿಗೊಳಿಸಲು ಸಮಾಜದ ಗಣ್ಯರು ಮತ್ತು ಸಂಘಟನೆಗಳ ಸಹಕಾರ ಕೋರಿದ್ದಾರೆ

ಈ ಸಭೆಗೆ ಜಿಲ್ಲೆಯ ಎಲ್ಲಾ ಬಸವಪರ ಹಾಗೂ ಲಿಂಗಾಯತ ಪರ ಸಂಘಟನೆಗಳ ಪದಾಧಿಕಾರಿಗಳು, ಸದಸ್ಯರು, ನಗರಸೇವಕರು ಮತ್ತು ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುವಂತೆ ಮನವಿ ಮಾಡಲಾಗಿದೆ.

ಸಭೆಯಲ್ಲಿ ಸಾರ್ವಜನಿಕರು ತಮ್ಮ ಅಮೂಲ್ಯ ಸಲಹೆ-ಸೂಚನೆಗಳನ್ನು ನೀಡುವ ಮೂಲಕ ಬಸವ ಜಯಂತಿಯ ಮೆರವಣಿಗೆಯನ್ನು ಐತಿಹಾಸಿಕವಾಗಿಸಲು ಕೈಜೋಡಿಸಬೇಕೆಂದು ಉತ್ಸವ ಸಮಿತಿ ವಿನಂತಿಸಿದೆ. ಶರಣ ತತ್ವದ ಪ್ರಸಾರ ಮತ್ತು ಸಮುದಾಯದ ಏಕತೆಯನ್ನು ಬಿಂಬಿಸುವ ಈ ಉತ್ಸವಕ್ಕೆ ಈಗಿನಿಂದಲೇ ನಗರದಲ್ಲಿ ಸಿದ್ಧತೆಗಳು ಬಿರುಸುಗೊಂಡಿವೆ.

ನಿಧನಸುದ್ದಿ

ಮಹಾದೇವಿ ಗುಡಮನಿ



ಗೋಕಾಕ: ತಾಲೂಕಿನ ಲೋಳಸೂರ ಗ್ರಾಮದ ಮಹಾದೇವಿ ಯಲಪ್ಪ ಗುಡಿಮನಿ (42) ನಿಧನರಾದರು. ಮೃತರು ಪತಿ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.



ರಾಯಬಾಗ: ಭಾನುವಾರ ಪಟ್ಟಣದ ಡಾ.ಬಾಬು ಜಗಜೀವನರಾಂ ಭವನದಲ್ಲಿ ತಾಲೂಕು ಆಡಳಿತ ಮತ್ತು ಸಮಾಜ ಕಲ್ಯಾಣ ಇಲಾಖೆ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಡಾ.ಬಾಬು ಜಗಜೀವನರಾಂ ರವರ 119ನೇ ಜಯಂತಿ ಉತ್ಸವ ನಡೆಯಿತು.

ಬಡ ವಿದ್ಯಾರ್ಥಿಗೆ ಕಲಿಕಾ ಸಾಮಗ್ರಿ ವಿತರಣೆ

ಚನ್ನಮ್ಮನ ಕಿತ್ತೂರು: ಸರ್ಕಾರಿ ಪದವಿಪೂರ್ವ ಕಾಲೇಜಿನ ವಿಜ್ಞಾನ ವಿಭಾಗದಲ್ಲಿ ಪ್ರಥಮ ಪಿಯುಸಿ ಪರೀಕ್ಷೆಯಲ್ಲಿ ಸರಾಸರಿ ಶೇ. 90 ಅಂಕಗಳಿಸಿದ ಬಡ ಪ್ರತಿಭಾವಂತ ವಿದ್ಯಾರ್ಥಿನಿ ಸೃಷ್ಟಿ ಮಂಜುನಾಥ ಮಡಿವಾಳರ ಇವಳಿಗೆ ದ್ವಿತೀಯ ವರ್ಷದ ಪಿಯುಸಿ ಕಲಿಕೆಗೆ ಬೇಕಾಗುವ ಪುಸ್ತಕಗಳು, ಪೆನ್ನು ಮುಂತಾದ ವಸ್ತುಗಳನ್ನು ಹಾಗೂ ಸಿಇಟಿ, ನೀಟ್ ಪರೀಕ್ಷೆಗಳಿಗೆ ಸ್ಪರ್ಧಿಸಲು ಬೇಕಾಗುವ ಅಗತ್ಯ ಪುಸ್ತಕಗಳನ್ನು ಕರ್ನಾಟಕ ಯುವ ರಕ್ಷಣಾ ವೇದಿಕೆ ವತಿಯಿಂದ ವಿತರಿಸಿದರು.

ಪುಸ್ತಕಗಳನ್ನು ವಿತರಿಸಿ ಕರ್ನಾಟಕ ಯವ ರಕ್ಷಣಾವೇದಿಕೆಯ ಅಧ್ಯಕ್ಷ ಕಿರಣ ವಾಳದ ಮಾತನಾಡಿ, ನಮ್ಮ ಸಂಘಟನೆಯಿಂದ ಬಡ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಬೇಕಾಗುವ ಅಗತ್ಯ ಕಲಿಕಾ ಸಾಮಗ್ರಿಗಳನ್ನು ವಿತರಿಸಿ ಅವರಿಗೆ ಪ್ರೋತ್ಸಾಹಿಸುವ ಕೆಲಸವನ್ನು ಮಾಡುತ್ತಿದ್ದೇವೆ. ನಮ್ಮ ತಾಲೂಕಿನ ವಿದ್ಯಾರ್ಥಿಗಳು ಹೆಚ್ಚಿನ ಅಂಕಗಳನ್ನು ಗಳಿಸಿ ನಾಡಿನ ಹೆಸರನ್ನು ಗಳಿಸುವಂತಾಗಬೇಕೆಂದರು. ಇಂತಹ ಬಡ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ನಮ್ಮ ಸಂಘಟನೆಯು ಸದಾ ಬೆನ್ನಲಬಾಗಿ ನಿಲ್ಲುತ್ತದೆ ಎಂದರು.

ಸರಕಾರಿ ಪದವಿಪೂರ್ವ ಕಾಲೇಜಿನ ಪ್ರಾಚಾರ್ಯ ಎಸ್.ಬಿ. ಪೆಂಟೇದ ಮಾತನಾಡಿದರು.

ಪಟ್ಟಣದ ಪ್ರತಿಷ್ಠಿತ ಪೈ ಹೊಟೇಲ್ ಮಾಲಿಕ ದೀಪಕ ಪೈ ಇವರು ವಿದ್ಯಾರ್ಥಿನಿಗೆ ಧನ ಸಹಾಯ ನೀಡಿದರು. ಶಂಕರ ಗಂಗಪ್ಪನವರ, ಚೇತನ ಕೋಟಗಿ, ಬಸವರಾಜ ಸಂಪಗಾವಿ, ಮಂಜುನಾಥ ಕೋಲಕಾರ, ಪ್ರವೀಣ ಬಡಿಗೇರ, ಚನ್ನಮ್ಮ ನಾಗರಾಹುತ, ಅಶೋಕ ದೊಡಮನಿ ಮುಂತಾದವರು ಉಪಸ್ಥಿತರಿದ್ದರು.



ಚನ್ನಮ್ಮನ ಕಿತ್ತೂರು: ಸರ್ಕಾರಿ ಪದವಿಪೂರ್ವ ಕಾಲೇಜಿನ ವಿಜ್ಞಾನ ವಿಭಾಗದಲ್ಲಿ ಪ್ರಥಮ ಪಿಯುಸಿ ಪರೀಕ್ಷೆಯಲ್ಲಿ ಸರಾಸರಿ ಶೇ. 90 ಅಂಕಗಳಿಸಿದ ಬಡ ಪ್ರತಿಭಾವಂತ ವಿದ್ಯಾರ್ಥಿನಿ ಸೃಷ್ಟಿ ಮಂಜುನಾಥ ಮಡಿವಾಳರ ಇವಳಿಗೆ ದ್ವಿತೀಯ ವರ್ಷದ ಪಿಯುಸಿ ಕಲಿಕೆಗೆ ಬೇಕಾಗುವ ಪುಸ್ತಕಗಳು, ಪೆನ್ನು ಮುಂತಾದ ವಸ್ತುಗಳನ್ನು ಹಾಗೂ ಸಿಇಟಿ, ನೀಟ್ ಪರೀಕ್ಷೆಗಳಿಗೆ ಸ್ಪರ್ಧಿಸಲು ಬೇಕಾಗುವ ಅಗತ್ಯ ಪುಸ್ತಕಗಳನ್ನು ಕರ್ನಾಟಕ ಯುವ ರಕ್ಷಣಾ ವೇದಿಕೆಯಿಂದ ವಿತರಿಸಿದರು.

ವಿವಿಧ ಸಾಮಾಜಿಕ ಕಾರ್ಯಗಳಿಗೆ ಸಮುದಾಯ ಭವನ ಬಳಕೆಯಾಗಲಿ

ಗೋಕಾಕ: ಮದುವೆ, ಉಪನಯನ, ವಿವಿಧ ಸಾಮಾಜಿಕ ಕಾರ್ಯಕ್ರಮಗಳಿಗಾಗಿ ಸಮುದಾಯ ಭವನವನ್ನು ಸದ್ಬಳಕೆ ಮಾಡಿಕೊಳ್ಳಬೇಕು. ಇದರ ಜತೆಯಲ್ಲಿ ಗ್ರಾಮಸ್ಥರು ಕೂಡಿಕೊಂಡು ಸ್ವಚ್ಚತಾ ಕಾರ್ಯಗಳನ್ನು ಕೈಕೊಂಡು ಪಟ್ಟಣವನ್ನು ಸುಂದರವನ್ನಾಗಿ ಪರಿವರ್ತಿಸುವಂತೆ ಅರಭಾವಿ ಶಾಸಕ, ಬೆಮುಲ್ ಅಧ್ಯಕ್ಷ ಬಾಲಚಂದ್ರ ಜಾರಕಿಹೊಳಿ ಹೇಳಿದರು.

ಭಾನುವಾರ ಇಲ್ಲಿಗೆ ಸಮೀಪದ ಅರಭಾವಿ ಪಟ್ಟಣದ ಬಡಿಗೇರ ಓಣಿಯಲ್ಲಿ ನೂತನವಾಗಿ ನಿರ್ಮಿಸಿರುವ ಬಸವೇಶ್ವರ ಸಮುದಾಯ ಭವನವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕಳೆದ ಹಲವಾರು ವರ್ಷಗಳಿಂದ ಅರಭಾವಿ ಕ್ಷೇತ್ರದಲ್ಲಿ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ, ಧಾರ್ಮಿಕ ಮುಂತಾದ ಕ್ಷೇತ್ರಗಳಲ್ಲಿ ಬದಲಾವಣೆ ತರಲು ಶ್ರಮಿಸುತ್ತಿದ್ದೇವೆ. ಅದರಂತೆ ಸಾರ್ವಜನಿಕ ದೂರು, ದುಮ್ಮಾನಗಳಿಗೆ ಸ್ಪಂದನೆ ಮಾಡುತ್ತಿದ್ದೇವೆ. ನಮ್ಮ ಕಚೇರಿಗೆ ಬರುವ ಸಾರ್ವಜನಿಕರು ಯಾವುದೇ ಸಮಸ್ಯೆಗಳನ್ನು ಇಟ್ಟುಕೊಂಡು ಬರುವವರಿಗೆ ತಕ್ಷಣವೇ ಸ್ಪಂದಿಸುವ ಮನೋಭಾವನೆ ರೂಢಿಸಿಕೊಂಡಿದ್ದೇವೆ ಎಂದರು. ಮಠ, ಮಂದಿರ, ಮಸೀದಿಗಳ ನಿರ್ಮಾಣವಿರಬಹುದು, ಜಾತ್ರೆಗಳಿರಬಹುದು. ಶಾಲೆಗಳ ಕಟ್ಟಡವಿರಬಹುದು.

ಆಸ್ಪತ್ರೆಗಳ ಕೆಲಸವಿರಬಹುದು. ಮಹಾ ಪ್ರಸಾದವಿರಬಹುದು. ಸತ್ಪುರುಷರ ಜಯಂತಿಗಳಿರಬಹುದು. ನಮ್ಮಿಂದಾಗುವ ಸಹಾಯವನ್ನು ಮಾಡಿ ಕಳಿಸುತ್ತೇವೆ. ದೇವರು ಮತ್ತೊಬ್ಬರ ಕಷ್ಟಗಳಿಗೆ ಸ್ಪಂದಿಸುವ ಅವಕಾಶವನ್ನು ಮಾಡಿ ಕೊಟ್ಟಿದ್ದಾನೆ. ನಾವು ನೀಡುತ್ತಿರುವ ದೇಣಿಗೆಗಳನ್ನು ಗ್ರಾಮಗಳ ಮುಖಂಡರು ಸದುಪಯೋಗ ಪಡಿಸಿಕೊಳ್ಳುತ್ತಿದ್ದಾರೆ ಎಂದರು.



- ನೂತನ ಬಸವೇಶ್ವರ ಸಮುದಾಯ ಭವನ ಉದ್ಘಾಟನೆ
- ಅರಭಾವಿ ಶಾಸಕ, ಬೆಮುಲ್ ಅಧ್ಯಕ್ಷ ಬಾಲಚಂದ್ರ ಜಾರಕಿಹೊಳಿ ಅಭಿಮತ

ಅರಭಾವಿಯಲ್ಲಿ ನಿರ್ಮಾಣವಾಗಿರುವ ಸಮುದಾಯ ಭವನಕ್ಕೆ ಹಣಕಾಸು ನೆರವನ್ನು ಕಲ್ಪಿಸಿಕೊಟ್ಟಿದ್ದೇವೆ. ಅದನ್ನು ಸದ್ಬಳಕೆ ಮಾಡಿಕೊಂಡು ಭವನವನ್ನು ಸರಳತೆಯಿಂದ ನಿರ್ಮಾಣ ಮಾಡಿದ್ದಾರೆ. ಇದು ಸಾರ್ವಜನಿಕ ಕಾರ್ಯಕ್ರಮಗಳಿಗೆ ಅನುಕೂಲವಾಗಲಿದೆ ಎಂದು ತಿಳಿಸಿದರು.

ಸ್ಥಳೀಯ ಸಮಸ್ಯೆಗಳನ್ನು ಆರಿಸಿ ಬಂದಿರುವ ಪ್ರತಿನಿಧಿಗಳು ಬಗೆಹರಿಸಬೇಕು. ಜನರ ಕೆಲಸಗಳನ್ನು ಮಾಡಿ ಕೊಡಬೇಕು. ಪಟ್ಟಣದಲ್ಲಿ ಆಗಾಗ ಸ್ವಚ್ಚತಾ ಕಾರ್ಯಕ್ರಮ ಹಮ್ಮಿಕೊಳ್ಳಬೇಕು. ಸ್ವಚ್ಚತೆಯಿಂದ ಪಟ್ಟಣವು ಸುಂದರವನ್ನಾಗಿಡಬೇಕು. ಸರ್ವಾಂಗೀಣ ಸುಧಾರಣೆಗಾಗಿ ಸಾರ್ವಜನಿಕರ ಸಹಕಾರ ಅಗತ್ಯವಾಗಿದೆ ಎಂದು ಹೇಳಿದರು.

ಅರಭಾವಿ ಪಟ್ಟಣದ ಸಾರ್ವಜನಿಕರು ಶಾಸಕರನ್ನು ಸತ್ಕರಿಸಿದರು. ವೇಮೂ ಶಿವಯ್ಯ ಸ್ವಾಮಿಗಳು ಸಾನಿಧ್ಯ ವಹಿಸಿದ್ದರು. ಮಲ್ಲಿಕಾರ್ಜುನ ಸ್ವಾಮಿಗಳು, ಜಿಲ್ಲಾ ಗ್ರಾಮೀಣ ಬಿಜೆಪಿ ಅಧ್ಯಕ್ಷ ಸುಭಾಸ ಪಾಟೀಲ, ಮುಖಂಡರಾದ ಶಂಕರ ಬಿಲಕುಂದಿ, ಮುತ್ತೆಪ್ಪ ಜಲ್ಲಿ, ನಿಂಗಪ್ಪ ಇಳಗೇರಿ, ಬಸವರಾಜ ಮಾಳೇದವರ, ಭೀಮಪ್ಪ ಹಳ್ಳೂರ, ಅಶೋಕ ಅಂಗಡಿ, ರಮೇಶ ಮಾದರ, ಅಂದಾನೆಪ್ಪ ಕಡಗದ, ಶಂಕರ ಕಂಬಾರ, ಡಾ. ಎಸ್.ಎಸ್. ಕಲ್ಲೊಳ್ಳಿ, ಸಂಜು ಮಾದರ, ವಿಶ್ವನಾಥ ಹೊಸಮನಿ, ಸತ್ತೆಪ್ಪ ಬಡಾಯಿ, ಸುನಿಲ ಜಮಖಂಡಿ, ಮಹಾದೇವ ಗುಡಿತೋಟ, ಚಂದ್ರಪ್ಪ ಫೀವಾರಿ, ಕಾಡಯ್ಯ ದಡ್ಡಿ, ರಾಯಪ್ಪ ಕಡ್ಡಿ, ಸಿದ್ದಪ್ಪ ಬಡಿಗೇರ, ರಿಯಾಜ ಯಾದವಾಡ, ಸಾತಪ್ಪ ಜೈನ, ಸದಾಶಿವ ಬಬಲೇಶ್ವರ, ಪರಶುರಾಮ ಸನ್ನಾಪಣೆ, ಪಪಂ ಸದಸ್ಯರು, ವಿವಿಧ ಸಮುದಾಯಗಳ ಮುಖಂಡರು ಸೇರಿದಂತೆ ಅನೇಕ ಗಣ್ಯರು ಇದ್ದರು.

ವಿದ್ಯಾರ್ಥಿಗಳಲ್ಲಿ ಸಾಮಾಜಿಕ ಸ್ಪಂದನೆ ಅಗತ್ಯ

ಚನ್ನಮ್ಮನ ಕಿತ್ತೂರು: ವಿದ್ಯಾರ್ಥಿಗಳಲ್ಲಿ ಸಾಮಾಜಿಕ ಸ್ಪಂದನೆ ಅತ್ಯಗತ್ಯವಾಗಿದ್ದು ರಾಷ್ಟ್ರೀಯ ಸೇವಾ ಯೋಜನೆ ವಿದ್ಯಾರ್ಥಿಗಳಲ್ಲಿ ಸಾಮಾಜಿಕ ಕಳಕಳಿಯನ್ನು ಬೆಳೆಸುವುದು ಮೂಲ ಉದ್ದೇಶವನ್ನು ಹೊಂದಿದೆ ಎಂದು ಕಿತ್ತೂರ ನಾಡ ವಿದ್ಯಾವರ್ಧಕ ಸಂಘದ ಮಾಜಿ ಚೇರಮನ್ ಜಗದೀಶ ವಸ್ತ್ರದ ಹೇಳಿದರು.

ಬೈಲೂರಿನ ನಿಷ್ಕಲ ಮಂಟಪದಲ್ಲಿ ನಡೆಯುತ್ತಿರುವ ಕಿನಾವಿವ ಸಂಘದ ಪದವಿ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆ ವಾರ್ಷಿಕ ವಿಶೇಷ ಶಿಬಿರ ಉದ್ಘಾಟಿಸಿ ಮಾತನಾಡಿ, ಇಂದಿನ ತಂತ್ರಜ್ಞಾನದ ಯುಗದಲ್ಲಿ ಜನರು ಸಾಮಾಜಿಕ ಸ್ಪಂದನೆ ಕಳೆದುಕೊಂಡಿದ್ದು ಕೇವಲ ಸ್ವಾರ್ಥ ಜೀವನವನ್ನು ನಡೆಸುತ್ತಿದ್ದಾರೆ. ಇಂದಿನ ಸಮಾಜದಲ್ಲಿ ಸಂಬಂಧಗಳು ಕಳಚಿದ ಕೊಂಡಿಗಳಾಗಿವೆ ಇದರಿಂದ ನಮ್ಮ ಸಮಾಜದ ಮೇಲೆ ಸಾಕಷ್ಟು ದುಷ್ಪರಿಣಾಮಗಳು ಉಂಟಾಗುತ್ತಿದ್ದು ಇದನ್ನು ತಡೆಗಟ್ಟಲು ಇಂದಿನ ಯುವಕರಲ್ಲಿ ಸಾಮಾಜಿಕ ಸಂಬಂಧಗಳನ್ನು ಬೆಳಸಿ ಸಾಮಾಜಿಕ ಪಿಡುಗುಗಳ ಮುಕ್ತಗೊಳಿಸಲು ಸ್ಪಂದಿಸುವಂತೆ ಯುವಕರನ್ನು ನಿರ್ಮಿಸಬೇಕಾಗಿದೆ ಎಂದರು.

ಕಿನಾವಿವ ಸಂಘದ ಚೇರಮನ್ ಶಂಕರ ವಳಸಂಗ ಮಾತನಾಡಿ, ರಾ.ಸೇ.ಯೋ ದ ವಿಶೇಷ ಶಿಬಿರದಲ್ಲಿ ವಿದ್ಯಾರ್ಥಿಗಳು ಅನೇಕ ಸಾಮಾಜಿಕಕಾರ್ಯಗಳನ್ನುಕೈಗೊಂಡುತಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುವಂತಾಗಬೇಕು. ಸಮಾಜಕ್ಕೆ ಒಬ್ಬ ಉತ್ತಮ ಜವಾಬ್ದಾರಿಯುತ ನಾಗರೀಕನಾಗ ಬೇಕು ಎಂದರು.

ಶಿಬಿರಾಧಿಕಾರಿ ಡಾ. ಹೊನ್ನರಾಜು ಎಸ್.ವಿ ಮಾತನಾಡಿ, ದತ್ತು ಗ್ರಾಮ ಬೈಲೂರಲ್ಲಿ ನಡೆಯುತ್ತಿರುವ ವಾರ್ಷಿಕ ವಿಶೇಷ ಶಿಬಿರದಲ್ಲಿ ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನ, ನಾಯಕತ್ವ ಗುಣ ವೃದ್ಧಿಸಿಕೊಳ್ಳುವ, ಸಮಾಜದ ಅಭಿವೃದ್ಧಿಗೋಸ್ಕರ ಅನೇಕ ವಿಶೇಷ ಕಾರ್ಯಕ್ರಮ, ಉಪನ್ಯಾಸಗಳನ್ನು ಹಾಗೂ ಆರೋಗ್ಯ ರಕ್ಷಣೆ, ಸಾಂಕ್ರಾಮಿಕ ರೋಗಗಳ ಕುರಿತು ಅರಿವುಮೂಡಿಸುವುದು ಹಾಗೂ ನಾಗರೀಕರ ಆರೋಗ್ಯ ತಪಾಸಣಾ ಶಿಬಿರಗಳನ್ನು ಹಮ್ಮಿಕೊಂಡಿದ್ದು ಇದರ ಸದುಪಯೋಗ ಪಡೆದುಕೊಳ್ಳಿ ಎಂದರು.

ಶಂಕರ ಪತ್ತಾರ, ಶಂಕರಗೌಡ ಪಾಟೀಲ, ಮಯೂರ ಗಿರಿಯಾಲ, ಬಸವರಾಜ ಲದ್ದಿಮಠ, ಬಸವರಾಜ ಬೀಡಿ, ವಾಯಿಸ್ ಚೇರಮನ್ ಜಗದೀಶ ಘಟ್ನಟ್ಟಿ, ಗೌರವ ಕಾರ್ಯದರ್ಶಿ ಜಗದೀಶ ಬಿಕ್ಕಣ್ಣವರ ಇತರರು ಇದ್ದರು. ಪ್ರಾಚಾರ್ಯ ನಾಗರಾಜ ಎಚ್.ಕೆ ಸ್ವಾಗತಿಸಿ, ಮೇಘಾ, ನೀಲಾ, ವಿಜಯಲಕ್ಷ್ಮೀ ಸಂಗಡಿಗರು ಪ್ರಾರ್ಥನೆ, ಡಾ. ಸಂಗೀತಾ ತೋಲಗಿ ವಂದಿಸಿದರು. ಪ್ರೊ. ಸಿ.ಎಮ್.ಗರಗದ ನಿರೂಪಿಸಿದರು.



ರಾಷ್ಟ್ರಮಟ್ಟದ ಜಂಗಿ ನಿಕಾಲಿ ಕುಸ್ತಿ ಆಯೋಜನೆ

ಖಾನಾಪುರ: ಖಾನಾಪುರ ತಾಲೂಕು ಕುಸ್ತಿ ಸಂಘಟನೆಯಿಂದ ಮೇ ತಿಂಗಳಲ್ಲಿ ರಾಷ್ಟ್ರಮಟ್ಟದ ಜಂಗಿ ನಿಕಾಲಿ ಕುಸ್ತಿ ಪಂದ್ಯಾವಳಿಯನ್ನು ಆಯೋಜಿಸಲು ಸರ್ವಾನುಮತದಿಂದ ನಿರ್ಧರಿಸಲಾಗಿದೆ ಎಂದು ಸಂಘಟನೆಯ ಅಧ್ಯಕ್ಷ ಹಣಮಂತ ಗುರವ ಹೇಳಿದರು.

ಭಾನುವಾರ ಪಟ್ಟಣದ ಹೊರವಲಯದಲ್ಲಿ ಆಯೋಜಿಸಿದ್ದ ಕುಸ್ತಿ ಸಂಘಟನೆಯ ಪದಾಧಿಕಾರಿಗಳ ಸಭೆಯಲ್ಲಿ ಮಾತನಾಡಿ, ಭಾರತೀಯ ಪರಂಪರೆಯ ದ್ಯೋತಕ ಮತ್ತು ಧೈರ್ಯ ಸಾಹಸದ ಪ್ರತೀಕವಾದ ಕುಸ್ತಿ ಪಂದ್ಯದ ಉಳಿವಿಗಾಗಿ ಪಟ್ಟಣದ ಹೊಸ ಬಸ್ ನಿಲ್ದಾಣದ ಬಳಿಯ ಮಲಪ್ರಭಾ ಕ್ರೀಡಾಂಗಣದಲ್ಲಿ ಕುಸ್ತಿ ಪಂದ್ಯಾವಳಿ ಆಯೋಜಿಸುವ ನಿರ್ಣಯ ಕೈಗೊಳ್ಳಲಾಗಿದೆ ಎಂದರು.

ಕುಸ್ತಿ ಪಂದ್ಯಾವಳಿಯಲ್ಲಿ ಸ್ಥಳೀಯ, ಜಿಲ್ಲಾ, ರಾಜ್ಯ ಮತ್ತು ರಾಷ್ಟ್ರೀಯ ಮಟ್ಟದ ವಿವಿಧ ತಾಲೀಮುಗಳ ಪೈಲ್ವಾನರು ತಮ್ಮ ಎದುರಾಳಿಗಳೊಡನೆ ಸೆಣಸಾಟ ನಡೆಸಲು ವೇದಿಕೆ ಕಲ್ಪಿಸಲಾಗುತ್ತದೆ. ಕರ್ನಾಟಕ, ಗೋವಾ, ಪಂಜಾಬ್, ಮಹಾರಾಷ್ಟ್ರ, ಹರಿಯಾಣ, ಉತ್ತರ ಪ್ರದೇಶ ಮತ್ತಿತರ ರಾಜ್ಯಗಳಿಂದ ಕುಸ್ತಿ ಪಟುಗಳನ್ನು ಆಹ್ವಾನಿಸಲಾಗುತ್ತದೆ. ಪಂದ್ಯಾವಳಿಯಲ್ಲಿ ವಿಜೇತ ಕುಸ್ತಿಪಟುಗಳಿಗೆ ಮಲಪ್ರಭಾ ಕೇಸರಿ, ಖಾನಾಪುರ ಕೇಸರಿ ಮತ್ತಿತರ ಬಿರುದು, ನಗದು ಬಹುಮಾನ ಮತ್ತು ಪಾರಿತೋಷಕ ನೀಡಿ ಸನ್ಮಾನಿಸಲಾಗುತ್ತದೆ ಎಂದು ಮಾಹಿತಿ ನೀಡಿದರು.

ತೋಪಿನಕಟ್ಟಿ ಶ್ರೀ ಮಹಾಲಕ್ಷ್ಮೀ ಸಂಸ್ಥೆಯ ನಿರ್ದೇಶಕ ಚಾಂಗಪ್ಪ ನಿಲಜಕರ ಮಾತನಾಡಿ, ತಾಲೂಕಿನ ಕುಸ್ತಿ ಸಂಘಟನೆ ಯಾವುದೇ ಜಾತಿ, ಧರ್ಮ, ಭಾಷೆ ಎಂಬ ಬೇಧಭಾವ ಮಾಡದೇ ಪಂದ್ಯಗಳನ್ನು ಆಯೋಜಿಸುತ್ತಿದೆ. ಈ ಸ್ಪರ್ಧೆಗಳು ಸ್ಥಳೀಯ ಕುಸ್ತಿ ಪಟುಗಳಿಗೆ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ನಡೆಯಲಿದ್ದು, ಸಂಘಟನೆಯ ವತಿಯಿಂದ ನಡೆಯುವ ಕುಸ್ತಿ ಅಖಾಡಕ್ಕೆ ಬೇಕಾದ ಅನುಕೂಲ ಕಲ್ಪಿಸಲು ತೋಪಿನಕಟ್ಟಿ ಶ್ರೀ ಮಹಾಲಕ್ಷ್ಮೀ ಸಂಸ್ಥೆ ಮತ್ತು ಶಾಸಕ ವಿಠ್ಠಲ ಹಲಗೇಕರ ಬದ್ಧರಾಗಿದ್ದಾರೆ ಎಂದರು.

ರಾಜಾರಾಮ ಗುರವ, ಲಕ್ಷ್ಮಣ ಬಾಮಣೆ, ಸದಾನಂದ ಹೊಸೂರಕರ, ಕುಮಾರ ತಂಗಂ, ಮಹಾದೇವ ದಳವಿ ಹಾಗೂ ಇತರರು ಇದ್ದರು. ಪ್ರಕಾಶ ಮಜಗಾವಿ ಕಾರ್ಯಕ್ರಮ ನಿರ್ವಹಿಸಿ, ಗುಂಡು ಪಾಖರೆ ವಂದಿಸಿದರು.



ಜಗಜೀವನ ರಾಂ ಜಯಂತಿ ಆಚರಣೆ




ತೆಲಸಂಗ: ಬಾಬು ಜಗಜೀವನ ರಾಂ ಅವರು ಸಮಾನತೆ, ಸಾಮಾಜಿಕ ನ್ಯಾಯ ಮತ್ತು ದಲಿತರ ಹಕ್ಕುಗಳಿಗಾಗಿ ತಮ್ಮ ಜೀವನವನ್ನೇ ಸಮರ್ಪಿಸಿದ ಮಹಾನ್ ನಾಯಕರು. ಅವರ ಆದರ್ಶಗಳು ಇಂದಿನ ಯುವಜನತೆಗೆ ದಾರಿದೀಪವಾಗಿವೆ ಎಂದು ನ್ಯಾಯವಾದಿ ಅಮೋಘ ಖೊಬ್ರಿ ಹೇಳಿದರು.

ಗ್ರಾಮದಲ್ಲಿ ಹಸಿರು ಕ್ರಾಂತಿಯ ಹರಿಕಾರ ಡಾ. ಜಗಜೀವನ ರಾಂ ಅವರ ಜಯಂತ್ಯುತ್ಸವ ಕಾರ್ಯಕ್ರಮದಲ್ಲಿ ಮಾತನಾಡಿ, ದೇಶದ ಕೃಷಿ ವಲಯದ ಅಭಿವೃದ್ಧಿ ಹಾಗೂ ಶೋಷಿತ ವರ್ಗಗಳ ಏಳಿಗೆಗಾಗಿ ಬಾಬು ಜಗಜೀವನ್ ರಾಮ್ ಅವರು ನೀಡಿದ ಕೊಡುಗೆ ಅಪಾರ. ಅಂದಿನ ಕಾಲದ ಸಾಮಾಜಿಕ ಅಸಮಾನತೆ ಮತ್ತು ಅಸ್ಪೃಶ್ಯತೆಯ ವಿರುದ್ಧ ಬಾಲ್ಯದಿಂದಲೇ ಹೋರಾಡಿದವರು ಇವರು. ಸಮಾನತೆಯ ಪಾಠ ಕಲಿಸಿದ ಧೀಮಂತ ವ್ಯಕ್ತಿತ್ವ ಇವರದ್ದು ಎಂದು ತಿಳಿಸಿದರು.

ಭಾರತದಲ್ಲಿ ಆಹಾರದ ಕೊರತೆ ಇದ್ದಾಗ ಕೃಷಿ ಸಚಿವರಾಗಿ ಹಸಿರು ಕ್ರಾಂತಿಗೆ ನಾಂದಿ ಹಾಡಿದರು. ಇದರಿಂದಾಗಿ ಭಾರತವು ಆಹಾರ ಉತ್ಪಾದನೆಯಲ್ಲಿ ಸ್ವಾವಲಂಬಿಯಾಗಲು ಸಾಧ್ಯವಾಯಿತು. 1971ರ ಇಂಡೋ-ಪಾಕ್ ಯುದ್ಧದ ಸಮಯದಲ್ಲಿ ಭಾರತದ ರಕ್ಷಣಾ ಸಚಿವರಾಗಿದ್ದ ಇವರು, ಭಾರತಕ್ಕೆ ಐತಿಹಾಸಿಕ ಜಯ ತಂದುಕೊಡುವಲ್ಲಿ ಪ್ರಮುಖ ಪಾತ್ರ ವಹಿಸಿದರು. ಶಿಕ್ಷಣವೇ ಎಲ್ಲಾ ಸಾಮಾಜಿಕ ಪಿಡುಗುಗಳಿಗೆ ಮದ್ದು ಎಂದು ನಂಬಿದ್ದ ಬಾಬೂಜಿಯವರು, ಶೋಷಿತರ ಮತ್ತು ದಲಿತರ ಧ್ವನಿಯಾಗಿ ಬದುಕಿದರು. ಅವರ ನಿಸ್ವಾರ್ಥ ಸೇವೆ ಮತ್ತು ದೇಶಪ್ರೇಮ ನಮಗೆಲ್ಲರಿಗೂ ಸದಾ ಸ್ಫೂರ್ತಿ. ಅವರ ತತ್ವಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳೋಣ ಎಂದರು.

ಗ್ರಾಪಂ ಸದಸ್ಯ ವಿಲಾಸ ಮೋರೆ, ಗುಂಡುಬಾ ಪವಾರ, ರಮೇಶ ಹತ್ತಿ, ಸಿದ್ದಲಿಂಗ ಮಾದರ, ಸಂಜು ಮಾದರ, ಸುನಿಲ್ ಮಾದರ, ರಾಜು ಸಾಗ, ಉಮೇಶ್ ಸೂರ್ಯವಂಶಿ ಸೇರಿದಂತೆ ಅನೇಕ ಯುವಕರು ಉಪಸ್ಥಿತರಿದ್ದರು.

ನಿವೃತ್ತ ಶಿವಾನಂದಗೆ ಬೀಳ್ಕೊಡುಗೆ



ರಾಯಬಾಗ: ಬಿಡಿಸಿಸಿ ಬ್ಯಾಂಕಿನ ತಾಲೂಕಾ ನಿಯಂತ್ರಣಾಧಿಕಾರಿಯಾಗಿ ಕಾರ್ಯ ನಿರ್ವಹಿಸಿದ ಶಿವಾನಂದ ಪಾಟೀಲ ಅವರು ತಮ್ಮ ಅಧಿಕಾರದ ಅವಧಿಯಲ್ಲಿ ದಕ್ಷ ಅಧಿಕಾರಿಯಾಗಿದ್ದರು ಎಂದು ಡಿಸಿಸಿ ಬ್ಯಾಂಕನ ನಿರ್ದೇಶಕ ಅಪ್ಪಾಸಾಹೇಬ ಕುಲಗುಡೆ ಹೇಳಿದರು.

ಪಟ್ಟಣದ ಮಹಾದೇವ ಮಂಗಲ ಕಾರ್ಯಾಲಯದಲ್ಲಿ ತಾಲೂಕಾ ನಿಯಂತ್ರಣಾಧಿಕಾರಿಯಾಗಿ ಸೇವೆ ಸಲ್ಲಿಸಿ ನಿವೃತ್ತಿಯಾದ ಶಿವಾನಂದ ಪಾಟೀಲರಿಗೆ ಬ್ಯಾಂಕಿನ ಸಿಬ್ಬಂದಿಯವರು ಏರ್ಪಡಿಸಿದ್ದ ಬೀಳ್ಕೊಡುಗೆ ಸಮಾರಂಭದಲ್ಲಿ ಮಾತನಾಡಿ, ಪಾಟೀಲರು ರೈತರಿಗೆ ಸಾಲ ನೀಡುವಲ್ಲಿ ಯಾವುದೇ ತಾರತಮ್ಯ ಮಾಡದೇ ಸಾಲದ ಸದುಪಯೋಗ ಪಡೆದುಕೊಂಡು ಸಕಾಲಕ್ಕೆ ಮರು ಪಾವತಿಸಲು ರೈತರನ್ನು ಆಕರ್ಷಿಸುವ ಕಲೆ ಅವರಿಗೆ ಮಾತ್ರ ಕರಗತವಾಗಿತ್ತು. ನಿವರತ್ತಿ ಎನ್ನುವುದು ಸರಕಾರ ಸೇವೆ ಸೀಮಿತಗೊಳಿಸಿ ನೀಡುವ ಪ್ರಮಾಣ ಪತ್ರವೇ ಹೊರತು ಇನ್ನೂ ಕೆಲಸ ಮಾಡಬೇಕೆಂಬ ಛಲ, ಹುಮ್ಮಸ್ಸು ಇರುವವರಿಗೆ ಅನ್ವಯಿಸುವುದಿಲ್ಲ. ಪಾಟೀಲ ಅವರೂ ಕೂಡಾ ಇದಕ್ಕೆ ಹೊರತಾಗಿಲ್ಲ. ಅವರಿಗೆ ಯಾವುದಾದರೂ ಸಂಘ ಸಂಸ್ಥೆಗಳಲ್ಲಿ ಸೇವೆ ಮಾಡುವ ಅವಕಾಶ ದೊರಕಲಿ. ಅವರ ನಿವೃತ್ತಿ ಜೀವನ ಆನಂದಮಯವಾಗಿರಲಿ ಎಂದು ಹಾರೈಸಿದರು. ಬ್ಯಾಂಕಿನ ನೌಕರರ ಸಂಘದ ಅಧ್ಯಕ್ಷ ನಾಗರಾಜ ಕರೆಣ್ಣವರ, ಸತ್ಕಾರ ಸ್ವೀಕರಿಸಿ ಶಿವಾನಂದ ಪಾಟೀಲ ಮಾತನಾಡಿದರು.

ಕಾರ್ಯಕ್ರಮದಲ್ಲಿ ಪ್ರಕಾಶ ರಾಯಣ್ಣವರ, ಚಿದಾನಂದ ಬನಶಂಕರಿ, ಶ್ರೀಧರ ಪಾಟೀಲ, ಸಾಗರ ಕುಸನಾಳೆ, ರವಿ ಪಾತ್ರೋಟ, ಶಿವಪುತ್ರ ಬಾಗೇವಾಡಿ, ಸುನೀಲ ಪಾಟೀಲ, ಆನಂದ ಪಾಟೀಲ, ಮಹಾಲಿಂಗಪ್ಪ ಮರಡಿ, ಅರುಣ ಪಾಟೀಲ, ಭರತ ಬಾಬಣ್ಣವರ, ಮಂಜುನಾಥಜಂಬಗಿ, ಸುಧೀರ ನಂದಗಾಂವೆ, ಅಭಯ ಲಕ್ಕುಂಡಿ, ಜಿ.ಎಮ್.ಕಲಾವಂತ ಹಾಗೂ ಪಿಕೆಪಿಎಸ್. ಅಧ್ಯಕ್ಷರು ಹಾಗೂ ಕಾರ್ಯದರ್ಶಿಗಳು ಸಿಬ್ಬಂದಿಯವರು ಉಪಸ್ಥಿತರಿದ್ದರು.

ವಿವಿಧೆಡೆ ಜಗಜೀವನರಾಂ ಜಯಂತಿ ಆಚರಣೆ

ಖಾನಾಪುರ: ಪಟ್ಟಣ ಸೇರಿದಂತೆ ತಾಲೂಕಿನಾದ್ಯಂತ ವಿವಿಧ ಸರಕಾರಿ ಕಚೇರಿಗಳಲ್ಲಿ ಭಾನುವಾರ ಹಸಿರುಕ್ರಾಂತಿಯ ಹರಿಕಾರ, ಮಾಜಿ ಪ್ರಧಾನಿ ಬಾಬು ಜಗಜೀವನರಾಂ ಅವರ ಜಯಂತಿಯನ್ನು ಆಚರಿಸಲಾಯಿತು.

ಪಟ್ಟಣದ ಬಸವೇಶ್ವರ ವೃತ್ತದಲ್ಲಿ ತಾಲೂಕು ಆಡಳಿತದ ವತಿಯಿಂದ ಆಯೋಜಿಸಲಾಗಿದ್ದ ಜಗಜೀವನರಾಂ ಭಾವಚಿತ್ರದ ಮೆರವಣಿಗೆಗೆ ಶಾಸಕ ವಿಠ್ಠಲ ಹಲಗೇಕರ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ನಮ್ಮ ದೇಶ ಕಂಡ ಅಪ್ರತಿಮ ನೇತಾರ ಜಗಜೀವನರಾಂ ಅವರ ಜೀವನವನ್ನು ನಾವೆಲ್ಲರೂ ಆದರ್ಶವನ್ನಾಗಿಟ್ಟುಕೊಂಡು ಅವರು ಹಾಕಿಕೊಟ್ಟ ಮಾರ್ಗದಲ್ಲಿ ಮುನ್ನಡೆಯಬೇಕು ಎಂದರು.

ಬಸವೇಶ್ವರ ವೃತ್ತದಿಂದ ಆರಂಭಗೊಂಡ ಮೆರವಣಿಗೆ ಶಿವಸ್ಮಾರಕ ವೃತ್ತದ ಮೂಲಕ ಸಾಗಿ ತಾಲೂಕು ಪಂಚಾಯತಿ ಕಚೇರಿಯಲ್ಲಿ ಸಂಪನ್ನಗೊಂಡಿತು. ತಾಲೂಕು ಪಂಚಾಯತಿ ಸಭಾಗೃಹದಲ್ಲಿ ಏರ್ಪಡಿಸಿದ್ದ ಜಯಂತಿ ಕಾರ್ಯಕ್ರಮದಲ್ಲಿ ಶಾಸಕ ಹಲಗೇಕರ, ತಹಸೀಲ್ದಾರ್ ದುಂಡಪ್ಪ ಕೋಮಾರ, ತಾಪಂ ಇಒ ರಮೇಶ ಮೇತ್ರಿ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಸೂರ್ಯಕಾಂತ ಕುಲಕರ್ಣಿ, ಪೊಲೀಸ್ ಇನ್ಸಪೆಕ್ಟರ್ ಲಾಲಸಾಬ ಗೌಂಡಿ ಹಾಗೂ ಇತರರು ಜಗಜೀವನರಾಮ್ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿದರು.



ವೇದಿಕೆ ಕಾರ್ಯಕ್ರಮದಲ್ಲಿ ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಧ್ಯಾಪಕಿ ಡಾ.ಗೀತಾಂಜಲಿ ಕುರುಡಗಿ ಬಾಬು ಜಗಜೀವನರಾಂ ಜೀವನ-ಸಾಧನೆ ಕುರಿತು ಉಪನ್ಯಾಸ ನೀಡಿದರು. ವಿವಿಧ ಸಂಘಟನೆಗಳ ಮುಖಂಡರು, ಕಾರ್ಯಕರ್ತರು, ಅಧಿಕಾರಿಗಳು, ಸಿಬ್ಬಂದಿ, ನಾಗರಿಕರು ಇದ್ದರು.

ಪಪಂ ಕಾರ್ಯಾಲಯ: ಪಟ್ಟಣದ ಪಪಂ ಕಾರ್ಯಾಲಯದಲ್ಲಿ ಪಪಂ ಮುಖ್ಯಾಧಿಕಾರಿ ಸಂತೋಷ ಕುರಬೇಟ್ ಜಗಜೀವನರಾಮ್ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿದರು. ಕಾರ್ಯಕ್ರಮದಲ್ಲಿ ರಾಜೇಶ್ವರಿ ವೇರ್ಣೆಕರ, ಶೋಭಾ ಪತ್ತಾರ, ರಾಜೇಶ ಜಾಂಬೋಟಿ, ಪ್ರೇಮಾನಂದ ನಾಯ್ಕ ಸೇರಿದಂತೆ ಪಟ್ಟಣ ಪಂಚಾಯತ ಸಿಬ್ಬಂದಿ ಉಪಸ್ಥಿತರಿದ್ದರು.

ನಾಗರಗಾಳಿ, ಶಿಂಧೋಳಿ, ಕೊಡಚವಾಡ ಗ್ರಾಪಂ: ತಾಲೂಕಿನ ನಾಗರಗಾಳಿ ಗ್ರಾಪಂ ಕಚೇರಿಯಲ್ಲಿ ಗ್ರಾಪಂ ಪಿಡಿಒ ಬಾಲರಾಜ್ ಭಜಂತ್ರಿ ಜಗಜೀವನರಾಂ ಭಾವಚಿತ್ರಕ್ಕೆ ಪೂಜೆ ಸಲ್ಲಿಸಲಾಯಿತು. ಗ್ರಾಪಂ ಸಿಬ್ಬಂದಿ, ಗ್ರಾಮಸ್ಥರು ಉಪಸ್ಥಿತರಿದ್ದರು. ಶಿಂಧೋಳಿ ಗ್ರಾಮದ ಗ್ರಾಪಂ ಕಚೇರಿಯಲ್ಲಿ ಗ್ರಾಪಂ ಪಿಡಿಒ ಜ್ಯೋತಿಬಾ ಕಾಮಕರ ಜಗಜೀವನರಾಮ್ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿದರು. ಗ್ರಾಪಂ ಸಿಬ್ಬಂದಿ, ಗ್ರಾಮಸ್ಥರು ಉಪಸ್ಥಿತರಿದ್ದರು. ತಾಲೂಕಿನ ಕೊಡಚವಾಡ ಗ್ರಾಪಂ ಕಚೇರಿಯಲ್ಲಿ ಗ್ರಾಪಂ ಪಿಡಿಒ ಲೀಲಾವತಿ ಕರಲಿಂಗನವರ ಹಾಗೂ ಸಿಬ್ಬಂದಿ ಜಗಜೀವನರಾಂ ಜಯಂತಿ ಆಚರಿಸಿದರು.

ಪಟ್ಟಣದ ತಾಪಂ ಕಚೇರಿ: ತಾಪಂ ಇಒ ರಮೇಶ ಮೇತ್ರಿ ಜಗಜೀವನರಾಂ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿದರು. ತಾಪಂ ಸಿಬ್ಬಂದಿ ಉಪಸ್ಥಿತರಿದ್ದರು. ಸಮಾಜ ಕಲ್ಯಾಣ ಇಲಾಖೆಯ ತಾಲೂಕು ಕಚೇರಿಯಲ್ಲಿ ಇಲಾಖೆಯ ಸಹಾಯಕ ನಿರ್ದೇಶಕ ವಿ.ಎಂ ನಾಗನೂರ ಜಗಜೀವನರಾಮ್ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿದರು. ಇಲಾಖೆಯ ಸಿಬ್ಬಂದಿ, ಸಾರ್ವಜನಿಕರು ಉಪಸ್ಥಿತರಿದ್ದರು. ಬಿಇಒ ಕಚೇರಿಯಲ್ಲಿ ಪತ್ರಾಂಕಿತ ವ್ಯವಸ್ಥಾಪಕ ಪ್ರಕಾಶ ಹೊಸಮನಿ ಹಾಗೂ ಇತರರು ಜಗಜೀವನರಾಮ್ ಜಯಂತಿಯನ್ನು ಆಚರಿಸಿದರು.

ಎನ್‌ಎಸ್‌ಎಸ್‌ನಿಂದ ಸೇವಾ ಮನೋಭಾವ ಬೆಳವಣಿಗೆ



ಮೂಡಲಗಿ: ತರಗತಿಗಳ ನಾಲ್ಕು ಗೋಡೆಗಳ ಮಧ್ಯೆ ಕಲಿಯಲಾಗದ ವಿಷಯಗಳನ್ನು ನಿರಂತರ ಚಟುವಟಿಕೆಗಳೊಂದಿಗೆ ಅನುಭವ ಆಧಾರಿತ ಬದುಕಿನ ಶಿಕ್ಷಣವನ್ನು ರಾಷ್ಟ್ರೀಯ ಸೇವಾ ಯೋಜನೆಯ ಶಿಬಿರಗಳು ಕಲಿಸುತ್ತವೆ ಎಂದು ರಾಷ್ಟ್ರೀಯ ಸೇವಾ ಯೋಜನೆಯ ಚಿಕ್ಕೋಡಿ ಜಿಲ್ಲಾ ಪ್ರಭಾರಿ ಸಂಯೋಜನಾಧಿಕಾರಿ ಶಂಕರ ನಿಂಗನೂರ ಹೇಳಿದರು.

ಇಲ್ಲಿಗೆ ಸಮೀಪದ ದತ್ತು ಗ್ರಾಮ ಪಟಗುಂದಿಯಲ್ಲಿ ಜರುಗಿದ ಬೆಳಗಾವಿಯ ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯ ಹಾಗೂ ಮೂಡಲಗಿ ಶಿಕ್ಷಣ ಸಂಸ್ಥೆಯ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನೆ ಘಟಕದ 2025-26ನೇ ಸಾಲಿನ ವಿಶೇಷ ವಾರ್ಷಿಕ ವಿಶೇಷ ಶಿಬಿರದ ಮುಕ್ತಾಯ ಸಮಾರಂಭದಲ್ಲಿ ಮಾತನಾಡಿದರು.

ಮೂಡಲಗಿ ಶಿಕ್ಷಣ ಸಂಸ್ಥೆಯ ಉಪಾಧ್ಯಕ್ಷ ಆರ್ .ಪಿ. ಸೋನವಾಲ್ಕರ್ ಮಾತನಾಡಿ, ಶಿಬಿರದಲ್ಲಿ ಸ್ವಯಂಸೇವಕಿಯರೇ ಹೆಚ್ಚಿರುವುದನ್ನು ಪ್ರಶಂಸಿಸಿ, ಪ್ರತಿಯೊಬ್ಬರೂ ಒಂದೊಂದು ಸಸಿ ನೆಡಿ ಎಂದು ವಿದ್ಯಾರ್ಥಿಗಳಿಗೆ ಸಸಿ ನೆಡಲು ಪ್ರೇರೇಪಿಸಿದರು.

ನಿವೃತ್ತ ಪ್ರಾಧ್ಯಾಪಕ ಪ್ರೊ ಎಸ್.ಬಿ.ಖೋತ. ಗ್ರಾಮದ ಸುಭಾಸ್ ಪಾಟೀಲ್ ವಿದ್ಯಾರ್ಥಿಗಳಾದ ಸಂಗಪ್ಪ ಕುಲಿಗೋಡ, ಲಕ್ಷ್ಮೀ ಪಾಟೀಲ್ ಮಾತನಾಡಿದರು. ಎನ್ ಎಸ್ಎಸ್ ಕಾರ್ಯಕ್ರಮ ಅಧಿಕಾರಿಗಳಾದ ಡಾ. ಪವನ್ ಕುಮಾರ್ ಕೆ., ಲೋಕೇಶ್ ಹಿಡ್ಕಲ್, ಪಿ.ಬಿ. ಚೌಡಕಿ, ವೇದಾ ದೇಶಪಾಂಡೆರನ್ನು ಗ್ರಾಮದ ಯುವ ಮುಖಂಡ ಸುಭಾಸ್ ಪಾಟೀಲ್ ಸನ್ಮಾನಿಸಿದರು.

ಕೃಷ್ಣತಾ ಜೋಕಾನಟ್ಟೆ ಶಿಬಿರದ ವರದಿ ವಾಚಿಸಿದರು. ಹನುಮಂತ ತೇರದಾಳ ಪ್ರಾರ್ಥಿಸಿದರು. ಸತ್ಯಮ್ಮ ಸ್ವಾಗತಿಸಿ, ಸುಪ್ರೀತಾ ಯಡ್ರಾಂವಿ ನಿರೂಪಿಸಿ, ರೇಷ್ಮಾ ಹುಲಿಕಟ್ಟಿ ವಂದಿಸಿದರು. ಆಡಳಿತಾಧಿಕಾರಿ ಡಾ. ಎಸ್.ಎಲ್. ಚಿತ್ರಗಾರ, ಪ್ರೊ ಎಸ್.ಬಿ. ಖೋತ್, ಅಭಯ್ ಕುಮಾರ್ ಹುದ್ದಾರ, ಸುಭಾಸ್ ಪಾಟೀಲ್, ಡಾ. ಎಸ್.ಬಿ. ಹೊಸೂರು, ತವನಪ್ಪ ಬೋಳಿ, ಕೃಷ್ಣಪ್ಪ ಚಿನ್ನಾಕಟ್ಟಿ, ಡಾ. ಬಸವಂತ ಬರಗಾಲಿ ಎ ಎಸ್. ಮಿತಿ ನಾಯಿಕ ಎಂ.ಎಸ್. ಕುಂದರಗಿ, ಎಸ್.ಕೆ. ಕೊತ್ತಲ, ಎಸ್.ಎಸ್. ಕುಲಿಗೋಡ, ಸಂತೋಷ ಮುಗಳಿ, ಎಸ್.ಪಿ. ಕಾಂಬಳೆ, ಎನ್.ಸಿ. ಬರವನ್ನವರ, ಎಸ್.ಕೆ. ಅಂಗಡಿ, ಕೆ.ಪಿ. ಡೋಣಿ, ಪಿ.ಬಿ. ಬೆಳಗಲಿ ಇದ್ದರು.

ಕಿರುಸುದ್ದಿ

ಶ್ರೀಗಳಿಗೆ ಇಂದು ಡಾಕ್ಟರೇಟ್ ಪ್ರದಾನ



ಬಾದಾಮಿ: ಸಮೀಪದ ಶಿವಯೋಗಮಂದಿರ ಸಂಸ್ಥೆಯ ಉಪಾಧ್ಯಕ್ಷ ಹಾಗೂ ಹಾವೇರಿ ಹುಕ್ಕೇರಿಮಠದ ಮ.ನಿ.ಪ್ರ.ಶ್ರೀ ಸದಾಶಿವ ಮಹಾಸ್ವಾಮಿಗಳಿಗೆ ಏ.6ರಂದು ಹಾವೇರಿ ವಿಶ್ವವಿದ್ಯಾಲಯದಲ್ಲಿ ನಡೆಯಲಿರುವ ಘಟಿಕೋತ್ಸವ ಸಮಾರಂಭದಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡಲಿದ್ದಾರೆ ಎಂದು ವಿವಿ ಪ್ರಕಟಣೆ ತಿಳಿಸಿದೆ.

ಕಾಂಗ್ರೆಸ್ ಅಭ್ಯರ್ಥಿಗೆ ಬೆಂಬಲಿಸಿ: ಕೆ.ಪಿ.ನಂಜುಂಡಿ

ಬಾಗಲಕೋಟೆ: ವಿಶ್ವಕರ್ಮ ಸಮಾಜಕ್ಕೆ ಕಾಂಗ್ರೆಸ್ ಪಕ್ಷದ ಸರ್ಕಾರ ಅನುಕೂಲ ಮಾಡಿದ್ದು ಬಾಗಲಕೋಟೆ ಮತಕ್ಷೇತ್ರದಲ್ಲಿನ ವಿಶ್ವಕರ್ಮ ಸಮಾಜದವರು ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯನ್ನು ಬೆಂಬಲಿಸಬೇಕು ಎಂದು ಅಖಿಲ ಕರ್ನಾಟಕ ವಿಶ್ವಕರ್ಮ ಸಮಾಜದ ಅಧ್ಯಕ್ಷ ಕೆ.ಪಿ.ನಂಜುಂಡಿ ಹೇಳಿದರು.

ನಗರದಲ್ಲಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಾಗಲಕೋಟೆ ಮತಕ್ಷೇತ್ರದಲ್ಲಿ 5 ಸಾವಿರಕ್ಕೂ ಹೆಚ್ಚು ಮತದಾರರು ಇದ್ದು ಅವರನ್ನು ಭೇಟಿಯಾಗಿ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಲು ಮನವಿ ಮಾಡಲಾಗುವುದು ಎಂದು ಹೇಳಿದರು.

ಯಾರು ವಿಶ್ವಕರ್ಮ ಸಮಾಜವನ್ನು ಕೈ ಹಿಡಿಯುತ್ತಾರೆ ಅವರನ್ನು ಬೆಂಬಲಿಸುತ್ತೇವೆ. ಬಿಜೆಪಿಯಲ್ಲಿ ಪಕ್ಷದಲ್ಲಿದ್ದಾಗ ಡಿ.ಕೆ.ಶಿವುಕುಮಾರ ಅವರು ಕಾಂಗ್ರೆಸ್ ಪಕ್ಷಕ್ಕೆ ಕರೆತಂದಿದ್ದಾರೆ. ನಮ್ಮ ಸಮಾಜದ ಬೇಡಿಕೆಗಳನ್ನು ಈಡೇರಿಸುವುದಾಗಿ ಭರವಸೆ ನೀಡಿದ್ದಾರೆ ಹೀಗಾಗಿ ಕಾಂಗ್ರೆಸ್ ಪಕ್ಷಕ್ಕೆ ಸೇರಿಕೊಂಡು ಪಕ್ಷದ ಸಂಘಟನೆ ಮಾಡುತ್ತಿದ್ದೇವೆ ಎಂದು ಹೇಳಿದರು.

ನಮಗೆ ರಾಜಕೀಯವೇ ವೃತ್ತಿಯಲ್ಲ, ಸಮಾಜ ಬೇಕು. ನಾನು ವೈಯಕ್ತಿಕವಾಗಿ ಏನೂ ಕೇಳುವುದಿಲ್ಲ, ನಮ್ಮ ಸಮಾಜ ಅಭಿವೃದ್ಧಿ ಯಾಗಬೇಕು ಎಂಬುದು ನಮ್ಮ ಮೊದಲ ಆದ್ಯತೆಯಾಗಿದೆ. ಕಾಂಗ್ರೆಸ್ ಪಕ್ಷ ನಮ್ಮ ಸರಿಯಾಗಿ ನೋಡಿಕೊಂಡಿದೆ ಎಂದರು.

ಜ್ಞಾನ, ವೈರಾಗ್ಯದ ಸಾಕಾರ ಮೂರ್ತಿ ಅಕ್ಕಮಹಾದೇವಿ



ರಬಕವಿ-ಬನಹಟ್ಟಿ: ಅಕ್ಕಮಹಾದೇವಿ ತನ್ನ ಜ್ಞಾನ ಮತ್ತು ವೈರಾಗ್ಯದ ಮೂಲಕ ಜಗತ್ತಿಗೆ ಅಕ್ಕಳಾದಳು. ಮನುಷ್ಯ ಜನ್ಮ ಬಂದಿದ್ದು, ಭಗವಂತನ ಕರುಣೆಯಿಂದಾಗಿ, ಆದ್ದರಿಂದ ನಾವೆಲ್ಲರೂ ಭಗವಂತನ ಉಪಕಾರ ಸ್ಮರಣೆ ಮಾಡುತ್ತ ಜೀವನ ಸಾಗಿಸಬೇಕು ಎಂದು ಮುರಕಿಭಾವಿಯ ಮಾತೋಶ್ರೀ ಸುಜ್ಞಾನ ಭಾರತಿಯವರು ತಿಳಿಸಿದರು.

ಅವರು ಇಲ್ಲಿನ ಅಕ್ಕಲಕೋಟ ಶರಣರು ಸ್ಥಾಪಿಸಿದ ಸಿದ್ಧಾರೂಢ ಮಠದಲ್ಲಿ ಅಕ್ಕಮಹಾದೇವಿ ಮತ್ತು ಹನುಮ ಜಯಂತ್ಯುತ್ಸವದ ಅಂಗವಾಗಿ ಹಮ್ಮಿಕೊಂಡ ಪ್ರವಚನ ಕಾರ್ಯಕ್ರಮದಲ್ಲಿ ಮಾತನಾಡಿದರು.ಭಕ್ತಿಯ ಪ್ರತೀಕ ಆಂಜನೇಯ ಸ್ವಾಮಿ. ಅವರು ನಮಗೆಲ್ಲರಿಗೂ ನಿಜವಾದ ಭಕ್ತಿಯ ಮಾರ್ಗವನ್ನು ತೋರಿದವರಾಗಿದ್ದರೆಂದು ಸುಜ್ಞಾನ ಭಾರತಿ ತಿಳಿಸಿದರು.ಮಹಿಳೆಯರು ಅಕ್ಕಮಹಾದೇವಿ ಮತ್ತು ಹನುಮ ಜಯಂತ್ಯುತ್ಸವದ ಅಂಗವಾಗಿ ತೊಟ್ಟಿಲೋತ್ಸವ ಕಾರ್ಯಕ್ರಮ ನಡೆಸಿಕೊಟ್ಟರು. ರಾಮಣ್ಣ ಭದ್ರನವರ, ಶಂಕರ ಜಾಲಿಗಿಡದ, ಕಲ್ಲಪ್ಪ ಪತ್ತಾರ, ರವಿ ಕೊಣ್ಣೂರ, ರಮೇಶ ಸೋರಗಾವಿ, ಪ್ರಕಾಶ ಬುರುಡ, ದಾನಪ್ಪ ಕೊಣ್ಣೂರರ, ವೈ.ಬಿ.ಕೊರಡೂರ, ಶೈಲಜಾ ನುಚ್ಚಿ, ಶಾಂತಾ ಸೋರಗಾವಿ, ರಜನಿ ಶೇಠ, ಬಾಳಪ್ಪ ಮಾಲಾಪುರ, ಸುಶೀಲಾ ಬೀಳಗಿ, ಪ್ರಭಾವತಿ ಸುಟ್ಟಟ್ಟಿ, ವಂದನಾ ಪತ್ತಾರ, ಮಹಾನಂದ ಕುಳ್ಳಿ ಸೇರಿದಂತೆ ಅನೇಕರು ಇದ್ದರು.

ವ್ಯಕ್ತಿ ಆತ್ಮಹತ್ಯೆ

ಜಮಖಂಡಿ: ತಾಲೂಕಿನ ಚಿಕ್ಕಪಡಸಲಗಿ ಗ್ರಾಮದ ಸಮೀಪ ಕೃಷ್ಣಾ ನದಿ ಸೇತುವೆಯ ಮೇಲಿಂದ ಜಿಗಿದು ಅದೇ ಗ್ರಾಮದ ಮಹಾದೇವ ಶಿವಾನಂದ ಕಲ್ಯಾಣಿ (55) ವ್ಯಕ್ತಿ ಆತ್ಮ ಹತ್ಯೆ ಮಾಡಿಕೊಂಡ ಘಟನೆ ನಡೆದಿದೆ.

ಸ್ಥಳೀಯರು ಗಮನಿಸಿ ಪೊಲೀಸರಿಗೆ ಮಾಹಿತಿ ನೀಡಿದ ಹಿನ್ನೆಲೆಯಲ್ಲಿ ಜಮಖಂಡಿ ಗ್ರಾಮೀಣ ಪೊಲೀಸ್ ಠಾಣಾಧಿಕಾರಿ ಗಂಗಾಧರ ಪೂಜೇರಿ ಹಾಗೂ ಸಿಬ್ಬಂದಿಗಳಾದ ಬಿ.ಎಂ. ಜಂಬಗಿ, ಎಸ್.ಪಿ. ಮಠಪತಿ, ಸಿದ್ದು ಸನಗೌಡರ, ಆರ್.ಎಸ್. ಮುಲ್ಲಾ, ಪಿ.ಎಚ್. ಘಾಟಗೆ, ಸಿದ್ದು ಬಿರಾದಾರ ಸೇರಿದಂತೆ ಇನ್ನಿತರರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಗ್ರಾಮೀಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು ತನಿಖೆ ನಡೆಸಿದ್ದಾರೆ.



ಬಾದಾಮಿ: ತಾಲೂಕಿನ ಕೆಂದೂರ ಗ್ರಾಮದಲ್ಲಿ ಎಸ್.ಬಿ.ಎಂ.ಪದವಿ ಕಾಲೇಜಿನ ವತಿಯಿಂದ ಹಮ್ಮಿಕೊಂಡಿದ್ದ ಎನ್‌ಎಸ್‌ಎಸ್ ಶಿಬಿರದ 5ನೇ ದಿನದ ಭಾನುವಾರ ಬೆಳಿಗ್ಗೆ ಕೆಂದೂರು ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಆವರಣದಲ್ಲಿ ಕೆಂದೂರು ಗ್ರಾಮದ ಹಿರಿಯರ ಮಲ್ಲಿಕಾರ್ಜುನ ಕಮತಗಿಯವರಿಂದ ಎನ್‌ಎಸ್‌ಎಸ್ ಧ್ವಜಾರೋಹಣ ನೆರವೇರಿಸಲಾಯಿತು. ಸ್ವಾಮಿ ವಿವೇಕಾನಂದ ತಂಡವು ಧ್ವಜಾರೋಹಣ ಕಾರ್ಯಕ್ರಮವನ್ನು ನಿರ್ವಹಿಸಿತು. ಪ್ರಜಾಪ್ರಭುತ್ವದಲ್ಲಿ ಮತದಾನದ ಮಹತ್ವದ ಕುರಿತು ಕೆಂದೂರು ಗ್ರಾಮದ ಬೀದಿ ಬೀದಿಗಳಲ್ಲಿ ಜಾತಾದ ಮೂಲಕ ಅರಿವು ಮೂಡಿಸಲಾಯಿತು.

ಬಿಜೆಪಿ ಪರ ಫಲಿತಾಂಶ: ಮಾಜಿ ಸಂಸದ ಕತ್ತಿ

ಬಾಗಲಕೋಟೆ: ಬೆಳಗಾವಿಯಿಂದ ದರೋಡೆ ರಾಜಕಾರಣ ಬಾಗಲಕೋಟೆಗೆ ಬಂದಿದ್ದು ಇಲ್ಲಿಯೂ ಕಂಬಳಿ ಹಾಸಲು ಬಂದಿದ್ದಾರೆ. ಬಾಗಲಕೋಟೆ ಜನ ಶಾಂತಿಪ್ರಿಯರಾಗಿದ್ದು ಬೆಳಗಾವಿಯ ಗೂಂಡಾಗಿರಿ ಪ್ರವೃತ್ತಿಯನ್ನು ಇಲ್ಲಿ ನಡೆಸಲು ಬಂದಿದ್ದಾರೆ ಅದಕ್ಕೆ ಇಲ್ಲಿಯ ಜನ ಅವಕಾಶ ನೀಡಬಾರದು ಎಂದು ಮಾಜಿ ಸಂಸದ ರಮೇಶ ಕತ್ತಿ ಹೇಳಿದರು.

ಬಿಜೆಪಿ ಅಭ್ಯರ್ಥಿ ಪರ ಪ್ರಚಾರ ನಡೆಸಲು ಆಗಮಿಸಿದ್ದ ರಮೇಶ ಕತ್ತಿ ಮಾಧ್ಯಮದವರೊಂದಿಗೆ ಮಾತನಾಡಿದರು. ಒಬ್ಬ ಕಾರ್ಯಕರ್ತನಾಗಿ ಬಿಜೆಪಿಯ ಅಭ್ಯರ್ಥಿ ವೀರಣ್ಣ ಚರಂತಿಮಠ ಪ್ರಚಾರಕ್ಕೆ ಬಂದಿದ್ದೇನೆ.ಬಿಜೆಪಿ ಪರ ಫಲಿತಾಂಶ ಬರಲಿದೆ ಎಂದರು.

ಬಾಗಲಕೋಟೆ ಶಾಂತಿಗೆ ಹೆಸರಾದ ಕ್ಷೇತ್ರವಾಗಿದೆ. ಈಗ ಇಲ್ಲಿಯ ಉಪಚುನಾವಣೆಯನ್ನು ಗೂಂಡಾಗಿರಿ, ದಬ್ಬಾಳಿಕೆ ಮೂಲಕ ಗೆಲ್ಲಬೇಕು ಎಂದು ಬೆಳಗಾವಿಯಿಂದ ಮಂತ್ರಿಗಳು, ಮಾಜಿ ಮಂತ್ರಿಗಳು ಬಂದಿದ್ದಾರೆ. ಕಾಂಗ್ರೆಸ್ ಪಕ್ಷದ ಸೋಲಿನ ಭೀತಿ ಶುರುವಾಗಿದ್ದರಿಂದ ಇಂತಹ ಗೂಂಡಾಗಿರಿ ಅಸ್ತ್ರಗಳನ್ನು ಬಳಸುತ್ತಾರೆ ಅದನ್ನು ತಡೆಯಲು ನಾವು ಇಲ್ಲಿಗೆ ಬಂದಿವೆ ಎಂದರು. ಬೆಳಗಾವಿಯಿಂದ ಬಾಗಲಕೋಟೆಯಲ್ಲಿ ನುಗ್ಗಾಕ ದರೋಡೆಕೋರರು ಬಂದಿದ್ದಾರೆ. ಇವರನ್ನು ಬೇರು ಸಮೇತ ಕಿತ್ತು ಹಾಕುತ್ತೇವೆ.

ಚುನಾವಣೆಯಲ್ಲಿನ ಫಲಿತಾಂಶ ಹಾಗೂ ಜನ ಯಾವುದಕ್ಕೆ ಒಲವು ತೋರಿಸುತ್ತಾರೆಂದು ತಿಳಿದುಕೊಳ್ಳಲು ಬೆಳಗಾವಿ ರಾಜಕಾರಣಿಗಳು ಇಲ್ಲಿ ಬಂದಿದ್ದು ಮುಂದಿನ ಚುನಾವಣೆಗೆ ಕಂಬಳಿ ಹಾಕಲು ಇಲ್ಲಿ ಬಂದಿದ್ದಾರೆ ಜನ ಇವರಿಗೆ ಈ ಚುನಾವಣೆಯಲ್ಲಿ ತಕ್ಕ ಪಾಠ ಕಲಿಸಲಿದ್ದಾರೆ ಎಂದರು.



ಬಾದಾಮಿ: ಯುವ ಮುಖಂಡ ಮಹೇಶ ಹೊಸಗೌಡ್ರ, ಅವರ ನಿವಾಸಕ್ಕೆ ವಿಧಾನ ಪರಿಷತ್ ಸದಸ್ಯ ಡಾ. ಯತಿಂದ್ರ ಸಿದ್ದರಾಮಯ್ಯ ಅವರು ಆಗಮಿಸಿ ಬೆಳಗಿನ ಉಪಹಾರ ಸೇವಿಸಿದರು. ಮಹೇಶ ಹೊಸಗೌಡ್ರ ಪರಿವಾರದವರು ಡಾ.ಯತೀಂದ್ರ ಸಿದ್ದರಾಮಯ್ಯ ಅವರನ್ನು ಸನ್ಮಾನಿಸಿ, ಗೌರವಿಸಿದರು. ಗುರು-ಹಿರಿಯರು, ಅಭಿಮಾನಿಗಳು ಉಪಸ್ಥಿತರಿದ್ದರು.

ನೀರಿನ ಅರವಟ್ಟಿಗೆ ಪ್ರಾರಂಭಕ್ಕೆ ಸಾರ್ವಜನಿಕರ ಆಗ್ರಹ

ಬಸ್ ನಿಲ್ದಾಣದಲ್ಲಿ ಕುಡಿಯುವ ನೀರಿಲ್ಲದೆ ಪ್ರಯಾಣಿಕರ ಪರದಾಟ

▸ ನಿತೀಶ ಪಾಟೀಲ

ಕಲಾದಗಿ: ಬೇಸಿಗೆ ಬಂತೆಂದರೆ ಸಾಕು ಗುಟುಕು ನೀರಿಗಾಗಿ ಹಪಹಪಿಸುವ ಬಾಯಾರಿಕೆಗೆ ಅಲೆದಾಡಿದರೂ ಸಿಗದ ನೀರಿಗೆ ಪ್ರಯಾಣಿಕರು ಪರದಾಡುತ್ತಿದ್ದು, ಈ ವರ್ಷದ ಬಿರು ಬೇಸಿಗೆ ಮಾರ್ಚ್ ತಿಂಗಳಿಂದಲೇ ಆರಂಭವಾಗಿದ್ದು, ಸಾವಿರಾರು ಜನ ನಿತ್ಯ ಪ್ರಯಾಣಿಸುವ ಕಲಾದಗಿ ಗ್ರಾಮದ ಬಸ್ ನಿಲ್ದಾಣದಲ್ಲಿ ಶುದ್ಧ ಕುಡಿಯುವ ನೀರಿನ ಅರವಟ್ಟಿಗೆ ಇಲ್ಲದೇ ದೂರದೂರುಗಳಿಗೆ ತೆರಳುವ ಪ್ರಯಾಣಿಕ ಜನತೆಗೆ ಮತ್ತಷ್ಟು ಬಿಸಿಲಿನ ತಾಪ ಹೆಚ್ಚಾಗುವಂತೆ ಮಾಡಿದೆ.

ಹಣ್ಣುಗಳನಾಡೆಂದೇಪ್ರಸಿದ್ಧಿಪಡೆದಿರುವಕಲಾದಗಿಗೆ ನಿತ್ಯ ನೂರಾರು ಪ್ರಯಾಣಿಕರು ಸಂಚರಿಸುತ್ತಾರೆ, ರಾಜ್ಯ, ಹೊರ ರಾಜ್ಯದಿಂದಲೂ ಹಣ್ಣುಗಳ ವ್ಯಾಪಾರ ವಹಿವಾಟಿಗೆ ಕಲಾದಗಿಗೆ ಆಗಮಿಸುವುದು ಸಾಮಾನ್ಯ ಆದರೆ ಗ್ರಾಮದ ಬಸ್ ನಿಲ್ದಾಣದಲ್ಲಿ ಪ್ರಯಾಣಿಕರು ಬಸ್ಸಿಗಾಗಿ ಕಾಯಲು ಬಸ್ ನಿಲ್ದಾಣವಿದ್ದರೂ ಅಲ್ಲಿ ಸ್ವಚ್ಛತೆ ಮರಿಚೀಕೆಯಾಗಿದ್ದೂ ಸುಸಜ್ಜಿತ ಕುರ್ಚಿಗಳಿಲ್ಲ, ಸ್ವಚ್ಛ ಶೌಚಾಲಯಗಳಿಲ್ಲ, ಕುಡಿಯಲು ನೀರಿನ ವ್ಯವಸ್ಥೆಯಂತೂ ಮೊದಲೇ ಇಲ್ಲ, ಸುತ್ತಮುತ್ತಲಿನ ಗ್ರಾಮಗಳ ಪೈಕಿ ಕಲಾದಗಿ ದೊಡ್ಡ ಗ್ರಾಮವಾಗಿದ್ದು ದಿನಕ್ಕೆ ನೂರಾರು ಬಸಗಳು ಸಂಚರಿಸುವುದರಿಂದ ಪ್ರಯಾಣಿಕರ ಸಂಖ್ಯೆಗೇನೂ ಕಡಿಮೆ ಇಲ್ಲ ಹಾಗಿದ್ದೂ ಅದರ ಸುಸಜ್ಜಿತ ವ್ಯವಸ್ಥೆಗೆ ಅಧಿಕಾರಿಗಳು ಹಿಂದೇಟೂ ಹಾಕುತ್ತಿರುವುದು ವಿಪರ್ಯಾಸ.



ದೂಳುಮಯ: ಇದ್ದ ಬಸ್ ನಿಲ್ದಾಣದ ಕಟ್ಟಡ ಸ್ವಚ್ಛತೆ ಇಲ್ಲದೆ ದೂಳುಮಯವಾಗಿದ್ದೂ ಇದರ ಸ್ವಚ್ಛತೆ ಕಡೆ ಗಮನ ಹರಿಸುವವರು ಇಲ್ಲ, ಸಂಜೆಯಾದರೆ ಸಾಕು ಅನೈತಿಕ ಚಟುವಟಿಕೆಗಳ ತಾಣವಾಗಿ ಮಾರ್ಪಾಡಾಗುತ್ತಿದ್ದೂ ಬಸ್ ನಿಲ್ದಾಣದ ನಿರ್ವಹಣೆ ಇಲ್ಲದೇ ದುಶ್ಚಟ ಮಾಡುವವರ ವಾಸಸ್ಥಾನವಾಗಿ ಬದಲಾಗುತ್ತಿದೆ ಎಂಬುದು ಸಾರ್ವಜನಿಕರ ಅಂಬೋಣ.

ಕುಡಿಯಲು ನೀರಿಲ್ಲ: ಬೇಸಿಗೆಯಲ್ಲಿ ಒಂದು ದಿನ ಊಟವಿಲ್ಲದೆಯೂ ತಾಳಬಹುದು, ಆದರೆ ಒಂದು ತಾಸು ನೀರಿಲ್ಲದಿರುವುದು ಅಸಾಧ್ಯದ ಮಾತು, ಕೆಂಡದಂತಹ ಬಿಸಿಲಿನಿಂದ ಪ್ರಯಾಣಿಕ ಜನತೆಗೆ ನೀರಿನ ವ್ಯವಸ್ಥೆ ಇಲ್ಲದೇ ನೀರಿಗಾಗಿ ಹೋಟೇಲ್, ಕೋಲ್ಡ್ರಿಂಕ್ ಅಂಗಡಿಗಳಿಗೆ ಅಲೆದಾಡಬೇಕಾದ ಅನಿವಾರ್ಯತೆ ಪ್ರಯಾಣಿಕ ಜನತೆಯದ್ದಾಗಿದ್ದು ತಂಪುಪಾನೀಯಗಳ ಮೊರೆ ಹೋಗುತ್ತಿದ್ದಾರೆ.

ಗ್ರಾಪಂನಿಂದ ಆಗಲಿ: ಪ್ರತೀ ವರ್ಷ ಬೇಸಿಗೆಯಲ್ಲಿ ಕಲಾದಗಿ ಗ್ರಾಮ ಪಂಚಾಯತ ಕಾರ್ಯಾಲಯದಿಂದ ನೀರಿನ ಅರವಟ್ಟಿಗೆ ಪ್ರಾರಂಭ ಮಾಡಲಾಗುತ್ತಿತ್ತು, ಈ ವರ್ಷ ಅದರ ಸಿದ್ಧತೆ ಇನ್ನೂ ಕಾಣುತ್ತಿಲ್ಲ ಪ್ರತಿ ವರ್ಷ ಮಾಡಿದಂತೆ ಈ ವರ್ಷವೂ ಗ್ರಾಪಂನಿಂದ ಕುಡಿಯುವ ನೀರಿನ ವ್ಯವಸ್ಥೆ ಆಗಲಿ ಎನ್ನುವುದು ಪ್ರಜ್ಞಾವಂತ ನಾಗರೀಕರ ವಿನಂತಿ.

> **ಈಗಾಗಲೇ ನೀರಿನ ಕ್ಯಾನ್ ಇಡಲು ಮೆಟಲ್ ರ್‍ಯಾಕ್ ಮಾಡಲು ಹಾಕಿದ್ದೇವೆ, ಇನ್ನೆರಡು ದಿನದಲ್ಲಿ ಬಸ್ ನಿಲ್ದಾಣದಲ್ಲಿ ಶುದ್ಧ ಕುಡಿಯುವ ನೀರಿನ ಅರವಟ್ಟಿಗೆ ವ್ಯವಸ್ಥೆ ಮಾಡುತ್ತೇವೆ. ಜನರು ಇದರ ಸದ್ಬಳಕೆ ಮಾಡಬೇಕು, ನೀರನ್ನು ಕುಡಿಯಲು ಮಾತ್ರ ಬಳಸಬೇಕು ಯಾರೂ ಬಾಟಲಿಗಳಲ್ಲಿ ತುಂಬಿಕೊಂಡು ಹೋಗಬಾರದು.**
> ■ ಕೆ.ಎಚ್.ಮುಲ್ಲಾ, ಪಿಡಿಒ ಕಲಾದಗಿ

> **ಬಸ್ ನಿಲ್ದಾಣದಲ್ಲಿ ನಿತ್ಯವೂ ಸಾವಿರಾರು ಪ್ರಯಾಣಿಕರು ಸಂಚರಿಸುತ್ತಾರೆ, ಪ್ರತೀ ವರ್ಷವೂ ಬಸ್ ನಿಲ್ದಾಣದಲ್ಲಿ ಕುಡಿಯುವ ನೀರಿನ ಅರವಟ್ಟಿಗೆ ಮಾಡಿ ಜನರಿಗೆ ನೀರಿನ ದಾಹ ತೀರಿಸುತ್ತಿದ್ದರು, ಈ ವರ್ಷವು ಮಾಡಿದಲ್ಲಿ ಜನರಿಗೆ ಒಳ್ಳೆಯದಾಗುತ್ತದೆ.**
> ■ ರಜಾಕ್ ನದಾಫ್, ಕಲಾದಗಿ

ಡಾ.ಬಾಬು ಜಗಜೀನವರಾಂ ಕೊಡುಗೆ ಅಪಾರ



ಬಾಗಲಕೋಟೆ: ಬಾಗಲಕೋಟೆ ವಿಧಾನಸಭಾ ಉಪ ಚುನಾವಣೆಯ ನೀತಿ ಸಂಹಿತೆ ಜಾರಿ ಹಿನ್ನಲೆಯಲ್ಲಿ ಹಸಿರು ಕ್ರಾಂತಿಯ ಹರಿಕಾರ ಡಾ.ಬಾಬು ಜಗಜೀವನ ರಾಮ್ ಅವರ 119ನೇ ಜಯಂತಿಯನ್ನು ಭಾನುವಾರ ಸರಳವಾಗಿ ಆಚರಿಸಲಾಯಿತು.

ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಜಿಲ್ಲಾಧಿಕಾರಿ ಸಂಗಪ್ಪ, ಜಿ.ಪಂ ಸಿಇಓ ಶಶಿಧರ ಕುರೇರ್, ಅಪರ ಜಿಲ್ಲಾಧಿಕಾರಿ ಅಶೋಕ ತೇಲಿ ಸೇರಿದಂತೆ ಇತರೆ ಅಧಿಕಾರಿಗಳು ಡಾ.ಬಾಬು ಜಗಜೀವನ ರಾಮ್ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿರುವ ಮೂಲಕ ಪುಷ್ಪ ಅರ್ಪಿಸಿ, ಗೌರವ ನಮನ ಸಲ್ಲಿಸಿದರು.

ಈ ಸಂದರ್ಭದಲ್ಲಿ ಆಹಾರ ಇಲಾಖೆಯ ಜಂಟಿ ನಿರ್ದೇಶಕ ಶ್ರೀಶೈಲ ಕಂಕಣವಾಡಿ, ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ರಮೇಶ ಚವ್ಹಾಣ ಸೇರಿದಂತೆ ಇತರೆ ಇಲಾಖೆಯ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು ಇದ್ದರು.



ರಬಕವಿ-ಬನಹಟ್ಟಿ: ಹಿಪ್ಪರಗಿ ಗ್ರಾಮದಲ್ಲಿ ನಡೆದ ಗುರು ಸಿದ್ಧರಾಮ ಶಿವಾಚಾರ್ಯರ 56ನೇ ಚಿರಲಿಂಗಾಂಗ ಮತ್ತು ಜಾತ್ರಾ ಮಹೋತ್ಸವದ ಅಂಗವಾಗಿ ಹಮ್ಮಿಕೊಂಡ ಧಾರ್ಮಿಕ ಕಾರ್ಯಕ್ರಮದಲ್ಲಿ ಗ್ರಾಮದ ಸರ್ಕಾರಿ ಆಯುರ್ವೇದ ಆಸ್ಪತ್ರೆಯ ವೈದ್ಯಾಧಿಕಾರಿ ಡಾ.ಅನುರಾಧಾ ಕಂಗೋಣಿಯವರಿಗೆ ಶ್ರೀಶೈಲದ ಚನ್ನಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯರು ವೈದ್ಯ ರತ್ನ ಪ್ರಶಸ್ತಿ ನೀಡಿ ಸನ್ಮಾನಿಸಿದರು.

ಡಾ.ಬಾಬು ಜಗಜೀವನರಾಂ ಜಯಂತ್ಯುತ್ಸವ



ರಬಕವಿ-ಬನಹಟ್ಟಿ: ಸಮಾಜದಲ್ಲಿ ಯಾವುದೇ ತಾರತಮ್ಯವಿಲ್ಲದೇ ಸಮಾನತೆ, ಸಾಮಾಜಿಕ ನ್ಯಾಯ ತತ್ವ ಅಡಕಗೊಂಡಲ್ಲಿ ಮಾತ್ರ ಸ್ವಾತಂತ್ರ್ಯಕ್ಕೆ ಅರ್ಥ ಬರುತ್ತದೆಂದು ತಹಶೀಲ್ದಾರ್ ಗಿರೀಶ ಸ್ವಾದಿ ಹೇಳಿದರು.

ಭಾನುವಾರದಂದು ತಹಶೀಲ್ದಾರ ಕಚೇರಿಯಲ್ಲಿ ನಡೆದ ಡಾ.ಬಾಬು ಜಗಜೀವನರಾಂ ಜಯಂತಿ ನಿಮಿತ್ಯ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಮಾತನಾಡಿ, ಹಸಿರುಕ್ರಾಂತಿಯ ಮೂಲಕ ಭಾರತದ ಕೃಷಿ ಉತ್ಪನ್ನಗಳಲ್ಲಿ ಹೆಚ್ಚಳಗೊಳಿಸುವತ್ತ ಹಾಗೂ ಆಹಾರ ಸ್ವಾವಲಂಬನೆ ಬೆಳೆಸಿಕೊಳ್ಳಲು ಡಾ.ಬಾಬು ಜಗಜೀವನರಾಂ ಪ್ರೇರಣೆ ಸ್ಮರಣಾರ್ಹ. ಯಾವುದೇ ಪ್ರಜೆ ಅಥವಾ ಜನಾಂಗ ಸಮಾನತೆಯಿಂದ ದೂರವಾದಲ್ಲಿ ಶೋಷಣೆಯ ಉತ್ಪತ್ತಿಯಾಗಿ ಅನಾರೋಗ್ಯ ಸಮಾಜ ನಿರ್ಮಾಣವಾಗುತ್ತದೆ. ಸಾಮಾಜಿ ನ್ಯಾಯ ಹಾಗೂ ಸಮಾನತೆ ತತ್ವಗಳು ಭಾರತೀಯ ಸಂವಿಧಾನದಲ್ಲಿ ಪ್ರದತ್ತವಾಗಿದ್ದರೂ ತಾರತಮ್ಯ ನಿವಾರಿಸಿಕೊಂಡು ನಾವೆಲ್ಲರೂ ಒಂದು ಎಂಬ ಭಾವದಿಂದ ಭವಿತವ್ಯದ ಬಲಿಷ್ಠ ಭಾರತ ನಿರ್ಮಾಣಕ್ಕೆ ಎಲ್ಲರೂ ಮುಂದಾಗಬೇಕೆಂದರು.

ಶಿರಸ್ತೇದಾರ ಪ್ರಕಾಶ ಮಠಪತಿ, ಕಂದಾಯ ಅಧಿಕಾರಿ ಸದಾಶಿವ ಕುಂಬಾರ, ಚೇತನ ಭಜಂತ್ರಿ, ಬಾಬು ನಡುವಿನಮನಿ, ಮಂಜುನಾಥ ಆಲಗೂರ, ಚಂದ್ರು ಹರಿಜನ ಸೇರಿದಂತೆ ಅನೇಕ ದಲಿತ ಮುಖಂಡರು ಪಾಲ್ಗೊಂಡಿದ್ದರು.



ಗುಳೇದಗುಡ್ಡ: ನಗರದ ಸರಾಫ್ ಬಜಾರದಲ್ಲಿನ ಮಾರುತೇಶ್ವರ ದೇವಸ್ಥಾನದಲ್ಲಿ ಗುರುವಾರ ಹನುಮ ಜಯಂತಿ ಅಂಗವಾಗಿ ಹನುಮಂತ ದೇವರಿಗೆ ವಿಶೇಷ ಹೂವಿನ ಅಲಂಕರ, ಎಲೆಪೂಜೆ ಮಾಡಲಾಗಿತ್ತು. ಬಳಿಕ ಮಹಿಳೆಯರಿಂದ ಮಾರುತೇಶ್ವರನ ತೊಟ್ಟಿಲೋತ್ಸವ ನಡೆಸಲಾಯಿತು.

ಕಾಂಗ್ರೆಸ್‌ನಿಂದ ವಿದ್ಯಾರ್ಥಿಗಳ ಬೆದರಿಸುವ ಕೆಲಸ: ವೀರಣ್ಣ ಚರಂತಿಮಠ

ಬಾಗಲಕೋಟೆ: ಸೋಲಿನ ಭಯದಿಂದ ಕಾಂಗ್ರೆಸ್ ನಾಯಕರು ಎನ್.ಎಸ್.ಯುಐ ಕಾರ್ಯಕರ್ತರನ್ನ, ಹಿಂದೂ ಅಲ್ಲದ ಯುವಕರನ್ನ ಕೇಸರಿ ಶಾಲು ಹಾಕಿಸಿ ಶಿಕ್ಷಣ ಸಂಸ್ಥೆಗೆ ಕಳುಹಿಸಿ ವಿದ್ಯಾರ್ಥಿಗಳಿಗೆ ಧಮಕಿ ಹಾಕಿಸುವ ಕೆಲಸ ಮಾಡಿದ್ದಾರೆ ಎಂದು ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ ಗಂಭೀರ ಆರೋಪ ಮಾಡಿದರು.

ವಿದ್ಯಾಗಿರಿಯಲ್ಲಿ ಮತ ಯಾಚಿಸಿದ ಬಳಿಕ ಮಾತನಾಡಿದ ಅವರು, ಕಳೆದ 23ರಿಂದ ಪ್ರಚಾರ ನಡೆಯುತ್ತಿದೆ, ಜನರು ಬಹಳ ಉತ್ಸಾಹದಿಂದ ಪ್ರತಿಕ್ರಿಯೆ ನೀಡುತ್ತಿದ್ದಾರೆ. ಕಾಂಗ್ರೆಸ್ ಕಾರ್ಯಕರ್ತರು ನಮ್ಮ ಶಿಕ್ಷಣ ಸಂಸ್ಥೆಗೆ ತೆರಳಿ ಅಲ್ಲಿರುವ ವಿದ್ಯಾರ್ಥಿಗಳಿಗೆ ಧಮಕಿ ಹಾಕಿಸುವ ಕೆಲಸ ಮಾಡಿದ್ದಾರೆ. ಅವರನ್ನು ನವನಗರ ಪೊಲೀಸ್ ಠಾಣೆಗೆ ಕರೆದೊಯ್ದರೆ,

ಅವರ ಮೇಲೆ ಕೇಸ್ ದಾಖಲು ಮಾಡಲು ಮೀನಾಮೇಶ ಎನಿಸುತ್ತಿದ್ದಾರೆ. ಎಲ್ಲ ರಾಜಕೀಯ ಪಕ್ಷದ ನಾಯಕರುಗಳ ಶಿಕ್ಷಣ ಸಂಸ್ಥೆಗಳಿವೆ. ಅಲ್ಲಿ ಯಾಕೆ ಆಗುವುದಿಲ್ಲ, ಇಲ್ಲಿ ಕಾಂಗ್ರೆಸ್ ನಲ್ಲೇ ಕೆಲವು ನಾಯಕರ ಶಿಕ್ಷಣ ಸಂಸ್ಥೆಗಳು ಇವೆ ಎಂದರು.

ನಮ್ಮ ಕಾರ್ಯಕರ್ತರು ಹೋಗಿ ಪ್ರತಿಭಟನೆ ಮಾಡಿದಾಗ ಕೇಸ್ ದಾಖಲಿಸಿದ್ದಾರೆ. 6 ಜನರ ಮೇಲೆ ಕೇಸ್ ದಾಖಲಾಗಿದೆ. ಸಿಎಂ ಅವರು ತಮ್ಮ ಅಭ್ಯರ್ಥಿ ಸೋಲುತ್ತಾರೆ ಎನ್ನುವ ಭಯಕ್ಕೆ ಇಲ್ಲಿ ಬಂದು, ಇಡೀ ಮಂತ್ರಿಮಂಡಲ ಇಲ್ಲಿಗೆ ಕರೆಯಿಸಿ, ಹಣ ಹಂಚುವ ಕಲಸ ಮಾಡುತ್ತಿದ್ದಾರೆ ನಮ್ಮ ಗೆಲುವು ನಿಶ್ಚಿತ ಎಂದರು.

ಈ ಸಂದರ್ಭದಲ್ಲಿ ರಾಜ್ಯಸಭಾ ಸದಸ್ಯ ನಾರಾಯಣಸಾ ಭಾಂಡಗೆ, ವಿಧಾನ ಪರಿಷತ್ ಸದಸ್ಯ ಹನಮಂತ ನಿರಾಣಿ ಸೇರಿದಂತೆ ಸಾವಿರಾರು ಕಾರ್ಯಕರ್ತರು ಭಾಗವಹಿಸಿದ್ದರು.



ಜನಗಣತಿಯ ಪೂರ್ವಭಾವಿ ತರಬೇತಿ ಶಿಬಿರ



ಕೆರೂರ: ಪಟ್ಟಣದಲ್ಲಿ ಕೇಂದ್ರ ಸರಕಾರದಿಂದ ನಡೆಸಲಾಗುವ ಸಾರ್ವಜನಿಕ ಜನಗಣತಿ 2026-27ಕ್ಕೆ ಸಂಬಂಧಿಸಿದಂತೆ ಮೊದಲ ದಿನದ ತರಬೇತಿ ಶಿಬಿರವನ್ನು ಪ್ರಾರಂಭಿಸಲಾಯಿತು.


ಸ್ಥಳಿಯ ಇಲ್ಲಿನ ಎಂ.ಹೆಚ್. ಮೇಣಸಗಿ ಕಾಲೇಜಿನಲ್ಲಿ 2027ಕ್ಕೆ ಸಂಬಂಧಿಸಿದಂತೆ ಜನಗಣತಿ ಚಾರ್ಜ ಆಫೀಸರ್ ಮುಖ್ಯಾಧಿಕಾರಿಗಳು ರಮೇಶ ಮಾಡಬಾಳ. ಮತ್ತು ಫಿಲ್ಡ ತರಬೇತಿದಾರರು, ಪರಶುರಾಮ ಲಮಾಣಿ. ಹಾಗೂನಧಾಪ್ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಹಾಗೂ ಹಾಜರಾದ ಗಣತಿದಾರರಿಗೆ, ಮೇಲ್ವಿಚಾರಕರಿಗೆ ಜನಗಣತಿ ಕುರಿತು ಮಾತನಾಡಲಾಯಿತು. ಈ ಸಂದರ್ಭದಲ್ಲಿ ಪೀಲ್ಡ್ ತರಬೇತುದಾರರು, ಪಪಂ, ಸಿಬ್ಬಂಧಿಗಳಾದ ಮಹಾಂತ ಅನ್ನೇನವರ, ಅಶ್ವಥಗೌಡ ರಂಗನಗೌಡರ ಹಾಗೂ ಇನ್ನೂಳಿದ ತರಬೇತಿದಾರರು ಉಪಸ್ಥಿತರಿದ್ದರು.



ಬಾದಾಮಿ: ಪಟ್ಟಣದ ತಹಶೀಲ್ದಾರ್ ಕಚೇರಿಯಲ್ಲಿ ಭಾನುವಾರ ಬಾಬು ಜಗಜೀವನರಾಂ ಅವರ ಜಯಂತಿಯನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಮುಖಂಡರಾದ ಹೆಬ್ಬಳ್ಳಪ್ಪ ಪೂಜಾರ, ಕನಕಪ್ಪ ಮಾದರ, ಹೆಬ್ಬಳ್ಳಪ್ಪ ಮ್ಯಾಗೇರಿ, ಬಸವರಾಜ ಪೂಜಾರ, ಸಿದ್ದು ಮಾದರ, ಬಾಬು ಜಗಜೀವನರಾಂ ಸಂಘದ ಅಧ್ಯಕ್ಷ ಮುತ್ತು ಹಿರಿಯಪ್ಪ ಮಾದರ, ಉಪಾಧ್ಯಕ್ಷ ರಂಗನಾಥ ತುಕಾರಾಮ ಮ್ಯಾಗೇರಿ, ಲಕ್ಷ್ಮಪ್ಪ ಮಾದರ ಇದ್ದರು.

ಕಾಂಗ್ರೆಸ್‌ನಿಂದ ಅಭಿವೃದ್ಧಿ ಕಾರ್ಯ: ಸಚಿವ ಆರ್.ಬಿ. ತಿಮ್ಮಾಪುರ

ಬಾಗಲಕೋಟೆ: ಬಿಜೆಪಿಯ ಗೋವಿಂದ ಕಾರಜೋಳ ಹಾಗೂ ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ ಇವರಿಬ್ಬರು ಜೋಡೆತ್ತಿನ ರೀತಿ ಅಕ್ರಮದ ಕೆಲಸ ಮಾಡುವ ಮೂಲಕ ಬಾಗಲಕೋಟೆ ಅಭಿವೃದ್ಧಿಗೆ ಮಾರಕವಾಗಿದ್ದಾರೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ. ತಿಮ್ಮಾಪುರ ಕಿಡಿಕಾರಿದರು.



ನಗರದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, 2012ರಲ್ಲಿ ಗೋವಿಂದ ಕಾರಜೋಳ ಅವರು ತಮ್ಮ ಮಕ್ಕಳಾದ ಗೋಪಾಲ ಕಾರಜೋಳ, ಉಮೇಶ್ ಕಾರಜೋಳ, ಅರುಣ್ ಕಾರಜೋಳ ಹೆಸರಿನಲ್ಲಿ ಕಡಿಮೆ ಮೊತ್ತಕ್ಕೆ ಸುಮಾರು 30 ಎಕರೆ ಜಮೀನು ಖರೀದಿಸಿ 2013ರಲ್ಲಿ ಜಮೀನುಸ್ವಾಧೀನಪಡಿಸಿಕೊಳ್ಳುವಂತೆ ಬಿಟಿಡಿಎಗೆ ಪತ್ರ ಬರೆದಿದ್ದಾರೆ. ಬಿಟಿಡಿಎಗೆ ಜಮೀನು ಸ್ವಾಧೀನ ಆಗುತ್ತೆ, ಹೆಚ್ಚಿನ ಪರಿಹಾರ ಸಿಗುತ್ತೆ ಅನ್ನೋ ಕಾರಣಕ್ಕೆ ಈ ರೀತಿ ಜಮೀನು ಖರೀದಿಸಿ, ಮಾರಾಟ ಮಾಡುವ ಅಕ್ರಮ ಎಸಗಿದ್ದಾರೆ. ಈ ಮೂಲಕ ಸರ್ಕಾರದ ಹಣವನ್ನ ಲೂಟಿ ಮಾಡಿದ್ದಾರೆ ಎಂದು ಆರೋಪಿಸಿದರು. ಬಿಟಿಡಿಎಯಲ್ಲಿ ವೀರಣ್ಣ ಚರಂತಿಮಠ ಸಾಕಷ್ಟು ಅಕ್ರಮಗಳನ್ನ ಎಸಗಿದ್ದಾರೆ. ಅವರ ಅಕ್ರಮಗಳಿಗೆ ಕಾನೂನು ಬಾಹಿರ ಕೆಲಸಗಳಿಗೆ ಚೀಫ್ ಎಂಜಿನಿಯರ್ ಅಮಾನತ್ತಾಗಿರೋದೇ ಸಾಕ್ಷಿ. ಇದು ಅವರು ಮಾಡಿರೋ ಭ್ರಷ್ಟಾಚಾರ ಅಲ್ವೇನು ಎಂದು ಪ್ರಶ್ನಿಸಿದರು.

ಬಾಗಲಕೋಟೆಗೆ ಮಾರಕವಾದ ಕೆಲಸ ಮಾಡೋರು, ಸರ್ಕಾರದ ಹಣ ಲೂಟಿ ಮಾಡೋರು ಅವರಾದ್ರೇ, ಅಭಿವೃದ್ಧಿ ಕೆಲಸ ಮಾಡಿರೋದು ನಾವು ಎಂದು ಬಿಜೆಪಿ ವಿರುದ್ಧ ಹೇಳಿಕೆ ನೀಡಿದರು.

ಹೆಚ್.ಕೆ. ಪಾಟೀಲ ನೀರಾವರಿ ಸಚಿವರಾಗಿದ್ದಾಗ 630 ಕೋಟಿ ನೀರಾವರಿ ಅನುದಾನ ತಂದಿದ್ದೇವೆ. ಬಾಗಲಕೋಟೆ ಜಿಲ್ಲೆ ಅಭಿವೃದ್ಧಿ ಮಾಡ್ಬೇಕು ಅಂತಾ ಕ್ಯಾಬಿನೆಟ್ ಸಬ್ ಕಮಿಟಿಯನ್ನ ಇಲ್ಲಿಗೆ ಕರ್ಕೊಂಡು ಬಂದಿದ್ದು ನಮ್ಮ ಕಾಂಗ್ರೆಸ್‌ನ ಬದ್ಧತೆ ಎಂದರು.

ಬಿಜೆಪಿಯವರು ಮುಳುಗಡೆ ಸಂತ್ರಸ್ತರ ಜಮೀನುಗಳಿಗೆ ಪರಿಹಾರ ಕೊಡುವ ನಾಟಕ ಮಾಡಿದರು. ಬಿಜೆಪಿಯರು 24-25 ಲಕ್ಷ ಫಿಕ್ಸ್ ಮಾಡಿ ಮೂರು ಚೆಕ್ ಕೊಡೋ ತರಾ ನಾಟ್ಕ ಮಾಡಿದ್ರು. ಆದರೇ ನಾವು ಆ ರೀತಿ ಮಾಡಿಲ್ಲ, ನೀರಾವರಿ ಭೂಮಿಗೆ 40 ಲಕ್ಷ, ಒಣ ಭೂಮಿಗೆ 30 ಲಕ್ಷ ಪರಿಹಾರ ನಿಗದಿ ಮಾಡುವ ಮೂಲಕ ಚೆಕ್ ಹಸ್ತಾಂತರಿಸುವ ಕೆಲಸ ಮಾಡುತ್ತಿದ್ದೇವೆ. ರೈತರಿಗೆ ನ್ಯಾಯ ಕೊಡಿಸುವ ಕೆಲಸ ಮಾಡೋದು ನಾವು, ಬಿಜೆಪಿಯವರು ಬರೀ ಟೀಕೆ ಮಾಡ್ಕೊಂಡು ಓಡಾಡೋದು ಅವರ ಕೆಲಸ ಎಂದು ಆರೋಪಿಸಿದರು.

ವೀರಣ್ಣ ಚರಂತಿಮಠ ಗೆಲುವು ನಿಶ್ಚಿತ: ಕತ್ತಿ



ಲೋಕಾಪುರ: ಬಾಗಲಕೋಟೆ ಉಪ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ ಗೆಲುವು ನಿಶ್ಚಿತ ಎಂದು ಮಾಜಿ ಸಂಸದ ಹಾಗೂ ಬಿಜೆಪಿ ಮುಖಂಡ ರಮೇಶ ಕತ್ತಿ ಹೇಳಿದರು.

ಲೋಕಾಪುರ ಪಟ್ಟಣದ ಬಸವೇಶ್ವರ ವೃತ್ತದಲ್ಲಿ ರಮೇಶ ಕತ್ತಿ ಬೆಂಬಲಿಗರಿಂದ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ ಗೆಲುವು ಶತ ಸಿದ್ಧ ನಾನು ವೀರಣ್ಣ ಚರಂತಿಮಠ ಪರ ಪ್ರಚಾರದಲ್ಲಿ ಪಾಲ್ಗೊಳ್ಳಲು ಹೊರಟಿದ್ದೇನೆ. ಎಲ್ಲ ಸಮುದಾಯವರಿಗೆ, ಸ್ಥಳೀಯರಿಗೆ ಅಭಿನಂದನೆ ಸಲ್ಲಿಸಿ ಬಾಗಲಕೋಟಿಗೆ ತೆರಳಿದರು.

ಈ ವೇಳೆ ಮುಖಂಡರಾದ ವ್ಹಿ.ಎಂ.ತೆಗ್ಗಿ, ವೀರುಪಾಕ್ಷಪ್ಪ ಸಣ್ಣಕ್ಕಿ, ಆನಂದ ಹವಳಖೋಡ, ವಿರೇಶ ಪಂಚಕಟ್ಟಿಮಠ, ಈಶ್ವರ ಹವಳಖೋಡ, ಸಂಗಮೇಶ ಪಲ್ಲೇದ, ಗೋಪಾಲಗೌಡ ಪಾಟೀಲ, ಸುರೇಶ ಹವಳಖೋಡ, ರಾಜು ಹುಬ್ಬಳ್ಳಿ, ಶಾಂತೇಸ ಬೋಳಿಶೆಟ್ಟಿ, ಮಲ್ಲಪ್ಪ ಅಂಗಡಿ, ಹರೀಶ ಹುಕುಮನವರ, ಮುತ್ತಪ್ಪ ಗಂಗಣ್ಣವರ, ಸಂದೀಪ ಉಪ್ಪಾರ ಅಪಾರ ರಮೇಶ ಕತ್ತಿ ಅಭಿಮಾನಿಗಳು ಇದ್ದರು.

ನೋಟಾಕ್ಕೆ ಮತ ಹಾಕಿ: ಮಲ್ಲಿಕಾರ್ಜುನ

ಬಾಗಲಕೋಟೆ: ವೀರಶೈವ ಲಿಂಗಾಯತ ಸಮುದಾಯದವರು ಹಾಗೂ ಆರ್.ಎಸ್.ಎಸ್.ನವರು ಬಿಜೆಪಿಗೆ ಮತ ಹಾಕದೇ ನೋಟಾ ಹಾಕುವ ಮೂಲಕ ತಮ್ಮ ಮತದಾನವನ್ನು ಚಲಾಯಿಸಬೇಕು ಎಂದು ಕಾಂಗ್ರೆಸ್ ಮುಖಂಡ ಮಲ್ಲಿಕಾರ್ಜುನ ಚರಂತಿಮಠ ಹೇಳಿದರು.

ನವನಗರದ ಪತ್ರಿಕಾಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಿಜೆಪಿ ಅಭ್ಯರ್ಥಿ ಶಾಸಕರಾದ ಬಳಿಕ ಎಲ್ಲ ಹುದ್ದೆ ನನಗೆ ಬೇಕು ಎನ್ನುತ್ತಾರೆ ಉಳಿದವರಿಗೆ ಬಿಟ್ಟು ಕೊಡುವುದಿಲ್ಲ ಎಂದರು.

ಐದು ವರ್ಷ ಎಲ್ಲರಿಗೂ ಟೋಪಿಯನ್ನು ಹಾಕಿದ್ದಾರೆ ಈಗ ಅವರ ಟೋಪಿಯನ್ನು ಹಾಕಿಕೊಳ್ಳುತ್ತಿದ್ದಾರೆ. ಬಸವನಗೌಡ ಪಾಟೀಲ ಯತ್ನಾಳವರ ಪಕ್ಷದಿಂದ ಉಚ್ಚಾಟನೆಯಾದಾಗ ಅವರ ಪರವಾಗಿ ಧ್ವನಿ ಎತ್ತಲಿಲ್ಲ. ಈಗ ತಮ್ಮ ಪರವಾಗಿ ಪ್ರಚಾರ ನಡೆಸಲು ಬೇಕು. ಟಿಕೆಟ್‌ಗಾಗಿ ವಿಜಯೇಂದ್ರ ಬೇಕು, ಹಿಂದುತ್ವ ಪರ ಯತ್ನಾಳ ಬೇಕು ಎಂದು ಬಿಜೆಪಿ ಅಭ್ಯರ್ಥಿಯವರ ಅಜೆಂಡಾ ಆಗಿದೆ ಎಂದರು.

ಹಿಂದೆ ಮುರಗೇಶ ನಿರಾಣಿಯವರು ನನ್ನನ್ನು ನಿಲ್ಲಿಸಿದ್ದರು ಎಂದು ಹೇಳಿಕೆ ನೀಡಿದ್ದರು ಈಗ ಅವರನ್ನೇ ತಮ್ಮ ಚುನಾವಣೆಯಲ್ಲಿ ಪ್ರಚಾರಕ್ಕೆ ಕರೆದಿದ್ದಾರೆ. ಸುಳ್ಳಿನ ಪ್ಯಾಕೇಜನ್ನು ಬಿಜೆಪಿ ಅಭ್ಯರ್ಥಿ ನೀಡುತ್ತಾರೆ ಎಂದರು.



ಕಿರುಸುದ್ದಿ

ಲಚ್ಯಾಣದಲ್ಲಿ ಎಕ್ಸಪ್ರೆಸ್ ರೈಲು ತಾತ್ಕಾಲಿಕ ನಿಲುಗಡೆ

◆ **ಇಂಡಿ:** ತಾಲೂಕಿನ ಲಚ್ಯಾಣದಲ್ಲಿ ಜರುಗಲಿರುವ ಶ್ರೀ ಗುರು ಶಂಕರಲಿಂಗೇಶ್ವರ ಮಹಾ ರಥೋತ್ಸವ ನಿಮಿತ್ತ ಇಲ್ಲಿನ ರೈಲು ನಿಲ್ದಾಣದ ಮೂಲಕ ನಿತ್ಯ ಸಂಚರಿಸುವ ಗೋಲಗುಂಬಜ್ ಮತ್ತು ಬಸವ ಎಕ್ಸಪ್ರೆಸ್ ರೈಲುಗಳು ಏ. 6ರಿಂದ 12ರವರೆಗೆ ತಾತ್ಕಾಲಿಕವಾಗಿ ನಿಲುಗಡೆಗೆ ರಾಜ್ಯ ರೆಲ್ವೆ ಸಚಿವ ವಿ. ಸೋಮಣ್ಣ ಸಂಬಂದಿಸಿದ ರೈಲು ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.



ನಿತ್ಯ ಮೈಸೂರಿನಿಂದ ಆಂಧ್ರಪ್ರದೇಶ, ಕಲಬುರಗಿ, ಸೋಲಾಪುರ, ಲಚ್ಯಾಣ, ವಿಜಯಪುರ ಮಾರ್ಗದ ಮೂಲಕ ಬಾಗಲಕೋಟ ನಿಲ್ದಾಣ ತಲುಪುವ ಬಸವ ಎಕ್ಸಪ್ರೆಸ್ ರೈಲು ಬೆಳಿಗ್ಗೆ 7.23ಕ್ಕೆ ಲಚ್ಯಾಣದಲ್ಲಿ ನಿಲುಗಡೆಯಾಗಿ 7.24ಕ್ಕೆ ಸಂಚರಿಸಲಿದೆ. ಇದೇ ರೈಲು ಮರಳಿ ಇದೇ ಮಾರ್ಗದ ಮೂಲಕ ಸಂಚಾರಿಸಿ ಲಚ್ಯಾಣದಲ್ಲಿ ಸಂಜೆ 5.29ಕ್ಕೆ ನಿಲುಗಡೆಯಾಗಿ 5.30ಕ್ಕೆ ಸಂಚರಿಸಲಿದೆ. ಇದಲ್ಲದೆ ನಿತ್ಯ ಮೈಸೂರಿನಿಂದ ತುಮಕೂರು, ಹುಬ್ಬಳ್ಳಿ, ಬಾಗಲಕೋಟೆ, ವಿಜಯಪುರ, ಲಚ್ಯಾಣ, ಸೋಲಾಪುರ ಮಾರ್ಗದ ಮೂಲಕ ಪಂಡರಾಪುರ ತಲುಪುವ ಗೋಲಗುಂಬಜ್ ಎಕ್ಸಪ್ರೆಸ್ ರೈಲು ಬೆಳಿಗ್ಗೆ 8.29ಕ್ಕೆ ನಿಲುಗಡೆಯಾಗಿ 8.30ಕ್ಕೆ ಹೊರಡಲಿದೆ. ಸಂಜೆ 4.19ಕ್ಕೆ ನಿಲುಗಡೆಯಾಗಿ 4.20ಕ್ಕೆ ಹೊರಡಲಿದೆ. ರಾಜ್ಯ, ಹೊರರಾಜ್ಯದ ಭಕ್ತರ ಅನುಕೂಲಕ್ಕಾಗಿ ಬಂಥನಾಳ ಹಾಗೂ ಲಚ್ಯಾಣ ಮಠದ ಪ್ರಸ್ತುತ ಪೀಠಾಧೀಶರಾದ ಶ್ರೀ ಡಾ. ಪೂಜ್ಯ ವೃಷಭಲಿಂಗೇಶ್ವರ ಮಹಾಶಿವಯೋಗಿಗಳ ಅಪ್ಪಣೆಯ ಮೇರೆಗೆ ಯುವ ದುರೀಣ ಮಂಜುನಾಥ ವಂದಾಲ ನೇತೃತ್ವದಲ್ಲಿ ಗ್ರಾಮಸ್ಥರು ಸಲ್ಲಿಸಿದ ಮನವಿ ಪತ್ರಕ್ಕೆ ತುರ್ತಾಗಿ ಸ್ಪಂದಿಸಿ ಈ ಸೂಚನೆ ನೀಡಿದ್ದಾರೆ ಎಂದು ಸ್ಥಳೀಯ ಗ್ರಾಮ ಪಂಚಾಯತಿ ಮಾಜಿ ಸದಸ್ಯ ಗೌಡಪ್ಪ ಹೊಸಮನಿ ತಿಳಿಸಿದ್ದಾರೆ.

ಮೇ 5ರಂದು ದ್ಯಾಮವ್ವ ದೇವಿ ಉಡಿತುಂಬುವ ಕಾರ್ಯಕ್ರಮ

◆ **ಕೊಲ್ಹಾರ:** ಪಟ್ಟಣದ ಆರಾಧ್ಯ ದೇವತೆ ದ್ಯಾಮವ್ವ ದೇವಿಯ ಉಡಿತುಂಬುವ ಕಾರ್ಯಕ್ರಮದ ನಿಮಿತ್ತ ವಾರ ಹಿಡಿಯುವ ಪದ್ಧತಿಯಂತೆ ಈ ವರುಷ ಪ್ರಥಮ ವಾರ ಏ.7, 14, 21, 28ರಂದು ವಾರ ಹಿಡಿಯುತ್ತಿದ್ದು, ಮೇ 5ರ ಕಡೆ ಮಂಗಳವಾರದಂದುಉಡಿ ತುಂಬುವ ಕಾರ್ಯಕ್ರಮ ಹಮ್ಮಿಕೊಂಡಿದ್ದು, ಪಟ್ಟಣದ ಸರ್ವ ಜನಾಂಗದ ನಾಗರಿಕರು, ಮಹಿಳೆಯರು, ಆಯಾ ವಾರ ಹಿಂದಿನ ಹಿರಿಯರು ಹಾಕಿಕೊಟ್ಟ ವಾರದ ನಿಯಮಗಳನ್ನು ಕಟ್ಟು ನಿಟ್ಟಾಗಿ ಪಾಲಿಸಿ ಆಚರಣೆ ಮಾಡಿ ದೈವಿ ಕೃಪೆಗೆ ಪಾತ್ರರಾಗಬೇಕು ಎಂದು ಶ್ರೀ ದ್ಯಾಮವ್ವ ದೇವಿ ದೇವಸ್ಥಾನ ಸಮಿತಿ ಕೊಲ್ಹಾರ ಪ್ರಕಟಣೆಯಲ್ಲಿ ತಿಳಿಸಿದೆ.

ಫಿಲೋಮಿನಾಗೆ ಪಿಎಚ್‌ಡಿ

◆ **ವಿಜಯಪುರ:** ಇಲ್ಲಿನ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯವು ಫಿಲೋಮಿನಾ ಅವರು ಸಲ್ಲಿಸಿದ್ದ ಇಂಪ್ಯಾಕ್ಟ್ ಆಫ್ ಒಟಿಟಿ ಪ್ಲಾಟ್‌ಫಾರ್ಮ್ಸ್ ಆನ್ ಅಡೋಲೆಸೆಂಟ್ಸ್: ಎ ಕೇಸ್ ಸ್ಟಡಿ ಆಫ್ ಕರ್ನಾಟಕ ಮಹಾಪ್ರಬಂಧಕ್ಕೆ ಪಿಎಚ್‌ಡಿ ಪದವಿ ನೀಡಿದೆ.



ಫಿಲೋಮಿನಾ ಅವರು ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ಡಾ. ತಹಮೀನಾ ನಿಗಾರ್ ಸುಲ್ತಾನಾ ಅವರ ಮಾರ್ಗದರ್ಶನದಲ್ಲಿ ಸಂಶೋಧನೆ ಕೈಗೊಂಡಿದ್ದರು. ಡಾಕ್ಟರೇಟ್ ಪದವಿ ಪಡೆದಿರುವ ಫಿಲೋಮಿನಾ ಅವರನ್ನು ಕುಲಪತಿ ಪ್ರೊ.ವಿಜಯಾ ಕೋರಿಶೆಟ್ಟಿ, ಕುಲಸಚಿವ ಶಂಕರಗೌಡ ಸೋಮನಾಳ, ಮೌಲ್ಯಮಾಪನ ಕುಲಸಚಿವ ಪ್ರೊ.ಬಿ.ಎಲ್. ಲಕ್ಕಣ್ಣನವರ ಅಭಿನಂದಿಸಿದ್ದಾರೆ.

ಸುಷ್ಮಾ ಪವಾರಗೆ ಪಿಎಚ್‌ಡಿ

◆ **ವಿಜಯಪುರ:** ಇಲ್ಲಿನ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯವು ಸುಷ್ಮಾ ಪವಾರ ಅವರು ಸಲ್ಲಿಸಿದ್ದ ಕ್ರೆಡಿಬಿಲಿಟಿ, ಸಸ್ಟೇನಬಿಲಿಟಿ ಆ್ಯಂಡ್ ಗ್ರಾಟಿಫಿಕೇಶನ್ ಆಫ್ ಹೆಲ್ತ್ ಕಮ್ಯುನಿಕೇಶನ್ ಆನ್ ಸೋಶಿಯಲ್ ಮೀಡಿಯಾ: ಆನ್ ಎಕ್ಸ್‌ಪ್ಲೋರೇಟರಿ ಸ್ಟಡಿ ಅಮಾಂಗ್ ವುಮನ್ ಮಹಾಪ್ರಬಂಧಕ್ಕೆ ಪಿಎಚ್‌ಡಿ ಪದವಿ ನೀಡಿದೆ.



ಸುಷ್ಮಾ ಪವಾರ ಅವರು ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ಮುಖ್ಯಸ್ಥ ಪ್ರೊ. ಓಂಕಾರ ಕಾಕಡೆ ಅವರ ಮಾರ್ಗದರ್ಶನದಲ್ಲಿ ಸಂಶೋಧನೆ ಕೈಗೊಂಡಿದ್ದರು. ಡಾಕ್ಟರೇಟ್ ಪದವಿ ಪಡೆದಿರುವ ಸುಷ್ಮಾ ಪವಾರ ಅವರನ್ನು ಕುಲಪತಿ ಪ್ರೊ.ವಿಜಯಾ ಕೋರಿಶೆಟ್ಟಿ, ಕುಲಸಚಿವ ಶಂಕರಗೌಡ ಸೋಮನಾಳ, ಮೌಲ್ಯಮಾಪನ ಕುಲಸಚಿವ ಪ್ರೊ.ಬಿ.ಎಲ್. ಲಕ್ಕಣ್ಣನವರ ಅಭಿನಂದಿಸಿದ್ದಾರೆ.



ವಿಜಯಪುರ: ಬಾಗಲಕೋಟೆ ಮತಕ್ಷೇತ್ರದ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಉಮೇಶ ಮೇಟಿ ಪರವಾಗಿ ವಿಜಯಪುರ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಲೋಣಿ ನೇತೃತ್ವದಲ್ಲಿ ಪ್ರಚಾರ ನಡೆಸಿದರು. ಜಿಲ್ಲಾ ಕಾಂಗ್ರೆಸ್ ಸಮಿತಿ ಪ್ರಧಾನ ಕಾರ್ಯದರ್ಶಿ ಎಂ.ಎಂ. ಮುಲ್ಲಾ, ದೇಸು ಚವ್ಹಾಣ ಇದ್ದರು.

ನೇತ್ರ, ಮೂಳೆ, ಕೀಲು ಉಚಿತ ತಪಾಸಣೆ ಶಿಬಿರ

◆ **ದೇವರಹಿಪ್ಪರಗಿ:** ಸತ್ಕಾರ್ಯವೇ ಸೌಭಾಗ್ಯ ಎನ್ನುವಂತೆ ಬಡಜನರ ಹಾಗೂ ನಿರ್ಗತಿಕರ ಸೇವೆ ಮಾಡುವುದು ನಿಜವಾದ ಸೇವೆ ಎನಿಸಿಕೊಳ್ಳುತ್ತದೆ ಎಂದು ವಿಜಯಪುರದ ಬಾಲಾಜಿ ಆಸ್ಪತ್ರೆಯ ಸಂಸ್ಥಾಪಕ ಡಾ.ಶ್ರೀಪಾದ ಕುಲಕರ್ಣಿ ಅವರು ಹೇಳಿದರು.

ತಾಲೂಕಿನ ಮುಳಸಾವಳಗಿ ಗ್ರಾಮದ ಶ್ರೀಶೈಲ ಮಲ್ಲಿಕಾರ್ಜುನನ ಐದೇಶಿ ಜಾತ್ರಾ ಮಹೋತ್ಸವದ ಅಂಗವಾಗಿ ಶನಿವಾರ ಆಯೋಜಿಸಿದ್ದ ಉಚಿತ ನೇತ್ರ ತಪಾಸಣೆ ಮತ್ತು ಮೂಳೆ ಹಾಗೂ ಕೀಲು ತಪಾಸಣೆ ಶಿಬಿರದ ನೇತೃತ್ವವನ್ನು ವಹಿಸಿ ಅವರು ಮಾತನಾಡಿದರು. ನಂತರ ಸುಮಾರು 110 ಜನರ ಮೂಳೆ ತಪಾಸಣೆ ಹಾಗೂ 115 ಜನರ ನೇತ್ರ ತಪಾಸಣೆಯನ್ನು ಮಾಡಲಾಯಿತು. ನೇತ್ರ ಶಸ್ತ್ರಚಿಕಿತ್ಸೆಗೆ ಅರ್ಹರಾದ 15 ಜನರನ್ನು ಅನುಗ್ರಹ ಆಸ್ಪತ್ರೆಯ ವತಿಯಿಂದ ಉಚಿತವಾಗಿ ಶಸ್ತ್ರಚಿಕಿತ್ಸೆ ಮಾಡಲು ನಿರ್ಧರಿಸಲಾಯಿತು.

ಶಿಬಿರದಲ್ಲಿ ಪಾಲ್ಗೊಂಡ ಅನುಗ್ರಹ ಹಾಗೂ ಬಾಲಾಜಿ ಆಸ್ಪತ್ರೆಯ ಸಿಬ್ಬಂದಿಗಳನ್ನು ಜಾತ್ರಾ ಸಮೀತಿಯ ವತಿಯಿಂದ ಗೌರವಪೂರ್ವಕವಾಗಿ ಸನ್ಮಾನಿಸಲಾಯಿತು. ಸಂದರ್ಭದಲ್ಲಿ ಪಿಕೆಪಿಎಸ್ ಅಧ್ಯಕ್ಷ ಸಂಗನಗೌಡ ಬಿರಾದಾರ, ಅನುಗ್ರಹ ಆಸ್ಪತ್ರೆಯ ಸಂಗನಗೌಡ ಪಾಟೀಲ, ಹಣಮಂತ ಹಿರೂರ, ಜಿ.ಪಿ.ಬಿರಾದಾರ ಮಾತನಾಡಿದರು.

ಇದೇ ಸಂದರ್ಭದಲ್ಲಿ ಸಾಹೇಬಗೌಡ ಬಂಥನಾಳ, ವಿರುಪಾಕ್ಷಿ ರೋಡಗಿ, ಶ್ರೀಶೈಲ ಹದರಿ, ಶ್ರೀಶೈಲ ಮಠಪತಿ, ದಾನಯ್ಯ ಮಠಪತಿ, ಮಲ್ಲನಗೌಡ ಬಿರಾದಾರ, ಕಂಠೆಪ್ಪಗೌಡ ಬಿರಾದಾರ, ಸಂಗು ಬಂಥನಾಳ, ಕಿರಣ ಗಬ್ಬೂರ, ನಿತಿನ ಉಕುಮನಾಳ, ಸಿದ್ದಲಿಂಗ ಸಾತಿಹಾಳ, ನಾಗರಾಜ ಹದರಿ ಸೇರಿದಂತೆ ಗ್ರಾಮಸ್ಥರು ಭಾಗವಹಿಸಿದ್ದರು.



ದೇವರಹಿಪ್ಪರಗಿ: ತಾಲೂಕಿನ ಮುಳಸಾವಳಗಿ ಗ್ರಾಮದ ಶ್ರೀಶೈಲ ಮಲ್ಲಿಕಾರ್ಜುನನ ಐದೇಶಿ ಜಾತ್ರಾ ಮಹೋತ್ಸವದ ಅಂಗವಾಗಿ ಶನಿವಾರದಂದು ಉಚಿತ ನೇತ್ರ ತಪಾಸಣೆ ಮತ್ತು ಮೂಳೆ ಹಾಗೂ ಕೀಲು ತಪಾಸಣೆ ಶಿಬಿರ ನಡೆಯಿತು. ವಿಜಯಪುರದ ಬಾಲಾಜಿ ಆಸ್ಪತ್ರೆಯ ಸಂಸ್ಥಾಪಕ ಡಾ.ಶ್ರೀಪಾದ ಕುಲಕರ್ಣಿ, ಪಿಕೆಪಿಎಸ್ ಅಧ್ಯಕ್ಷ ಸಂಗನಗೌಡ ಬಿರಾದಾರ, ಅನುಗ್ರಹ ಆಸ್ಪತ್ರೆಯ ಸಂಗನಗೌಡ ಪಾಟೀಲ, ಹಣಮಂತ ಹಿರೂರ, ಜಿ.ಪಿ.ಬಿರಾದಾರ ಮತ್ತಿತರರು ಇದ್ದರು.

ನಾಗಠಾಣ ಶಾಸಕ ವಿಠ್ಠಲ ಕಟಕಧೋಂಡ ಅಭಿಮತ

ಹಸಿರು ಕ್ರಾಂತಿಯ ಹರಿಕಾರ ಡಾ. ಜಗಜೀವನ ರಾಂ

◆ **ವಿಜಯಪುರ:** ಡಾ. ಬಾಬು ಜಗಜೀವನ ರಾಂ ಕೃಷಿ ಕ್ಷೇತ್ರದಲ್ಲಿ ಹೊಸ ಹೊಸ ಆವಿಷ್ಕಾರ ಮಾಡಿ, ಕೃಷಿ ಪದ್ಧತಿಗಳಲ್ಲಿ ಆಧುನಿಕತೆಯನ್ನು ಬಳಸಿ ಕೃಷಿ ಉತ್ಪನ್ನಗಳ ಉತ್ಪಾದನೆಯನ್ನು ಹೆಚ್ಚಿಸಿ ದೇಶದ ಆಹಾರ ಭದ್ರತೆಗೆ ನಾಂದಿ ಹಾಡಿದ ಮಹಾನ್ ಚಿಂತಕ, ಹಸಿರು ಕ್ರಾಂತಿಯ ಹರಿಕಾರರಾಗಿದ್ದರು ಎಂದು ನಾಗಠಾಣ ಶಾಸಕ ವಿಠ್ಠಲ ಕಟಕಧೋಂಡ ಹೇಳಿದರು.

ನಗರದ ಕಂದಗಲ್ ಹನುಮಂತರಾಯ ರಂಗಮಂದಿರದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ಹಾಗೂ ಸಮಾಜ ಕಲ್ಯಾಣ ಇಲಾಖೆ ಆಶ್ರಯದಲ್ಲಿ ಭಾನುವಾರ ಹಮ್ಮಿಕೊಂಡ ಡಾ. ಬಾಬು ಜಗಜೀವನ ರಾಂ ಅವರ 119ನೇ ಜಯಂತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಇಂತಹ ಮಹನೀಯರನ್ನು ನಾವು ಪ್ರತಿನಿತ್ಯ ನೆನೆಪಿಸಿಕೊಳ್ಳಬೇಕು. ಅಂದಾಗ ಅವರ ಚಿಂತನೆಗಳು ಸಾಕಾರಗೊಳ್ಳುತ್ತವೆ. ಶೋಷಿತರ ಸಮಸ್ಯೆಗಳ, ಅನ್ಯಾಯಗಳ ವಿರುದ್ಧ ಹಾಗೂ ಸಮ ಸಮಾಜಕ್ಕಾಗಿ ಹೋರಾಡಿದ ಡಾ. ಬಾಬಾಸಾಹೇಬ ಅಂಬೇಡ್ಕರ್ ಹಾಗೂ ಡಾ. ಬಾಬು ಜಗಜೀವನ ರಾಂ ಅವರು ನಮ್ಮ ದೇಶದ ಎರಡು ಕಣ್ಣುಗಳಿದ್ದಂತೆ ಎಂದರು.

ಕೃಷಿ ಸಚಿವರಾಗಿ ಕೃಷಿ ಕ್ಷೇತ್ರದಲ್ಲಿ ಮಹತ್ವದ ಬದಲಾವಣೆ ತಂದು ಆಹಾರ ಉತ್ಪಾದನೆಯಲ್ಲಿ ಗಣನೀಯ ಹೆಚ್ಚಳ ಮಾಡಿ, ದೇಶದ ಆರ್ಥಿಕತೆಗೆ ಮತ್ತಷ್ಟು ಶಕ್ತಿ ತುಂಬಿ, ಹಸಿರು ಕ್ರಾಂತಿಯ ಯಶಸ್ವಿಗೆ ಕಾರಣೀಕರ್ತರಾದರು ಎಂದರು.

ತಮ್ಮ ನಿರಂತರ ಹೋರಾಟಗಳ ಮೂಲಕ ದೇಶದ ಅಭಿವೃದ್ಧಿಗೆ ಶ್ರಮಿಸಿದ ಮಹಾನ್ ವ್ಯಕ್ತಿಗಳಾಗಿದ್ದ ಡಾ.ಜಗಜೀವನ ರಾಂ ಅವರ ಚಿಂತನೆಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳೋಣ. ಅಪ್ಪಟ ದೇಶ ಪ್ರೇಮಿಯಾದ ಬಾಬು ಜಗಜೀವನ ರಾಂ ಅವರು ಏಪ್ರಿಲ್ 1908 ಬಿಹಾರದ ಛಂದ್ವಾ ಗ್ರಾಮದಲ್ಲಿ ಹುಟ್ಟಿದರು. ಅವರು ಹುಟ್ಟಿದಂದಿನದ ಜೀವಿತಾವಧಿಯುದ್ದಕ್ಕೂ ಮಾಡಿದ ಅವರ ಸಾಧನೆಗಳು ಸದಾ ಹೊಳೆಯುತ್ತಿವೆ. ಸಮಾಜ ಸುಧಾರಣೆ, ಅಸ್ಪೃಶ್ಯತೆ ನಿವಾರಣೆಗೆ ಅವರು ಮಾಡಿದ ಕಾರ್ಯ ಅಸಾಧಾರಣವಾದುದು ಎಂದರು.



> **ಡಾ. ಬಾಬು ಜಗಜೀವನ ರಾಂ ಅವರು ತಮ್ಮ ಆಡಳಿತಾವಧಿಯಲ್ಲಿ ಸಾಕಷ್ಟು ಸುಧಾರಣೆಗಳನ್ನು ತಂದಿದ್ದಾರೆ. ರಕ್ಷಣಾ ಮಂತ್ರಿಗಳಾಗಿ ದೇಶದ ರಕ್ಷಣೆಗೆ ಮಹತ್ವದ ಕಾಯಿದೆಗಳನ್ನು ಜಾರಿಗೆ ತಂದರು.**
> ■ **ವಿಠ್ಠಲ ಕಟಕಧೋಂಡ. ಶಾಸಕ**

ಪ್ರೊ. ಲಕ್ಷ್ಮೀದೇವಿ ಉಪನ್ಯಾಸ ನೀಡಿ ಮಾತನಾಡಿ, ಡಾ. ಜಗಜೀವನ ರಾಂಅವರು ಪ್ರಬುದ್ಧ ರಾಜನೀತಿಜ್ಞ ಆಗಿದ್ದರು. ಜೊತೆಗೆ ಅವರು ಬದುಕು ಆದರ್ಶ, ಅವರ ಜೀವನವೇ ನಮಗೆಲ್ಲ ದಾರಿ ದೀಪವಾಗಿದೆ ಎಂದರು.

ಕಾರ್ಯಕ್ರಮಕ್ಕೂ ಮುನ್ನ ಸಂವಿಧಾನ ಪೀಠಿಕೆ ಬೋಧಿಸಲಾಯಿತು. ಜಿಲ್ಲಾಧಿಕಾರಿ ಡಾ. ಆನಂದ ಕೆ., ಜಿಪಂ ಸಿಇಒ ರಿಷಿ ಆನಂದ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮಣ ನಿಂಬರಗಿ, ವಿಜಯಪುರ ಉಪ ವಿಭಾಗಾಧಿಕಾರಿ ಗುರುನಾಥ ದಡ್ಡೆ, ಮಹಾನಗರ ಪಾಲಿಕೆ ಆಯುಕ್ತ ವಿಜಯ ಮೆಕ್ಕಳಕಿ, ಜಿಲ್ಲಾ ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕ ಮಹೇಶ ಪೋತದಾರ, ಮುಖಂಡರಾದ ಅಡಿವೆಪ್ಪ ಸಾಲಗಲ್, ಭೀಮರಾಯ ಜಿಗಜಿಣಗಿ, ಶ್ರೀನಿವಾಸ ಶಹಾಪೂರ, ಪರಶುರಾಮ ರೋಣಿಹಾಳ ಇತರರು ಇದ್ದರು.

ಡಾ. ಬಾಬು ಜಗಜೀವನ್ ರಾಮ್ ಭಾವಚಿತ್ರದ ಮೆರವಣಿಗೆ ಹಮ್ಮಿಕೊಳ್ಳಲಾಯಿತು.

41ನೇ ದಿನಕ್ಕೆ ಕಾಲಿಟ್ಟ ಅನಿರ್ದಿಷ್ಟಾವಧಿ ಧರಣಿ

◆ **ತಾಳಿಕೋಟಿ:** ತಾಲೂಕಿನ ಮೈಲೇಶ್ವರ ಗ್ರಾಮದ ಬಳಿ ನಿರ್ಮಿಸಲು ಉದ್ದೇಶಿಸಿರುವ 'ಪ್ರಜಾಸೌಧ'ದ ಸ್ಥಳ ಆಯ್ಕೆಯನ್ನು ವಿರೋಧಿಸಿ ನಡೆಯುತ್ತಿರುವ ಅನಿರ್ದಿಷ್ಟಾವಧಿ ಧರಣಿ ಸತ್ಯಾಗ್ರಹವು ಭಾನುವಾರ 40ನೇ ದಿನಕ್ಕೆ ಯಶಸ್ವಿಯಾಗಿ ಮುಂದುವರಿಯಿತು. ಈ ಹೋರಾಟಕ್ಕೆ ತಾಲೂಕಿನ ತುಂಬಗಿ ಗ್ರಾಮದವರಿಂದ ಸಂಪೂರ್ಣ ಬೆಂಬಲ ಘೋಷಿಸಿ ಧರಣಿಯಲ್ಲಿ ಭಾಗವಹಿಸಿತು.

ಪಟ್ಟಣದ ಬಸವೇಶ್ವರ ವೃತ್ತದ ಬಳಿ ನಡೆಯುತ್ತಿರುವ ಸತ್ಯಾಗ್ರಹದಲ್ಲಿ ಪಾಲ್ಗೊಂಡ ಮುಖಂಡರು ನಿರ್ಜನ ಪ್ರದೇಶದಲ್ಲಿ ಸೌಧ ಬೇಡ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಜಿಲ್ಲಾ ಉಸ್ತುವಾರಿ ಸಚಿವರ ನಡೆಗೆ ಅಸಮಾಧಾನ ವ್ಯಕ್ತಪಡಿಸಿದ ತಾಲೂಕು ಹೋರಾಟ ಸಮಿತಿಯ ಸಹ ಕಾರ್ಯದರ್ಶಿ ಮಹೇಶ ಛಲವಾದಿ, ಜಿಲ್ಲಾ ಉಸ್ತುವಾರಿ ಸಚಿವರು ಕೇವಲ ಬಬಲೇಶ್ವರ ಅಥವಾ ತಿಕೋಟಾಕ್ಕೆ ಸೀಮಿತರಲ್ಲ, ಅವರು ಇಡೀ ಜಿಲ್ಲೆಗೆ ಜವಾಬ್ದಾರರು. 40 ದಿನಗಳಿಂದ ಜನ ರಸ್ತೆಯಲ್ಲಿ ಕುಳಿತು ಪ್ರತಿಭಟಿಸುತ್ತಿದ್ದರೂ ಸಚಿವರು ಕಣ್ಣು ಮುಚ್ಚಿ ಕುಳಿತಿರುವುದು ವಿಷಾದನೀಯ. ಇಲ್ಲಿ ಜಾಗ ದಾನ ನೀಡಿದವರ ಹಿಂದೆ ಸ್ವಹಿತಾಸಕ್ತಿಯಿದ್ದು, ತಮ್ಮ ಜಮೀನುಗಳನ್ನು ವಾಣಿಜ್ಯೀಕರಣಗೊಳಿಸುವ ಉದ್ದೇಶದಿಂದ ಈ ಸಂಚು ರೂಪಿಸಲಾಗಿದೆ'' ಎಂದು ಗಂಭೀರ ಆರೋಪ ಮಾಡಿದರು.

ತುಂಬಗಿ ಗ್ರಾಮದ ಹಿರಿಯರಾದ ಎ. ಬಿ. ಬಿರಾದಾರ ಬಿ. ಎಂ. ಕೊಳ್ಳಿ, ಬಸನಗೌಡ ಬಿರಾದಾರ, ಹನುಮಂತ ಮಂಗ್ಯಾಳ, ಬಸನಗೌಡ ಮಂಗ್ಯಾಳ, ವೀರಗಂಟೆಪ್ಪ ಬಿ. ಚೌದರಿ, ಮಲ್ಲಣ್ಣ ತುಂಬಗಿ, ಹನುಮಂತರಾಯ ಬಿರಾದಾರ, ಬಸನಗೌಡ ಬಿರಾದಾರ, ಅನೇಕರು ಹಾಜರಿದ್ದರು.

ಹೋರಾಟ ಸಮಿತಿಯ ಅಧ್ಯಕ್ಷ ದಶರಥಸಿಂಗ್ ಮನಗೂಳಿ, ಎಸ್.ಬಿ. ಕಟ್ಟಿಮನಿ, ಆರ್.ಎಸ್. ಪಾಟೀಲ (ಕುಚಬಾಳ) ಮುತ್ತಪ್ಪ ಚಮಲಾಪುರ, ಕಾಶೀನಾಥ ಮುರಾಳ, ಮುರಿಗೆಪ್ಪ ಸರಶೆಟ್ಟಿ, ದತ್ತು ಹೆಬಸೂರ, ಪರಶುರಾಮ ತಂಗಡಗಿ, ನಾಗೇಶ ಕಟ್ಟಿಮನಿ, ದೇವೇಂದ್ರ ಹಾದಿಮನಿ, ವಿಜಯಸಿಂಗ್ ಹಜೇರಿ, ಮಹೇಶ ಛಲವಾದಿ, ಪ್ರಕಾಶ್ ಹಜೇರಿ ಮುದಕಪ್ಪ ಬಡಿಗೇರ, ಸಿರಸಕುಮಾರ ಹಜೇರಿ, ಮಲ್ಲು ಮೇಟಿ, ಸದ್ದಾಂ ಹುಸೇನ್ ಬೀಳಗಿ, ಸೇರಿದಂತೆ ಅನೇಕರು ಮತ್ತು ಪಟ್ಟಣದ ಗಣ್ಯರು ಭಾಗವಹಿಸಿದ್ದರು.




ಬೋರವೆಲ್ ಪಕ್ಕದಲ್ಲಿ ಚರಂಡಿ: ಆಕ್ರೋಶ

▸ **ನಾಗೇಶ ಮ.ನಾಗೂರ**

◆ **ಬಸವನಬಾಗೇವಾಡಿ:** ಗಾಂಧಿ ಗ್ರಾಮ ಪುರಸ್ಕಾರ ಪ್ರಶಸ್ತಿ ಪುರಸ್ಕೃತ ತಾಲೂಕಿನ ಮುತ್ತಗಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ನಾಗವಾಡ ಗ್ರಾಮದ ಲಕ್ಕಮ್ಮದೇವಿ ಗುಡಿಯ ಮುಂದೆ ಇರುವ ಗ್ರಾಮಸ್ಥರಿಗೆ ಕುಡಿಯುವ ನೀರು ಪೂರೈಕೆಯಾಗುವ ಬೋರವೆಲ್ ಪಕ್ಕದಲ್ಲಿಯೇ ಮನೆ ಬಚ್ಚಲ ನೀರು ಶೇಖರಣೆಗೊಂಡಿದ್ದು, ಇದ್ದರಿಂದ ಸೊಳ್ಳೆಗಳು ಉತ್ಪತ್ತಿಯ ತಾಣವಾಗಿದೆ. ಇದೇ ಬೋರವೆಲ್ ನೀರು ಗ್ರಾಮಸ್ಥರಿಗೆ ಪೂರೈಕೆಯಾಗುತ್ತಿರುವುದಕ್ಕೆ ಗ್ರಾಮಸ್ಥರು ಗ್ರಾಪಂ ಸದಸ್ಯರ ಹಾಗೂ ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

12 ನೂರು ಜನಸಂಖ್ಯೆಯುಳ್ಳ ನಾಗವಾಡ ಗ್ರಾಮಕ್ಕೆ ಕುಡಿಯುವ ನೀರಿಗಾಗಿ 3 ಕೊಳವೆ ಬಾವಿಗಳಿದ್ದು, 2 ಕೊಳವೆ ಬಾವಿಗಳಲ್ಲಿ ನೀರು ಎತ್ತುವ ವಿದ್ಯುತ್ ಮೋಟಾರ್ ಮೇಲೆ ಬರದೇ ಕೊಳವೆಬಾವಿಯಲ್ಲಿ ಸಿಕ್ಕಿಹಾಕಿಕೊಂಡು ನಮಗೆ ಇದು ಒಂದೇ ಬೋರಿನ ನೀರು ಕುಡಿಯಲು ಯೋಗ್ಯವಾಗಿದೆ. ಈ ಬೋರವೆಲ್ ಪಕ್ಕದಲ್ಲಿಯೇ ಗ್ರಾಮಸ್ಥರ ಒಬ್ಬರ ಮನೆಯ ಬಚ್ಚಲ ನೀರು ಶೇಖರಣೆಗೊಂಡು ಕೊಳವೆ ಬಾವಿಯಲ್ಲಿ ನೀರು ಪೋಲಾಯಿಸುತ್ತದೆ. ಅಷ್ಟೇಲ್ಲದೆ ಬೋರವೆಲ್‌ಗೆ ಹಾಕಲಾದ ಜೆಐ ಕಬ್ಬಿಣದ ಪೈಪ್ ತುಕ್ಕು ಹಿಡಿದು ಹಸಿರುಗಟ್ಟಿದೆ ಇದನ್ನು ನೋಡಿದ ಗ್ರಾಮಸ್ಥರು ಭಯಭೀತರಾಗಿದ್ದಾರೆ. ಮಾರುತೇಶ್ವರ ದೇವಸ್ಥಾನದ ಕಂಪೌಂಡ್ ಪಕ್ಕದಲ್ಲಿಯೇ ತಿಪ್ಪೆ ಹಾಕಿದ್ದರಿಂದ ಗ್ರಾಮಸ್ಥರು ಮೂಗು ಮುಚ್ಚಿಕೊಂಡು ತಿರುಗಾಡುವತ್ತಾಗಿದೆ.

> **ಗ್ರಾಮಸ್ಥರ ಆರೋಪ**
> **ಜಾಲಗಾರ ಎನ್ನುವ ಮನೆಯವರು ತಮ್ಮ ಮನೆಯ ಚರಂಡಿ ನೀರು ತಮ್ಮ ಮನೆಯಿಂದ ಪೈಪ್‌ಲೈನ್ ಮಾಡಿಕೊಂಡು ಬಂದು ಚರಂಡಿಗೆ ಸೇರಿಸದೆ ಊರಿನಲ್ಲಿ ಬರುವ ಕುಡಿಯುವ ನೀರಿನ ಬೋರವೆಲ್ ಪಕ್ಕದಲ್ಲಿ ತೆಗ್ಗಿಗೆ ಬಿಟ್ಟಿದ್ದು, ಇದು ಬೋರಿನ ನೀರಿಗೆ ಸೇರಿವುದರಿಂದ ನೀರು ನಾವೆಲ್ಲ ಕುಡಿಯುವಂತಾಗಿದೆ ಎಂದು ಗ್ರಾಮದ ಮುಖಂಡರಾದ ಯಮುನಪ್ಪಗೌಡ ಹಂಗರಗಿ, ರಾಮನಗೌಡ ಬಿರಾದಾರ, ಬೋಜು ಪವಾರ, ಕುಮಾರ ಪವಾರ, ಶೇಖು ಚವ್ಹಾಣ ಸೇರಿ ಗ್ರಾಮಸ್ಥರ ಆರೋಪವಾಗಿದೆ.**



ಅಧ್ಯಯನ ಪ್ರವೃತ್ತಿ ನಿರಂತರವಾಗಿರಲಿ

◆ **ಮುದ್ದೇಬಿಹಾಳ:** ಕೃತಕ ಬುದ್ಧಿಮತ್ತೆ ಯುಗದಲ್ಲಿ ವಿದ್ಯಾರ್ಥಿಗಳಿಗೆ ಮೊದಲಿನಂತೆ ಇಂಗ್ಲಿಷ್ ಭಾಷೆ ಕಲಿಯುವುದು ಮಾತ್ರ ಸವಾಲು ಅಲ್ಲ ಜೊತೆಗೆ ಯಂತ್ರ ಕಲಿಕೆ, ಗುಂಪು ಕಲಿಕೆ ಹಾಗೂ ನಿರಂತರ ಕಲಿಕೆಯ ಸಮಸ್ಯೆಗಳು ಎದುರಾಗುತ್ತಿವೆ. ಹೀಗಾಗಿ ಅಧ್ಯಯನ ಪ್ರವೃತ್ತಿ ವಿದ್ಯಾರ್ಥಿಗಳಲ್ಲಿ ನಿರಂತರವಾಗಿ ಬೆಳೆಯಬೇಕಿದೆ ಎಂದು ಬೆಂಗಳೂರು ಎಂವಿಜೆ ವೈದ್ಯಕೀಯ ಕಾಲೇಜಿನ ಡಾ. ಬಸವರಾಜ ಅಸ್ಕಿ ಹೇಳಿದರು.

ತಾಲೂಕಿನ ನಾಗರಬೆಟ್ಟ ಆಕ್ಸ್‌ಫರ್ಡ್ ಪಾಟೀಲ್ ಕಾಲೇಜಿನ ವೈದ್ಯಕೀಯ ಪರೀಕ್ಷೆಯಲ್ಲಿ ಪಾಸಾದ ವಿದ್ಯಾರ್ಥಿಗಳ ವಾರ್ಷಿಕ ಪ್ರತಿಭಾ ಪುರಸ್ಕಾರ ಹಾಗೂ ಆಕ್ಸ್‌ಫರ್ಡ್ ಜೀನಿಯಸ್ ಪ್ರಶಸ್ತಿ ಸಮಾರಂಭದಲ್ಲಿ ಮಾತನಾಡಿದರು.

ಕಾರ್ಯಕ್ರಮ ಉದ್ಘಾಟಿಸಿದ ರಾಜ್ಯ ಅಕ್ಕಮಹಾದೇವಿ ವಿಶ್ವವಿದ್ಯಾಲಯದ ಕುಲಸಚಿವ ಶಂಕರಗೌಡ ಸೋಮನಾಳ, ಪೋಷಕರ ಆಸೆಯನ್ನು ತೀರಿಸುವ ಜವಾಬ್ದಾರಿ ಮಕ್ಕಳಲ್ಲಿ ಇದೆ ಅದರ ಜೊತೆ ತಮ್ಮ ಜೀವನವನ್ನು ರೂಪಿಸಿಕೊಳ್ಳುವ ಯಾವ ವಿಷಯಕ್ಕೆ ಆದ್ಯತೆ ಕೊಡಬೇಕು ಎಂದು ತಿಳಿದುಕೊಂಡಿರಬೇಕು. ಗ್ರಾಮೀಣ ಭಾಗದ ಕೃಷಿ, ಕಾರ್ಮಿಕ ಮತ್ತು ಬಡ ವರ್ಗದ ವಿದ್ಯಾರ್ಥಿಗಳು ವೈದ್ಯಕೀಯ ಇಂಜಿನಿಯರಿಂಗ್ ಸೇರದಂತೆ ಹಲವು ಕ್ಷೇತ್ರದಲ್ಲಿ ಆಕ್ಸ್‌ಫರ್ಡ್ ಸಂಸ್ಥೆಯ ಸಾಧನೆ ಅಭೂತಪೂರ್ವ ಎಂದು ಮಾತನಾಡಿದರು.

ಆಕ್ಸ್‌ಫರ್ಡ್ ಪಾಟೀಲ್ ಸಂಸ್ಥೆಯ ಆಡಳಿತ ಅಧಿಕಾರಿ ಅಮಿತ್ ಗೌಡ ಪಾಟೀಲ್ ಮಾತನಾಡಿ, ಬಡ ಮತ್ತು ಪ್ರತಿಭಾವಂತ ವಿದ್ಯಾರ್ಥಿಗಳಲ್ಲಿ ಅವಕಾಶ ಹಾಗೂ ಹಣದ ಕೊರತೆ ಇರುತ್ತದೆ. ಹೀಗಾಗಿ ನಮ್ಮ ಸಂಸ್ಥೆಯ ವತಿಯಿಂದ ಪ್ರತಿ ವರ್ಷ 3 ಕೋಟಿ ರೂ.ವಿದ್ಯಾರ್ಥಿವೇತನ ನೀಡುವ ಮೂಲಕ ಎಲ್ಲರೂ ಕಲಿಕೆಯಲ್ಲಿ ಭಾಗವಹಿಸಲು ಅವಕಾಶ ಮಾಡಿಕೊಡಲಾಗುತ್ತದೆ. ಪ್ರತಿಭೆ ಇದ್ದಾಗ ಅವಕಾಶ ದೊರೆಯದಂತೆ ಆಗಲು ನಮ್ಮ ಸಂಸ್ಥೆ ಬಿಡುವುದಿಲ್ಲ ಎಂದು ಭರವಸೆ ನೀಡಿದರು.



ಸಮಾರಂಭದಲ್ಲಿ ಬಿದನೂರು, ಕಂಠಿ ಮಠದ ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ ಸಾನಿಧ್ಯ ವಹಿಸಿದ್ದರು. ದೇವಿಕಾ ಸುಬ್ಬರಾವ್ ಸಂಸ್ಥೆಯ ಪಲ್ಲವಿ ನಾಡಗೌಡ, ಸಮಾಜ ಸೇವಕ ಶಾಂತಗೌಡ ಪಾಟೀಲ್, ಇಲಕಲ್ ವಿಜಯ ಮಹಾಂತೇಶ್ ಮಹಾವಿದ್ಯಾಲಯದ ಡಾ. ಎಸ್.ವಿ. ಬಿರಾದಾರ ಮಾತನಾಡಿದರು, ಶಿಕ್ಷಕ ಸಂಗಮೇಶ ಹೂಗಾರ, ಶಿವಾಜಿ ಮೆಟಗಾರ ವಿಶೇಷ ಅತಿಥಿಗಳಾಗಿ, ಆಡಳಿತ ಅಧಿಕಾರಿ ಅಮಿತ್ ಗೌಡ ಪಾಟೀಲ್, ದರ್ಶನ್ ಪಾಟೀಲ್ ಭಾಗವಹಿಸುವರು. ರಾಜ್ಯದ ವಿವಿಧ ಭಾಗಗಳಿಂದ ಆಗಮಿಸಿದ್ದ ಸಾವಿರಾರು ವಿದ್ಯಾರ್ಥಿಗಳು ಪ್ರಶಸ್ತಿ ಸ್ಪರ್ಧಾ ಪರೀಕ್ಷೆಯಲ್ಲಿ ಪಾಲ್ಗೊಂಡಿದ್ದರು.

ಇಂದು ಫ್ಯಾಕಲ್ಟಿ ಡೆವಲಪ್ಮೆಂಟ್ ಕಾರ್ಯಕ್ರಮ

◆ **ವಿಜಯಪುರ:** ಇಲ್ಲಿನ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ ಆವರಣದ ಡಾ. ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಜೈವಿಕ ಮಾಹಿತಿ ವಿಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ವಿಭಾಗ ಮತ್ತು ಕರ್ನಾಟಕ ಸರ್ಕಾರದ ಪ್ರಾಯೋಜಿತ ವಿಜ್ಞಾನ ಹಾಗೂ ತಂತ್ರಜ್ಞಾನ ದೃಷ್ಟಿ ಸಮೂಹ ಆಶ್ರಯದಲ್ಲಿ ಏ. 6ರಂದು ಗಣಕ ಜೀವಶಾಸ್ತ್ರ ಮತ್ತು ಅಣು ಜೀವಶಾಸ್ತ್ರ ತಂತ್ರಗಳ ಕುರಿತ ಫ್ಯಾಕಲ್ಟಿ ಡೆವಲಪ್ಮೆಂಟ್ ಕಾರ್ಯಕ್ರಮ ಬೆಳಗ್ಗೆ 10 ಗಂಟೆಗೆ ಹಮ್ಮಿಕೊಳ್ಳಲಾಗಿದೆ.

ಅತಿಥಿಗಳಾಗಿ ಬಿಎಲ್‌ಡಿಇ. ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಅರುಣ ಇನಾಮದಾರ ಭಾಗವಹಿಸಲಿದ್ದು, ಅಧ್ಯಕ್ಷತೆಯನ್ನು ಪ್ರೊ. ವಿಜಯಾ ಕೋರಿಶೆಟ್ಟಿ ವಹಿಸಲಿದ್ದಾರೆ. ಕುಲಸಚಿವ ಶಂಕರಗೌಡ ಸೋಮನಾಳ, ಮೌಲ್ಯಮಾಪನ ಕುಲಸಚಿವ ಪ್ರೊ. ಬಿ.ಎಲ್ ಲಕ್ಕಣನವರ, ಮತ್ತು ಆರ್ಥಿಕ ಅಧಿಕಾರಿ ರಾಮಣ್ಣ ಅಥಣಿ ಪಾಲ್ಗೊಳ್ಳಲಿದ್ದಾರೆ ಎಂದು ಕಾರ್ಯಕ್ರಮದ ಸಂಯೋಜಕ ಡಾ. ಬಾಬು ಆರ್.ಎಲ್., ಡಾ. ಜಾಯ್ ಹೊಸಕೇರಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಆಸ್ತಿ ತೆರಿಗೆಯಲ್ಲಿ ಶೇ.5ರಷ್ಟು ರಿಯಾಯಿತಿ

◆ **ದೇವರಹಿಪ್ಪರಗಿ:** ಪಪಂ ಕಾರ್ಯಾಲಯ, ದೇವರಹಿಪ್ಪರಗಿ ಪಟ್ಟಣದ ವ್ಯಾಪ್ತಿಯಲ್ಲಿನ ಸಮಸ್ತ ಆಸ್ತಿ ತೆರಿಗೆ ಮಾಲೀಕರು ಕರ್ನಾಟಕ ಪೌರಸಭೆಗಳ ಅಧಿನಿಯಮ 1964 ರ ನಿಯಮಗಳಂತೆ ಪ್ರತಿ ವರ್ಷವು ಎಪ್ರಿಲ್ ತಿಂಗಳಿನಲ್ಲಿ ಆಸ್ತಿ ತೆರಿಗೆ ಮೇಲೆ ಶೇ.5% ರಷ್ಟು ರಿಯಾಯತಿಯಲ್ಲಿ ಪಾವತಿಸಲು ಅವಕಾಶವಿರುತ್ತದೆ ಎಂದು ಪಟ್ಟಣ ಪಂಚಾಯತಿ ಮುಖ್ಯಾಧಿಕಾರಿ ಅಪ್ರೋಜ ಅಹಮದ ಪಟೇಲ ತಿಳಿಸಿದ್ದಾರೆ.

ತೆರಿಗೆ ಪಾವತಿಸುವ ಎಲ್ಲ ಮಾಲೀಕರುಗಳಿಗೆ ಎಪ್ರಿಲ್ ತಿಂಗಳಿನಲ್ಲಿ ಶೇ.5% ರಷ್ಟು ವಿನಾಯಿತಿ ಇರುವುದರಿಂದ ಈ ಸುವರ್ಣಾವಕಾಶಗಳನ್ನು ಪಡೆದು ಆಸ್ತಿ ಮಾಲೀಕರು ಪಟ್ಟಣ ಪಂಚಾಯತಿ ಆಸ್ತಿ ತೆರಿಗೆಯನ್ನು ಪಾವತಿಸಲು ಕೋರಿದ್ದಾರೆ. ಆಸ್ತಿ ತೆರಿಗೆಯನ್ನು ಎಪ್ರಿಲ್ 30ರ ಒಳಗೆ ಪಾವತಿಸಿದರೆ ಆಸ್ತಿ ತೆರಿಗೆ ಮೇಲೆ ಶೇ.5% ರಷ್ಟು ರಿಯಾಯಿತಿ ನೀಡಲಾಗುವುದು. ಮೇ-ಜೂನ್ ತಿಂಗಳಿನಲ್ಲಿ ದಂಡರಹಿತವಾಗಿ ಪಾವತಿಸಲು ಅವಕಾಶವಿದೆ. ಆದರೆ ಜುಲೈ ತಿಂಗಳಿನಿಂದ ಪ್ರತಿ ತೆರಿಗೆಯ ಮೇಲೆ ಶೇ.2 ರಂತೆ ದಂಡವನ್ನು ಪಾವತಿಸಬೇಕಾಗುತ್ತದೆ. ಬಾಕಿ ಇರುವ ನೀರಿನ ಶುಲ್ಕ, ಉದ್ದಿಮೆ ಪರವಾನಿಗೆ ಶುಲ್ಕ, ವಾಣಿಜ್ಯ ಮಳಿಗೆ ಬಾಡಿಗೆ ಶುಲ್ಕ ಪಾವತಿಸಲು ವಿನಂತಿಸಿದರು. ಪೋನ್ ಪೇ, ಗೂಗಲ್ ಪೇ ಮೂಲಕ ತೆರಿಗೆ ಪಾವತಿಸಲು ಅವಕಾಶವಿರುತ್ತದೆ. ಪ ಪಂಗೆ ತೆರಿಗೆ ಪಾವತಿಸಿ, ಪಟ್ಟಣದ ಸರ್ವತೋಮುಖ ಅಭಿವೃದ್ಧಿ ಕಾರ್ಯಗಳಿಗೆ ಕೈ ಜೋಡಿಸಿ ಎಂದರು.

ಕುಡಿಯುವ ನೀರಿಗಾಗಿ ಪ್ರಯಾಣಿಕರ ಪರದಾಟ

▸ **ಅಮರ ನಾರಾಯಣಕರ**

◆ **ಆಲಮೇಲ:** ಸುಮಾರು 40 ಹಳ್ಳಿಗಳ ಕೇಂದ್ರ ಸ್ಥಾನ ಹಾಗೂ ನೂತನ ತಾಲೂಕು ಕೇಂದ್ರವಾಗಿರುವ ಆಲಮೇಲ ಪಟ್ಟಣದ ಬಸ್ ನಿಲ್ದಾಣದಲ್ಲಿ ಪ್ರಯಾಣಿಕರಿಗೆ ಕುಡಿಯುವ ನೀರು ಸಿಗದೇ ಅಧಿಕಾರಿಗಳಿಗೆ ಹಿಡಿಶಾಪ ಹಾಕುತ್ತ ಪರದಾಡುತ್ತಿದ್ದಾರೆ.

ಬಡ ಮಹಿಳೆಯರು, ವೃದ್ಧರು, ಮಕ್ಕಳು ಬಸ್ ನಿಲ್ದಾಣದಲ್ಲಿ ತಮ್ಮ ನೀರಿನ ದಾಹವನ್ನು ತೀರಿಸಿಕೊಳ್ಳಲು 20 ರೂ ಬಾಟಲಿಗೆ ಮೊರೆ ಹೋಗುವಂತಾಗಿದೆ. ಕಳೆದ 6 ವರ್ಷಗಳ ಹಿಂದೆ ಬಸ್ ನಿಲ್ದಾಣಕ್ಕೆ ಕೆಪಿಆರ್ ಸಕ್ಕರೆ ಕಾರ್ಖಾನೆ ವತಿಯಿಂದ ಶುದ್ಧ ಕುಡಿಯುವ ನೀರಿನ ಘಟಕವನ್ನು ಅಳವಡಿಸಲಾಗಿತು, ಆದರೆ ಅದರ ನಿರ್ವಹಣೆ ಸರಿಯಾಗಿ ಆಗದ ಕಾರಣ ಅದೂ ಕೂಡಾ ಹಾಳುಬಿದಿದೆ, ಇದರಿಂದ ನಿತ್ಯ ಸಾವಿರಾರೂ ಪ್ರಯಾಣಿಕರು ಆಲಮೇಲ ಮಾರ್ಗವಾಗಿ ಸಂಚರಿಸುವವರಿಗೆ ಕುಡಿಯುವ ನೀರಿನ ತೊಂದರೆ ಆಗುತ್ತಿದೆ. ಬಸ್ ನಿಲ್ದಾಣದ ಒಳಗೆ ಇದ್ದಂತಹ ಕೊಳವೆ ಬಾವಿಯೂ ಕೂಡಾ ಮುಚ್ಚಲಾಗಿದೆ ಅದಕ್ಕಾಗಿ ಕೂಡಲೇ ಸಾರಿಗೆ ಇಲಾಖೆಯ ಅಧಿಕಾರಿಗಳು ಪಟ್ಟಣದ ಬಸ್ ನಿಲ್ದಾಣದ ಒಳಗೆ ಪ್ರಯಾಣಿಕರಿಗೆ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಬೇಕು ಇಲ್ಲದಿದ್ದರೆ ಬಸ್ ತಡೆದು ಹೋರಾಟ ಮಾಡಲಾಗುವದು ಶಿವಕುಮಾರ ಮೇಲಿನಮನಿ ಎಚ್ಚರಿಕೆ ನೀಡಿದ್ದಾರೆ.



> **ಪಟ್ಟಣದ ಬಸ್ ನಿಲ್ದಾಣದಲ್ಲಿ ಪ್ರಯಾಣಿಕರಿಗೆ ಕುಡಿಯುವ ನೀರಿನ ವ್ಯವಸ್ಥೆ ಇಲ್ಲದಿರುವುದು ನಮ್ಮ ಗಮನಕ್ಕೆ ಬಂದಿದೆ. ಈಗಾಗಲೆ ಸಂಬಂಧಿಸಿದ ಇಂಜೀನಿಯರ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ್ದಾರೆ.ಕೂಡಲೇ ಬಸ್ ನಿಲ್ದಾಣಕ್ಕೆ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಲಾಗುವುದು**
> ■ **ಎಂ.ಆರ್.ಲಮಾಣಿ, ಘಟಕ ವ್ಯವಸ್ಥಾಪಕರು ಸಾರಿಗೆ ಇಲಾಖೆ. ಸಿಂದಗಿ**

> **ಶಾಸಕ ಅಶೋಕ ಮನಗೂಳಿ ಅವರಿಗೆ ಮೌಖಿಕವಾಗಿ ಮೂರು ಬಾರಿ ಮನವಿ ಮಾಡಿಕೊಳ್ಳಲಾಗಿದೆ. ಎಂ.ಸಿ.ಮನಗೂಳಿ ಫೌಂಡೆಷನ್ ವತಿಯಿಂದ ಶುದ್ಧ ಕುಡಿಯುವ ನೀರಿನ ಘಟಕ ಅಳವಡಿಸುವ ಭರವಸೆ ನೀಡಿದರು.ಆದರೆ ಅವರೂ ಕೂಡಾ ಇಲ್ಲಿಯವರೆಗೆ ಅಳವಡಿಸಿಲ್ಲಾ.ಇನ್ನೂ ನೀರಿಗಾಗಿ ಹೋರಾಟ ಅನಿವಾರ್ಯವಾಗಿದೆ.**
> ■ **ಶಿವಕುಮಾರ ಮೇಲಿನಮನಿ, ಡಿಎಸ್‌ಎಸ್ ಜಿಲ್ಲಾ ಸಂಚಾಲಕ**

ಕುಸ್ತಿ ಪಂದ್ಯಕ್ಕೆ ಪ್ರೋತ್ಸಾಹಿಸಿ: ಉಟಗಿ

◆ **ಝಳಕಿ:** ಯುವಕರು ಕುಸ್ತಿ ಪಂದ್ಯಕ್ಕೆ ಪ್ರೋತ್ಸಾಹಿಸಿ ಎಂದು ಬಿಜೆಪಿ ಹಿರಿಯ ಮುಖಂಡ ಎಚ್.ಆರ್. ಉಟಗಿ ಹೇಳಿದರು.

ಸಮಿಪದ ಲೋಣಿ ಬಿಕೆ ಗ್ರಾಮದಲ್ಲಿ ನಡೆದ ಜೈಹನುಮಾನ ದೇವರ ಜಾತ್ರಾ ಮಹೋತ್ಸವ ಪ್ರಯುಕ್ತ ಜಂಗಿ ನಿಕಾಲಿ ಕುಸ್ತಿ ಪಟ್ಟುಗಳಿಗೆ ಚಾಲನೆ ನೀಡಿ ಮಾತನಾಡಿದರು.

ಹಿಂದಿನ ಪುರಾತನ ಕಾಲದಿಂದ ನಡೆದ ಬಂದ ಕುಸ್ತಿ ಕ್ರೀಡೆ ನಶಿಸಿ ಹೋಗಬಾರದು. ಯುವಕರು ಕುಸ್ತಿ ಪಂದ್ಯದಲ್ಲಿ ಭಾಗವಹಿಸಿ ನಿಮ್ಮ ಸದೃಢ ಶರೀರಕ್ಕೆ ಉತ್ತಮ ಆರೋಗ್ಯವಾಗಿ ಇರಲು ಸಾಧ್ಯ ಎಂದು ಹೇಳಿದರು.

ಈ ಸಂದರ್ಭದಲ್ಲಿ ವೇ ಮೂ. ಈಶ್ವರ ಮಠ, ಮಾಜಿ ಶಾಸಕ ದೇವಾನಂದ ಚವ್ಹಾಣ, ಶ್ರೀನಿವಾಶ ಕುಲಕರ್ಣಿ, ಸೋಮಶೇಖರ ಮಾಳಬಾಗಿ, ಆನಂದ ಕೋರೆ, ಜಗದೀಶ ಜಿತ್ತಿ, ಗುರುಶಾಂತ ಕಾಪಸೆ, ಶಿವಶರಣ ಜಿತ್ತಿ, ಕಲ್ಲಪ್ಪ ಮಾಳಬಾಗಿ, ರುದ್ರೇಶ ಖೈನೂರ, ನಾಗಾನಾಥ ಬಿರಾದಾರ, ಸುರೇಶ ಕೋಳಿ, ದ್ಯಾಮಗೊಂಡ ಕಾಂಬಳೆ, ರೇವಪ್ಪ ಕಾಂಬಳೆ, ಹಾಗೂ ಸುತ್ತಮುತ್ತಲಿನ ಗ್ರಾಮಸ್ಥರು ಉಪಸ್ಥಿತರಿದ್ದರು.



ಏ.11ಕ್ಕೆ ಡಾ. ಬಿ.ಆರ್. ಅಂಬೇಡ್ಕರ್ ಹಬ್ಬ: ಬೈಕ್ ರ‍್ಯಾಲಿ

◆ **ಚಡಚಣ:** ವಿಜಯಪುರದಲ್ಲಿ ಏ.11ರಿಂದ 14ರವರೆಗೆ ನಾಲ್ಕು ದಿನಗಳ ಡಾ. ಬಿ.ಆರ್. ಅಂಬೇಡ್ಕರ್ ಹಬ್ಬ ಆಚರಿಸಲಾಗುತ್ತಿದ್ದು, ಹಬ್ಬದ ನಿಮಿತ್ಯವಾಗಿ ಏ.11ರಂದು ಚಡಚಣ ತಾಲೂಕಿನ ಬರಡೋಲ ಗ್ರಾಮದಿಂದ ವಿಜಯಪುರದ ಕಂದಗಲ್ ಶ್ರೀ ಹನುಮಂತರಾಯ ರಂಗಮಂದಿರದವರೆಗೆ ಬೈಕ್ ರ‍್ಯಾಲಿ ಆಯೋಜಿಸಲಾಗಿದೆ ಎಂದು ದಲಿತ ವಿದ್ಯಾರ್ಥಿ ಪರಿಷತ್ ರಾಜ್ಯಾಧ್ಯಕ್ಷ ಶ್ರೀನಾಥ ಪೂಜಾರಿ ಹೇಳಿದರು.

ಸ್ಥಳೀಯ ಪ್ರವಾಸಿ ಮಂದಿರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು.

ವಿಜಯಪುರ ಜಿಲ್ಲೆಯ ಬರಡೋಲ ಗ್ರಾಮದಲ್ಲಿ ಡಾ. ಬಾಬಾಸಾಹೇಬ ಅಂಬೇಡ್ಕರ್ ಅವರು 1937ರ ಏ. 11ರಂದು ಬಂದು ಹೋಗಿರುವ ಸ್ಮರಣಾರ್ಥವಾಗಿ ಬರಡೋಲ ಗ್ರಾಮದಿಂದ ವಿಜಯಪುರದವರೆಗೆ ಸುಮಾರು 100ಕ್ಕೂ ಹೆಚ್ಚು ಬೈಕ್ ರ‍್ಯಾಲಿ ಆಯೋಜಿಸಲಾಗಿದೆ. ಡಾ. ಬಿ.ಆರ್. ಅಂಬೇಡ್ಕರ್ ಅವರ ಆಚಾರ, ವಿಚಾರಗಳನ್ನು ಸಾರುವ ಅರಿವಿನ ಹಬ್ಬ ಇದಾಗಿದೆ. ಎಲ್ಲ ಸಮಾಜದವರು ನಾವೆಲ್ಲ ಭಾರತೀಯರು ಎಂಬ ಮನೋಭಾವದಿಂದ ಒಗ್ಗೂಡಿ ಭಾಗವಹಿಸಿ ಈ ಹಬ್ಬವನ್ನು ಯಶಸ್ವಿಯಾಗಿಸೋಣ ಎಂದು ಸಲಹೆ ನೀಡಿದರು.

ಬಿ.ಎನ್.ಬಿರಾದಾರ ಮಾತನಾಡಿ, ಭಾರತ ದೇಶಕ್ಕೆ ಸಮಾನತೆ ತಂದು ಕೊಟ್ಟ ವ್ಯಕ್ತಿ ಅಂಬೇಡ್ಕರ್ ಅವರು, ಅಂತಹ ಮಹಾನ್ ಪುರುಷರ ಜನ್ಮದಿನದಂದು ಆಚರಿಸುತ್ತಿರುವ ಅಂಬೇಡ್ಕರ್ ಹಬ್ಬಕ್ಕೆ ಎಲ್ಲ ಸಮಾಜದವರು ತಮ್ಮ ಜಾತಿ, ಮತಭೇದಗಳನ್ನು ಮರೆತು ಈ ಹಬ್ಬವನ್ನು ಯಶಸ್ವಿಯಾಗಿಸೋಣ ಎಂದರು.



ಪತ್ರಿಕಾಗೋಷ್ಠಿಯಲ್ಲಿ ಮಹಾದೇವ ಬನಸೋಡೆ, ದಶರಥ ಬನಸೋಡೆ, ನಾಗೇಶ ಗಾಯಕವಾಡ ಸೇರಿದಂತೆ ಮತ್ತಿತರರು ಮಾತನಾಡಿದರು.

ಇದೇ ಸಂದರ್ಭದಲ್ಲಿ ವಿಜಯಪುರ ನಗರದಲ್ಲಿ ನಡೆಯಲಿರುವ ಅಂಬೇಡ್ಕರ್ ಹಬ್ಬದ ಭಿತ್ತಿಪತ್ರಗಳನ್ನು ಬಿಡುಗಡೆಗೊಳಿಸಿದರು.

ಈ ಸಂದರ್ಭದಲ್ಲಿ ಡಿ.ವಿ.ಪಿ. ತಾಲೂಕಾಧ್ಯಕ್ಷ ದೇವಾನಂದ ಸಿಂಗೆ, ಪರಮೇಶ್ವರ ಸಿಂಗೆ, ದ್ಯಾಮಗೊಂಡ ಕಾಂಬಳೆ, ಗಣೇಶ ಕಾಂಬಳೆ, ನಾರಾಯಣ ವಾಘಮೋರೆ, ಸಾಯಿನಾಥ ಬನಸೋಡೆ, ಸಿದ್ಧಲಿಂಗ ಬನಸೋಡೆ, ಸಂದೇಶಬನಸೋಡೆ, ಪ್ರಕಾಶ ಕಟ್ಟಿಮನಿ, ರಾಮ ಝುಡಪೇಕರ ಸೇರಿದಂತೆ ಮತ್ತಿತರರು ಇದ್ದರು.



ಕಲಬುರಗಿ: ನಗರದ ಜಗತ್ ವೃತ್ತದಲ್ಲಿ ಎಸ್‌ಬಿಐ ಗೆಳೆಯರ ಬಳಗದ 11ನೇ ವರ್ಷದ ಅಂಗವಾಗಿ ಹಾಗೂ ನಂದಾದೀಪ ಚಾರಿಟೇಬಲ್ ಟ್ರಸ್ಟ್ ಸಹಯೋಗದಲ್ಲಿ ಕುಡಿಯುವ ನೀರಿನ ಅರವಟ್ಟಿಗೆ ಉದ್ಘಾಟನೆ ಮಾಡಲಾಯಿತು. ಕಾರ್ಯಕ್ರಮವು ಹಿರಿಯರ ಮಾರ್ಗದರ್ಶನದಲ್ಲಿ ನಡೆದಿದ್ದು, ಸಂಘದ ಹಿರಿಯ ಪ್ರಚಾರಕ ಸುರೇಶ್, ಎಫ್.ರಮೇಶ್, ರಮೇಶ್ ತಿಪ್ಪನೂರು ಸೇರಿದಂತೆ ಅನೇಕ ಹಿರಿಯ ಕಾರ್ಯಕರ್ತರು ಭಾಗವಹಿಸಿದ್ದರು.

ಡಾ.ಬಾಬು ಜಗಜೀವನ ರಾಂ ಜಯಂತ್ಯುತ್ಸವ

ಕುಷ್ಟಗಿ: ಸ್ವಾತಂತ್ರ್ಯ ಹೋರಾಟಗಾರ ಹಸಿರು ಕ್ರಾಂತಿ ಹರಿಕಾರ ಸಂವಿಧಾನ ಶ್ರೇಷ್ಠತೆಗೆ ಹಗಲಿರಳು ಶ್ರಮಿಸಿದ ಮಹಾನ್ ನಾಯಕರ ಕಾರ್ಯವನ್ನು ಸದಾ ಸ್ಮರಿಸಬೇಕು ಎಂದು ಸಿಪಿಐ ವಿಶ್ವನಾಥ ಹಿರೇಗೌಡ್ರ ಹೇಳಿದರು.

ಪಟ್ಟಣದ ತಹಶೀಲ್ದಾ ಕಚೇರಿ ಹತ್ತಿರದ ಡಾ.ಬಾಬು ಜಗಜೀವನರಾಂ ಸಮುದಾಯ ಭವನದಲ್ಲಿ ತಾಲೂಕಾಡಳಿತ, ತಾಪಂ, ಸಮಾಜ ಕಲ್ಯಾಣ ಇಲಾಖೆ, ಪುರಸಭೆ ನೇತೃತ್ವದಲ್ಲಿ ಏರ್ಪಡಿಸಿದ್ದ ಡಾ.ಬಾಬು ಜಗಜೀವನ ರಾಂ ಜಯಂತಿಯಲ್ಲಿ ಮಾತನಾಡಿದರು. ಶೋಷಿತ ಸಮುದಾಯ ಹಕ್ಕುಗಳಿಗೆ ಹೋರಾಡಿ, ಮಹಾನ್ ಚೇತನರ ಕೊಡುಗೆ ಹಿರಿದು. ರಾಷ್ಟ್ರದ ಸಂವಿಧಾನ ರಚನೆಯಲ್ಲಿ ಹಲವು ಮಹಾನ್ ವ್ಯಕ್ತಿಗಳು ಶ್ರಮಿಸಿದ್ದಾರೆ .ಮಹಾತ್ಮ, ಶರಣರ ಶ್ರಮಿಸಲಾಗಿದೆ. ಪ್ರತಿಯೊಬ್ಬ ಮಹಾನ್ ರನ್ನು ನೆನಪಿಸಿಕೊಳ್ಳಬೇಕು ಎಂದರು. ಶಿಕ್ಷಕ ಡಾ.ಗುರುದತ್ತಾ ಕೊರಡಕೇರಾ ಉಪನ್ಯಾಸ ನೀಡಿದರು. ತಾಲೂಕು ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ತುಗ್ಗಲೆಪ್ಪ ಎಚ್.ದೇಸಾಯಿ, ತಹಸೀಲ್ದಾರ್ ಅಶೋಕ್ ಶಿಗ್ಗಾವಿ ಮಾತನಾಡಿದರು. ಸಿಡಿಪಿಓ ಯಲ್ಲಮ್ಮ ಹಂಡಿ, ತಾಪಂ ನರೇಗಾ ಸಹಾಯಕ ನಿಂಗನಗೌಡ ಹಿರೇಗೌಡ್ರ, ಸಮಾಜ ಕಲ್ಯಾಣ ಇಲಾಖೆ ಮ್ಯಾನೇಜರ್ ಬಸವರಾಜ್ ಮ್ಯಾಗೇರಿ, ಬಿಇಓ ಶಿಕ್ಷಣ ಸಂಯೋಜಕ ರಾಘಪ್ಪ, ಪರಿಶಿಷ್ಟ ವರ್ಗದ ಕಲ್ಯಾಣಾಧಿಕಾರಿ ವೀರಪ್ಪ, ಪುರಸಭೆ ಮುಖ್ಯಾಧಿಕಾರಿ ವೈ.ಬಿ.ಬೀಳಗಿ, ಡಿಎಸ್‌ಎಸ್ ಮುಖಂಡ ರಮೇಶ್ ಮೇಲಿನಮನಿ, ಶುಕ್ರರಾಜ್ ತಾಳಕೇರಿ, ದುರುಗಪ್ಪ ಮ್ಯಾಗಳಮನಿ, ಹುಸೇನಪ್ಪ ಮುದೇನೂರು, ಬಸವರಾಜ್ ಬೇವಿಮನಮಟ್ಟಿ, ಶರಣು ಹುಡೇದ್ ಇತರರಿದ್ದರು.



ಕುಷ್ಟಗಿ: ಪಟ್ಟಣದ ತಹಶೀಲ್ದಾರ್ ಕಚೇರಿ ಹತ್ತಿರದ ಡಾ.ಬಾಬು ಜಗಜೀವನರಾಂ ಸಮುದಾಯ ಭವನದಲ್ಲಿ ತಾಲೂಕಾಡಳಿತ, ತಾಪಂ, ಸಮಾಜ ಕಲ್ಯಾಣ ಇಲಾಖೆ ಹಾಗೂ ಪುರಸಭೆ ನೇತೃತ್ವದಲ್ಲಿ ಏರ್ಪಡಿಸಿದ್ದ ಡಾ.ಬಾಬು ಜಗಜೀವನ ರಾಂ ಜನ್ಮ ದಿನಾಚರಣೆಯಲ್ಲಿ ಸಿಪಿಐ ವಿಶ್ವನಾಥ ಹಿರೇಗೌಡ್ರ ಮಾತನಾಡಿದರು.

ಕಿರುಸುದ್ದಿ

ಡಾ.ಬಾಬು ಜಗಜೀವನ ರಾಂ ಜನ್ಮ ದಿನಾಚರಣೆ



ಕೊಪ್ಪಳ: ದೇಶದ ಹಸಿವು ನೀಗಿಸಿದ ಹಸಿರು ಕ್ರಾಂತಿಯ ಹರಿಕಾರ, ಮಾಜಿ ಉಪಪ್ರಧಾನಿ ಡಾ.ಬಾಬು ಜಗಜೀವನ ರಾಂ ಅವರ 119ನೇ ಜನ್ಮ ದಿನಾಚರಣೆಯನ್ನು ಕೊಪ್ಪಳ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಲ್ಲಿ ಭಾನುವಾರ ಆಚರಿಸಲಾಯಿತು. ಕೊಪ್ಪಳ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಸಹಾಯಕ ನಿರ್ದೇಶಕರಾದ ಗವಿಸಿದ್ದಪ್ಪ ಹೊಸಮನಿ ಅವರು ಡಾ.ಬಾಬು ಜಗಜೀವನ ರಾಂ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸುವ ಮೂಲಕ ಗೌರವ ಸಮರ್ಪಿಸಿದರು. ಕೊಪ್ಪಳ ವಾರ್ತಾ ಇಲಾಖೆಯ ಸಿಬ್ಬಂದಿ ತಿಪ್ಪಯ್ಯ ನಾಯ್ಡು ಎನ್., ಹೊರಗುತ್ತಿಗೆ ಸಿಬ್ಬಂದಿ ಮಂಜುನಾಥ, ಅಪ್ರೆಂಟಿಶಿಪ್ ಅಭ್ಯರ್ಥಿ ಕಿರಣ್ ಕುಮಾರ್ ಮತ್ತು ಲಕ್ಷ್ಮೀಕಾಂತ ಇತರರಿದ್ದರು.

ಡಾ.ಬಾಬು ಜಗಜೀವನ ರಾಂ ಜಯಂತಿ ಆಚರಣೆ



ಕುಕನೂರು: ದೇಶದ ಹಸಿರುಕ್ರಾಂತಿ ಹರಿಕಾರ, ಮಾಜಿ ಉಪಪ್ರಧಾನಿ ಬಾಬೂ ಜಗಜೀವನ ರಾಂ ಅವರ ದೂರದೃಷ್ಟಿ ಮತ್ತು ಸಾಮಾಜಿಕ ಕಳಕಳಿಯಿಂದ ಸಮಾಜವು ಪ್ರಗತಿ ಮಾರ್ಗದಲ್ಲಿ ಸಾಗುತ್ತಿದೆ ಎಂದು ಉದಯ ರಾಯರಡ್ಡಿ ಹೇಳಿದರು. ತಾಲೂಕಿನ ತಳಕಲ್ ಗ್ರಾಪಂನಲ್ಲಿ ನಡೆದ ಡಾ.ಬಾಬು ಜಗಜೀವನರಾಂ ಜಯಂತಿಯನ್ನು ಸರಳ ರೀತಿಯಲ್ಲಿ ಆಚರಣೆ ಮಾತನಾಡಿದ ನಂತರ ಮಾತನಾಡಿದ ಬಾಬೂ ಜಗಜೀವನ ರಾಂ ಅವರು ಸಾಮಾಜಿಕ ಸುಧಾರಣೆ, ಮಹಿಳಾ ಶಿಕ್ಷಣಕೆ, ಅಲ್ಪಸಂಖ್ಯಾತರ ಹಕ್ಕುಗಳು ಮತ್ತು ಪರಿಸರ ಸಂರಕ್ಷಣೆಗೆ ಅಪಾರ ಕೊಡುಗೆ ನೀಡಿದ್ದಾರೆ. ದೇಶದ ಪ್ರಗತಿಯು ನಿತ್ಯದ ಶ್ರಮ, ಸಮಗ್ರ ಯೋಜನೆ ಮತ್ತು ಸಮುದಾಯದ ಸಹಕಾರದ ಮೂಲಕ ಸಾಧ್ಯವೆಂದು ತಿಳಿಸಿದ್ದರು. ಅಂತಹ ವೈಯಕ್ತಿಯ ತತ್ವಾದರ್ಶಗಳನ್ನು ಇಂದಿನ ಯುವ ಪೀಳಿಗೆ ಮೆಲಕು ಹಾಕಲು ಮುಂದಾಗಬೇಕು ಎಂದು ಹೇಳಿದರು. ಶಾಲಾ ಎಸ್‌ಡಿಎಂಸಿ ಅಧ್ಯಕ್ಷ ಶಿವಣ್ಣ ಕೆಂಚ ರೆಡ್ಡಿ, ಪಂಚಾಯತಿ ಸಿಬ್ಬಂದಿ, ಇತರರಿದ್ದರು.

ಕಟ್ಟಡ ನವೀಕರಣಕ್ಕೆ ಅನುದಾನ ನೀಡಿ



ಮಾನ್ವಿ: ತಾಲೂಕಿನ ಹಿರೇಕೊಟ್ನೆಕಲ್ ಗ್ರಾಮದಲ್ಲಿನ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ ಕಚೇರಿಗೆ ರಾಯಚೂರು ಸಂಸದ ಜಿ.ಕುಮಾರ ನಾಯಕ ಭೇಟಿ ನೀಡಿದ ವೇಳೆ ಸಂಸದ ಜಿ.ಕುಮಾರ ನಾಯಕಗೆ ಸಹಕಾರಿಯ ಅಧ್ಯಕ್ಷ ರಾಜಶೇಖರ್ ಬಜಾರ್ ಮನವಿ ಸಲ್ಲಿಸಿದರು. ಬಳಿಕ ಮಾತನಾಡಿದ ಅವರು, ಹಿರೇಕೊಟ್ನೆಕಲ್ ಗ್ರಾಮದಲ್ಲಿನ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತವು ಈ ಭಾಗದ ರೈತರಿಗೆ ಅಗತ್ಯ ಸೌಕರ್ಯವನ್ನು ಕಲ್ಪಿಸುತ್ತ ಬಂದಿದ್ದು ಸಹಕಾರಿಯ ಕಚೇರಿ ಕಟ್ಟಡವು ಶಿಥಿಲಗೊಂಡಿದ್ದು, ಕಟ್ಟಡದ ದುರಸ್ತಿ ಹಾಗೂ ನವಿಕರಣಕ್ಕಾಗಿ ಸಂಸದರ ಅನುದಾನವನ್ನು ನೀಡುವಂತೆ ಕೋರಿದರು. ಗ್ರಾಮಕ್ಕೆ ಆಗಮಿಸಿದ ಸಂಸದರನ್ನು ಸಹಕಾರಿ ವತಿಯಿಂದ ಸನ್ಮಾನಿಸಲಾಯಿತು. ಮಾಜಿ ಜಿಪಂ ಅಧ್ಯಕ್ಷರಾದ ದೊಡ್ಡಬಸಪ್ಪಗೌಡ, ಉಪಾಧ್ಯಕ್ಷರಾದ ಚಂದ್ರಶೇಖರ ಭೋವಿ, ನಿರ್ದೇಶಕರಾದ ಅಮರಪ್ಪ, ರಾಘವೇಂದ್ರ, ವೀರೇಶನಾಯಕ, ಸುರೇಂದ್ರನಾಡಗೌಡ, ಚನ್ನಬಸವ ಓತ್ತೂರ್, ನಾಗನಗೌಡ ಜೀನೂರ್, ಡಾ.ಎಸ್.ಹನುಮಂತಗೌಡ, ಭಾಗ್ಯಮ್ಮ, ಬಸಮ್ಮ, ಗ್ರಾಮದ ಮುಖಂಡರಾದ ಹನುಮಂತನಾಯಕ, ಬಸಪ್ಪನಾಯಕ, ವೀರೇಶಸ್ವಾಮಿ ಇತರರಿದ್ದರು.

ಡಾ.ಬಾಬೂಜಿ ಜಯಂತಿ ಆಚರಣೆ | ಎಂಎಲ್ಸಿ ಹೇಮಲತಾ ಹೇಳಿಕೆ
ಸಮಾನತೆಗೆ ಹೋರಾಡಿದ ಮಹನೀಯರು

ಕೊಪ್ಪಳ: ಸಮಾಜದಲ್ಲಿ ಸರ್ವರಿಗೂ ಸಮಾನತೆಗಾಗಿ ಹೋರಾಡಿದ ಡಾ.ಬಿ.ಆರ್.ಅಂಬೇಡ್ಕರ್ ಮತ್ತು ಡಾ.ಬಾಬು ಜಗಜೀವನರಾಂ ಈ ಇಬ್ಬರು ಮಹನೀಯರು ನಮ್ಮ ಎರಡು ಕಣ್ಣುಗಳಿದ್ದಂತೆ ಎಂದು ಕೊಪ್ಪಳ ವಿಧಾನ ಪರಿಷತ್ ಸದಸ್ಯೆ ಹೇಮಲತಾ ನಾಯಕ ಹೇಳಿದರು.

ಜಿಲ್ಲಾಡಳಿತ, ಜಿಪಂ, ಸಮಾಜ ಕಲ್ಯಾಣ ಇಲಾಖೆ ಹಾಗೂ ಕೊಪ್ಪಳ ನಗರಸಭೆ ಸಂಯುಕ್ತ ಆಶ್ರಯದಲ್ಲಿ ಭಾನುವಾರ ನಗರದ ಸಾಹಿತ್ಯ ಭವನದಲ್ಲಿ ಹಮ್ಮಿಕೊಂಡಿದ್ದ 'ಹಸಿರು ಕ್ರಾಂತಿ'ಯ ರೂವಾರಿ ಡಾ.ಬಾಬು ಜಗಜೀವನ ರಾಂ ರವರ 119ನೇ ಜನ್ಮ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಶೋಷಿತ ವರ್ಗದ ಕಣ್ಣೀರು ಒರೆಸುವ ಕೆಲಸವನ್ನು ಬಾಬು ಜಗಜೀವನ್ ರಾಂ ರವರು ಮಾಡಿದ್ದಾರೆ. ದೇಶದಲ್ಲಿ ಆಹಾರದ ಕೊರತೆ ಉಂಟಾದಾಗ ಆಹಾರ ಉತ್ಪಾದನೆಗೆ ಒತ್ತು ಕೊಟ್ಟು, ಅದಕ್ಕೆ ಪೂರಕವಾಗಿ ಕೈಗೊಂಡ ಕ್ರಮಗಳಿಂದಾಗಿ ಜಗಜೀವನ ರಾಂ ಅವರಿಗೆ ಹಸಿರು ಕ್ರಾಂತಿಯ ಹರಿಕಾರರೆಂದು ಕರೆಯಲಾಗುತ್ತದೆ. ದೇಶಕ್ಕೆ ಶ್ರಮಿಕ ಹಾಗೂ ಶೋಷಿತ ವರ್ಗಕ್ಕೆ ಅವರು ಅನೇಕ ಕೊಡುಗೆಗಳನ್ನು ನೀಡಿದ್ದಾರೆ ಎಂದರು.

ಜಿಲ್ಲಾಧಿಕಾರಿ ಡಾ.ಸುರೇಶ್ ಬಿ. ಇಟ್ನಾಳ ಮಾತನಾಡಿ, ಭಾರತದ ಕೃಷಿ ಮತ್ತು ರಕ್ಷಣಾ ಕ್ಷೇತ್ರದಲ್ಲಿ ಬಾಬುಜಿಯವರ ಕೊಡುಗೆ ಅನನ್ಯವಾಗಿದೆ. ಅವರು ಹಾಕಿಕೊಟ್ಟ ಸಾಮಾಜಿಕ ಸಮಾನತೆಯ ಹಾದಿಯಲ್ಲಿ ನಾವೆಲ್ಲರೂ ಸಾಗಬೇಕಿದೆ. 1968ರಲ್ಲಿ ಬಾಬು ಜಗಜೀವನ ರಾಂ ಅವರ ರಾಜಕೀಯ ಜೀವನದಲ್ಲಿ ಅತ್ಯಂತ ಮಹತ್ವದ ಘಟ್ಟವಾಗಿತ್ತು. ಆ ಸಮಯದಲ್ಲಿ ಅವರು ಭಾರತದ ಕೇಂದ್ರ ಕೃಷಿ ಮತ್ತು ಆಹಾರ ಸಚಿವರಾಗಿ ಸೇವೆ ಸಲ್ಲಿಸಿದರು. 1968ರ ಅವಧಿಯಲ್ಲಿ ದೇಶವು ಆಹಾರದ ಬಿಕ್ಕಟ್ಟಿನಲ್ಲಿದ್ದಾಗ, ಡಾ.ಬಾಬು ಜಗಜೀವನ ರಾಂ ರವರು ತೋರಿದ ದೃಢ ನಿರ್ಧಾರಗಳು ಮತ್ತು ಅದು ನಾಯಕತ್ವ ಇಂದಿಗೂ ಸ್ಮರಣೀಯ. ಕೃಷಿ ಸಚಿವರಾಗಿ ಅವರು ಜಾರಿಗೆ ತಂದ ಕ್ರಾಂತಿಕಾರಿ ಯೋಜನೆಗಳ ಫಲವಾಗಿ ಭಾರತವು ಆಹಾರದ ದಾಸ್ತಾನು ಮಾಡುವಲ್ಲಿ ಯಶಸ್ವಿಯಾಯಿತು. 1968ರ ಹಸಿರು ಕ್ರಾಂತಿಯ ಯಶಸ್ಸು ಬಾಬುಜಿಯವರ ಆಡಳಿತಾತ್ಮಕ ಚಾಕಚಕ್ಯತೆಗೆ ಸಾಕ್ಷಿಯಾಗಿದೆ ಎಂದು ಹೇಳಿದರು.



> ಡಾ.ಬಾಬು ಜಗಜೀವನ ರಾಂ ರವರ ಜೀವನ ಸಾಧನೆಗಳು ಸಮಾಜಕ್ಕೆ ದಾರಿದೀಪವಾಗಿದ್ದು, ಸಮಾನತೆ ಮತ್ತು ಸಾಮಾಜಿಕ ನ್ಯಾಯದ ಮಹತ್ವವನ್ನು ಜನರಿಗೆ ತಿಳಿಸಿವೆ. ಅವರ ಆದರ್ಶಗಳನ್ನು ಯುವ ಪೀಳಿಗೆ ಅಳವಡಿಸಿಕೊಳ್ಳಬೇಕು.
> ■ ಹೇಮಲತಾ ನಾಯಕ, ವಿಧಾನ ಪರಿಷತ್ ಸದಸ್ಯೆ

ಕುಕನೂರು ತಾಲೂಕು ಮಂಗಳೂರಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಹಪ್ರಾಧ್ಯಾಪಕ ಡಾ.ಪ್ರಭುರಾಜ ಕೆ.ಎನ್.ವಿಶೇಷ ಉಪನ್ಯಾಸ ನೀಡಿ, ಡಾ.ಬಾಬು ಜಗಜೀವನ ರಾಂ ರವರು ಭಾರತದ ಸ್ವಾತಂತ್ರ್ಯ ಹೋರಾಟಗಾರರು, ಸಮಾಜ ಸುಧಾರಕರು ಹಾಗೂ ರಾಜಕಾರಣಿಗಳಲ್ಲಿ ಪ್ರಮುಖ ಸ್ಥಾನ ಪಡೆದವರು. ಅವರ ಸಮಾನತೆ, ಸಾಮಾಜಿಕ ನ್ಯಾಯ ಹಾಗೂ ಹಿಂದುಳಿದ ವರ್ಗಗಳ ಅಭಿವೃದ್ಧಿಗೆ ತಮ್ಮ ಜೀವನವನ್ನೇ ಅರ್ಪಿಸಿದ ಮಹಾತ್ಮರು. ಅವರು 1920ರಲ್ಲಿ ದಶಕದ ಸ್ವಾತಂತ್ರ್ಯ ಚಳವಳಿಯಲ್ಲಿ ತಮ್ಮನ್ನು ತೊಡಗಿಸಿಕೊಂಡು ಮಹಾತ್ಮ ಗಾಂಧಿಜೀಯವರ ಮಾರ್ಗದರ್ಶನದಲ್ಲಿ ಹೋರಾಟ ನಡೆಸಿದರು.

ಅದ್ದೂರಿ ಮೆರವಣಿಗೆ

ಹಸಿರು ಕ್ರಾಂತಿ'ಯ ರೂವಾರಿ ಡಾ. ಬಾಬು ಜಗಜೀವನ ರಾಮ್ ರವರ 119ನೇ ಜನ್ಮ ದಿನಾಚರಣೆ ಅಂಗವಾಗಿ ಕೊಪ್ಪಳ ತಹಶೀಲ್ದಾರ ಕಛೇರಿ ಆವರಣದಿಂದ ನಡೆದ ಡಾ.ಬಾಬು ಜಗಜೀವನ ರಾಮ್ ರವರ ಭಾವಚಿತ್ರಕ್ಕೆ ಸಂಸದ, ಡಿಸಿ, ಎಸ್ಪಿ ಅವರು ಪುಷ್ಪ ನಮನ ಸಲ್ಲಿಸುವ ಮೂಲಕ ಮೆರವಣಿಗೆಗೆ ಚಾಲನೆ ನೀಡಿದರು.

ಎಸ್ಪಿ ಡಾ.ರಾಮ್ ಅರಸಿದ್ದಿ, ಎಡಿಸಿ ಸಿದ್ರಾಮೇಶ್ವರ, ಎಸಿ ಕ್ಯಾಪ್ಟನ್ ಮಹೇಶ ಮಾಲಗಿತ್ತಿ, ಜಿಪಂ ಉಪಕಾರ್ಯದರ್ಶಿ ಟಿ.ಕೃಷ್ಣಮೂರ್ತಿ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಉಪನಿರ್ದೇಶಕ ಸೋಮಶೇಖರಗೌಡ ಪಾಟೀಲ, ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ಅಜ್ಜಪ್ಪ ಸೋಗಲದ, ಸಮಾಜದ ಮುಖಂಡರಾದ ಗಾಳೆಪ್ಪ ಪೂಜಾರ್, ಗವಿಸಿದ್ದಪ ಕಂದಾರಿ, ಚನ್ನಬಸಪ್ಪ ಹೊಳೆಯಪ್ಪನವರ, ಡಾ.ಜ್ಞಾನಸುಂದರ, ಗವಿಸಿದ್ದಪ್ಪ ಗಿಣಿಗೇರಾ ಇದ್ದರು.

ಜಗಜೀವನ ರಾಂ ಕೊಡುಗೆ ಅಪಾರ: ನಾಶಿ

ಯಲಬುರ್ಗಾ: ಡಾ.ಬಾಬು ಜಗಜೀವನ ರಾಂ ಅವರು ದೀನದಲಿತರ ಹಿತರಕ್ಷಣೆಗಾಗಿ ಸಾಕಷ್ಟು ಕಷ್ಟ-ಕಾರ್ಪಣ್ಯಗಳನ್ನು ಅನುಭವಿಸಿ ದಲಿತರ ಬಾಳಿಗೆ ಒಳಿತನ್ನು ಕಲ್ಪಿಸಿ ಕೊಡುವಲ್ಲಿ ಇವರ ಕಠಿಣ ಶ್ರಮ ಎಂದೂ ಮರೆಯಲೂ ಸಾಧ್ಯವಿಲ್ಲ ಎಂದು ತಹಶೀಲ್ದಾರ್ ಪ್ರಕಾಶ ನಾಶಿ ಹೇಳಿದರು.

ಪಟ್ಟಣದ ಮುಧೋಳ ರಸ್ತೆಗೆ ಇರುವ ಜಗಜೀವನರಾಂ ಕಾಲೋನಿಯಲ್ಲಿ ಭಾನುವಾರ ಹಸಿರುಕ್ರಾಂತಿ ಹರಿಕಾರ ಡಾ.ಬಾಬು ಜಗಜೀವರಾಂರವರ ಜನ್ಮದಿನಾಚರಣೆ ನಿಮಿತ್ತ ತಾಲೂಕಾಡಳಿತ ಹಾಗೂ ಸಮಾಜ ಕಲ್ಯಾಣ ಇಲಾಖೆ, ಪಪಂ ಮತ್ತು ಮಾದಿಗ ಸಮಾಜ ಭಾಂಧವರು ಸಹಯೋಗದಲ್ಲಿ ನಡೆದ ಮಾಜಿ ಉಪಪ್ರಧಾನಿ ಡಾ.ಬಾಬು ಜಗಜೀವನ ರಾಂ ಅವರ ಭಾವಚಿತ್ರಕ್ಕೆ ವಿಶೇಷ ಪೂಜೆ ಸಲ್ಲಿಸಿ ಮಾತನಾಡಿದರು.

ಸದಾ ಕ್ರೀಯಾಶೀಲ ವ್ಯಕ್ತಿಯಾಗಿ ಶ್ರದ್ಧೆ, ಪ್ರಮಾಣಿಕತೆ ಅಳವಡಿಸಿಕೊಂಡು ರಾಜಕೀಯ ರಂಗದಲ್ಲಿ ಉನ್ನತ ಸ್ಥಾನ ಮಾನ ಪಡೆಯುವ ಮೂಲಕ ಸಮಾಜದ ಕಟ್ಟಕಡೆಯ ವರ್ಗದ ಜನಿಸಿದರೂ ಸಹ ಸರ್ವ ಜನಾಂಗದ ಶೋಷಿತ ವರ್ಗದವರ ಕಣ್ಣೀರು ಒರೆಸುವಲ್ಲಿ ಶ್ರಮಿಸಿದ ಮಹಾಚೇತನರು ಎಂದರು.

ಸಮಾಜ ಕಲ್ಯಾಣಾಧಿಕಾರಿ ಶಶಿಧರ ಸಕ್ರಿ ಮಾತನಾಡಿ, ಸಾಮಾಜಿಕ ಸಮಾನತೆ ಮತ್ತು ನ್ಯಾಯಕ್ಕಾಗಿ ನಿಸ್ವಾರ್ಥ ಸೇವೆಯ ಮೂಲಕ ದೀನ-ದಲಿತ ಮತ್ತು ದುರ್ಬಲ ವರ್ಗದ ಧ್ವನಿಯಾಗಿ ಸ್ವಾತಿಕ ಹೋರಾಟ ಮತ್ತು ಸ್ವಾಭಿಮಾನದ ಮೂಲಕ ತಮ್ಮ ವ್ಯಕ್ತಿತ್ವವನ್ನು ವಿಕಾಸಗಳಿಸಿಕೊಂಡು ಮೇಲೆ ಬಂದವರು ಎಂದು ಹೇಳಿದರು.

ಪಪಂ ಮುಖ್ಯಾಧಿಕಾರಿ ನಾಗೇಶ ಹಾಗೂ ಜಿಪಂ ಎಇಇ ಬಿ.ಮಲ್ಲಿಕಾರ್ಜುನ ಮಾತನಾಡಿ, ಡಾ.ಬಿ.ಆರ್.ಅಂಬೇಡ್ಕರ್ ಹಾಗೂ ಡಾ.ಜಗಜೀವನರಾಂ ಅವರ ತತ್ವಾದರ್ಶಗಳು ಸರ್ವಕಾಲಕ್ಕೊ ಅನ್ವಯವಾಗಲಿದೆ ಎಂದರು.

ಬಿಇಓ ಅಶೋಕ ಗೌಡ್ರ, ಅಮರೇಶ ಹುಬ್ಬಳ್ಳಿ, ಹಸನಸಾಬ ತಳಕಲ್, ಶಿವಪ್ಪ ಉಪ್ಪಾರ, ಶಂಭು, ಯಮನೂರಪ್ಪ ನಡುವಲಮನಿ, ವಸಂತ ಭಾವಿಮನಿ, ಮಹಾಂತೇಶ ಈಟಿ, ಮಂಜುಳಾ ಚಲವಾದಿ, ಶಂಕರ ಭಾವಿಮನಿ, ಶಿವಾನಂದ ಬಣಕಾರ, ಚಂದ್ರಪ್ಪ ದೊಡ್ಮನಿ, ಸುರೇಶ ನಡುವಲಮನಿ, ಮೌನೇಶ ಬಣಕಾರ, ಈರಪ್ಪ ಬಣಕಾರ, ಹುಲಗಪ್ಪ, ದುರಗಪ್ಪ ನಡುವನಿಕೇರಿ, ಶಿವರಾಜ ಭಾವಿಮನಿ, ಮಲ್ಲೇಶ ಹಣಗಿ, ರಮೇಶ ಬಣಕಾರ, ಶಿವು ಬಣಕಾರ, ಪರುಶುರಾಮ ಸಂಗನಾಳ, ಸಿಪಿಐ ಮೌನೇಶ್ವರ ಪಾಟೀಲ, ಪಿಎಸ್‌ಐ ವಿಜಯಪ್ರತಾಪ ಇತರರಿದ್ದರು.



ಸಮುದಾಯ ಭವನ ನಿರ್ಮಾಣಕ್ಕೆ 2 ಕೋಟಿ ರೂ.

ಸಿಂಧನೂರು: ಡಾ.ಬಾಬು ಜಗಜೀವನ ರಾಂ ಸಮುದಾಯ ಭವನ ಕಟ್ಟಡ ನಿರ್ಮಾಣಕ್ಕೆ ರಾಜ್ಯ ಸರ್ಕಾರ ಒಂದು ಎಕರೆ ಜಾಗ ನೀಡಿ ಅದರ ಕಟ್ಟಡ ನಿರ್ಮಾಣಕ್ಕೆ ಎರಡು ಕೋಟಿ ಅನುದಾನ ನೀಡಿದೆ ಎಂದು ಶಾಸಕ ಹಂಪನಗೌಡ ಬಾದರ್ಲಿ ತಿಳಿಸಿದರು.

ನಗರದ ರೈಲ್ವೆ ನಿಲ್ದಾಣ ಹತ್ತಿರ ಇರುವ ಸರ್ವೆ ನಂ.643/1ರಲ್ಲಿ ಡಾ.ಜಗಜೀವನ ರಾಂ ಭವನದ ಭೂಮಿಪೂಜೆಯನ್ನು ನೆರವೇರಿಸಿ ಮಾತನಾಡಿದರು.

ಸಮಾಜದ ಮುಖಂಡರು ಡಾ.ಜಗಜೀವನ ರಾಂ ಭವನ ನಿರ್ಮಾಣ ಮಾಡುವಂತೆ ನನಗೆ ಮನವಿ ಮಾಡಿಕೊಂಡಿದ್ದು ಅವರ ಮನವಿಗೆ ಸ್ಪಂದಿಸಿ ಸರ್ಕಾರದಿಂದ ಜಾಗ ನೀಡಿ ಅನುದಾನ ನೀಡಿ ಕಟ್ಟಡ ನಿರ್ಮಾಣಕ್ಕೆ ಭೂಮಿ ಪೂಜೆ ಮಾಡುವ ಮೂಲಕ ಸುಮಾರು ವರ್ಷಗಳ ಜಗಜೀವನ ರಾಂ ಭವನ ನಿರ್ಮಾಣದ ಕನಸು ನನಸಾಗಿದೆ ಎಂದರು.

ಈ ಒಂದು ಕಾಮಗಾರಿ 2025-26ನೇ ಸಾಲಿನ ಕೆಕೆಆರ್‌ಡಿಬಿ ಎರಡು ಕೋಟಿ ಅನುದಾನ ನೀಡಿದ್ದು, ಕಾಮಗಾರಿಯನ್ನು ಭೂಸೇನೆ ನಿಗಮಕ್ಕೆ ವಹಿಸಲಾಗಿದೆ. 12 ತಿಂಗಳಿನಲ್ಲಿ ಕಟ್ಟಡ ಸಂಪೂರ್ಣ ನಿರ್ಮಾಣ ಮಾಡಲಾಗುವದು ಎಂದರು.

ಇದಲ್ಲದೆ ಈ ಭವನಕ್ಕೆ ಹೋಗಲು ಲೋಕೋಪಯೋಗಿ ಇಲಾಖೆಯ ವತಿಯಿಂದಲೂ ರಸ್ತೆ ಡಾಂಬರೀಕರಣ ಮಾಡಲು ಒಂದು ಕೋಟಿ 65 ಲಕ್ಷ ಅನುದಾನ ಸಹ ಮಂಜೂರು ಮಾಡಲಾಗಿದೆ.ಹಾಗೂ ಕುಡಿಯುವ ನೀರು,ವಿದ್ಯುತ್ ಸೇರಿದಂತೆ ಇತರೆ ಸೌಲಭ್ಯಗಳನ್ನು ಮಾಡುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದರು.

ಮುಂದಿನ ಜಯಂತ್ಯುತ್ಸವ ಒಳಗೆ ಡಾ ಬಾಬು ಜಗಜೀವನ ರಾಂ ಪುತ್ಥಳಿ ಅನಾವರಣ ಮಾಡುವ ಮೂಲಕ ಜಯಂತೋತ್ಸವ ಕಾರ್ಯಕ್ರಮವನ್ನು ಅದ್ದೂರಿಯಾಗಿಮಾಡುವುದಾಗಿಸಮುದಾಯದ ಮುಖಂಡರಿಗೆ ಶಾಸಕರು ಭರವಸೆ ನೀಡಿದರು.

ಈ ವೇಳೆ ತಹಶೀಲ್ದಾರ್ ಅರುಣ ಎಚ್ .ದೇಸಾಯಿ, ತಾಪಂ ಇಓ ಚಂದ್ರಶೇಖರ, ಡಿವೈಎಸ್ಪಿ ಚಂದ್ರಶೇಖರ ಜಿ.ನಾಯಕ, ಎಇಇ ಸೂಗಪ್ಪ, ಎ.ಇ.ದುರ್ಗಪ್ಪ ನಾಯಕ, ಭೂಸೇನ ನಿಗಮ ಜೆ.ಇ. ಸಂತೋಷ, ಸಮಾಜದ ಮುಖಂಡರಾದ ಅಲ್ಲಮಪ್ರಭು ಪೂಜಾರ, ಆರ್.ಅಂಬ್ರೂಸ್, ಮರಿಯಪ್ಪ ಜಾಲಿಹಾಳ, ಸುಭಾಸ್ ಪ್ರಾಂಕ್ಲೀನ್ ಜವಳಗೇರಾ, ಅಮರೇಶ ಗಿರಿಜಾಲಿ, ರಾಮಣ್ಣ ಸಾಸಲಮರಿ, ಶಿವರಾಜ ಬಾಗಲವಾಡ, ಹಳ್ಳಪ್ಪ ಆರಗಿನಮರ ಕ್ಯಾಂಪ್ ಸೇರಿದಂತೆ ಇತರರಿದ್ದರು.



ದಲಿತರ ಪರ ಕಾಳಜಿ ಹೊಂದಿದ್ದ ನಾಯಕ ಡಾ.ಬಾಬೂಜಿ

ಕನಕಗಿರಿ: ಡಾ.ಬಾಬು ಜಗಜೀವನರಾಂ ಅವರು ದಲಿತರ ಬಗ್ಗೆ ಕಾಳಜಿಯುಳ್ಳವರು ಚಳವಳಿಗಾರರು, ವಚನಕಾರರು, ಅವರ ಜೀವನ ತತ್ವಸಿದ್ಧಾಂತಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ದೇಶಕ್ಕೆ ಮಾದರಿ ಪ್ರಜೆಗಳಾಗಿ ಬದುಕಬೇಕೆಂದು ಪಪಂ ಅಧ್ಯಕ್ಷೆ ತನುಶ್ರೀ ಟಿಜೆ ರಾಮಚಂದ್ರ ಹೇಳಿದರು.

ಪಟ್ಟಣದ ಶ್ರೀಕನಕಾಚಲಪತಿ ದೇವಸ್ಥಾನದ ಅಂತಿರ ರವಿವಾರ ತಾಲೂಕ ಆಡಳಿತ, ತಾಪಂ ಹಾಗೂ ಸಮಾಜ ಕಲ್ಯಾಣ ಇಲಾಖೆ ಮತ್ತು ಪಪಂ ಸಂಯುಕ್ತ ಆಶ್ರಯದಲ್ಲಿ ದೇಶದ ಹಸಿರು ಕ್ರಾಂತಿಯ ಹರಿಕಾರ ಹಾಗೂ ಮಾಜಿ ಉಪಪ್ರಧಾನಿ ಡಾ.ಬಾಬು ಜಗಜೀವನರಾಂ ಜನ್ಮದಿನಾಚರಣೆಯ ಪ್ರಯುಕ್ತ ಭಾವಚಿತ್ರಕ್ಕೆ ಪೂಜೆಸಲ್ಲಿಸಿ ಕಾರ್ಯಾಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಬಳಿಕ ಪಪಂ ಮುಖ್ಯಾಧಿಕಾರಿ ಲಕ್ಷ್ಮಣ ಕಟ್ಟಿಮನಿ ಮತ್ತು ಶಿಶು ಅಭಿವೃದ್ಧಿ ಯೋಜನಾಧಿಕಾರಿ ವಿರುಪಾಕ್ಷಯ್ಯ ಮಾತನಾಡಿದರು.

ನಂತರ ಉಪನ್ಯಾಸಕ ಎಚ್.ಪಂಪಾಪತಿ ಕಂಪ್ಲಿ, ಡಾ.ಬಾಬು ಜಗಜೀವನರಾಂ ರವರ ಬಗ್ಗೆ ವಿಶೇಷ ಉಪನ್ಯಾಸ ನೀಡಿದರು. ಗ್ರಾಮದ ಆನೆಗುಂದಿ ಅಗಸಿಯ ಹತ್ತಿರವಿರುವ ಡಾ.ಬಾಬು ಜಗಜೀವನರಾಂ ಭಾವಚಿತ್ರಕ್ಕೆ ತಹಶೀಲ್ದಾರ್ ವಿಶ್ವನಾಥ ಮುರುಡಿ ಪೂಜೆ ಸಲ್ಲಿಸಿ ನಂತರ ಸ್ತಬ್ಧಚಿತ್ರ ಮೆರವಣಿಗೆಗೆ ಚಾಲನೆ ನೀಡಿದರು ಪಿಯುಸಿ. ಹಾಗೂ 10ನೇ ತರಗತಿಯಲ್ಲಿ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಸನ್ಮಾನಿಸಿ ಗೌರವಿಸಲಾಯಿತು. ಪೊಲೀಸ್ ಅಧಿಕಾರಿ ನಾರಾಯಣ, ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಸಂಗಪ್ಪ, ಪಪಂ ಉಪಾಧ್ಯಾಕ್ಷ ಕಂಠಿರಂಗ ನಾಯಕ, ಸದಸ್ಯ ಸಂಗಪ್ಪ ಸಜ್ಜನ, ಸಿದ್ದೇಶ ಕಲ್ಲಬಾಗಿಲಮಠ, ರಾಜಸಾಬ ನಂದಾಪುರ, ಹನುಮಂತ ಬಸರಿಗಿಡದ, ಹುಸೇನಬಿ ಚಳ್ಳಮರದ್‌ಹಾಗೂ ನಾಮ ನಿರ್ದೇಶನ ಹಾಗೂ ಆಶ್ರಯ ಕಮಿಟಿ ಸದಸ್ಯರು ಇತರರಿದ್ದರು.



ಡಾ.ಬಾಬು ಜಗಜೀವನರಾಂ ದೇಶದ ಅನ್ನದಾತ: ಶಾಸಕ ಪಾಟೀಲ

ಕಲಬುರಗಿ: ದೇಶವು ಆಹಾರದ ತೀವ್ರ ಬಿಕ್ಕಟ್ಟನ್ನು ಎದುರಿಸುತ್ತಿದ್ದ ಸಂದರ್ಭದಲ್ಲಿ ಹಸಿರು ಕ್ರಾಂತಿಯ ಮೂಲಕ ದೇಶದ ಹಸಿವನ್ನು ನೀಗಿಸಿದ ಮಹಾನ್ ಚೇತನ ಡಾ.ಬಾಬು ಜಗಜೀವನರಾಂ ಎಂದು ಕಲಬುರಗಿ ದಕ್ಷಿಣ ಕ್ಷೇತ್ರದ ಶಾಸಕ ಅಲ್ಲಮಪ್ರಭು ಪಾಟೀಲ್ ಹೇಳಿದರು.

ಭಾನುವಾರ ನಗರದ ಇಂದಿರಾ ಸ್ಮಾರಕ ಭವನದಲ್ಲಿ ಜಿಲ್ಲಾ ಆಡಳಿತ ಜಿಲ್ಲಾ ಪಂಚಾಯತ್, ಸಮಾಜ ಕಲ್ಯಾಣ ಇಲಾಖೆ, ಕಲಬುರಗಿ ಮಹಾನಗರ ಪಾಲಿಕೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರುಗಳ ಸಂಯುಕ್ತಾಶ್ರಯದಲ್ಲಿ ಭಾರತದ ಮಾಜಿ ಉಪ ಪ್ರಧಾನಿ, ಹಸಿರುಕ್ರಾಂತಿಯ ಹರಿಕಾರ ಡಾ. ಬಾಬು ಜಗಜೀವನರಾಂ ರವರ 119 ನೇ ಜಯಂತ್ಯುತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಜಿಲ್ಲಾ ಅಧ್ಯಕ್ಷೆ ಚಂದ್ರಿಕಾ ಪರಮೇಶ್ವರ್, ಜಿಪಂ ಸಿಇಓ ಭಂವರ್ ಸಿಂಗ್ ಮೀನಾ ಮಾತನಾಡಿದರು. ಇದಕ್ಕೂ ಮುನ್ನ, ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ ಪಾಟೀಲ್ ಅವರು ಟೌನ್ ಹಾಲ್ ಬಳಿಯ ಬಾಬೂಜಿ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಗೌರವ ನಮನ ಸಲ್ಲಿಸಿದರು. ಎಂಎಲ್ಸಿ ಜಗದೇವ ಗುತ್ತೇದಾರ್, ನಗರ ಪೊಲೀಸ್ ಆಯುಕ್ತ ಡಾ. ಶರಣಪ್ಪ ಎಸ್.ಡಿ., ಎಸ್ಪಿ ಅಡ್ಡೂರು ಶ್ರೀನಿವಾಸಲು, ಪಾಲಿಕೆ ಆಯುಕ್ತ ಅವಿನಾಶ್ ಶಿಂಧೆ, ಎಡಿಸಿ ರಾಯಪ್ಪ ಹುಣಸಗಿ, ಕಲಬುರಗಿ ಉಪವಿಭಾಗ ಸಹಾಯಕ ಆಯುಕ್ತೆ ಸಾಹಿತ್ಯ ಆಲದಕಟ್ಟಿ ಸೇರಿದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳು,ಸಮಾಜದ ಮುಖಂಡರು ಉಪಸ್ಥಿತರಿದ್ದರು.



ಜಿಲ್ಲಾ ಆದಿಬಣಜಿಗ ಸಮಾಜದ ವಸತಿ ನಿಲಯ, ಕಲ್ಯಾಣ ಮಂಟಪಕ್ಕೆ ಅಡಿಗಲ್ಲು
ಮಕ್ಕಳಲ್ಲಿ ಸಂಸ್ಕಾರ ಬೆಳೆಸಿ: ಸಚಿವ ಡಾ.ಪಾಟೀಲ

ಕಲಬುರಗಿ: ಸಮಾಜ ಬೆಳೆಯಬೇಕು. ಸಮಾಜ ಕಟ್ಟಬೇಕೆಂದರೆ ನಾಲ್ಕು ಜನ ಕುಳಿತು ಜನರಿಗೆ ಸಮ್ಮತವಾಗುವ ರೀತಿಯಲ್ಲಿ ನಾವು ನಡೆದುಕೊಂಡಾಗ ಬಲಿಷ್ಠ ಸಮಾಜ ಸಂಘಟಿಸಲು ಸಾಧ್ಯ. ಪ್ರಮುಖವಾಗಿ ಸಮಾಜ ಸಂಘಟನೆಯಲ್ಲಿ ವ್ಯಕ್ತಿ ಹೆಸರು ಬರಬಾರದು ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ ಪಾಟೀಲ ಮಾರ್ಮಿಕವಾಗಿ ಹೇಳಿದರು.

ನಗರದ ಹೊರ ವಲಯ ಅಫಜಲಪುರ ರಸ್ತೆ ಬಳಿ ಶರಣಸಿರಸಗಿ ನಾಗರಕಟ್ಟೆ ದೇವಸ್ಥಾನ ಹತ್ತಿರ ಕಲಬುರಗಿ ಜಿಲ್ಲಾ ಆದಿ ಬಣಜಿಗ ಸಮಾಜದ ಕಲ್ಯಾಣ ಮಂಟಪ ಹಾಗೂ ವಸತಿ ನಿಲಯಕ್ಕೆ ಭೂಮಿ ಪೂಜೆ (ಅಡಿಗಲ್ಲು) ನೆರವೇರಿಸಿ ಮಾತನಾಡಿ,ಸಮಾಜ ಸಂಘಟನೆಯಲ್ಲಿ ಸರ್ವರ ಸಮ್ಮತವಿದ್ದಲ್ಲಿ ಸುಖವಿದೆ. ಎಲ್ಲರೂ ಸೇರಿ ಸಮಾನ ರೀತಿಯಲ್ಲಿ ಕೆಲಸ ಮಾಡೋಣ. ಆದಿ ಸಮಾಜ ವತಿಯಿಂದ 3 ಎಕರೆ ಭೂಮಿಯಲ್ಲಿ ಕಲ್ಯಾಣ ಮಂಟಪ ಹಾಗೂ ವಸತಿ ನಿಲಯ ಸ್ಥಾಪಿಸುತ್ತಿರುವುದು ಒಳ್ಳೆಯ ಕಾರ್ಯವಾಗಿದೆ. ಎಲ್ಲರೂ ಕೈ ಜೋಡಿಸಿ ಸಮಾಜದ ಆಶಯ ಸಾಕಾರಗೊಳಿಸೋಣ. ಒಟ್ಟಾರೆ ಒಗ್ಗಟ್ಟುವಿದ್ದಲ್ಲಿ ಸಂಘಟನೆ ಮಾಡಲು ಹಾಗೂ ಜಾಗೃತಿ ಮೂಡಿಸಲು ಸಾಧ್ಯವಾಗುತ್ತದೆ ಎಂದರು.



ಮಾಜಿ ಶಾಸಕ ದತ್ತಾತ್ರೇಯ ಪಾಟೀಲ ರೇವೂರ ಮಾತನಾಡಿ, ಆದಿ ಸಮಾಜದಲ್ಲಿಂದು ಸುವರ್ಣಾಕ್ಷರದಿಂದ ಬರೆದಿಡುವ ದಿನವಾಗಿದೆ. ವಸತಿ ನಿಲಯ ಹಾಗೂ ಕಲ್ಯಾಣ ಮಂಟಪ ಸಮಾಜದ ಬಡವರಿಗೆ ಅನುಕೂಲವಾಗಲಿದೆ ಎಂದರು. ಶಾಸಕ ಅಲ್ಲಮಪ್ರಭು ಪಾಟೀಲ ಅಧ್ಯಕ್ಷತೆ ವಹಿಸಿ ಮಾತನಾಡಿದರು.ಜೈ ಭಾರತ ಮಾತಾ ಸೇವಾ ಸಮಿತಿ ನವದೆಹಲಿ ರಾಷ್ಟ್ರೀಯ ಅಧ್ಯಕ್ಷ ಹವಾ ಮಲ್ಲಿನಾಥ ಮಹಾರಾಜ ನಿರಗುಡಿ ಮುತ್ಯಾ ಸಾನ್ನಿಧ್ಯ ವಹಿಸಿದ್ದರು. ಶರಣಗೌಡ ಪಾಟೀಲ, ನೀಲಕಂಠರಾವ್ ಮೂಲಗೆ, ಡಿ.ಕೆ.ಪಾಟೀಲ ಮುಡಬೂಳ, ರಾಜೇಂದ್ರ ಪಾಟೀಲ್ ರೇವೂರ, ವೀರಣ್ಣ ಮಂಗಾಣೆ, ಶಶಿಕಲಾ ಟೆಂಗಳಿ, ಜಗನ್ನಾಥ ಶೇಗಜಿ, ಸುವರ್ಣಾ ಹಣಮಂತರಾಯ ಮಾಲಾಜಿ, ಜಿಲ್ಲಾ ಆದಿ ಬಣಜಿಗ ಸಮಾಜದ ಅಧ್ಯಕ್ಷ ಶಿವಪುತ್ರಪ್ಪ ಬರೂಡೆ ಪ್ರಾಸ್ತಾವಿಕ ಮಾತನಾಡಿದರು.

ಗೌರವಾಧ್ಯಕ್ಷ ಬಸವರಾಜ ಕೊನೆಕ್ ಸ್ವಾಗತಿಸಿದರು. ಕೋಟನೂರದ ಶಿವಶಂಕರ ಬಿರಾದಾರ ಅವರಿಂದ ಪ್ರಾರ್ಥನೆ ಗೀತೆ ಜರುಗಿತು. ಗಂಗಾಧರ ಮುನ್ನೊಳಿ ನಿರೂಪಿಸಿದರು.

> ಸಮಾಜ ನನ್ನದು ಹಾಗೂ ಕಲ್ಯಾಣ ಮಂಟಪ, ವಸತಿ ನಿಲಯಕ್ಕೆ ನಾನು ಕೈಜೋಡಿಸಿದ್ದೇನೆ ಎಂಬ ಭಾವ ಬರಲು ಸಮಾಜದ ಪ್ರತಿಯೊಬ್ಬರಿಂದ 10 ರೂ. ಆದರೂ ದೇಣಿಗೆ ಪಡೆಯಬೇಕು. ನಾನು ಆದಿ ಸಮಾಜದ ಜೊತೆಗೆ ಇದ್ದು, ಸದಾ ಸಹಾಯಹಸ್ತಕ್ಕೆ ಬದ್ಧತೆ ಹೊಂದಿದ್ದೇನೆ.
> ■ ಎಂ.ವೈ.ಪಾಟೀಲ, ಶಾಸಕ

ಸಮಾನತೆಗೆ ಎಲ್ಲರೂ ಶ್ರಮಿಸಿ: ಜಿಲ್ಲಾಧಿಕಾರಿ ಕೆ.ನಿತೀಶ

ರಾಯಚೂರು: ಸಮಾನತೆ ಇಲ್ಲದ ಸ್ವಾತಂತ್ರ್ಯ ಅಪೂರ್ಣ ಎಂದು ಡಾ.ಬಾಬು ಜಗಜೀವನ ರಾಂ ಅಂದೇ ಹೇಳಿದ್ದರು. ಹಾಗಾಗಿ ಸಮಾಜದಲ್ಲಿ ಜಾತಿ ಬೇಧ ಮರೆತು ಸಮಾನತೆಗಾಗಿ ಎಲ್ಲರೂ ಶ್ರಮಿಸಬೇಕೆಂದು ಜಿಲ್ಲಾಧಿಕಾರಿ ಕೆ.ನಿತೀಶ ಹೇಳಿದರು.

ಭಾನುವಾರ ನಗರದ ಪಂಡಿತ ಸಿದ್ದರಾಮ ಜಂಬಲದಿನ್ನಿ ರಂಗಮಂದಿರದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ರಾಯಚೂರ ಮಹಾನಗರ ಪಾಲಿಕೆ ಹಾಗೂ ಸಮಾಜ ಕಲ್ಯಾಣ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಮಾಜಿ ಉಪ ಪ್ರಧಾನಿ, ಹಸಿರು ಕ್ರಾಂತಿಯ ಹರಿಕಾರ ಡಾ.ಬಾಬು ಜಗಜೀವನ ರಾಂ ಅವರ 119ನೇ ಜನ್ಮ ದಿನಾಚರಣೆ ಕಾರ್ಯಕ್ರಮದ ಉದ್ಘಾಟಿಸಿ ಮಾತನಾಡಿದರು.

ಬಿಹಾರ ರಾಜ್ಯದಲ್ಲಿ ಜನಿಸಿದಾಗ ಅಂದಿನ ಜಾತಿ ವ್ಯವಸ್ಥೆಯ ತಾರತಮ್ಯ ಅವರ ಬಾಲ್ಯದ ದಿನಗಳಲ್ಲಿ ಹಲವಾರು ಕಹಿ ಘಟನೆಗಳು ಜರುಗಿದರು ಎದೆ ಗುಂದದೆ ಹೋರಾಡಿ ಇತಿಹಾಸ ನಿರ್ಮಿಸಿ ಶಿಕ್ಷಣವೇ ನಮಗೆ ಶಕ್ತಿ ಎಂದು ಎಲ್ಲಾ ಶೋಷಿತ ಜನರಿಗೆ ಹೇಳಿದರು.

ಸಂಕಷ್ಟ ನಮಗೆ ಬರುವುದು ಶಕ್ತಿಶಾಲಿಯಾಗಿ ಮಾಡಲು ಬಲಹೀನರಾಗಿ ಮಾಡಲು ಅಲ್ಲ ಎಂದು ತಳ ಸಮುದಾಯದ ಜನರಿಗೆ ಧೈರ್ಯ ತುಂಬುವ ಕೆಲಸ ಮಾಡಿದ್ದರು. ಕಲ್ಯಾಣ ಕರ್ನಾಟಕ ಭಾಗದಲ್ಲಿ ಶಿಕ್ಷಣ ಪ್ರಮಾಣ ಕಡಿಮೆ ಇದ್ದು, ಹೆಚ್ಚಿನ ಜನರು ತಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸುವುದರ ಮೂಲಕ ಬಾಬು ಜಗಜೀವನರಾಂ ಅವರ ಆದರ್ಶಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡು ಅವರ ಕನಸುಗಳನ್ನು ನಾವೆಲ್ಲರೂ ನನಸು ಮಾಡಬೇಕಿದೆ ಎಂದರು.

ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಕೃಷ್ಣ ಶಾವಂತಗೇರಿ ಮಾತನಾಡಿ, ಡಾ.ಬಾಬು ಜಗಜೀವನರಾಂ ಅವರು ಸಮಾಜದಲ್ಲಿ ಜಾತಿ ಬೇಧ ಮರೆತು ಸಮಾನತೆಗಾಗಿ ಶ್ರಮಿಸಿದ್ದ ಶ್ರೇಷ್ಠ ರಾಜಕೀಯ ಮುತ್ಸದ್ದಿ ಆಗಿ ಕಾರ್ಯನಿರ್ವಾಹಣೆ ಮಾಡಿದ್ದಾರೆ ಎಂದರು.



ಮಾನ್ವಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಉಪನ್ಯಾಸಕ ಡಾ.ಬಸವರಾಜ ಕರಡಿಗುಡ್ಡ ವಿಶೇಷ ಉಪನ್ಯಾಸ ನೀಡಿ, ಮಾಜಿ ಉಪ ಪ್ರಧಾನಿ ಬಾಬು ಜಗಜೀವನ ರಾಂ ಅವರು ಶೋಷಿತರ ಹಕ್ಕಿಗಾಗಿ ಹೋರಾಡಿದವರು, ಹಸಿರು ಕ್ರಾಂತಿಯ ಹರಿಕಾರ. ಆಹಾರ ಉತ್ಪಾದನೆ ಹೆಚ್ಚಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ರು, ಕೃಷಿ, ರಕ್ಷಣಾ ಸಚಿವರಾಗಿ ಸೇವೆ ಸಲ್ಲಿಸಿದ್ದು, ಅವರ ಸೇವೆ ಸ್ಮರಣೀಯವಾದದು ಎಂದರು.

ತಹಶೀಲ್ದಾರ್ ಸುರೇಶ ವರ್ಮ ಅವರು ಭಾರತ ಸಂವಿಧಾನದ ಪೀಠಿಕೆಯನ್ನು ಎಲ್ಲರಿಗೆ ಭೋದಿಸಿದರು. ಇದೇ ಸಂದರ್ಭದಲ್ಲಿ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಬಾಬು ಜೀ ಜೀವನ, ಹೋರಾಟ, ಸಾಧನೆ ಕುರಿತು ಅವರ ಛಾಯಾಚಿತ್ರ ಪ್ರದರ್ಶನ ಏರ್ಪಡಿಸಲಾಗಿತ್ತು. ಜಿಪಂ ಸಿಇಓ ಈಶ್ವರ ಕಾಂದೂ, ಎಸ್ಪಿ ಅರುಣಾಂಗ್ಶು ಗಿರಿ., ಆದಿಜಾಂಬವ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಕಪಕ ರಾಜೇಂದ್ರ ಜಲ್ದಾರ್ ಸೇರಿದಂತೆ ಇತರರಿದ್ದರು.

ಸೋಮವಾರ
6 ಏಪ್ರಿಲ್ 2026
ಹುಬ್ಬಳ್ಳಿ

ಬಳ್ಳಾರಿ-ವಿಜಯನಗರ ಯಾದಗಿರಿ, ಬೀದರ

ಗರಿಷ್ಠ 37 | ಕನಿಷ್ಠ 23°

ಹೊಸ ದಿಗಂತ

ಕಿರುಸುದ್ದಿ

ಇಂದು ಚಿದಾನಂದ ಅವಧೂತರ ರಥೋತ್ಸವ

ಕುರುಗೋಡು: ತಾಲೂಕಿನ ಸೋಮಲಾಪುರ ಗ್ರಾಮದಲ್ಲಿ ನಾಳೆ ಏ.6ರಂದು ಆರಾಧ್ಯ ದೈವ ಶ್ರೀಚಿದಾನಂದ ಅವಧೂತರ 34ನೇ ವರ್ಷದ ಪುಣ್ಯಾರಾಧನೆ ಪ್ರಯುಕ್ತ ಗ್ರಾಮದಲ್ಲಿ ರಥೋತ್ಸವ ಕಾರ್ಯಕ್ರಮ, ಉಚಿತ 80 ಜೋಡಿಗಳ ಸಾಮೂಹಿಕ ವಿವಾಹ ಕಾರ್ಯಕ್ರಮ ನಡೆಯಲಿದೆ. ಈ ಎಲ್ಲ ಧರ್ಮಿಕ ಕಾರ್ಯಕ್ರಮದಗಳು ಸದ್ಗುರು ಷಡಕ್ಷರಿ ಅವಧೂತ ಮಹಾಸ್ವಾಮಿಗಳ ನೇತೃದಲ್ಲಿ ಜರುಗಲಿವೆ. ಏ.6ರಂದು ಬೆಳಗ್ಗೆ 7.30ರಿಂದ 8.30ಕ್ಕೆ ಸಾಮೂಹಿಕ ವಿವಾಹ ಕಾರ್ಯಕ್ರಮಗಳು ಸದ್ಗುರು ಷಡಕ್ಷರಿ ಮಹಾಸ್ವಾಮಿ ಅವದೂತರು ಮತ್ತು ಜಡೇಶ ಶಿವಯೋಗ ಮಂದಿರದ ಜಡೇಶ ತಾತನವರ ಸಾನಿಧ್ಯದೊಂದಿಗೆ ಧಾರ್ಮಿಕ ಕಾರ್ಯಕ್ರಮಗಳು ಪೂರ್ಣಗೊಂಡು, ಸಂಜೆ 5 ಗಂಟೆಯಿಂದ ರಥೋತ್ಸವ ನಡೆಯಲಿದೆ. ಸೋಮವಾರ ರಾತ್ರಿ 8.30ಕ್ಕೆ ಜಮದಗ್ನಿ ಕಲ್ಯಾಣ ಬೈಲಾಟ ಪ್ರದರ್ಶನ ಮತ್ತು ಜಾತ್ರೆಯ ದಿನ ಭಕ್ತಾದಿಗಳಿಗೆ ಅನ್ನಪ್ರಸಾದ ಆಯೋಜಿಸಲಾಗಿದೆ. ಏ.7ರಂದು ಬೆಳಗ್ಗೆ 9ಗಂಟೆಗೆ ಸುಮಂಗಲೆಯರ ಆರತಿಯೊಂದಿಗೆ, ಭಜನೆ ವಾದ್ಯಗಳೊಂದಿಗೆ ಕಳಸಾರೋಹಣ ನೆರವೇರಿಸಿ, ಗಂಗೆ ಪೂಜೆಯೊಂದಿಗೆ ಕಾರ್ಯಕ್ರಮಕ್ಕೆ ಮಂಗಲ ನಡೆಸಲಾಗುವುದು ಎಂದು ಮಠದ ಮೂಲಗಳಿಂದ ತಿಳಿದುಬಂದಿದೆ. ಪೂರ್ವವಾಗು ಸೋಮವಾರ ಬೆಳಗ್ಗೆ ಪ್ರಣವ ಧ್ವಜಾರೋಹಣ ನೆರ ವೇರಿಸಲಾಯಿತು. ಸಂಜೆ 5 ಗಂಟೆಯಿಂದ ಗ್ರಾಮದಲ್ಲಿ ಚಿದಾನಂದ ಅವಧೂತರ ಭಾವಚಿತ್ರದ ಮೆರವಣಿಗೆ ಕಾರ್ಯಕ್ರಮ, ನಂತರ 7 ಗಂಟೆಗೆ ಆಧ್ಯಾತ್ಮಿಕ ಪ್ರವಚನ, 8ಗಂಟೆಗೆ ಮಠದಲ್ಲಿ ಭಜನೆ ಕಾರ್ಯಕ್ರಮಗಳು ಜರುಗಿದವು.



ಡಾ.ಬಾಬು ಜಗಜೀವನ ರಾಂ ಜಯಂತಿ ಆಚರಣೆ



ವಿಜಯನಗರ: ಹೊಸಪೇಟೆ ನಗರದ ನಗರಾಭಿವೃದ್ಧಿ ಪ್ರಾಧಿಕಾರ ಕಚೇರಿ ಹತ್ತಿರದ ಡಾ.ಬಾಬು ಜಗಜೀವನ ರಾಂ ವೃತ್ತದಲ್ಲಿ ಭಾನುವಾರ ಹಸಿರು ಕ್ರಾಂತಿಯ ಹರಿಕಾರ ಡಾ.ಬಾಬು ಜಗಜೀವನ ರಾಂ ಅವರ 119ನೇ ಜನ್ಮ ದಿನಾಚರಣೆಯನ್ನು ಆಚರಿಸಲಾಯಿತು. ಜಿಲ್ಲಾಧಿಕಾರಿ ಕವಿತಾ ಎಸ್.ಮನ್ನಿಕೇರಿ, ಜಿಲ್ಲಾ ಪೊಲೀಸ್ ಅಧೀಕ್ಷಕಿ ಎಸ್.ಜಾಹ್ನವಿ ಅವರು ಬಾಬುಜಿ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸುವ ಮೂಲಕ ಗೌರವ ಸಮರ್ಪಣೆ ಮಾಡಲಾಯಿತು. ಈ ವೇಳೆ ಜಿಪಂ ಉಪಕಾರ್ಯದರ್ಶಿ ಕೆ.ತಿಮ್ಮಪ್ಪ, ಸಮಾಜ ಕಲ್ಯಾಣ ಇಲಾಖೆ ಉಪ ನಿರ್ದೇಶಕ ವೈ.ಎ.ಕಾಳೆ, ತಹಶೀಲ್ದಾರ್ ಶೃತಿ ಎಂ., ತಾಪಂ ಇಒ ಆಲಂ ಭಾಷಾ, ನಗರಸಭೆ ಪೌರಾಯುಕ್ತ ಶಿವಕುಮಾರ್, ಜಿಲ್ಲಾ ಮತ್ತು ತಾಲೂಕು ಮಟ್ಟದ ಅಧಿಕಾರಿಗಳು ಸಮುದಾಯದ ಮುಖಂಡರು ಉಪಸ್ಥಿತರಿದ್ದರು.

ನಿಧನ ಸುದ್ದಿ

ಹಿರಾಳು ಕೊಟ್ರೇಶಪ್ಪ



ಹಗರಿಬೊಮ್ಮನಹಳ್ಳಿ: ಪಟ್ಟಣದ ಹಳೇ ಊರಿನ ನಿವಾಸಿ ಹಿರಾಳು ಕೊಟ್ರೇಶಪ್ಪ (ಹೋಟೆಲ್) ಅವರು ಶನಿವಾರ ಮಧ್ಯೆ ರಾತ್ರಿ ಹೃದಯಾಘಾತದಿಂದ ನಿಧನರಾಗಿದ್ದಾರೆ. ಪತ್ನಿ ಇಬ್ಬರು ಪುತ್ರರು ಅಪಾರ ಬಂಧು ಬಾಂಧವರನ್ನು ಅಗಲಿದ ಮೃತರ ಅಂತ್ಯ ಸಂಸ್ಕಾರ ಭಾನುವಾರ ಮಧ್ಯಾಹ್ನ 3 ಗಂಟೆಗೆ ವೀರಶೈವ ರುದ್ರಭೂಮಿ ಹಳೇ ಹಗರಿಬೊಮ್ಮನಹಳ್ಳಿಯಲ್ಲಿ ಜರುಗಿತು.

ಈರಣ್ಣ



ಸಿರುಗುಪ್ಪ: ತಾಲೂಕಿನ ರಾರಾವಿ ಗ್ರಾಮದ ತಾಪಂ ಮಾಜಿ ಸದಸ್ಯ ಈರಣ್ಣ(65) ಅವರು ಭಾನುವಾರ ನಿಧರಾಗಿದ್ದಾರೆ. ಮೃತರಿಗೆ ಪತ್ನಿ, ಮೂವರು ಪುತ್ರರು ಇದ್ದಾರೆ. ಸಂಜೆ ಅಂತ್ಯಕ್ರಿಯೆ ನಡೆಯಿತು.



ಬಳ್ಳಾರಿ: ತುಂಗಭದ್ರಾ ಜಲಾಶಯದಲ್ಲಿ ಸಂಗ್ರಹವಾದ 33ಕ್ಕೂ ಹೆಚ್ಚು ಟಿಎಂಸಿ ಹೂಳನ್ನೂ ತೆರವುಗೊಳಿಸಲು ಕೇಂದ್ರ ಸರ್ಕಾರದೊಂದಿಗೆ ಚರ್ಚಿಸಿ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಒತ್ತಾಯಿಸಿ ಇಲ್ಲಿನ ತುಂಗಭದ್ರಾ ರೈತ ಸಂಘದ ಪದಾಧಿಕಾರಿಗಳು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿಗೆ ಮನವಿ ಸಲ್ಲಿಸಿದರು.

ಡಾ.ಬಾಬೂಜಿ ಜಯಂತಿ ಆಚರಣೆ

ಬಳ್ಳಾರಿ: ನಗರದ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಭಾನುವಾರ, ಹಸಿರು ಕ್ರಾಂತಿಯ ಪಿತಾಮಹ, ಭಾರತದ ಮಾಜಿ ಉಪ-ಪ್ರಧಾನಿ ಡಾ.ಬಾಬು ಜಗಜೀವನ ರಾಂ ಅವರ 119ನೇ ಜಯಂತ್ಯುತ್ಸವವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು. ಮಹಾನಗರ ಪಾಲಿಕೆ ಮೇಯರ್ ಪಿ.ಗಾದೆಪ್ಪ ಅವರು ಪೂಜೆ ನೆರವೇರಿಸಿ ಬಾಬು ಜಗಜೀವನ ರಾಂ ಅವರ ಭಾವ ಚಿತ್ರಕ್ಕೆ ಪುಷ್ಪಗಳನ್ನು ಸಮರ್ಪಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ನಂತರ ಮಾತನಾಡಿ, ಬಾಬುಜಿ ಎಂದು ಖ್ಯಾತರಾದ ಬಾಬು ಬಾಬು ಜಗಜೀವನ ರಾಂ ಅವರು, ಸ್ವಾತಂತ್ರ್ಯ ಹೋರಾಟಗಾರರಷ್ಟೇ ಅಲ್ಲದೆ ಸಮಾಜ ಸೇವಕರಾಗಿದ್ದರು. ಮೊರಾರ್ಜಿ ದೇಸಾಯಿ ಅವರ ಕಾಲದಲ್ಲಿ ಭಾರತದ ಉಪ- ಪ್ರಧಾನಿಗಳಾಗಿದ್ದರು, ಅವಧಿಯಲ್ಲಿ ಸಾಕಷ್ಟು ಮಾದರಿ ಕೆಲಸಗಳನ್ನು ಮಾಡಿದ್ದರು ಎಂದು ಸ್ಮರಿಸಿದರು. ಜಿಲ್ಲಾ ಕಾಂಗ್ರೆಸ್ ಹಿರಿಯ ಮುಖಂಡ ಕಲ್ಲುಕಂಭ ಪಂಪಾಪತಿ, ಕಾರ್ಯಾಧ್ಯಕ್ಷ ಭೋಯಾಪಾಟಿ ವಿಷ್ಣುವರ್ಧನ್, ಡಿಸಿಸಿ ಕಾರ್ಯಾಧ್ಯಕ್ಷ ಕೆ.ಶ್ರೀನಿವಾಸುಲು, ಕಾರ್ಯಕಾರಿಣಿ ಸಮಿತಿಯ ಸದಸ್ಯರಾದ ವೆಂಕಟಲಕ್ಷ್ಮಿ ನಾರಾಯಣ, ಎಲ್.ಮಾರೆಣ್ಣ, ಕೆಪಿಸಿಸಿ ಪ್ರಾಚಾರ ಸಮಿತಿಯ ಸಂಯೋಜಕ ವೆಂಕಟೇಶ್ ಹೆಗಡೆ, ಮುಂಚೂಣಿ ಘಟಕಗಳ ಅಧ್ಯಕ್ಷರಾದ ಅಲಿವೇಲು ಸುರೇಶ್, ಕನೇಕಲ್ ಮೆಹಬೂಬ್ ಸಾಬ್, ಎರಕುಲಸ್ವಾಮಿ, ಅಲಿವೇಲು ಸುರೇಶ್, ಅತ್ತವುಲ್ಲ, ಪಾಲಿಕೆ ಸದಸ್ಯರಾದ ಮಿಂಚು ಶ್ರೀನಿವಾಸ್, ಕಾರ್ಯಕರ್ತರಾದ ತಿಮ್ಮಪ್ಪ ಗೌಡ, ಎರ್ರಿಸ್ವಾಮಿ, ಹೊನ್ನೂರ್ ಸ್ವಾಮಿ, ಪ್ರತಾಪ್ ಇತರರಿದ್ದರು.



ಬಳ್ಳಾರಿ: ನಗರದ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಭಾನುವಾರ, ಹಸಿರು ಕ್ರಾಂತಿಯ ಪಿತಾಮಹ, ಭಾರತದ ಮಾಜಿ ಉಪ-ಪ್ರಧಾನಿ ಡಾ.ಬಾಬು ಜಗಜೀವನ ರಾಂ ಅವರ 119ನೇ ಜಯಂತ್ಯುತ್ಸವವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ಡಾ.ಬಾಬೂಜಿ ಜಯಂತಿ ಆಚರಣೆ | ಶಾಸಕ ಚನ್ನಾರಡ್ಡಿ ಅಭಿಮತ

ನ್ಯಾಯಕ್ಕಾಗಿ ಹೋರಾಡಿದ ನಾಯಕ

ಯಾದಗಿರಿ: ಹಸಿರು ಕ್ರಾಂತಿ ಹರಿಕಾರ ಡಾ.ಬಾಬು ಜಗಜೀವನರಾಮ್ ಸಾಮಾಜಿಕ ನ್ಯಾಯಕ್ಕಾಗಿ ಹೋರಾಡಿದ ಅಪ್ರತಿಮ ನಾಯಕರಾಗಿದ್ದಾರೆ ಎಂದು ಶಾಸಕ ಚನ್ನಾರಡ್ಡಿ ಪಾಟೀಲ ತುನ್ನೂರ ಹೇಳಿದರು.

ನಗರದ ಜಿಲ್ಲಾಡಳಿತ ಭವನದ ಆಡಿಟೋರಿಯಂ ಸಭಾಂಗಣದಲ್ಲಿ ಭಾನುವಾರ ಜಿಲ್ಲಾಡಳಿತ, ಜಿಪಂ, ಸಮಾಜ ಕಲ್ಯಾಣ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ನಗರಸಭೆ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಡಾ.ಬಾಬು ಜಗಜೀವನರಾಂ ಅವರ ಜಯಂತ್ಯುತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಡಾ.ಬಾಬು ಜಗಜೀವನರಾಂ ಅವರು ಸಮಾಜದಲ್ಲಿ ಮನೆ ಮಾಡಿದ್ದ ಮೌಢ್ಯತೆಗೆ ತಮ್ಮ ಚಿಂತನೆಯ ಮೂಲಕ ಔಷಧಿ ನೀಡಿದ್ದಾರೆ. ದೀರ್ಘಕಾಲದ ಸಂಸತ್ತು ಪಟುವಾಗಿ, ಕೇಂದ್ರ ಸರ್ಕಾರದ ಹಲವು ಕ್ಷೇತ್ರಗಳಲ್ಲಿ ಸಚಿವರಾಗಿ ಸೇವೆ ಸಲ್ಲಿಸಿರುವುದು ಅಪ್ರತಿಮ ಸಾಧನೆಯಾಗಿದೆ. ಸಾಮಾನ್ಯ ಜನರಿಂದ ಇದು ಸಾಧ್ಯವಿಲ್ಲ ಎಂದ ಅವರು ಕೃಷಿ, ರಕ್ಷಣಾ ಸಚಿವರಾಗಿ , ಉಪಪ್ರಧಾನಿಯಾಗಿ ದೇಶಕ್ಕೆ ಅಪಾರ ಕೊಡುಗೆಯನ್ನು ನೀಡಿದ್ದಾರೆ ಎಂದು ಬಣ್ಣಿಸಿದರು.

ಡಾ.ಬಾಬುಜಗ ಜೀವನರಾಂ ಅವರು ಎಂಟು ಬಾರಿ ಸಂಸದರಾಗಿ, ಸಚಿವರಾಗಿ ನೀಡಿದ ಕೊಡುಗೆ ಒಂದು ಜೀವನದಲ್ಲಿ ಸಾಧ್ಯವಿಲ್ಲ. ಸಾಮಾಜಿಕ ನ್ಯಾಯಕ್ಕಾಗಿ ಅವರ ಹೋರಾಟ ಸ್ಮರಣೀಯ. ತತ್ವಜ್ಞಾನವನ್ನು ಕೆಲಸದ ರೂಪದಲ್ಲಿ ಅವರು ಕಾರ್ಯರೂಪಕ್ಕೆ ತಂದರು. ಡಾ.ಅಂಬೇಡ್ಕರ್ ಹಾಗೂ ಜವಾಹರಲಾಲ್ ನೆಹರು ಅವರಂತೆ ಇವರ ಕೊಡುಗೆಯು ಅವಿಸ್ಮರಣೀಯವಾಗಿದ್ದು,ಇಂತಹ ಮಹಾನ್ ನಾಯಕರ ತತ್ವಸಿದ್ಧಾಂತಗಳನ್ನು ಎಲ್ಲರೂ ಪರಿಪಾಲಿಸುಂತೆ ಅವರು ಸಲಹೆ ನೀಡಿದರು.



> ಬಾಬು.ಬಾಬು ಜಗಜೀವನರಾಂ ಅವರು ಸಾಮಾಜಿಕ ನ್ಯಾಯಕ್ಕಾಗಿ ಹೋರಾಡಿದ್ದಾರೆ. ಅವಶ್ಯಕ ಸಂದರ್ಭದಲ್ಲಿ ಸಂವಿಧಾನ ತಿದ್ದುಪಡಿಯಲ್ಲಿ ಪರಿಣಾಮಕಾರಿ ಕೊಡುಗೆ ನೀಡಿದ್ದಾರೆ.
> ■ ಚನ್ನಾರಡ್ಡಿ ಪಾಟೀಲ ತುನ್ನೂರ, ಶಾಸಕ

ಜಿಲ್ಲಾಧಿಕಾರಿ ಹರ್ಷಲ್ ಭೋಯರ್ ಮಾತನಾಡಿ, ಡಾ.ಬಾಬುಜಗ ಜೀವನರಾಂಅವರ ತತ್ವಾದರ್ಶಗಳನ್ನು ಎಲ್ಲರೂ ಪಾಲಿಸಬೇಕು. ಸಮಾನತೆ, ಹಸಿರು ಕ್ರಾಂತಿ ಹರಿಕಾರರಾಗಿ, ಆಧುನಿಕ ಭಾರತದ ನಿರ್ಮಾತೃ ಆಗಿ ಅನೇಕ ಕೊಡುಗೆಗಳನ್ನು ನೀಡಿದ್ದಾರೆ ಎಂದು ಹೇಳಿದರು.

ಉಪನ್ಯಾಸ ನೀಡಿದ ಯರಗೋಳ, ವಸತಿಯುತ ಪದವಿ ಕಾಲೇಜು ಉಪನ್ಯಾಸಕ ಶಿವಪ್ಪ ಹಣಮಂತ, ಡಾ.ಬಾಬು ಜಗಜೀವನರಾಂ ಅವರು ಮಹಾನ್ ನಾಯಕರಲ್ಲಿ ಒಬ್ಬರು. ಸ್ವಾತಂತ್ರ್ಯ ಹೋರಾಟಗಾರ, ಅಸ್ಪೃಶ್ಯತೆ ವಿರುದ್ಧದ ಹೋರಾಟಗಾರ, ಮುತ್ಸದ್ದಿ ರಾಜಕಾರಣಿ,ದಕ್ಷ ಆಡಳಿತಗಾರರಾಗಿದ್ದರು. ಹಸಿರು ಕ್ರಾಂತಿ ಹರಿಕಾರ, ನವಭಾರತ ನಿರ್ಮಾಣದ ಹರಿಕಾರ, ಎಂದೇ ಖ್ಯಾತಿ ಪಡೆದಿದ್ದಾರೆ. 1961ರಲ್ಲಿ ಬರ ದಂತಹ ಕಷ್ಟದ ಸಂದರ್ಭದಲ್ಲಿ ಭಾರತದ ಆಹಾರ ಕೊರತೆ ನೀಗಿಸಿದರು ಎಂದರು.

ಜಿಪಂ ಸಿಇಒ ಲವೀಶ್ ಒರಡಿಯಾ, ಎಸ್ಪಿ ಪೃಥ್ವಿಕ್ ಶಂಕರ್, ಜಿಪಂ ಮುಖ್ಯ ಯೋಜನಾಧಿಕಾರಿ ಕುಮುಲಯ್ಯ, ಯುವ ಸಬಲೀಕರಣ ಮತ್ತು ಕ್ರೀಡಾಧಿಕಾರಿ ರಾಜು ಬಾವಿ ಹಳ್ಳಿ ಉಪಸ್ಥಿತರಿದ್ದರು. ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ಚನ್ನಬಸವ ಸ್ವಾಗತಿಸಿದರು. ಚಂದ್ರಶೇಖರ ಗೋಗಿ ಪ್ರಾರ್ಥಿಸಿದರು. ಸಮಾಜ ಸೇವಕರು ಹಾಗೂ ಎಸೆಸ್ಸೆಲ್ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿಸಾಧನೆಗೈದ ವಿದ್ಯಾರ್ಥಿಗಳಿಗೆ ಸನ್ಮಾನಿಸಲಾಯಿತು. ಇದಕ್ಕೂ ಮುನ್ನ ಇಂದು ಬೆಳಿಗ್ಗೆ ನಗರದ ಜಗಜೀವನರಾಂ ಅವರ ಭಾವಚಿತ್ರದ ಮೆರವಣಿಗೆ ನಡೆಯಿತು.

ಡಾ.ಬಾಬೂಜಿ ಕೊಡುಗೆ ಅಪಾರ: ಕವಿತಾ

ಹಗರಿಬೊಮ್ಮನಹಳ್ಳಿ: ಸ್ವತಂತ್ರ್ಯದ ಬಳಿಕ ದೇಶ ಹಲವು ಸಮಸ್ಯೆಗಳನ್ನು ಎದುರಿಸಬೇಕಿತ್ತು. ಪ್ರಮುಖವಾಗಿ ದೇಶದ ಜನರ ಹಸಿವನ್ನು ನೀಗಿಸಲು ಕೃಷಿಗೆ ಪ್ರಾಧಾನ್ಯತೆಯನ್ನು ನೀಡುವ ಮೂಲಕ ದೇಶವನ್ನು ಹಸಿವು ಮುಕ್ತ ರಾಷ್ಟ್ರವನ್ನಾಗಿ ಮಾಡಿದ ಮಹಾನ್ ಚೇತನ ಮಾಜಿ ಉಪ ಪ್ರಧಾನಿ ಬಾಬು ಜಗಜೀವನ ರಾಂ ಅವರ ಕೊಡುಗೆ ಅಪಾರವಾಗಿದೆ ಎಂದು ತಹಶೀಲ್ದಾರ್ ಕವಿತಾ ತಿಳಿಸಿದರು.

ಪಟ್ಟಣದ ಆಡಳಿತ ಸೌಧದಲ್ಲಿ ತಾಲೂಕ ಆಡಳಿತ ಆಯೋಜಿಸಿದ್ದ ದೇಶದ ಮಾಜಿ ಉಪ ಪ್ರಧಾನಿ ಬಾಬು ಜಗಜೀವನ ರಾಂ ಅವರ ಜಯಂತ್ಯುತ್ಸವ ಕಾರ್ಯಕ್ರಮದಲ್ಲಿ ಬಾಬೂಜಿಯವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಪುಷ್ಪ ನಮನವನ್ನು ಅರ್ಪಿಸಿ ಮಾತನಾಡಿದರು.

ಸಾರಿಗೆ, ಕೃಷಿ, ರಕ್ಷಣೆ ಖಾತೆಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ್ದರು. ರಾಜಕಾರಣಿಯಾಗಿದ್ದು ಸಾಮಾಜಿಕ ಹೋರಾಟ ಮಾಡುವ ಮೂಲಕ ತುಳಿತಕ್ಕೊಳಗಾದ ಜನರ ಪರ ಧ್ವನಿಯಾಗಿ ಇದ್ದ ಬಾಬೂಜಿಯವರ ಆದರ್ಶ ಗುಣಗಳನ್ನು ಮೈಗೂಡಿಸಿಕೊಳ್ಳೋಣ ಎಂದರು.

ಅಂಬೇಡ್ಕರ್ ಸಂಘದ ಅಧ್ಯಕ್ಷ ಗದ್ದಿಕೇರಿ ದೊಡ್ಡಬಸಪ್ಪ ಮಾತನಾಡಿ, ಕೃಷಿಗೆ ಹೆಚ್ಚು ಆದ್ಯತೆ ನೀಡಿದ್ದರಿಂದಾಗಿ ಇವರನ್ನು ಹಸಿರುಕ್ರಾಂತಿಯ ಹರಿಕಾರ ಎಂದು ಕರೆದರು. ಇವರ ತತ್ವ ಸಿದ್ಧಾಂತಗಳನ್ನು ಅಳವಡಿಸಿಕೊಂಡು ಮುನ್ನಡೆಯೋಣ ಎಂದರು.

ಬಾಬು ಜಗಜೀವನ ರಾಂ ಸಂಘದ ಅಧ್ಯಕ್ಷ ಪ್ರಭಾಕರ್ ಮಾತನಾಡಿ, ಕಠಿಣ ಪರಿಸ್ಥಿತಿಯಲ್ಲಿ ಹಲವು ಸಮಸ್ಯೆಗಳನ್ನು ಎದುರಿಸಿ ದೇಶದ ಉಪ ಪ್ರಧಾನಿಯಾಗಿ ಯಶಸ್ವಿಯಾಗಿ ನಿರ್ವಹಿಸಿದ ಬಾಬು ಜಗಜೀವನ್ ರಾಂ ಅವರ ವಿಚಾರಧಾರೆಗಳು ಅನುಕರಣೀಯ ಎಂದರು.

ಸಮಾಜಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ಜಗದೀಶ್ ದಿಗಡೂರು, ಬಿಸಿಎಂ ಇಲಾಖೆಯ ಕಲ್ಯಾಣ ಅಧಿಕಾರಿ ಕೊಟ್ರೇಶ್ ನಾಯ್ಕ್, ತೋಟಗಾರಿಕೆ ಇಲಾಖೆಯ ಅಧಿಕಾರಿ ವಿಜಯಕುಮಾರ್, ಉಪ ನೋಂದಣಿ ಅಧಿಕಾರಿ ಮಹೇಶ್, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ನಿರ್ದೇಶಕರಾದ ಶೈಲಾ, ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿ ಶೋಭಾ ವಿದ್ಯಾರ್ಥಿ ನಿಲಯಗಳ ಮೇಲ್ವಿಚಾರಕರಾದ ಚಂದ್ರನಾಯ್ಕ್, ಜಯಮ್ಮ, ನಾಗರಾಜ, ಆಶಾ, ರಾಜು ಮುಖಂಡರಾದ ಕಾಳಿ ಬಸವರಾಜ, ಅಲಬೂರು ಗಣೇಶ್, ಕೋಗಳಿ ಉಮೇಶ್, ಲೋಕಪ್ಪ, ಪರಶುರಾಮ, ಪಕೀರಪ್ಪ, ದುರ್ಗಪ್ಪ, ಮಹೇಶ್ ಹನುಮಂತಪ್ಪ ಮಂಜುನಾಥ ಇತರರಿದ್ದರು.



ಪ್ರಾಣಿ-ಪಕ್ಷಿಗಳಿಗಾಗಿ ನೀರಿನ ವ್ಯವಸ್ಥೆ ಮಾಡಿ

ಹೂವಿನಹಡಗಲಿ: ಗಿಡ ಮರಗಳನ್ನು ಕಡಿದು ಪ್ರಾಣಿ-ಪಕ್ಷಿಗಳ ಸಂಕುಲಕ್ಕೆ ಅನಾನುಕೂಲ ಮಾಡದೆ ಪ್ರಕೃತಿ ಸಂಪತ್ತು ಕಾಪಾಡುವುದು ಪ್ರತಿಯೊಬ್ಬರ ಕರ್ತವ್ಯ ಎಂದು ನಿವೃತ್ತ ಶಿಕ್ಷಕ ಗಣೇಶ್ ಹವಾಲ್ದಾರ್ ಅಭಿಪ್ರಾಯ ಪಟ್ಟರು.

ತಾಲೂಕಿನ ಹೊಳಗುಂದಿ ಗ್ರಾಮದ ಶ್ರೀಸಿದ್ದೇಶ್ವರ ದೇವಸ್ಥಾನದಲ್ಲಿ ಇಲ್ಲಿನ ಪರಿವರ್ತನಾ ಸೇವಾ ಸಮಿತಿಯ ಸಹಯೋಗದಲ್ಲಿ ಪಕ್ಷಿಗಳಿಗೆ ಗುಟುಕು ನೀರಿನ ಅರವಟ್ಟಿಗೆ ನಿರ್ಮಾಣ ಹಾಗೂ ಪರಿಸರ ಜಾಗೃತಿ ಕಾರ್ಯಕ್ರಮ ಅರವಟ್ಟಿಗೆ ನೀರು ಹಾಕುವ ಮೂಲಕ ಚಾಲನೆ ನೀಡಿದರು.

ಬೇಸಿಗೆ ಕಾಲದಲ್ಲಿ ಪ್ರಾಣಿ-ಪಕ್ಷಿಗಳಿಗೆ ಅನುಕೂಲ ವಾಗಲು ಗಿಡ ಮರಗಳಲ್ಲಿ ನೀರಿನ ವ್ಯವಸ್ಥೆ ಮಾಡಬೇಕು. ನಾಗರಿಕರು ಸಮರ್ಪಕವಾಗಿ ನೀರು ಹಾಕಿ ನಿರ್ವಹಣೆ ಮಾಡಿ ಪಕ್ಷಿ ಸಂಕುಲಕ್ಕೆ ಅನುಕೂಲ ಮಾಡುವಂತೆ ಸಲಹೆ ನೀಡಿದರು.

ಗಿಡ ಮರಗಳನ್ನು ಬೆಳೆಸುವ ಮೂಲಕ ಅರಣ್ಯ ಸಂರಕ್ಷಣೆಗೆ ಮಾಡಬೇಕು ಎಂದರು.

ಮುಖ್ಯ ಗುರುಗಳಾದ ಮಲ್ಲೇಶಪ್ಪ ಮಾತನಾಡಿ, ಪರಿಸರ ಸಂರಕ್ಷಣೆ ಸಾರ್ವಜನಿಕ ಸಹಕಾರ ಅಗತ್ಯ ಬೇಸಿಗೆಯ ತೀವ್ರ ಬಿಸಿಲಿನಿಂದ ಪ್ರಾಣಿ-ಪಕ್ಷಿಗಳಿಗೆ ಎದುರಾಗುವ ನೀರಿನ ಅಭಾವವನ್ನು ನೀಗಿಸಲು ಉತ್ತಮ ಕಾರ್ಯವಾಗಿದೆ ಎಂದರು.

ಚಿತ್ರ ಕಲಾ ಶಿಕ್ಷಕ ದ್ವಾರಕೀಶ್ ರೆಡ್ಡಿ ಮಾತನಾಡಿ, ಇಲ್ಲಿನ ಪರಿವರ್ತನಾ ಸಮಿತಿ ಕಾರ್ಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಗಣೇಶ್ ಹವಾಲ್ದಾರ್ ತಮ್ಮ ಮನೆಯಲ್ಲಿ ಬೆಳೆಸಿದ ಸಸಿಗಳನ್ನು ಮಕ್ಕಳಿಗೆ ವಿತರಿಸಲಾಯಿತು. ನಂತರ ನೂರು ಅರವಟ್ಟಿಗೆಗಳನ್ನು ನೀಡುವ ಮೂಲಕ ಪರಿಸರ ಪ್ರಜ್ಞೆ ಮತ್ತು ಪಕ್ಷಿಗಳಿಗೆ ನೀರು ಹಾಕುವ ಬಗ್ಗೆ ಜಾಗೃತಿ ಮೂಡಿಸಲಾಯಿತು. ಕೊಟ್ರೇಶ ಪ್ರಾಸ್ತಾವಿಕವಾಗಿ ಮಾತನಾಡಿದರು. ಎಚ್.ಗುರುಬಸವರಾಜ ಸ್ವಾಗತಿಸಿದರು. ಆರ್.ಬಿ.ಗುರುಬಸವರಾಜ, ಎಂ.ಲೋಕೇಶ, ಎಚ್.ಕರಿಬಸಪ್ಪ, ನವೀನ ಕೃಷ್ಣ, ರಾಜನಗೌಡ ಪಾಟೀಲ, ಹನುಮಂತಪ್ಪ, ಕೊಟ್ರೇಶ್ ಹಾವನೂರು, ಎಚ್.ಎಂ.ಶಾಂತಪ್ಪ ಟಿ. ಇತರರಿದ್ದರು.



ಪತ್ರಕರ್ತರ ರಾಜ್ಯ ಸಮ್ಮೇಳನ: ಏ.9ಕ್ಕೆ ಬೈಕ್ ರ‍್ಯಾಲಿ

ಬೀದರ್: ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ 40ನೇ ಪತ್ರಕರ್ತರ ರಾಜ್ಯ ಸಮ್ಮೇಳನ ನಿಮಿತ್ತ ನಗರದಲ್ಲಿ ಏ.9ರಂದು ಬೈಕ್ ರ‍್ಯಾಲಿ ನಡೆಸಲು ನಿರ್ಧರಿಸಲಾಗಿದೆ.

ನಗರದ ಪತ್ರಿಕಾ ಭವನದಲ್ಲಿ ಶನಿವಾರ ನಡೆದ ಪತ್ರಕರ್ತರ ರಾಜ್ಯ ಸಮ್ಮೇಳನದ ಪ್ರಚಾರ ಸಮಿತಿ ಸಭೆಯಲ್ಲಿ ಈ ಕುರಿತು ತೀರ್ಮಾನ ಕೈಗೊಳ್ಳಲಾಯಿತು.

ನಗರದ ಬಸವೇಶ್ವರ ವೃತ್ತದಿಂದ ಮಹಾವೀರ ವೃತ್ತ, ಅಂಬೇಡ್ಕರ್ ವೃತ್ತ, ಶಿವಾಜಿ ವೃತ್ತ, ಹರಳಯ್ಯ ವೃತ್ತ, ನೆಹರೂ ಕ್ರೀಡಾಂಗಣ, ಮಡಿವಾಳ ಮಾಚಿದೇವ ವೃತ್ತ, ಕೇಂದ್ರ ಬಸ್ ನಿಲ್ದಾಣ, ಶಿವನಗರ ಮಾರ್ಗವಾಗಿ ಪ್ರತಾಪನಗರದ ಪತ್ರಿಕಾ ಭವನದ ವರೆಗೆ ರ‍್ಯಾಲಿ ಜರುಗಲಿದೆ ಎಂದು ಸಮಿತಿಯ ಪ್ರಮುಖರು ತಿಳಿಸಿದರು.



ಕಟೌಟ್, ಬ್ಯಾನರ್, ಭಿತ್ತಿ ಪತ್ರ, ಆಟೋಗಳಿಗೆ ಸ್ಟಿಕ್ಕರ್ ಅಳವಡಿಕೆ, ಎಐ ಬಳಕೆ, ಪೆನ್ನು-ಗುಲಾಬಿ ಹೂವು ಕೊಟ್ಟು ಪತ್ರಕರ್ತರಿಗೆ ಆಹ್ವಾನ ಸೇರಿದಂತೆ ವಿವಿಧ ರೀತಿಯಲ್ಲಿ ಸಮ್ಮೇಳನದ ಪ್ರಚಾರ ಕೈಗೊಳ್ಳಲು ಉದ್ದೇಶಿಸಲಾಗಿದೆ ಎಂದು ಹೇಳಿದರು.

ವಿವಿಧ ಉಪ ಸಮಿತಿಗಳ ಸಮ್ಮೇಳನದ ಸಿದ್ಧತೆ ಹಾಗೂ ಚಟುವಟಿಕೆ ಕುರಿತು ಹೆಚ್ಚೆಚ್ಚು ಪ್ರಚಾರ ಕೈಗೊಳ್ಳಲು ನಿರ್ಣಯಿಸಲಾಯಿತು.

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ಆನಂದ ದೇವಪ್ಪ, ಸಮ್ಮೇಳನ ಪ್ರಚಾರ ಸಮಿತಿಯ ಪ್ರಧಾನ ಸಂಚಾಲಕ ನಾಗೇಶ ಪ್ರಭಾ, ಸಹ ಸಂಚಾಲಕ ಮಲ್ಲಿಕಾರ್ಜುನ ನಾಗರಾಳ, ಸದಸ್ಯ ಮಹಾರುದ್ರ ಡಾಕುಳಗಿ ಇದ್ದರು.

ಕೆಂಭಾವಿಯಲ್ಲಿ ಕಾರ್ಮಿಕರಿಗೆ ಸ್ಮಾರ್ಟ್‌ಕಾರ್ಡ್ ವಿತರಣೆ

ಕೆಂಭಾವಿ: ಕಳೆದ ಹಲವು ವರ್ಷಗಳಿಂದ ನನೆಗುದಿಗೆ ಬಿದ್ದಿದ್ದ ಕಟ್ಟಡ ಕಾರ್ಮಿಕರ ಸ್ಮಾರ್ಟ್ ಕಾರ್ಡ್‌ಗಳನ್ನು ಪಡೆಯಲು ನಮ್ಮ ಕರ್ನಾಟಕ ಸೇನೆ ಕೆಂಭಾವಿ ಹೋಬಳಿ ಕಾರ್ಮಿಕ ಘಟಕವು ನಡೆಸಿದ ಸತತ ಹೋರಾಟಕ್ಕೆ ಕೊನೆಗೂ ದೊಡ್ಡ ಜಯ ಸಿಕ್ಕಿದೆ.

ಪಟ್ಟಣದ ಶ್ರೀರೇವಣಸಿದ್ದೇಶ್ವರ ದೇವಸ್ಥಾನದ ಆವರಣದಲ್ಲಿ ಇಂದು ಹಮ್ಮಿಕೊಳ್ಳಲಾಗಿದ್ದ ವಿಶೇಷ ಕಾರ್ಯಕ್ರಮ ಹಾಗೂ ಚಿಂತನಾ ಸಭೆಯಲ್ಲಿ ನೂರಾರು ಕಾರ್ಮಿಕರಿಗೆ ಸ್ಮಾರ್ಟ್ ಕಾರ್ಡ್‌ಗಳನ್ನು ವಿತರಿಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ನಮ್ಮ ಕರ್ನಾಟಕ ಸೇನೆ ಕಟ್ಟಡ ಕಾರ್ಮಿಕ ಘಟಕದ ರಾಜ್ಯ ಉಪಾಧ್ಯಕ್ಷರಾದ ಶ್ರೀಗುರು ದೊಡ್ಮನಿ ಅವರು ವಹಿಸಿ ಕಾರ್ಮಿಕರಿಗೆ ಕಾರ್ಡ್‌ಗಳನ್ನು ಹಸ್ತಾಂತರಿಸಿದರು.

ಮಾತನಾಡಿದ ಅವರು, ಕಾರ್ಮಿಕರ ಹಿತರಕ್ಷಣೆ ಮತ್ತು ಸರ್ಕಾರದ ಸೌಲಭ್ಯಗಳು ಪ್ರತಿಯೊಬ್ಬ ಅರ್ಹ ಕಾರ್ಮಿಕನಿಗೂ ತಲುಪುವಂತಾಗಲು ಸಂಘಟನೆ ನಿರಂತರವಾಗಿ ಶ್ರಮಿಸುತ್ತಿದೆ ಎಂದರು. ಕೆಂಭಾವಿ ಹೋಬಳಿ ಕಾರ್ಮಿಕ ಘಟಕದ ಅಧ್ಯಕ್ಷರಾದ ಗುರುರಾಜ ಎಸ್.ಅಂಗಡಿ ಮಾತನಾಡಿದರು.

ಸಭೆಯಲ್ಲಿ ಕಾರ್ಮಿಕರ ಮುಂದಿನ ಭದ್ರತೆ ಹಾಗೂ ಸಂಘಟನೆಯ ಬಲವರ್ಧನೆಯ ಕುರಿತು ಸುದೀರ್ಘವಾಗಿ ಚರ್ಚಿಸಲಾಯಿತು.



ಕೆಂಭಾವಿ ಹೋಬಳಿ ಘಟಕದ ಅಧ್ಯಕ್ಷರಾದ ಶರಣು ಎಸ್. ದೇವರಮನಿ, ಮಲ್ಲಾ ಗ್ರಾಮ ಘಟಕದ ಅಧ್ಯಕ್ಷರಾದ ರಫೀಕ ಮುಜವಾರ, ತಿಪ್ಪನಟಗಿ ಗ್ರಾಮ ಘಟಕದ ಅಧ್ಯಕ್ಷರಾದ ಹನುಮಂತ ಹಾಗೂ ಮುರ್ತುಜಾ ಸುರಪುರ ಅವರು ಉಪಸ್ಥಿತರಿದ್ದರು.

ಬಾಬು ಜಗಜೀವನ ರಾಂ ಕೊಡುಗೆ ಅಮೂಲ್ಯ

ಕೂಡ್ಲಿಗಿ: ಬಾಬು ಜಗಜೀವನ ರಾಂ ಅವರು ಭಾರತದ ಆಹಾರ ಭದ್ರತೆ, ರಾಷ್ಟ್ರದ ರಕ್ಷಣೆ ಮತ್ತು ಕಾರ್ಮಿಕರ ಹಕ್ಕುಗಳ ವಿಚಾರದಲ್ಲಿ ಬಾಬೂಜಿ ಅವರ ಕೊಡುಗೆ ಅಮೂಲ್ಯವಾದುದು ಎಂದು ತಹಶೀಲ್ದಾರ್ ವಿ.ಕೆ.ನೇತ್ರಾವತಿ ಹೇಳಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ತಾಲೂಕು ಆಡಳಿತ, ತಾಪಂ ಹಾಗೂ ಸಮಾಜ ಕಲ್ಯಾಣ ಇಲಾಖೆ ಸಹಯೋಗದಲ್ಲಿ ಭಾನುವಾರ ಆಯೋಜಿಸಿದ್ದ ಮಾಜಿ ಉಪ ಪ್ರಧಾನಿ ದಿ.ಬಾಬು ಜಗಜೀವನ ರಾಂ ಅವರ 119ನೇ ಜನ್ಮ ದಿನಾಚರಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಬಾಬೂಜಿ ಅವರು ಸತತ ಮೂವತ್ತು ವರ್ಷಗಳು ಸಂಪುಟ ದರ್ಜೆ ಸಚಿವರಾಗಿ ದೇಶದ ಅಭಿವೃದ್ಧಿಗಾಗಿ ಶ್ರಮಿಸಿದ ಮಹಾನ್ ನಾಯಕ. ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡಿ, ಶಿಕ್ಷಣದಿಂದ ಪ್ರತಿಯೊಬ್ಬ ವ್ಯಕ್ತಿಯೂ ಜೀವನದಲ್ಲಿ ಬದಲಾವಣೆ ಕಾಣಲು ಸಾಧ್ಯವಿದೆ ಎಂದು ನಂಬಿದ್ದವರು ಎಂದರು.

ಕ್ಷೇತ್ರ ಶಿಕ್ಷಣಾಧಿಕಾರಿ ಮೈಲೇಶ್ ಬೇವೂರ್ ಮಾತನಾಡಿ, ಬಾಬೂ ಜಗಜೀವನ ರಾಂ ಅವರು ಸಾಮಾಜಿಕ ಸುಧಾರಣೆ, ಮಹಿಳಾ ಶಿಕ್ಷಣಕೆ, ಅಲ್ಪಸಂಖ್ಯಾತರ ಹಕ್ಕುಗಳು ಮತ್ತು ಪರಿಸರ ಸಂರಕ್ಷಣೆಗೆ ಅಪಾರ ಕೊಡುಗೆ ನೀಡಿದ್ದಾರೆ ಎಂದರು.

ತಾಪಂ ಇಒ ನರಸಪ್ಪ, ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಜಿಲಾನ್ ಅಹಮ್ಮದ್, ಸಿಪಿಐ ಪ್ರಲ್ಹಾದ್ ಆರ್.ಚನ್ನಗಿರಿ, ಸರ್ಕಾರಿ ನೌಕರರ ಸಂಘದ ತಾಲೂಕು ಅಧ್ಯಕ್ಷ ಎಸ್.ವೆಂಕಟೇಶ್, ಮಾಜಿ ತಾಪಂ ಉಪಾಧ್ಯಕ್ಷೆ ವಿಶಾಲಾಕ್ಷಿ ರಾಜಣ್ಣ, ಡಿಎಸ್‌ಎಸ್ ಜಿಲ್ಲಾ ಸಂಚಾಲಕ ಎಸ್ ದುರುಗೇಶ್, ಡಾ.ಬಾಬು ಜಗಜೀವನ ರಾಂ ಸಂಘದ ತಾಲೂಕು ಅಧ್ಯಕ್ಷ ಸಾಸಲವಾಡ ಶಿವಣ್ಣ, ಡಿ.ಎಚ್.ದುರುಗೇಶ್, ಹಿರೇಕುಂಬಳಗುಂಟೆ ಉಮೇಶ್, ಕರವೇ ತಾಲೂಕು ಅಧ್ಯಕ್ಷ ಕಾಟೇರ ಹಾಲೇಶ್, ಡಿಎಸ್ ಎಸ್ ತಾಲೂಕು ಸಂಚಾಲಕ ಬಡೆಲಡುಕು ದುರುಗೇಶ್, ಬಂಡೆ ರಾಘವೇಂದ್ರ, ಬಿಸಿಎಂ ಇಲಾಖೆ ಅಧಿಕಾರಿ ಶ್ಯಾಮಪ್ಪ, ಪಿಡಬ್ಲ್ಯೂಡಿ ಎಇಇ ನಾಗನಗೌಡ, ಎಇಇ ಮಲ್ಲಿಕಾರ್ಜುನ್, ಸಮನ್ವಯಾಧಿಕಾರಿ ಎಸ್.ಎಸ್. ಜಗದೀಶ್, ಸಮಾಜ ಕಲ್ಯಾಣ ಇಲಾಖೆ ಸಿಬ್ಬಂದಿ ಪಕೀರಪ್ಪ ಸೇರಿ ನಾನಾ ಸಂಘ ಸಂಸ್ಥೆಗಳ ಮುಖಂಡರು, ತಾಲೂಕು ಮಟ್ಟದ ಅಧಿಕಾರಿಗಳು ಸಮುದಾಯದ ಮುಖಂಡರು ಇತರರು ಉಪಸ್ಥಿತರಿದ್ದರು.



ಬಾಬು ಜಗಜೀವನ ರಾಂ ಜಯಂತಿ ಆಚರಣೆ

ಸಿರುಗುಪ್ಪ: ದೇಶದ ದಮನಿತ ಜಾತಿಗಳ ಧ್ವನಿಯನ್ನು ಹೊರತರಲು ಮತ್ತು ಭಾರತದ ಸ್ವಾತಂತ್ರ್ಯಕ್ಕಾಗಿ ಹೋರಾಡಲು ಮೀಸಲಿಟ್ಟಿದ್ದರು. ಸಾಮಾಜಿಕ ಸುಧಾರಕರಾಗಿ ದೇಶಕ್ಕೆ ಅವರ ಸಾಮಾಜಿಕ ನ್ಯಾಯದ ತತ್ವಗಳನ್ನು ಬಲವಾಗಿ ಒತ್ತಿ ಹೇಳಿದವರಲ್ಲಿ ಪ್ರಮುಖರು ಬಾಬು ಜಗಜೀವನ ರಾಂ ಎಂದು ವಾಲ್ಮೀಕಿ ವಿದ್ಯಾಭಿವೃದ್ಧಿ ಟ್ರಸ್ಟ್ ಅಧ್ಯಕ್ಷ ಬಿ.ಎಂ.ಸತೀಶ್ ಹೇಳಿದರು.

ನಗರದ ಬಾಬು ಜಗಜೀವನ ರಾಂ ವೃತ್ತದಲ್ಲಿ ತಾಲೂಕು ಆಡಳಿತ, ಸಮಾಜ ಕಲ್ಯಾಣ ಇಲಾಖೆ ಹಾಗೂ ವಿವಿಧ ಇಲಾಖೆಯ ಸಹಯೋಗದೊಂದಿಗೆ ಭಾರತದ ಮಾಜಿ ಉಪ ಪ್ರಧಾನಿ, ಹಸಿರು ಕ್ರಾಂತಿಯ ಹರಿಕಾರ' ಮತ್ತು ದಲಿತ ನಾಯಕ ಬಾಬು ಜಗಜೀವನ್ ರಾಂ ಜಯಂತಿ ಅಂಗವಾಗಿ ಭಾನುವಾರ ವೃತ್ತದಲ್ಲಿ ನಾಮಫಲಕಕ್ಕೆ ಮಾಲರ್ಪಣೆ ಮಾಡಿ ಮಾತನಾಡಿದರು.

ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ಎಂ.ಸಿದ್ದಯ್ಯ, ಸಿಡಿಪಿಒ ಸಂದೀಪ್‌ಕುಮಾರ್, ಪರಿಶಿಷ್ಟ ಪಂಗಡ ಇಲಾಖೆಯ ಸಹಾಯಕ ನಿರ್ದೇಶಕ ರಾಘವೇಂದ್ರ ವರ್ಮ್, ಸರ್ವಧರ್ಮೀಯ ಡಾ.ಅಂಬೇಡ್ಕರ್ ಸಂಘದ ಅಧ್ಯಕ್ಷ ಕೊಡ್ಲೆ ಮಲ್ಲಿಕಾರ್ಜುನ, ದಸಸಂ ಜಿಲ್ಲಾ ಸಂಚಾಲಕ ಎಚ್.ಬಿ.ಗಂಗಪ್ಪ, ಅಂಬೇಡ್ಕರ್ ಸಂಘದ ಅಧ್ಯಕ್ಷ ಚಿಕ್ಕಬಳ್ಳಾರಿ ನಾಗಪ್ಪ, ಬೋವಿ ಸಂಘದ ಅಧ್ಯಕ್ಷ ಗಾಳೆಪ್ಪ ಮೇಸ್ತ್ರೀ, ಮುಖಂಡರಾದ ಮೇಕಲಿ ವೀರೇಶ, ಚಿದಾನಂದ ರಾಯುಡು ಭಾಗವಹಿಸಿದ್ದರು.



ಸಂಸ್ಕಾರದಿಂದ ಉನ್ನತ ಸ್ಥಾನಕ್ಕೇರಲು ಸಾಧ್ಯ

ಕೊಟ್ಟೂರು: ಹಣ ಮನೆ ಸಂಪತ್ತಿನಿಂದ ಮನುಷ್ಯ ದೊಡ್ಡ ವ್ಯಕ್ತಿಯಾಗಲಾರ ಅವನ ನಡೆ, ನುಡಿ ಆಚಾರ, ವಿಚಾರ ಉತ್ತಮ ಸಂಸ್ಕಾರಗಳನ್ನು ಹೊಂದಿ ವಿಶಾಲ ಮನಸ್ಸಿದ್ದಾಗ ಮಾತ್ರ ದೊಡ್ಡ ವ್ಯಕ್ತಿಯಾಗುತ್ತಾನೆ ಎಂದು ಕೊಪ್ಪಳ ಗವಿಮಠದ ಗವಿಸಿದ್ದೇಶ್ವರ ಶ್ರೀಗಳು ಹೇಳಿದರು.

ತಾಲೂಕಿನ ಹರಾಳು ಗ್ರಾಮದಲ್ಲಿ ಕರಿಯಮ್ಮ ದೇವಿ ದೇವಸ್ಥಾನದ ಕಳಸಾರೋಹಣ ಧಾರ್ಮಿಕ ಕಾರ್ಯದ ಎರಡನೇ ದಿನದ ಕಾರ್ಯಕ್ರಮದಲ್ಲಿ ಅವರು ಆಶೀರ್ವಚನ ನೀಡಿ ಮಾತನಾಡಿದರು. ರೂಪದಿಂದ ಹಣತೆ ಹಾಗೂ ಮಡಿಕೆ ಬೇರೆಯಾಗಿವೆ ಅಷ್ಟೇ, ಆದರೆ ಎರಡರ ಮೂಲ ಮಣ್ಣೇ ಅಲ್ಲವೇ ಎಂದರು. ಮಹಾತ್ಮ ಗಾಂಧಿಯವರ ಜೀವನ ಹಾಗೂ ಸರಳತೆಯ ಬಗ್ಗೆ ಸ್ಮರಿಸಿದರು. ಸಣ್ಣ ಕಥೆಗಳನ್ನು ಅಚ್ಚುಕಟ್ಟಾಗಿ ವಿವರಿಸುವುದರ ಮೂಲಕ ಭಕ್ತಾಧಿಗಳಲ್ಲಿ ಹರ್ಷೋದ್ಗಾರ ಒಡಮೂಡಿತು. ಮಳೆ, ಬೆಳೆ ಸಮೃದ್ಧವಾಗಲಿ ಎಂದು ಆಶೀರ್ವದಿಸಿದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ ಇ.ತುಕಾರಾಂ, ಬಳ್ಳಾರಿ-ವಿಜಯನಗರ ಸಂಸದರು ಕಾರ್ಯಕ್ರಮವನ್ನುದ್ದೇಶಿಸಿ ಶೈಕ್ಷಣಿಕ ಪ್ರಗತಿಗೆ ಹೆಚ್ಚು ಒತ್ತು ನೀಡಲು ಮನವಿ ಮಾಡಿದರು. ಗವಿಶ್ರೀಗಳ ಆಶೀರ್ವಚನ ದಿವ್ಯೌಷಧವಾಗಿದೆ ಎಂದು ಅಭಿಪ್ರಾಯ ಪಟ್ಟರು.

ಗ್ರಾಮದಲ್ಲಿನ ಸಮುದಾಯ ಭವನ ನಿರ್ಮಾಣಕ್ಕೆ 10 ಲಕ್ಷ ರೂ.ಅನುದಾನ ಹಾಗೂ ಡಿಜಿಟಲ್ ಗ್ರಂಥಾಲಯ ನಿರ್ಮಾಣಕ್ಕೆ 15 ಲಕ್ಷ ಅನುದಾನ ನೀಡುವುದಾಗಿ ಭರವಸೆ ನೀಡಿದರು. ಮಾಜಿ ಶಾಸಕರಾದ ಎಸ್. ಭೀಮಾನಾಯ್ಕ್ ಮಾತನಾಡಿದರು. ಪತ್ರಕರ್ತ ಹಾಗೂ ಲೇಖಕ ಭೀಮಣ್ಣ ಗಜಾಪುರ ಅವರ ಕರಿಯಮ್ಮ ದೇವಿ ಹಾಡುಗಳ ಧ್ವನಿ ಸುರುಳಿಯನ್ನು ಗವಿಶ್ರೀಗಳು ಬಿಡುಗಡೆ ಮಾಡಿದರು.



ಉತ್ತಂಗಿ ಮಠದ ಸೋಮಶಂಕರಲಿಂಗ ಸ್ವಾಮೀಜಿ, ಬೆಣ್ಣೆಹಳ್ಳಿ ಮಠದ ಪಂಚಾಕ್ಷರಿ ಶ್ರೀಗಳು, ಬಿಡಿಸಿಸಿ ಬ್ಯಾಂಕ್‌ನ ಉಪಾಧ್ಯಕ್ಷರಾದ ಐ.ಎಂದಾರುಕೇಶ್, ಕೊಟ್ಟೂರು ಎಪಿಎಂಸಿ ಅಧ್ಯಕ್ಷರಾದ ಎ.ನಂಜಪ್ಪ, ರಾಜ್ಯ ಬೀಜ ನಿಗಮದ ನಿರ್ದೇಶಕ ಸಾವಜ್ಜಿ ರಾಜೇಂದ್ರಪ್ರಸಾದ್, ತಾಪಂ ಮಾಜಿ ಅಧ್ಯಕ್ಷರಾದ ಎಸ್.ಗುರುಮೂರ್ತಿ, ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಅನಿಲ್ ಹೊಸಮನಿ, ಎಪಿಎಂಸಿ ಸದಸ್ಯರಾದ ಚಿರಬಿ ಕೊಟ್ರೇಶ್ ಇತರರಿದ್ದರು. ಹಾಲಸ್ವಾಮಿ ನಿರೂಪಿಸಿದರು ಕೊಟ್ರೇಶ್ ಮಾಳ್ಗಿ ವಂದಿಸಿದರು.